

ನಮ್ಮ ಮೆಟ್ರೋ namma metro

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ

13ನೇ ವಾರ್ಷಿಕ ವರದಿ

2018-19

ದಿನಾಂಕ: 08.09.2019 ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ನಗರ ವೀಕ್ಷಣೆ ಸಂದರ್ಭದಲ್ಲಿ, ಇತರ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸುವಾಗ, ನಮ್ಮ ಮೆಟ್ರೋ ಯೋಜನೆಯ ನಿರ್ಮಾಣ ಕಾರ್ಯವನ್ನು ಪರಿಶೀಲಿಸಿದರು. ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್, ಮಾನ್ಯ ಉಪ ಮುಖ್ಯಮಂತ್ರಿಯವರು, ಶ್ರೀ ಆರ್. ಅಶೋಕ್, ಮಾನ್ಯ ಕಂದಾಯ ಸಚಿವರು, ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಗೃಹ ಸಚಿವರು, ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ, ಪೂಜ್ಯ ಮಹಾಪೌರರು, ಬಿಬಿಎಂಪಿ, ಶ್ರೀ ಪಿ.ಸಿ. ಮೋಹನ್, ಲೋಕಸಭಾ ಸದಸ್ಯರು, ಶ್ರೀ ಅರವಿಂದ ಲಿಂಬಾವಳಿ, ಶ್ರೀ ಎಸ್. ರಘು, ಶ್ರೀ ಸತೀಶ್ ರೆಡ್ಡಿ, ಶಾಸಕರು, ಶ್ರೀ ಎಂ. ಲಕ್ಷ್ಮಿನಾರಾಯಣ, ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು, ಶ್ರೀ ಅಜಯ್ ಸೇಠ್, ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಶ್ರೀ ಬಿ.ಹೆಚ್.ಅನಿಲ್ ಕುಮಾರ್, ಆಯುಕ್ತರು, ಬಿಬಿಎಂಪಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಬಿಎಂಆರ್‌ಸಿಎಲ್‌ನ ಅಧಿಕಾರಿಗಳೂ ಸಹ ಈ ನಗರ ವೀಕ್ಷಣೆ ಸಂದರ್ಭದಲ್ಲಿ ಹಾಜರಿದ್ದರು.





ಶ್ರೀ ದುರ್ಗಾ ಶಂಕರ್ ಮಿಶ್ರಾ, ಕಾರ್ಯದರ್ಶಿಗಳು, ಎಂಒಹೆಚ್‌ಯುಎ, ಭಾರತ ಸರ್ಕಾರ ಮತ್ತು ಅಧ್ಯಕ್ಷರು, ಬಿಎಂಆರ್‌ಸಿಎಲ್, ಇವರು, ಶ್ರೀ ಡಿ.ಕೆ. ಹೋಟಾ, ಸಿಎಂಡಿ, ಬಿಇಎಂಎಲ್, ಶ್ರೀ ಅಜಯ್ ಸೇಠ್, ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಶ್ರೀ ಎನ್.ಎಂ. ಧೋಕೆ, ನಿರ್ದೇಶಕರು (ಆರ್‌ಎಸ್‌ಇ ಮತ್ತು ಓ&ಎಂ), ಬಿಎಂಆರ್‌ಸಿಎಲ್ ಹಾಗೂ ಇತರ ಹಿರಿಯ ಅಧಿಕಾರಿಗಳೊಂದಿಗೆ, ದಿನಾಂಕ 04.04.2019 ರಂದು ಬಿಇಎಂಎಲ್ ಕಾರ್ಖಾನೆಯಲ್ಲಿ ರೋಲಿಂಗ್ ಸ್ಟಾಕ್ ಕಾರ್ಯವನ್ನು ಪರಿಶೀಲಿಸಿದರು.



ವಿಷಯಾನುಕ್ರಮಣಿಕೆ

1. ನಿರ್ದೇಶಕರ ಮಂಡಳಿ 2

2. ಸಭಾ ಸೂಚನಾ ಪತ್ರ 4

3. ಅಧ್ಯಕ್ಷರ ಭಾಷಣ 6

4. ಮಂಡಳಿಯ ವರದಿ.....10

5. ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ 65

6. ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಟಿಪ್ಪಣಿ.....82

7. 31.03.2019ರಲ್ಲಿದ್ದಂತೆ ಸ್ಥಿತಿ ವಿವರಣ ತಃಖ್ತೆ.....84

8. 31.03.2019ರಂದು ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟ ತಃಖ್ತೆ.....86

9. 31.03.2019ರಂದು ಕೊನೆಗೊಂಡ ವರ್ಷದ ನಗದು ಹರಿವು ತಃಖ್ತೆ..... 90

10. ಆರ್ಥಿಕ ವಿವರ ಪಟ್ಟಿಗಳ ಮೇಲಿನ ಟಿಪ್ಪಣಿಗಳು..... 92



ಮಂಡಳಿ ನಿರ್ದೇಶಕರು

ಶ್ರೀ ದುರ್ಗಾಶಂಕರ್ ಮಿಶ್ರಾ	ಅಧ್ಯಕ್ಷರು, ಬಿಎಂಆರ್‌ಸಿಎಲ್ ಮತ್ತು ಕಾರ್ಯದರ್ಶಿ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ
ಶ್ರೀ ಅಜಯ್ ಸೇಠ್	ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್
ಶ್ರೀ ಎಂ.ಕೆ. ಸಿನ್ಹಾ	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಓಎಸ್‌ಡಿ (ಯುಟಿ) ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ
ಶ್ರೀ ಕೆ.ಕೆ. ಸಬೇರ್‌ವಾಲ್	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ನಿರ್ದೇಶಕರು ಹಣಕಾಸು, ದೆಹಲಿ ಮೆಟ್ರೋ ರೈಲು ನಿಗಮ ನಿಯಮಿತ
ಶ್ರೀ ಪ್ರದೀಪ್ ಎಂ. ಸಿಕ್ದರ್	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಸಿಗ್ನಲ್ (ಅಭಿವೃದ್ಧಿ), ರೈಲ್ವೆ ಮಂಡಳಿ, ರೈಲ್ವೆ ಸಚಿವಾಲಯ, ಭಾರತ ಸರ್ಕಾರ
ಡಾ. ಎಂ. ರವಿಕಾಂತ್	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ (ಹುಡ್ಕೋ)
ಶ್ರೀ ಪಿ. ರವಿಕುಮಾರ್	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ
ಶ್ರೀ ಐ.ಎಸ್.ಎನ್. ಪ್ರಸಾದ್	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ
ಶ್ರೀಮತಿ ವಂದಿತ ಶರ್ಮಾ	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ
ಡಾ॥ ರಮಣ ರೆಡ್ಡಿ	ನಿರ್ದೇಶಕರು, ಬಿಎಂಆರ್‌ಸಿಎಲ್ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ಎನ್.ಎಂ. ಧೋಕೆ	ನಿರ್ದೇಶಕರು (ರೋಲಿಂಗ್ ಸ್ಟಾಕ್, ಎಲೆಕ್ಟ್ರಿಕಲ್, ಸಿಗ್ನಲಿಂಗ್ ಮತ್ತು ಟೆಲಿಕಮ್ಯುನಿಕೇಶನ್), ಬಿಎಂಆರ್‌ಸಿಎಲ್
ಶ್ರೀ ಡಿ. ರಾಧಾಕೃಷ್ಣ ರೆಡ್ಡಿ	ನಿರ್ದೇಶಕರು (ಯೋಜನೆ ಮತ್ತು ಪ್ಲಾನಿಂಗ್), ಬಿಎಂಆರ್‌ಸಿಎಲ್
ಶ್ರೀ ಯು. ಜಗದೀಶ್ ನಾಯಕ್	ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ ಜಾಗೃತ ಅಧಿಕಾರಿ
ಶ್ರೀ ಎಸ್. ವಾಸುದೇವನ್	ಮುಖ್ಯ ಹಣಕಾಸು ಅಧಿಕಾರಿ



ಶಾಸನಬದ್ಧ ಲೆಕ್ಕಪರಿಶೋಧಕರು
ಮೆ॥ ಬದರಿ ಮಧುಸೂಧನ್ ಅಂಡ್ ಶ್ರೀನಿವಾಸನ್,
ಚಾರ್ಟರ್ಡ್ ಅಕೌಂಟೆಂಟ್ಸ್,
ನಂ.132, ಕಾಂತ ಕೋರ್ಟ್, 2ನೇ ಮಹಡಿ,
ಲಾಲ್‌ಬಾಗ್ ರಸ್ತೆ, ಬೆಂಗಳೂರು–560 027.

ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು
ಮೆ॥ ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್,
ಕಾರ್ಪೊರೇಟ್ ಲಾ ಅಡ್ವೈಸರ್ಸ್ ಮತ್ತು ಕಂಪನಿ ಕಾರ್ಯದರ್ಶಿ,
ನಂ.004, ಓಜುಸ್ ಅಪಾರ್ಟ್‌ಮೆಂಟ್ಸ್, 4ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560 003.

ಡಿಬೆಂಚರ್ ಟ್ರಸ್ಟೀ
ಮೆ॥ ವಿಸ್ತ್ರಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್
ದಿ ಐಎಲ್ ಅಂಡ್ ಎಫ್‌ಎಸ್ ಫೈನಾನ್ಷಿಯಲ್ ಸೆಂಟರ್
ಪ್ಲಾಟ್ ನಂ. ಸಿ–22, ಜಿ ಬ್ಲಾಕ್, 7ನೇ ಮಹಡಿ,
ಬಾಂದ್ರ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರ (ಈಸ್ಟ್), ಮುಂಬೈ–400051
ದೂರವಾಣಿ: +91 22 2659 3535, ಫ್ಯಾಕ್ಸ್: +91 22 2653 3297
ಇ–ಮೇಲ್: mumbai@vistra.com

ಡಿಬೆಂಚರ್‌ಗಳಿಗೆ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್
ಮೆ॥ ಕಾರ್ವಿ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್
ಕಾರ್ವಿ ಸೆಲೆನಿಮ್ ಟವರ್ ಬಿ ಪ್ಲಾಟ್
ಸಂಖ್ಯೆ 31&32 ಹಣಕಾಸು ಜಿಲ್ಲೆ,
ನಾನಕರ್ಮಗುಡ, ಹೈದರಾಬಾದ್–500032

ಇಕ್ವಿಟಿ ಷೇರುಗಳಿಗೆ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್
ಮೆ॥ ಬಿಜಿಎಸ್‌ಇ ಫೈನಾನ್ಷಿಯಲ್ ಲಿಮಿಟೆಡ್,
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್,
51, 1ನೇ ಅಡ್ಡರಸ್ತೆ, ಜೆ.ಸಿ. ರಸ್ತೆ, ಬೆಂಗಳೂರು–560 027.

ಬ್ಯಾಂಕರ್‌ಗಳು
1.ಬ್ಯಾಂಕ್ ಆಫ್ ಇಂಡಿಯಾ 2.ಭಾರತೀಯ ಸ್ಟೇಟ್ ಬ್ಯಾಂಕ್ 3.ಐಡಿಬಿಐ ಬ್ಯಾಂಕ್ 4.ಐಸಿಐಸಿಐ ಬ್ಯಾಂಕ್ 5.ಕೆನರಾ ಬ್ಯಾಂಕ್

ನೋಂದಾಯಿತ ಕಚೇರಿ
ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ
3ನೇ ಮಹಡಿ, ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.



ಸೂಚನೆ

ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ಕಾರ್ಯಕಲಾಪಗಳನ್ನು ನಡೆಸಲು ಬೆಂಗಳೂರು ಮೆಟ್ರೋ ರೈಲು ನಿಗಮದ ಸದಸ್ಯರುಗಳ 13ನೇ ವಾರ್ಷಿಕ ಮಹಾ ಸಭೆಯನ್ನು **ಸೋಮವಾರ 30ನೇ ಸೆಪ್ಟೆಂಬರ್ 2019 ಬೆಳಿಗ್ಗೆ 10.00ಗಂಟೆಗೆ ಕೊಟ್ಟಡಿ ಸಂಖ್ಯೆ : 331, 3ನೇ ಮಹಡಿ, ವಿಧಾನಸೌಧ ಬೆಂಗಳೂರು –560 001** ಇಲ್ಲಿ ನಡೆಸಲಾಗುವುದು.

ಸಾಮಾನ್ಯ ಕಾರ್ಯಕಲಾಪಗಳು

1. ಮಾರ್ಚ್ 31, 2019ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಕಂಪನಿಯ ಲೆಕ್ಕಪರಿಶೋಧಿಸಿದ ಹಣಕಾಸಿನ ವಿವರಗಳು, ನಿರ್ದೇಶಕರ ಮಂಡಳಿಯ, ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳು ಮತ್ತು ಈ ವರದಿಗಳ ಮೇಲಿನ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆ ಟಿಪ್ಪಣಿಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು ಹಾಗೂ ಸಾಮಾನ್ಯ ನಿರ್ಣಯವಾಗಿ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸುವುದು:

   "ನಿರ್ಣಯಿಸುವುದೇನೆಂದರೆ, ಸದರಿ ಸಭೆಯ ಮುಂದಿರಿಸಿರುವ ಕಂಪನಿಯ 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಲೆಕ್ಕ ಪರಿಶೋಧಿಸಿದ ಹಣಕಾಸಿನ ವಿವರಗಳು ಮತ್ತು ಮಂಡಳಿಯ ನಿರ್ದೇಶಕರ ಹಾಗೂ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳು ಮತ್ತು ಇವುಗಳ ಮೇಲಿನ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆ ಟಿಪ್ಪಣಿಗಳನ್ನು ಈ ಮೂಲಕ ಸ್ವೀಕರಿಸಿ ಪರಿಗಣಿಸಿವೆ ಮತ್ತು ಅಂಗೀಕರಿಸಲಾಗಿದೆ".

2. ಭಾರತದ ಸಿ ಅಂಡ್ ಎಜಿ ಇವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ 2019–20ರ ಆರ್ಥಿಕ ವರ್ಷಕ್ಕೆ ಸಂಭಾವನೆ ನಿಗದಿಪಡಿಸುವುದು ಮತ್ತು ಸೂಕ್ತವೆಂದು ಕಂಡುಬಂದಲ್ಲಿ ಸಾಮಾನ್ಯ ನಿರ್ಣಯವಾಗಿ ಕೆಳಕಂಡ ನಿರ್ಣಯವನ್ನು ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಅಂಗೀಕರಿಸುವುದು.

   "ನಿರ್ಣಯಿಸುವುದೇನೆಂದರೆ, ತಿದ್ದುಪಡಿಯಾದಂತೆ ಕಂಪನಿಗಳ ಕಾಯ್ದೆ, 2013 ರ ಪ್ರಕರಣ 139 (5) ರ ಅನ್ವಯ ಆರ್ಥಿಕ ವರ್ಷ 2019–20ಕ್ಕೆ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರಿಂದ ನೇಮಕ ಮಾಡಲ್ಪಟ್ಟಿರುವ ಸ್ವತಂತ್ರ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ ಸಂಭಾವನೆ ನಿಗದಿಪಡಿಸಲು ಮತ್ತು ಕೈ ಖರ್ಚುಗಳು, ಶಾಸನಬದ್ಧ ತೆರಿಗೆಗಳು ಮತ್ತು ಇತರೆ ಚಿಕ್ಕಪುಟ್ಟ ಖರ್ಚುಗಳನ್ನು ಭರಿಸಲು ಕಂಪನಿಯ ನಿರ್ದೇಶಕರುಗಳಿಗೆ ಕಂಪನಿಗಳ ಕಾಯ್ದೆ 2013ರ ಪ್ರಕರಣ 142(1)ರ ಅನ್ವಯ ಈ ಮೂಲಕ ಅಧಿಕಾರ ನೀಡಲಾಗಿದೆ".

ಮಂಡಳಿಯ ಆದೇಶದ ಮೇರೆಗೆ
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಪರವಾಗಿ

ಸಹಿ/–
(ಯು. ಜಗದೀಶ್ ನಾಯಕ್)
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 25.09.2019

ಸೂಚನೆ:

1. ಸದರಿ ವಾರ್ಷಿಕ ಮಹಾಸಭೆಗೆ ಹಾಜರಾಗಿ ಮತ ಹಾಕಲು ಅರ್ಹರಾದ ಸದಸ್ಯರು ತನ್ನ ಪರವಾಗಿ ಹಾಜರಾಗಲು ಮತ್ತು ಮತ ಹಾಕಲು ಪ್ರಾಕ್ಸಿಯನ್ನು ನೇಮಕ ಮಾಡಿಕೊಳ್ಳಲು ಅರ್ಹರಾಗಿರುವರು. ಈ ರೀತಿ ನೇಮಕ ಮಾಡಿಕೊಳ್ಳುವ ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಪ್ರಾಕ್ಸಿ ನೇಮಕದ ಬಗ್ಗೆ ದಾಖಲೆಗಳನ್ನು ಸಭೆ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗಿಂತ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

ಇವರಿಗೆ:

1. ಎಲ್ಲಾ ಷೇರುದಾರರು
2. ಎಲ್ಲಾ ನಿರ್ದೇಶಕರು
3. ಡಿಬೆಂಚರ್ ಟ್ರಸ್ಟಿಗಳು
4. ಶಾಸನಬದ್ಧ ಲೆಕ್ಕಪರಿಶೋಧಕರು
5. ಸೆಕ್ರೆಟರಿಯಲ್ ಆಡಿಟರ್‌ಗಳು



ಅಧ್ಯಕ್ಷರ ಭಾಷಣ

ಮಾನ್ಯ ಷೇರುದಾರರೆ,

ನಿಮ್ಮ ಕಂಪನಿಯ 13ನೇ ವಾರ್ಷಿಕ ಮಹಾಸಭೆಗೆ ತಮ್ಮನ್ನು ಸ್ವಾಗತಿಸಲು ಹರ್ಷಿಸುತ್ತೇನೆ. ಲೆಕ್ಕಪರಿಶೋಧಿತ ಹಣಕಾಸಿನ ವಿವರಗಳು, ನಿರ್ದೇಶಕರುಗಳ ಮಂಡಳಿಯ ವರದಿಗಳು ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳು ಜೊತೆಗೆ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆ ಟಿಪ್ಪಣಿಗಳು, ಹಾಗೂ ಷೇರುದಾರರುಗಳಿಗೆ ಸೂಚನಾ ಪತ್ರವನ್ನು ಈಗಾಗಲೇ ಕಳುಹಿಸಲಾಗಿದೆ. ತಾವು ಅವುಗಳನ್ನು ಓದಿರುವರೆಂದು ನಿಮ್ಮ ಅನುಮತಿ ಮೇರೆಗೆ ಭಾವಿಸುತ್ತೇನೆ. 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸಿನ ವಿವರಗಳ ಬಗ್ಗೆ ಸಿ ಅಂಡ್ ಎಜಿ ಆಫ್ ಇಂಡಿಯಾ ಇವರು ಮತ್ತೊಮ್ಮೆ 'ಶೂನ್ಯ' ಟೀಕೆ ಟಿಪ್ಪಣಿಗಳ ಪ್ರಮಾಣ ಪತ್ರವನ್ನು ನೀಡಿರುವ ವಿಚಾರವನ್ನು ತಮಗೆ ತಿಳಿಸಲು ನಾನು ಹರ್ಷಿಸುತ್ತೇನೆ.

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–I, 18.1 ಕಿ.ಮೀ.ಗಳ ಮಾರ್ಗ 1 (ನೇರಳೆ ಮಾರ್ಗ) ಮತ್ತು 24.2 ಕಿ.ಮೀ.ಗಳ ಮಾರ್ಗ 2 (ಹಸಿರು ಮಾರ್ಗ) ಹೀಗೆ ಎರಡು ಮಾರ್ಗಗಳನ್ನು ಹೊಂದಿದ್ದು, ಅವುಗಳ ಒಟ್ಟು ಮಾರ್ಗದ ಉದ್ದ 42.3 ಕಿ.ಮೀ.ಗಳಾಗಿದ್ದು, ಈ ಮಾರ್ಗಗಳು 18ನೇ ಜೂನ್ 2017ರಿಂದ ಪೂರ್ಣ ಕಾರ್ಯಾಚರಣೆ ನಡೆಸುತ್ತಿವೆ. ಇದರಿಂದ ಪ್ರಯಾಣಿಕರು ಬೆಂಗಳೂರಿನ ಕೇಂದ್ರ ವ್ಯಾಪಾರ ಜಿಲ್ಲಾ ಪ್ರದೇಶಗಳಿಗೆ ಸುಲಭವಾಗಿ ಪ್ರಯಾಣಿಸಲು ಸಾಧ್ಯವಾಗಿದೆ. ಈ ಮಾರ್ಗಗಳಲ್ಲಿ ಮೆಟ್ರೋ ಸೇವೆಗಳಿಗೆ ಪ್ರಯಾಣಿಕರಿಂದ ಅದ್ಭುತ ಬೆಂಬಲ ದೊರೆತಿದೆ. ಈ ಮಾರ್ಗಗಳಲ್ಲಿನ ಗುಣಮಟ್ಟ, ಸಾಮರ್ಥ್ಯ ಮತ್ತು ಸಮಯ ಪಾಲನೆಯ ಬಗ್ಗೆ ಪ್ರಯಾಣಿಕರು ಮುಕ್ತ ಮನಸ್ಸಿನಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಂತ–Iರಲ್ಲಿನ ಪ್ರಯಾಣಿಕರ ಪ್ರಮಾಣ ಇದರಿಂದಾಗಿ ಅಪಾರವಾಗಿ ಹೆಚ್ಚಳವಾಗಿದೆ. ಪ್ರಸ್ತುತದಲ್ಲಿ ಈ ಮಾರ್ಗಗಳಲ್ಲಿ ದಿನಕ್ಕೆ ಸರಾಸರಿ 4,07,376 ಪ್ರಯಾಣಿಕರು ಮೆಟ್ರೋ ಸೇವೆಯನ್ನು ಬಳಸುತ್ತಿದ್ದಾರೆ. (ಆಗಸ್ಟ್ 2019)

ನಿಮ್ಮ ಕಂಪನಿಯು ಹಂತ–Iರ ಪೂರ್ಣ ಸಂಪರ್ಕ ಜಾಲವನ್ನು ಕಾರ್ಯಾಚರಣೆಗೊಳಿಸಿದ ನಂತರ, 2018–19ರ ಸಾಲಿನಲ್ಲಿ ರೂ.83.50 ಕೋಟಿಗಳ ಹೆಚ್ಚುವರಿ ಕಾರ್ಯಾಚರಣೆ ಗಳಿಕೆಯನ್ನು ಸಾಧಿಸಿರುವ ವಿಚಾರ ತಿಳಿಸಲು ಸಂತೋಷವಾಗುತ್ತದೆ. ರೂ.29.00 ಕೋಟಿಗಳ ಸಾಧಾರಣ ನಗದು ನಷ್ಟ ಉಂಟಾಗಿದೆ. ಹಿಂದಿನ ವರ್ಷ 2017–18ರಲ್ಲಿ ರೂ.37.59 ಕೋಟಿಗಳ ನಗದು ನಷ್ಟ ಉಂಟಾಗಿರುತ್ತದೆ.

ನಿಮ್ಮ ಕಂಪನಿಗೆ ಮೆಟ್ರೋ ಸೇವೆ ಬಳಸುತ್ತಿರುವ ಪ್ರಯಾಣಿಕರುಗಳಿಂದ ರೈಲುಗಳ ಕಾರ್ಯಾಚರಣೆ ಕಾಲದ ಅಂತರವನ್ನು ಕಡಿಮೆ ಮಾಡುವಂತೆ ಮತ್ತು ರೈಲಿನ ಸೇವೆಯ ಸಮಯಗಳ ವಿಸ್ತರಣೆ ಇತ್ಯಾದಿ ಬಗ್ಗೆ ಹಲವಾರು ಸಲಹೆಗಳು ಬಂದಿವೆ. ತಾಂತ್ರಿಕ ಮತ್ತು ಸುರಕ್ಷತೆ ವಿಚಾರಗಳನ್ನು ಪರಿಗಣಿಸಿ, ಪ್ರಯಾಣಿಕರ ಈ ಸಲಹೆಗಳನ್ನು ಗಣನೆ ಮಾಡಲಾಗುವುದು. ಪ್ರಸ್ತುತದಲ್ಲಿ ನಿಮ್ಮ ಕಂಪನಿಯು ದಟ್ಟಣೆಯ ಅವಧಿಯಲ್ಲಿ ನೇರಳೆ ಮಾರ್ಗದಲ್ಲಿ 21 ರೈಲುಗಳನ್ನು ಮತ್ತು ಹಸಿರು ಮಾರ್ಗದಲ್ಲಿ 19 ರೈಲುಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ. ಇದ್ದಕ್ಕಿದ್ದಂತೆ ಉಂಟಾಗುವ ಪ್ರಯಾಣಿಕರ ದಟ್ಟಣೆಯನ್ನು ನಿಭಾಯಿಸಲು ಕೆಲವು ಭಾಗಗಳಲ್ಲಿ ಹೆಚ್ಚುವರಿ ರೈಲುಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

2018–19ರ ಸಾಲಿನಲ್ಲಿ ನಮ್ಮ ಮೆಟ್ರೋ ಸಂಪರ್ಕ ಜಾಲದಲ್ಲಿ 17ನೇ ಅಕ್ಟೋಬರ್ 2018ರಂದು 4,49,401 ಪ್ರಯಾಣಿಕರು ಪ್ರಯಾಣಿಸಿದ್ದು, ಅತ್ಯಧಿಕ ಪ್ರಮಾಣದ ದಾಖಲೆಯಾಗಿದೆ. 3ನೇ ಸೆಪ್ಟೆಂಬರ್ 2018ರಂದು ರೂ.1.40 ಕೋಟಿಗಳ ಅತ್ಯಧಿಕ ಗಳಿಕೆ ಆಗಿದೆ. ರೈಲುಗಳನ್ನು ಸಹ 99.8% ಸಕಾಲಿಕವಾಗಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಇದರಿಂದಾಗಿ ದೇಶದಲ್ಲಿನ ಎಲ್ಲಾ ಮೆಟ್ರೋ ರೈಲು ಕಾರ್ಯಾಚರಣೆಗಳಲ್ಲಿ ಇದು ಒಂದು ಅತ್ಯುತ್ತಮ ಎಂಬ ಮೌಲ್ಯಾಂಕಕ್ಕೆ ಭಾಜನವಾಗಿದೆ. ನಮ್ಮ ಮೆಟ್ರೋದ ಹಂತ–Iರ ಸಂಪೂರ್ಣ ಸಂಪರ್ಕ ಸೇವೆ ಪ್ರಾರಂಭವಾಗಿ ಎರಡು ವರ್ಷಗಳಿಗೂ ಹೆಚ್ಚು ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದು ಅತ್ಯಂತ ಹೆಮ್ಮೆಯ ವಿಚಾರವಾಗಿದೆ. ಈ ಅವಧಿಯಲ್ಲಿ ಪ್ರಯಾಣಿಕರ ಸಂಖ್ಯೆ ಹಾಗೂ ಗಳಿಕೆಯು ಗಣನೀಯವಾಗಿ ಹೆಚ್ಚಳವಾಗಿದೆ. ದಟ್ಟಣೆರಹಿತ ಸಮಯದಲ್ಲಿನ ರೈಲುಗಳ ಸೇವೆಯ ಕಾಲದ ಅಂತರವನ್ನು ಕಡಿಮೆ ಮಾಡಲಾಗಿದೆ. ಇದಲ್ಲದೆ ಇನ್ನೂ ಇಂತಹ ಅನೇಕ ಸುಧಾರಣೆಗಳನ್ನು ಮೆಟ್ರೋ ಕಾರ್ಯಾಚರಣೆಯಲ್ಲಿ ಮಾಡಲಾಗಿದೆ. ಬೆಂಗಳೂರಿನ ನಾಗರಿಕರು ನಗರದಾದ್ಯಂತ ಸಂಚರಿಸಲು ಪ್ರತಿದಿನ ನಮ್ಮ ಮೆಟ್ರೋ ಸೇವೆಯನ್ನು ಬಳಸುವ ಮೂಲಕ ಅಪಾರ ಬೆಂಬಲ ನೀಡಿದ್ದರಿಂದಾಗಿ ಈ ಎಲ್ಲಾ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ. ಹಲವಾರು ಮೆಟ್ರೋ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು ವಿವಿಧ ಸಾರಿಗೆ ವ್ಯವಸ್ಥೆಗಳ ಬಹು ವಿಧದ ಸಮನ್ವಯ ಸೌಲಭ್ಯ ಕಲ್ಪಿಸುವುದು, ಕೆಂಪೇಗೌಡ ಮೆಟ್ರೋ ನಿಲ್ದಾಣದಲ್ಲಿ ಆಂಬ್ಯುಲೆನ್ಸ್ ಸೌಲಭ್ಯ ಒದಗಿಸುವುದು ಮುಂತಾದ ಇನ್ನಿತರೆ ಕ್ರಮಗಳನ್ನು ಸಹ



ನಿಮ್ಮ ಕಂಪನಿ ಕೈಗೊಂಡಿದೆ. ಮೆಟ್ರೋ ನಿಲ್ದಾಣದ ಒಳಗೆ ಪ್ರಯಾಣಿಕರು ಸುಗಮವಾಗಿ ಹೋಗಿ ಬರಲು ಅನುಕೂಲವಾಗಲು ಈಗಿರುವ ಎಸ್ಕಲೇಟರುಗಳ ಜೊತೆಗೆ ಇನ್ನೂ ಹೆಚ್ಚಿನ ಎಸ್ಕಲೇಟರುಗಳನ್ನು ಅಳವಡಿಸುವುದು ಮುಂತಾದ ಪ್ರಯಾಣಿಕರ ಮೂಲಸೌಲಭ್ಯಗಳನ್ನು ಸುಧಾರಣೆ ಮಾಡಲು ಸಹ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಹಾಲಿಯಿರುವ ಮೂರು (3) ಬೋಗಿಗಳ ರೈಲುಗಳನ್ನು ಆರು (6) ಬೋಗಿಗಳ ರೈಲುಗಳನ್ನಾಗಿ ಪರಿವರ್ತಿಸುವ ಕಾರ್ಯ ತ್ವರಿತಗತಿಯಲ್ಲಿ ಸಾಗುತ್ತಿದೆ. ಹಂತ–1ರ ಸಂಪರ್ಕ ಜಾಲದಲ್ಲಿ ಮಾರ್ಚ್ 2019ರ ಕೊನೆಯ ವೇಳೆಗೆ ಹತ್ತು (10) ಆರು ಬೋಗಿಗಳ ರೈಲುಗಳನ್ನು (ನೇರಳೆ ಮಾರ್ಗದಲ್ಲಿ 9 ಮತ್ತು ಹಸಿರು ಮಾರ್ಗದಲ್ಲಿ 1) ಪರಿಚಯಿಸಲಾಗಿದೆ. ಆರು ಬೋಗಿಗಳ ಮೊದಲ ರೈಲನ್ನು ಹಸಿರು ಮಾರ್ಗದಲ್ಲಿ ಪರಿಚಯಿಸಲಾಗಿದ್ದು, ಇದಕ್ಕೆ 28ನೇ ಜನವರಿ 2019ರಂದು ಸಂಪಿಗೆ ರಸ್ತೆ ಮೆಟ್ರೋ ನಿಲ್ದಾಣದಲ್ಲಿ, ಕರ್ನಾಟಕ ಸರ್ಕಾರದ ಅಂದಿನ ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಸಚಿವರ ಸಮ್ಮುಖದಲ್ಲಿ ಮತ್ತು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಯವರು ಮೊದಲ ಆರು ಬೋಗಿಗಳ ರೈಲಿಗೆ ಹಸಿರು ನಿಶಾನೆ ತೋರಿಸಿ ಚಾಲನೆಗೊಳಿಸಿದರು. ಇಂದು ಮೆಟ್ರೋ ಸಂಪರ್ಕ ಜಾಲದಲ್ಲಿ 27 ಆರು ಬೋಗಿಗಳ ರೈಲುಗಳು ಕಾರ್ಯಾಚರಣೆಯಾಗುತ್ತಿವೆ. ಆರು ಬೋಗಿಗಳ ರೈಲುಗಳನ್ನು ಪರಿಚಯಿಸಿದ್ದರಿಂದ ಪ್ರಯಾಣಿಕರಿಗೆ ಉತ್ತಮ ಸುರಕ್ಷತೆ ಮತ್ತು ಸುಖಕರ ಪ್ರಯಾಣದ ಅನುಕೂಲದ ಜೊತೆಗೆ ವಿರಾಮವಾಗಿ ಕುಳಿತು ಪ್ರಯಾಣಿಸುವ ಅನುಕೂಲವೂ ದೊರೆತಿದೆ. ಮಹಿಳಾ ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷತೆ ಮತ್ತು ಸುಖಕರ ಪ್ರಯಾಣ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಆರು ಬೋಗಿಗಳ ರೈಲುಗಳಲ್ಲಿ ಮೊದಲನೆ ಬೋಗಿಯನ್ನು ಪೂರ್ಣವಾಗಿ ಮತ್ತು ಮೂರು ಬೋಗಿಗಳ ರೈಲಿನಲ್ಲಿ ಮೊದಲನೆ ಬೋಗಿಯ ಮೊದಲೆರಡು ಬಾಗಿಲುಗಳನ್ನು ಮಹಿಳಾ ಪ್ರಯಾಣಿಕರಿಗೆ ಮೀಸಲಿರಿಸಲಾಗಿದೆ. ಈ ವ್ಯವಸ್ಥೆ ಕಲ್ಪಿಸಿರುವುದಕ್ಕೆ ಮಹಿಳಾ ಪ್ರಯಾಣಿಕರಿಂದ ಮೆಚ್ಚುಗೆಯ ಸ್ವಾಗತ ದೊರೆತಿದೆ. ಪ್ರಯಾಣದ ಸುರಕ್ಷತೆ ಮತ್ತು ಸೌಖ್ಯವನ್ನು ಹೆಚ್ಚಿಸುವುದರ ಜೊತೆಗೆ ದಟ್ಟಣೆಯ ಅವಧಿಯಲ್ಲಿನ ಜನಜಂಗುಳಿಯನ್ನು ಗಣನೀಯವಾಗಿ ನಿವಾರಣೆ ಮಾಡಲಾಗಿದೆ. ಇದರಿಂದಾಗಿ ಹೆಚ್ಚು ಹೆಚ್ಚು ಜನರು ತಮ್ಮ ದೈನಂದಿನ ಪ್ರಯಾಣಕ್ಕೆ ಮೆಟ್ರೋ ರೈಲುಗಳ ಸಂಪರ್ಕ ಜಾಲವನ್ನು ಬಳಸಲು ಆಕರ್ಷಿತರಾಗಿದ್ದಾರೆ.

ನಿಮ್ಮ ಕಂಪನಿಯು ಮೆಟ್ರೋ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನಗಳ ಬಾಡಿಗೆ ಸೇವೆಯನ್ನು ಒದಗಿಸಲು ಸ್ಥಳಾವಕಾಶವನ್ನು ನೀಡಿದೆ. ಮೆಟ್ರೋ ಪ್ರಯಾಣಿಕರ ಬಳಕೆಗಾಗಿ ಸುಮಾರು 1000 ಬೈಕ್‌ಗಳು ಲಭ್ಯವಿದೆ. ನಿಮ್ಮ ಕಂಪನಿಯು ಕರ್ನಾಟಕ ಸರ್ಕಾರದ ನಗರ ಭೂಸಾರಿಗೆ ಇಲಾಖೆಯ (ಡಿಯುಎಲ್‌ಟಿ) ಜೊತೆ ಕೂಡ ಸಮನ್ವಯ ಹೊಂದಿದ್ದು, ಸಾರ್ವಜನಿಕ ಬೈಸಿಕಲ್ ಷೇರಿಂಗ್ ವ್ಯವಸ್ಥೆಗಾಗಿ ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ಸ್ಥಳಾವಕಾಸ ಒದಗಿಸಿದೆ. ಪ್ರತಿ ನಿಲ್ದಾಣಗಳಲ್ಲಿ ಸುಮಾರು 50 ಬೈಸಿಕಲ್‌ಗಳ ನಿಲುಗಡೆಗೆ ಸ್ಥಳಾವಕಾಶ ಒದಗಿಸಲಾಗಿದೆ. ನಿಮ್ಮ ಕಂಪನಿಯು ಬೆಂಗಳೂರು ನಗರ ಸಂಚಾರ ಪೊಲೀಸರ ಜೊತೆ ಸಹಭಾಗಿತ್ವದಲ್ಲಿ ಸಂಚಾರ ನಿರ್ವಹಣೆಗಾಗಿ ಹೊಂದಿದೆ. ಮೆಟ್ರೋ ರೈಲು ಪ್ರಯಾಣಿಕರು ಅವರಿಗೆ ಸಮೀಪವಾಗಿರುವ ಮೆಟ್ರೋ ನಿಲ್ದಾಣಕ್ಕೆ ತಲುಪಲು ಮತ್ತು ಮೆಟ್ರೋ ನಿಲ್ದಾಣದಿಂದ ಅವರ ಕೆಲಸದ ಸ್ಥಳಕ್ಕೆ ತಲುಪಲು ಅನುಕೂಲ ಕಲ್ಪಿಸಲು ನಗರ ಸಾರಿಗೆ ಸೌಲಭ್ಯ ಪೂರೈಕೆದಾರರಾದ ಬಿಎಂಟಿಸಿ (ಬೆಂಗಳೂರು ಮಹಾನಗರ ಸಾರಿಗೆ ನಿಗಮ) ನಿಮ್ಮ ಕಂಪನಿ ಜೊತೆ ಸಂಪರ್ಕ ಹೊಂದಿದೆ. ಪ್ರಮುಖ ಮೆಟ್ರೋ ನಿಲ್ದಾಣಗಳಲ್ಲಿ ಹಾಗೂ ಅತ್ಯಧಿಕ ಜನಸಂದಣಿಯಿರುವ ವಾಣಿಜ್ಯ, ಐಟಿ ಕ್ಷೇತ್ರಗಳು ಮತ್ತು ವಸತಿ ಪ್ರದೇಶಗಳಿಗೆ ಕೂಡ ಬಿಎಂಟಿಸಿ ಫೀಡರ್ ಮಾರ್ಗ ಸೇವೆಯನ್ನು ಒದಗಿಸುವುದು. ಪ್ರಸಕ್ತ ಸಾಲಿನಲ್ಲಿ ನಾನ್–ಫೇರ್ ಬಾಕ್ಸ್ ಆದಾಯವು ಹೆಚ್ಚಳವಾಗುವ ಸಂಭವವಿದೆ. ಇದರಿಂದ ಕಂಪನಿಯ ಒಟ್ಟಾರೆ ಆದಾಯ ಹೆಚ್ಚಾಗಲಿರುವುದು.

ನಿಮ್ಮ ಕಂಪನಿ ಮೆಟ್ರೋ ರೈಲು ಯೋಜನೆಯ ಹಂತ–2ರ ಅನುಷ್ಠಾನದ ಮಧ್ಯಂತರದಲ್ಲಿದೆ. ಎರಡು ನೆಲಮಾಳಿಗೆ ಪ್ಯಾಕೇಜುಗಳ ಹೊರತಾಗಿ ನಿರ್ಮಾಣ ಕಾರ್ಯದ ಬಹುಪಾಲ ಸಿವಿಲ್ ಗುತ್ತಿಗೆಗಳನ್ನು ಈಗಾಗಲೇ ನೀಡಲಾಗಿದೆ. ಯೋಜನೆಯ ಹಂತ–2 ಪೂರ್ಣಗೊಂಡಾಗ ಸಂಚಾರ ದಟ್ಟಣೆ ಗಣನೀಯವಾಗಿ ಕಡಿಮೆಯಾಗುವುದು. ಇದರಿಂದ ಬೆಂಗಳೂರಿನ ನಾಗರಿಕರಿಗೆ ತ್ವರಿತ, ಸುಖಕರ, ಸುರಕ್ಷಿತ ಹಾಗೂ ಕಡಿಮೆ ಖರ್ಚಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಅನುಕೂಲ ದೊರೆಯುವುದು. ಬೆಂಗಳೂರಿನ ಹೆಚ್ಚಿನ ಅಭಿವೃದ್ಧಿ ಹಾಗೂ ಪ್ರಗತಿಗೂ ಇದು ನೆರವಾಗುವುದು. ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರವು ಮೆಟ್ರೋ ಯೋಜನೆಗೆ ಮಂಜೂರಾದ ಹಣವನ್ನು ಬಿಡುಗಡೆ ಮಾಡಿವೆ.

ಬಿಎಂಆರ್‌ಸಿ ಯೋಜನೆಯ ಹಂತ–2ಕ್ಕೆ ಹಣಕಾಸು ಒದಗಿಸಲು 200 ದಶಲಕ್ಷ ಯೂರೋ ಸಾವರಿನ್ ಸಾಲ ಪಡೆಯಲು ಏಜನ್ಸ್ ಫ್ರಾನ್ಸೈಡ್ ಡೆವಲಪ್‌ಮೆಂಟ್ (ಎಎಫ್‌ಡಿ) ಮತ್ತು ಭಾರತ ಸರ್ಕಾರದ ನಡುವೆ ಒಪ್ಪಂದಕ್ಕೆ ಸೆಪ್ಟೆಂಬರ್ 2015ರ ಅವಧಿಯಲ್ಲಿ ಸಹಿ ಮಾಡಲಾಗಿದೆ. ಇದಲ್ಲದೆ, 300 ದಶಲಕ್ಷ ಮತ್ತು 200 ದಶಲಕ್ಷ ಯೂರೊ ಸಾಲ ಪಡೆಯಲು ಅನುಕ್ರಮವಾಗಿ ಅಕ್ಟೋಬರ್ 2017



ಮತ್ತು ಸೆಪ್ಟೆಂಬರ್ 2018ರ ಅವಧಿಯಲ್ಲಿ ಯುರೋಪಿಯನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (ಇಐಬಿ) ಮತ್ತು ಭಾರತ ಸರ್ಕಾರದ ನಡುವೆ ಸಹಿ ಮಾಡಲಾಗಿದೆ. ಯುಎಸ್‌ಡಿ 335 ದಶಲಕ್ಷ ಸಾವರಿನ್ ಸಾಲಕ್ಕಾಗಿ ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (ಎಐಐಬಿ) ಮತ್ತು ಭಾರತ ಸರ್ಕಾರದ ನಡುವೆ ಒಪ್ಪಂದಕ್ಕೆ 04ನೆ ಜೂನ್ 2019ರಂದು ಸಹಿ ಮಾಡಲಾಗಿದೆ. ಇಐಬಿ ಮತ್ತು ಎಐಐಬಿ ಇವುಗಳು ಹಂತ–2ರ ರೀಚ್–6ಕ್ಕೆ (ಹೊಸ ಮಾರ್ಗಗಳು) ಭಾಗಶಃ ಹಣ ಒದಗಿಸುವವು. ಹಂತ–2 ಯೋಜನೆಗೆ ಹಣ ಒದಗಿಸಲು ಕಂಪನಿಯು ಸಹ ಬೇರೆ ಬೇರೆ ಹಣಕಾಸಿನ ಅವಕಾಶಗಳ ಆಯ್ಕೆಯನ್ನು ಸಹ ಅನ್ವೇಷಣೆ ಮಾಡುತ್ತಿದೆ. ಆಕರ್ಷಕ ಬಡ್ಡಿ ದರಗಳ ಆಕರ್ಷಣೆಯೊಡನೆ ಭದ್ರತೆಯುಳ್ಳ, ಪರಿವರ್ತನೆರಹಿತ, ಡಿಬೆಂಚರುಗಳ ನೂತನ ಶ್ರೇಣಿಗಳನ್ನು ಖಾಸಗಿಯವರಿಗೆ ನೀಡುವ ಮೂಲಕ ಸಾಲದ ಬಂಡವಾಳ ಸಂಗ್ರಹಣೆಯೂ ಇದರಲ್ಲಿ ಸೇರಿದೆ. ಹಣದ ಅವಶ್ಯಕತೆ ಆಧಾರದ ಮೇಲೆ ಮತ್ತು ಅನ್ವಯವಾಗುವ ಎಲ್ಲಾ ಶಾಸನಬದ್ಧ ವಿಧಿವಿಧಾನಗಳನ್ನು ಅನುಸರಿಸಿದ ಮತ್ತು ನಿಯಂತ್ರಕ ಅನುಮೋದನೆಗಳನ್ನು ಪಡೆದ ನಂತರ ಸೂಕ್ತ ಸಮಯದಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಹಂತ–2ಎ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ (ಒಆರ್‌ಆರ್ ಮಾರ್ಗ)

ನಿಮ್ಮ ಕಂಪನಿಯು ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂ ವರೆಗೆ ಹೊರವರ್ತುಲ ರಸ್ತೆಯಲ್ಲಿ (ಒಆರ್‌ಆರ್) 17 ಕಿ.ಮೀ.ಗಳ ಉದ್ದಕ್ಕೆ ಪ್ರತ್ಯೇಕ ಮೆಟ್ರೋ ಮಾರ್ಗ ನಿರ್ಮಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಯೋಜನೆಯ ಪರಿಷ್ಕೃತ ವೆಚ್ಚ ರೂ.5994.90 ಕೋಟಿ. ಈ ಮಾರ್ಗವು ಹದಿಮೂರು (13) ಎತ್ತರಿಸಿದ ನಿಲ್ದಾಣಗಳನ್ನು ಹೊಂದಿರುವುದು ಈ ಯೋಜನೆಗೆ ನವೀನ ಸ್ವರೂಪದ ಹಣಕಾಸಿನ ಪೂರೈಕೆ ಕಾರ್ಯತಂತ್ರದ (ಮೆಟ್ರೋ ಯೋಜನೆ ಹಂತ–2ಎ) ಮೂಲಕ ಮತ್ತು ಬಹುಪಕ್ಷೀಯ/ದ್ವಿಪಕ್ಷೀಯ ಸಾಲ ನೀಡಿಕೆ ಏಜೆನ್ಸಿಗಳ ಮೂಲಕ ಹಣ ಒದಗಿಸುವಿಕೆ ಮತ್ತು 50:50 ಜೆವಿ ಕಂಪನಿಗಳಿಗೆ ಹೊಸ ಮೆಟ್ರೋ ರೈಲು ನೀತಿಯಲ್ಲಿ ತಿಳಿಸಿರುವಂತೆ ಈಕ್ವಿಟಿ ರೂಪದಲ್ಲಿ ಯೋಜನೆಗೆ ಹಣ ಒದಗಿಸಲಾಗುವುದು. ಕಂಪನಿಗೆ ದೊಡ್ಡ ಮೊತ್ತದ ಹಣ ಪಾವತಿಸುವುದಕ್ಕೆ ಒಳಪಟ್ಟು, ಒಂದು ನಿರ್ದಿಷ್ಟ ಅವಧಿಗೆ ಅವರ ಕ್ಯಾಂಪಸ್‌ಗಳು/ಆವರಣಗಳು ಇತ್ಯಾದಿಗೆ ಸೇತುವೆಗಳು/ವಾಕ್‌ವೇ ಮೂಲಕ ಸಂಪರ್ಕ ವ್ಯವಸ್ಥೆ ಕಲ್ಪಿಸುವುದು, ನಿಲ್ದಾಣಗಳಿಗೆ ಅವರ ಹೆಸರಿಡುವ ಹಕ್ಕು, ಜಾಹೀರಾತು ಪ್ರಕಟಿಸುವ ಹಕ್ಕುಗಳು, ವಾಣಿಜ್ಯ ಚಿಲ್ಲರೆ ಮಾರಾಟ ಮಳಿಗೆಗಳ ಸ್ಥಳಾವಕಾಶದಂತಹ ಹಕ್ಕುಗಳು/ಅವಕಾಶಗಳನ್ನು ನೀಡುವ ಮೂಲಕ ನವೀನ ರೀತಿಯ ಹಣಕಾಸು ಒದಗಿಸುವಿಕೆ ವಿಧಾನಗಳ ಅಡಿಯಲ್ಲಿ ಹಣ ಸಂಗ್ರಹಣೆ ಮಾಡಲು ವಿವಿಧ ಕಾರ್ಪೊರೇಟ್ ಕಂಪನಿಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಇದರಿಂದ ನಿಲ್ದಾಣಗಳು/ಮಾರ್ಗದ ನಿರ್ಮಾಣದ ವೆಚ್ಚವನ್ನು ಭಾಗಶಃವಾಗಿ ಭರಿಸಲು ಕಂಪನಿಗೆ ನೆರವಾಗುವುದು. ನವೀನ ವಿಧಾನದಲ್ಲಿ ಹಣಕಾಸು ಒದಗಿಸುವ ಮೂಲಕ ಕಾರ್ಪೊರೇಟ್ ಕಂಪನಿಗಳು ಮೆಟ್ರೋ ಯೋಜನೆಯಲ್ಲಿ ಭಾಗವಹಿಸುವಂತಾಗಲು ಅನುವಾಗುವ ವಿಧಿ ವಿಧಾನಗಳಿಗೆ ರಾಜ್ಯ ಸರ್ಕಾರವು ತನ್ನ ಅನುಮೋದನೆ ನೀಡಿದೆ. ಸದರಿ ಯೋಜನೆಗೆ ಹೊಸ ಮೆಟ್ರೋ ರೈಲು ನೀತಿ 2017ರ ಅಡಿಯಲ್ಲಿ ಹಣ ಒದಗಿಸಲು ಭಾರತ ಸರ್ಕಾರದ ಅನುಮೋದನೆಗಾಗಿ ಕಂಪನಿ ಕೋರಿದೆ. ಈ ಕೋರಿಕೆ ಪರಿಗಣನೆಯಲ್ಲಿದೆ. ಈ ಮಧ್ಯೆ ಸದರಿ ಯೋಜನೆಗೆ ಭೂಸ್ವಾಧೀನ ಒಳಗೊಂಡಂತೆ ಯೋಜನೆ ಪೂರ್ವಭಾವಿ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

ಹಂತ–2ಬಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ಸಂಪರ್ಕ

ನಿಮ್ಮ ಕಂಪನಿಯು ಕೆ.ಆರ್. ಪುರಂ ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಇಲ್ಲಿಯವರೆಗೆ ಹೆಬ್ಬಾಳದ ಮುಖೇನ ಮೆಟ್ರೋ ಯೋಜನೆಯ ಹಂತ–2 ಬಿ ಆಗಿ ಹೊರವರ್ತುಲ ರಸ್ತೆ ಮಾರ್ಗದ ವಿಸ್ತರಣೆಯಾಗಿ ವಿಮಾನ ನಿಲ್ದಾಣ ಮಾರ್ಗ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದೆ. ಸದರಿ ಪರಿಷ್ಕೃತ ಮಾರ್ಗದ ವ್ಯವಸ್ಥೆಯು ಈ ಮಾರ್ಗದ ಒಟ್ಟು ಉದ್ದವನ್ನು 29.062 ಕಿ.ಮೀ.ಯಿಂದ 38 ಕಿ.ಮೀ.ಗಳಿಗೆ ಹೆಚ್ಚು ಮಾಡುವುದು. ನಿಲ್ದಾಣಗಳ ಸಂಖ್ಯೆಯೂ ಸಹ 7ರಿಂದ 17ಕ್ಕೆ ಹೆಚ್ಚಳವಾಗುವುದು. ಈ ಮಾರ್ಗದ ಪರಿಷ್ಕೃತ ಯೋಜನಾ ವೆಚ್ಚ ರೂ.10,584.15 ಕೋಟಿ ಎಂದು ಅಂದಾಜು ಮಾಡಲಾಗಿದೆ. ಇದರನುಸಾರ ಕರ್ನಾಟಕ ಸರ್ಕಾರವು ಪರಿಷ್ಕೃತ ಯೋಜನೆಯ ಪ್ರಸ್ತಾವನೆಯನ್ನು ಅನುಮೋದಿಸಿದೆ. ಜೊತೆಗೆ ಪರಿಷ್ಕೃತ ಮಾರ್ಗ ಮತ್ತು ವೆಚ್ಚವನ್ನು ಹಾಗೂ 50:50 ಜೆವಿ ಕಂಪನಿಗಳಿಗೆ ನೂತನ ಮೆಟ್ರೋ ರೈಲು ನೀತಿಯಲ್ಲಿ ಪ್ರತಿಪಾದಿಸಿರುವಂತೆ ಈಕ್ವಿಟಿ ರೂಪದಲ್ಲಿ ಯೋಜನೆಗೆ ಹಣಕಾಸು ಒದಗಿಸುವಿಕೆ ಮತ್ತು ಬಹುಪಕ್ಷೀಯ/ದ್ವಿಪಕ್ಷೀಯ ಸಾಲ ನೀಡಿಕೆ ಏಜೆನ್ಸಿಗಳ ಮೂಲಕ ಹಣ ಒದಗಿಸುವಿಕೆಗೂ ಸಹ ಕರ್ನಾಟಕ ಸರ್ಕಾರ ಅನುಮೋದನೆ ನೀಡಿದೆ. ಈ ಯೋಜನೆಗೆ ಕಂಪನಿ ಕೂಡ, ನೂತನ ಮೆಟ್ರೋ ರೈಲು ನೀತಿ 2017ರ ಅನ್ವಯ ಹಣಕಾಸಿನ ನೆರವು ನೀಡುವಂತೆ ಭಾರತ ಸರ್ಕಾರವನ್ನು ಕೋರಿದೆ. ಈ ಕೋರಿಕೆಯು ಪರಿಗಣನೆಯಲ್ಲಿದೆ. ಈ ಯೋಜನೆಗೆ ಭೂಸ್ವಾಧೀನ ಮಾಡಿಕೊಳ್ಳುವುದು ಸೇರಿದಂತೆ



ಪೂರ್ವಭಾವಿ ಯೋಜನಾ ಪೂರ್ವ ಚಟುವಟಿಕೆಗಳು ಪ್ರಾರಂಭವಾಗಿವೆ. ಭಾರತ ಸರ್ಕಾರದಿಂದ ಅನುಮೋದನೆ ಪಡೆದ ಮೇಲೆ ಮುಖ್ಯ ಯೋಜನಾ ಕಾರ್ಯ ಪ್ರಾರಂಭವಾಗುವುದು.

ಬಿಎಂಆರ್‌ಸಿ ಯೋಜನೆಗೆ ಉದಾರ ಬೆಂಬಲ ನೀಡಿದ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು, ಮಂಡಳಿಯಲ್ಲಿನ ನನ್ನ ಸಹೋದ್ಯೋಗಿಗಳಿಗೆ ಈ ಸಂದರ್ಭದಲ್ಲಿ ಧನ್ಯವಾದ ಸಲ್ಲಿಸುತ್ತೇನೆ.

ಇದೆಲ್ಲಕ್ಕಿಂತ ಮಿಗಿಲಾಗಿ ಅಭೂತಪೂರ್ವ ಬೆಂಬಲ ನೀಡಿದ ಬೆಂಗಳೂರಿನ ನಾಗರಿಕರಿಗೆ ನಾನು ಹೃತ್ಪೂರ್ವಕ ಧನ್ಯವಾದ ಸಲ್ಲಿಸುತ್ತೇನೆ ಮತ್ತು ಇನ್ನು ಮುಂದೆಯೂ ಸಹ ಸಹೃದಯ, ಸಹಕಾರ ಮತ್ತು ಪ್ರೋತ್ಸಾಹ ನೀಡಬೇಕಾಗಿ ಕೋರುತ್ತೇನೆ. ಕೊನೆಯದಾಗಿ, ಬೆಂಗಳೂರು ನಗರಕ್ಕೆ ವಿಶ್ವ ದರ್ಜೆಯ ಮೆಟ್ರೋ ರೈಲು ಸೌಲಭ್ಯ ಒದಗಿಸುವ ಉದ್ದೇಶಕ್ಕೆ ಸಮರ್ಪಣೆ, ತಂಡ ಸ್ಫೂರ್ತಿ ಮತ್ತು ದೃಢ ಬದ್ಧತೆಯಿಂದ ಕಾರ್ಯನಿರ್ವಹಿಸಿದ ಬೆಂಗಳೂರು ಮೆಟ್ರೋ ರೈಲು ನಿಗಮದ ತಂಡಕ್ಕೆ ಅಭಿನಂದನೆ ಸಲ್ಲಿಸುತ್ತೇನೆ.

(ದುರ್ಗಾ ಶಂಕರ್ ಮಿಶ್ರಾ)
ಅಧ್ಯಕ್ಷರು

(ಇದನ್ನು ಕಂಪನಿಯ 13ನೇ ವಾರ್ಷಿಕ ಮಹಾಸಭೆಯ ಕಾರ್ಯಕಲಾಪವೆಂದು ಅರ್ಥೈಸಲಾಗದು)



ಮಂಡಳಿಯ ವರದಿ

ಮಾನ್ಯ ಷೇರುದಾರರೆ,

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕ ಪರಿಶೋಧಿತ ಲೆಕ್ಕಪತ್ರಗಳು, ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ಮತ್ತು ಅದರ ಮೇಲಿನ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆ ಟಿಪ್ಪಣಿಗಳ ಸಹಿತ ಕಂಪನಿಯ 13ನೇ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸುವುದಕ್ಕೆ ನಿಮ್ಮ ನಿರ್ದೇಶಕರು ಹರ್ಷಿಸುವರು.

ಸಂಕ್ಷಿಪ್ತ ಹಣಕಾಸಿನ ಮುಖ್ಯಾಂಶಗಳು

(ರೂ. ಲಕ್ಷಗಳಲ್ಲಿ)

ವಿವರಗಳು	ಚಾಲ್ತಿ ಹಣಕಾಸಿನ ವರ್ಷ 2018–19	ಹಿಂದಿನ ಹಣಕಾಸಿನ ವರ್ಷ 2017–18
ಕಾರ್ಯಾಚರಣೆಯಿಂದ ಬಂದ ಆದಾಯ	**40,234.58**	32,499.96
ಇತರೆ ಆದಾಯ	**13,351.07**	21,448.30
ಸವಕಳಿ, ಹಣಕಾಸು ವೆಚ್ಚಗಳು, ವಿಶೇಷ ಐಟಂಗಳು ಮತ್ತು ತೆರಿಗೆ ಖರ್ಚುಗಳಿಗೆ ಮುನ್ನ ಲಾಭ/(ನಷ್ಟ)	**19,989.08**	27,653.97
ಕಳೆದು: ಸವಕಳಿ/ಅಮಾರ್ಟೈಜೇಶನ್/ದುರ್ಬಲತೆ	**58,393.92**	51,579.41
ಹಣಕಾಸು ವೆಚ್ಚಗಳು, ವಿಶೇಷ ಐಟಂಗಳು ಮತ್ತು ತೆರಿಗೆ ಖರ್ಚಿನ ಮುನ್ನ ಲಾಭ/ನಷ್ಟ	**(38,404.84)**	(23,925.44)
ಕಳೆದು: ಹಣಕಾಸು ವೆಚ್ಚಗಳು	**11,249.78**	11,184.66
ವಿಶೇಷ ಐಟಂಗಳು ಮತ್ತು ತೆರಿಗೆ ಖರ್ಚುಗಳಿಗೆ ಮುನ್ನ ಲಾಭ/ನಷ್ಟ	**(49,654.62)**	(35,110.10)
ಸೇರಿಸಿ/(ಕಳೆದು): ವಿಶೇಷ ಐಟಂಗಳು	–	–
ತೆರಿಗೆ ಖರ್ಚುಗಳಿಗೆ ಮುನ್ನ ಲಾಭ/ನಷ್ಟ	**(49,654.62)**	(35,110.10)
ಕಳೆದು: ತೆರಿಗೆ ಖರ್ಚು (ಚಾಲ್ತಿ ಮತ್ತು ಮುಂದೂಡಿದ್ದು)	–	–
ವರ್ಷದ ಲಾಭ/ನಷ್ಟ	**(49,654.62)**	(35,110.10)
ಒಟ್ಟು ಸಮಗ್ರ ಆದಾಯ/ನಷ್ಟ	**(186.83)**	(115.18)
ಒಟ್ಟು	**(49,841.45)**	(35,225.28)
ಈ ಹಿಂದಿನ ವರ್ಷಗಳ ಲಾಭ/ನಷ್ಟದ ಶಿಲ್ಕು	**(1,67,372.59)**	(1,24,921.29)
ಕಳೆದು: ಡಿಬೆಂಚರ್ ಮರುಗಳಿಕೆ ಮೀಸಲು ನಿಧಿಗೆ ವರ್ಗಾವಣೆ	–	–
ಕಳೆದು: ಮೀಸಲು ನಿಧಿಗೆ ವರ್ಗಾವಣೆ	**(49,654.62)**	(35,110.10)
ಕಳೆದು: ಈಕ್ವಿಟಿ ಷೇರುಗಳ ಬಗ್ಗೆ ಪಾವತಿಸಿದ ಲಾಭಾಂಶ	–	–
ಕಳೆದು: ಪ್ರಿಫರೆನ್ಸ್ ಷೇರುಗಳ ಬಗ್ಗೆ ಪಾವತಿಸಿದ ಲಾಭಾಂಶ	–	–
ಕಳೆದು: ಲಾಭಾಂಶ ವಿತರಣೆ ತೆರಿಗೆ	–	–
ಮುಂದಕ್ಕೆ ತೆಗೆದುಕೊಂಡಿರುವ ಶಿಲ್ಕು	**(2,17,027.21)**	(1,60,031.39)

ಹಂತ–1ಕ್ಕೆ ಸಂಬಂಧಿಸಿದಂತೆ 31ನೇ ಮಾರ್ಚ್, 2019ರಂದು ಇದ್ದಂತೆ ಹಣಕಾಸಿನ ಪ್ರಗತಿ:

31ನೇ ಮಾರ್ಚ್ 2019ರ ಕೊನೆಯಲ್ಲಿದ್ದಂತೆ ಒಟ್ಟು ಯೋಜನಾ ವೆಚ್ಚ ರೂ.13,845.01 ಕೋಟಿ ಪೈಕಿ ಸಂಚಿತ ಹಣಕಾಸಿನ ಪ್ರಗತಿಯು 98.54% ರಷ್ಟು ಆಗಿತ್ತು. ಹಣ ಪೂರೈಕೆ ಸ್ವರೂಪ ಮತ್ತು ಮಾಡಿದ ಪಾವತಿಗಳು/ಬಿಡುಗಡೆಯ ವಿವರಗಳು ಈ ಕೆಳಕಂಡಂತಿರುವುದು.

ಹಂತ–1ಕ್ಕೆ ಸಂಬಂಧಿಸಿದಂತೆ 31.03.2019ರವರೆಗೆ ಆಗಿರುವ ಸಂಚಿತ ಹಣಕಾಸಿನ ಪ್ರಗತಿ

(ರೂ. ಕೋಟಿಗಳಲ್ಲಿ)

ಹಣಕಾಸಿನ ಸ್ವರೂಪದ ಅನ್ವಯ	ಕರ್ನಾಟಕ ಸರ್ಕಾರ	ಭಾರತ ಸರ್ಕಾರ	ಹಿರಿಯ ಸಾಲ	ಹಣ ಪೂರೈಕೆ ಸ್ವರೂಪದ ಅನ್ವಯ ಒಟ್ಟು	ವಾಸ್ತವಿಕ ಬಿಡುಗಡೆ
ಈಕ್ವಿಟಿ	1,983.26	1,983.26	–	3,966.52	**3,966.52**
ಅಧೀನ ಸಾಲ	3,077.56	1,089.94	–	4,167.50	**4,167.50**
ಜಿಐಸಿಎ (ಭಾರತ ಸರ್ಕಾರದ ಮೂಲಕ ಪಿಟಿಎ)	–	–	3,208.12	3,208.12	**3,208.12**
ಎಎಫ್‌ಡಿ (ಭಾರತ ಸರ್ಕಾರದ ಮೂಲಕ ಪಿಟಿಎ)	–	–	873.29	873.29	**873.29**
ಹುಡ್ಕೋ ಸಾಲ	–	–	650.00	650.00	**650.00**
ಕೆಯುಐಡಿಎಫ್‌ಸಿ ಸಾಲ	–	–	14.75	14.75	**14.75**
ಎಸ್‌ಸಿಡಿಗಳು (ನಮ್ಮ ಮೆಟ್ರೋ ಬಾಂಡ್‌ಗಳ ಶ್ರೇಣಿ–I)	–	–	300.00	300.00	**300.00**
ಪಡೆಯಬೇಕಾಗಿರುವ ಬಾಕಿ	–	–	664.83	–	–
ಒಟ್ಟು	**5,060.82**	**3,073.20**	**5,710.99**	**13,845.01**	**13,180.18**
ಇತರೆ/ಹಂತ–2 ನಿಧಿಗಳು ಮತ್ತು ಇತರೆ ಮೂಲಗಳು (ತಾತ್ಕಾಲಿಕವಾಗಿ ಬಳಸಲಾಗಿರುವುದು–ಹಂತ–1)	–	–	–	–	–
ಒಟ್ಟು ಮೂಲಗಳು	**5,060.82**	**3,073.20**	**5,710.99**	**13,845.01**	**13,180.18**
ಒಟ್ಟು ಪಾವತಿಗಳು					*** 13,642.32**
ಮಂಜೂರಾದ ವೆಚ್ಚದ ಶೇಕಡವಾರು ಆಗಿ ಒಟ್ಟು ಪಾವತಿ (13,642.32 / 13845.01)					**98.54%**
ರಾಜ್ಯ ತೆರಿಗೆಗಳ ಮರುಪಾವತಿ	618.86	–	–	–	**618.86**

*ಟಿಪ್ಪಣಿ: ಹಿಂದಿನ ವರ್ಷದವರೆಗೆ ಪಾವತಿಗಳನ್ನು ಒಟ್ಟು ಆಧಾರದ ಮೇಲೆ ತೋರಿಸಲಾಗಿದೆ ಆದರೆ ಪ್ರಸಕ್ತ 2018–19ನೇ ಸಾಲಿನಲ್ಲಿ, ರಾಜ್ಯ ತೆರಿಗೆಗಳ ಮರುಪಾವತಿ, ಮರುಪಡೆಯಬಹುದಾದ ಮುಂಗಡಗಳು, ಬಿಜಿ ಎನ್‌ಕ್ಯಾಶ್, ಇತರ ವಸೂಲಿಗಳು ಮತ್ತು ಗಳಿಸಿದ ಬಂಡವಾಳದ ಬಡ್ಡಿ ಹೊರತುಪಡಿಸಿ ನಿವ್ವಳ ಪಾವತಿಯನ್ನು ರೂ.13,643.32 ಕೋಟಿ ಎಂದು ಯೋಜನೆಯ ಅವಧಿಗೆ ಪರಿಗಣಿಸಲಾಗಿದೆ. ಹೆಚ್ಚಿನ ಮೌಲ್ಯ ಮತ್ತು ವ್ಯವಸ್ಥೆಗಳ ಒಪ್ಪಂದಗಳಿಗೆ ಅಂತಿಮ ಮಸೂದೆಗಳು ಬಾಕಿ ಉಳಿದಿವೆ ಮತ್ತು ಅಗತ್ಯವಿದ್ದಲ್ಲಿ ಹೊಂದಾಣಿಕೆಗಳನ್ನು ಮಾಡಲಾಗುವುದು.

ಯೋಜನೆಯ ಹಂತ–1ರ ಹಣಕಾಸಿನ ಮುಕ್ತಾಯ

ಹಂತ–1ರ ಅನುಮೋದಿತ ಯೋಜನಾ ವೆಚ್ಚ ರೂ.13,845.01 ಕೋಟಿಯನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಅನುಮೋದಿಸಿವೆ (ರಾಜ್ಯ ತೆರಿಗೆಗಳು ಮತ್ತು ಸುಂಕಗಳ ಮರುಪಾವತಿ ಹೊರತುಪಡಿಸಿ). ಈ ಮೊತ್ತದ ಪೈಕಿ ರೂ.8,134.02 ಕೋಟಿ ಹಣವನ್ನು ಯೋಜನೆ ಪ್ರವರ್ಧಕರಾದ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಈಕ್ವಿಟಿ ಕೊಡುಗೆ ಮತ್ತು ಅಧೀನ ಸಾಲದಿಂದ ಒದಗಿಸಿವೆ. ಇದರ ಜೊತೆಗೆ ರೂ.5,710.99 ಕೋಟಿ ಹಣವನ್ನು ಮೇಲ್ದರ್ಜೆ (ಸೀನಿಯರ್) ಅವಧಿ ಸಾಲವಾಗಿ ಬಹು–ಪಕ್ಷೀಯರು/ವಿದೇಶಿ ಹಣಹೂಡಿಕೆ ಏಜೆನ್ಸಿಗಳು ಮತ್ತು ಬ್ಯಾಂಕ್‌ಗಳು/ಹಣಕಾಸಿನ ಸಂಸ್ಥೆಗಳಿಂದ ಮೇಲ್ದರ್ಜೆ ಅವಧಿ ಸಾಲವಾಗಿ ಸಂಗ್ರಹಿಸಬೇಕಾಗಿತ್ತು. ನಿಮ್ಮ ಕಂಪನಿಯು 31ನೇ ಮಾರ್ಚ್ 2019ರಂದು ಇದ್ದಂತೆ ಅನುಮೋದಿತ ಮೊತ್ತ ರೂ.5,710.99 ಕೋಟಿ ಪೈಕಿ ಮೇಲ್ದರ್ಜೆ ಅವಧಿ ಸಾಲವಾಗಿ ರೂ.5,046.16 ಕೋಟಿ ಮೊತ್ತವನ್ನು ಸಂಗ್ರಹಿಸಿದೆ. ಬಿಎಂಆರ್‌ಸಿ ಯೋಜನೆಯ ಹಂತ–1ಕ್ಕೆ ಮೇಲ್ದರ್ಜೆ ಅವಧಿ ಸಾಲದ ಅಡಿಯಲ್ಲಿ ರೂ.664.83 ಕೋಟಿವರೆಗೆ ಸಾಲ ಪಡೆಯಲು ಅವಕಾಶವಿದೆ. ಸಾಲ ಒಪ್ಪಂದ ಪತ್ರಕ್ಕೆ ಸಹಿ ಹಾಕುವ ದಿನಾಂಕಗಳಂದು



ಜಾರಿಯಲ್ಲಿದ್ದ ವಿನಿಮಯ ದರಗಳ ಆಧಾರದ ಮೇಲೆ ಭಾರತ ಸರ್ಕಾರ ಜೆಐಸಿಎ ಸಾಲದ ಮೊತ್ತವನ್ನು ನಿರ್ಬಂಧಿಸಿದ ಪ್ರಯುಕ್ತ ಜೆಐಸಿಎ ಸಾಲದ ಮೊತ್ತ ರೂ.3,689.14 ಕೋಟಿಯಿಂದ ರೂ.3,208.12 ಕೋಟಿಗೆ ಕಡಿಮೆಯಾದ ಕಾರಣ ಪ್ರಮುಖವಾಗಿ ಈ ಕಂದಕ ಉಂಟಾಗಿದೆ. ಜೆಐಸಿಎ ಸಾಲದ ನೀಡಿಕೆಯಲ್ಲಿನ ಇಳಿಕೆ ಮತ್ತು ಮೇಲ್ದರ್ಜೆ ಸಾಲದ ಮೊತ್ತದಲ್ಲಿನ ಈ ಕೊರತೆಯನ್ನು ಹೊಸ ಸಾಲಗಳನ್ನು ಪಡೆಯುವ ಮೂಲಕ ಸರಿದೂಗಿಸಬೇಕಾಗಿದೆ.

ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ (ಐಎಸ್‌ಡಿ–ಎಎಸ್)

ಹಣಕಾಸಿನ ವರ್ಷ 2018–19ರ ಹಣಕಾಸಿನ ವಿವರಗಳನ್ನು ಲೆಕ್ಕಗಳ ಬಗ್ಗೆಗಿನ ಟಿಪ್ಪಣಿಗಳ ಮೂಲಕ ತಿಳಿಸಿರುವ ಪ್ರಮಾಣದವರೆಗೆ ಹೊರತುಪಡಿಸಿದಂತೆ, ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ (ಐಎನ್‌ಡಿ–ಎಎಸ್) ಅನ್ವಯವಾಗುವ ಕಡ್ಡಾಯ ಉಪಬಂಧಗಳ ಅನುಸಾರ ಸಿದ್ಧಪಡಿಸಲಾಗಿದೆ.

ಲಾಭಾಂಶ

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿನ ಕಾರ್ಯಾಚರಣೆಯಲ್ಲಿ ಯಾವುದೇ ಲಾಭವನ್ನು ಗಳಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಹಣಕಾಸಿನ ವರ್ಷ 2018–19ರ ಅವಧಿಗೆ ಕಂಪನಿಯ ಈಕ್ವಿಟಿ ಷೇರುಗಳ ಸಂಬಂಧ ಮಂಡಳಿಯು ಲಾಭಾಂಶವನ್ನು ಶಿಫಾರಸ್ಸು ಮಾಡಿರುವುದಿಲ್ಲ.

ಷೇರು ಬಂಡವಾಳ

ಕಂಪನಿಯ ಅಧಿಕೃತ ಷೇರು ಬಂಡವಾಳ ರೂ.12,000 ಕೋಟಿ. 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ನೀಡಿಕೆಯಾದ, ಚಂದಾದಾರಿಕೆ ಆದ ಮತ್ತು ಪಾವತಿಯಾದ ಈಕ್ವಿಟಿ ಷೇರು ಬಂಡವಾಳ ರೂ.5,823.78 ಕೋಟಿ. ಇದರಲ್ಲಿ ಸಹ ಪ್ರವರ್ಧಕರಾದ ಕರ್ನಾಟಕ ಸರ್ಕಾರದಿಂದ ಇದಕ್ಕೆ ಸಮನಾದ ಈಕ್ವಿಟಿ ಕೊಡುಗೆ ಪಡೆದ ಮೇಲೆ ಹಂಚಿಕೆಯಾಗದೆ ಉಳಿದಿರುವ, ಭಾರತ ಸರ್ಕಾರದಿಂದ ಪಡೆದ ಷೇರು ಅರ್ಜಿ ಹಣವನ್ನಾಗಿ ತೋರಿಸಿರುವ ರೂ.582.00 ಕೋಟಿಯೂ ಸೇರಿದೆ. ಕಂಪನಿಯು ತನ್ನ ಈಕ್ವಿಟಿ ಷೇರುಗಳಿಗೆ ಐಎಸ್‌ಐಎನ್ ಪಡೆದಿದೆ. ಮೆ॥ ಬಿಜಿಎಸ್‌ಇ ಪೈನಾನ್ಷಿಯಲ್ಸ್ ಲಿಮಿಟೆಡ್ ಕಂಪನಿಯನ್ನು ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟರನ್ನಾಗಿ (ಆರ್ ಅಂಡ್ ಟಿಎ) ನೇಮಕ ಮಾಡಿದೆ. ಕರ್ನಾಟಕದ ರಾಜ್ಯಪಾಲರ ಈಕ್ವಿಟಿ ಷೇರುದಾರಿಕೆಯನ್ನು ಸಮಾಪ್ತಿಗೊಳಿಸುವ ಕಾರ್ಯ ಪೂರ್ಣಗೊಂಡಿದೆ. ಭಾರತದ ರಾಷ್ಟ್ರಪತಿಯವರ ಈಕ್ವಿಟಿ ಷೇರುದಾರಿಕೆಯನ್ನು ಸಮಾಪ್ತಿಗೊಳಿಸುವ ಪ್ರಕ್ರಿಯೆಯನ್ನು ಸಹ ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಅನುಮೋದನೆ ಪಡೆದ ನಂತರ ಕೈಗೊಳ್ಳಲಾಗುವುದು.

ಕ್ರೆಡಿಟ್ ರೇಟಿಂಗ್

ಕಂಪನಿಯು ಹಂತ–1 ಯೋಜನೆಗೆ 2014ರಲ್ಲಿ ನೀಡಿದ ನಿಮ್ಮ ಕಂಪನಿಯ 10 ವರ್ಷ ಕಾಲಾವಧಿಯ 8.79% ಭದ್ರತೆಯುಳ್ಳ, ಪರಿವರ್ತಿಸಲಾಗದ, ಖಾಸಗಿಯಾಗಿ ಸಲ್ಲಿಸಿದ ಡಿಬೆಂಚರ್‌ಗಳು – "ನಮ್ಮ ಮೆಟ್ರೋ ಬಾಂಡ್ಸ್ ಶ್ರೇಣಿ–1"ಕ್ಕೆ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳಾದ ಇಂಡಿಯಾ ರೇಟಿಂಗ್ಸ್ ಅಂಡ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್ ಮತ್ತು ಬ್ರಿಕ್‌ವರ್ಕ್ ರೇಟಿಂಗ್ಸ್ ಇವರು "ಎಎ ಅಚಲವಾದ" ರೇಟಿಂಗ್ ಅನ್ನು ಮರು ನೀಡಿಕೆ ಮಾಡಿದ್ದಾರೆ. ಸದರಿ ಡಿಬೆಂಟರುಗಳ ಮೇಲಿನ ಅರೆ ವಾರ್ಷಿಕ ಬಡ್ಡಿಯನ್ನು ಈ ವರ್ಷದ ಅವಧಿಯಲ್ಲಿ ಸಕಾಲಿಕವಾಗಿ ನೀಡಲಾಗಿದೆ. ಕಂಪನಿಗೆ ಯಾವುದೇ ಹೂಡಿಕೆದಾರರಿಂದ ದೂರುಗಳು ಬಂದಿರುವುದಿಲ್ಲ.

ಹಂತ–1ರ ಕಾರ್ಯಾಚರಣೆ ಮುಖ್ಯಾಂಶಗಳು

ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ಕಾರಿಡಾರ್‌ಗಳ ಕಾರ್ಯಾಚರಣೆ

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–1 42.3 ಕಿ.ಮೀ.ಗಳ ಉದ್ದದ ಮಾರ್ಗವನ್ನು ಹೊಂದಿದೆ. ಇದರಲ್ಲಿ ಎರಡು ಮಾರ್ಗಗಳಿವೆ. ಅವುಗಳೆಂದರೆ 18.1 ಕಿ.ಮೀ. ಉದ್ದದ ಮಾರ್ಗ–1 (ನೇರಳೆ ಮಾರ್ಗ) ಮತ್ತು 24.2 ಕಿ.ಮೀ ಉದ್ದದ ಮಾರ್ಗ–2



(ಹಸಿರು ಮಾರ್ಗ). ಈ ಎರಡೂ ಮಾರ್ಗಗಳೂ 18ನೇ ಜೂನ್ 2017ರಿಂದ ಸಂಪೂರ್ಣ ಕಾರ್ಯಾಚರಣೆಗೊಳ್ಳುತ್ತಿವೆ. ಇದರಿಂದಾಗಿ ಪ್ರಯಾಣಿಕರು ಬೆಂಗಳೂರಿನ ಕೇಂದ್ರ ವ್ಯಾಪಾರ ವ್ಯವಹಾರ ಜಿಲ್ಲಾ ಪ್ರದೇಶಗಳಿಗೆ ಸುಗಮವಾಗಿ ಪ್ರಯಾಣಿಸಲು ಅನುಕೂಲವಾಗಿದೆ. ಈ ಮಾರ್ಗಗಳಲ್ಲಿ ಮೆಟ್ರೋ ಸೇವೆಗಳಿಗೆ ಪ್ರಯಾಣಿಕರಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದೆ. ಮೆಟ್ರೋ ಸೇವೆಯ ಗುಣಮಟ್ಟ, ಸಾಮರ್ಥ್ಯ ಹಾಗೂ ಸಮಯ ಪಾಲನೆ ಬಗ್ಗೆ ಉತ್ತಮ ಮೆಚ್ಚುಗೆ ದೊರೆತಿದೆ. ಈ ಕಾರಣದಿಂದಾಗಿ ಹಂತ–1ರ ಮಾರ್ಗದಲ್ಲಿ ಪ್ರಯಾಣಿಕರ ಪ್ರಮಾಣ ತೀವ್ರ ಹೆಚ್ಚಳವಾಗಿದೆ. ಪ್ರಸ್ತುತ ದಿನ ಒಂದಕ್ಕೆ ಸರಾಸರಿ 4,07,376 ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. (ಆಗಸ್ಟ್ 2019)

2018–19ರ ವರ್ಷದ ಅವಧಿಯಲ್ಲಿನ ಕಾರ್ಯಾಚರಣೆ ಮುಖ್ಯಾಂಶಗಳು ಈ ಕೆಳಕಂಡಂತಿರುವುದು:

- **ಪೂರ್ವ–ಪಶ್ಚಿಮ ಕಾರಿಡಾರ್ – ನೇರಳೆ ಮಾರ್ಗದಲ್ಲಿನ ಪ್ರಯಾಣಿಕರ ಪ್ರಮಾಣ**

  ಮಾರ್ಗ–1ರಲ್ಲಿನ ಪ್ರಯಾಣಿಕರ ಸರಾಸರಿ ಪ್ರಮಾಣ ದಿನ ಒಂದಕ್ಕೆ 1,91,056 ಆಗಿದೆ. ಹಿಂದಿನ ವರ್ಷದಲ್ಲಿ ದಿನ ಒಂದರ ಸರಾಸರಿ ಪ್ರಯಾಣಿಕರ ಸಂಖ್ಯೆ 1,72,648 ಆಗಿತ್ತು. ಈ ಪ್ರಮಾಣಕ್ಕೆ ಹೋಲಿಸಿದರೆ ಪ್ರಸ್ತುತ ವರ್ಷದಲ್ಲಿ ಪ್ರಯಾಣಿಕರ ಸಂಖ್ಯೆ 10.66% ಹೆಚ್ಚಳವಾಗಿದೆ. ಪ್ರಯಾಣಿಕರ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಯು ಅನುಕ್ರಮವಾಗಿ 2,43,799 ಮತ್ತು 85,420 ದಾಖಲಾಗಿದೆ.

- **ಉತ್ತರ–ದಕ್ಷಿಣ ಕಾರಿಡಾರ್ – ಹಸಿರು ಮಾರ್ಗದಲ್ಲಿನ ಪ್ರಯಾಣಿಕರ ಪ್ರಮಾಣ**

  ಪ್ರಸ್ತುತ ಮಾರ್ಗ–2ರಲ್ಲಿನ ಪ್ರಯಾಣಿಕರ ಸರಾಸರಿ ಪ್ರಮಾಣ ದಿನ ಒಂದಕ್ಕೆ 1,75,351 ಆಗಿದೆ. ಹಿಂದಿನ ವರ್ಷ ದಾಖಲಾಗಿರುವ ಸರಾಸರಿ ಪ್ರಯಾಣಿಕರ ಪ್ರಮಾಣ 1,26,549ಕ್ಕೆ ಹೋಲಿಸಿದರೆ, ಪ್ರಸ್ತುತದಲ್ಲಿ ಪ್ರಯಾಣಿಕರ ಪ್ರಮಾಣ 38.56% ಹೆಚ್ಚಳವಾಗಿದೆ. ಪ್ರಯಾಣಿಕರ ಗರಿಷ್ಠ ಮತ್ತು ಕನಿಷ್ಠ ಪ್ರಮಾಣವು ಅನುಕ್ರಮವಾಗಿ 2,36,414 ಮತ್ತು 1,05,487 ದಾಖಲಾಗಿದೆ.

- **ಪೂರ್ವ–ಪಶ್ಚಿಮ ಕಾರಿಡಾರ್ – ನೇರಳೆ ಮಾರ್ಗದಲ್ಲಿನ ಫೇರ್ ಬಾಕ್ಸ್ ಆದಾಯ**

  ಈ ಮಾರ್ಗದಲ್ಲಿನ ದಿನ ಒಂದರ ಸರಾಸರಿ ಆದಾಯವು ರೂ.46.13 ಲಕ್ಷ. ಹಿಂದಿನ ವರ್ಷದಲ್ಲಿನ ದಿನ ಒಂದರ ಸರಾಸರಿ ಆದಾಯ ರೂ.40.82 ಲಕ್ಷಗಳಿಗೆ ಹೋಲಿಸಿದರೆ ಈ ವರ್ಷ ಆದಾಯವು 13.01% ಹೆಚ್ಚಳವಾಗಿದೆ. ದಿನ ಒಂದರ ಗರಿಷ್ಠ ಮತ್ತು ಕನಿಷ್ಠ ಆದಾಯ ಅನುಕ್ರಮವಾಗಿ ರೂ.69.48 ಲಕ್ಷ ಮತ್ತು ರೂ.19.18 ಲಕ್ಷ ಆಗಿದೆ.

- **ಉತ್ತರ–ದಕ್ಷಿಣ ಕಾರಿಡಾರ್ – ಹಸಿರು ಮಾರ್ಗದ ಫೇರ್ ಬಾಕ್ಸ್ ಆದಾಯ**

  ಈ ಮಾರ್ಗದಲ್ಲಿನ ದಿನ ಒಂದರ ಸರಾಸರಿ ಆದಾಯವು ರೂ.50.99 ಲಕ್ಷ. ಹಿಂದಿನ ವರ್ಷ ದಿನ ಒಂದಕ್ಕೆ ಆಗಿರುವ ಸರಾಸರಿ ಆದಾಯ ರೂ.36.17 ಲಕ್ಷಗಳಿಗೆ ಹೋಲಿಸಿದರೆ, ಈ ವರ್ಷ ಆದಾಯವು 40.97% ಹೆಚ್ಚಳವಾಗಿದೆ. ಈ ಮಾರ್ಗದಲ್ಲಿ ದಿನ ಒಂದಕ್ಕೆ ಗರಿಷ್ಠ ಮತ್ತು ಕನಿಷ್ಠ ಆದಾಯ ಅನುಕ್ರಮವಾಗಿ ರೂ.69.06 ಲಕ್ಷ ಮತ್ತು ರೂ.31.79 ಲಕ್ಷ ಆಗಿದೆ.

ಬೆಂಗಳೂರು ನಾಗರಿಕರು ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯ ನೋಡಲು ಹಾಗೂ ಹೊಸ ವರ್ಷಾಚರಣೆ ಮಾಡಲು ಅನುಕೂಲವಾಗುವಂತೆ ಎರಡೂ ಮಾರ್ಗಗಳಲ್ಲಿ ಮೆಟ್ರೋ ರೈಲು ಸೇವೆ/ಸಮಯವನ್ನು 00.30 ಗಂಟೆವರೆಗೆ ವಿಸ್ತರಣೆ ಮಾಡಲಾಗಿತ್ತು. ಪ್ರಯಾಣಿಕರು ಯಾವುದೇ ಮೆಟ್ರೋ ನಿಲ್ದಾಣದಲ್ಲಿ ವಾಪಸ್ ಪ್ರಯಾಣದ ಟಿಕೇಟ್‌ಗಳನ್ನು (ಕಾಗದದ ಟಿಕೆಟ್‌ಗಳು) ಪಡೆದುಕೊಳ್ಳುವ ಅವಕಾಶ ಒದಗಿಸಲಾಗಿತ್ತು. ಈ ಟಿಕೆಟ್ ಪ್ರತಿ ಐಪಿಎಲ್ ಕ್ರಿಕೆಟ್ ಪಂದ್ಯದ ದಿನದಂದು ಸಂಜೆ 4 ಗಂಟೆಯ ನಂತರದಿಂದ ಕೊನೆಯ ರೈಲು ಸೇವೆಯವರೆಗೆ ಸಿಂಧುವಾಗಿರುತ್ತಿತ್ತು. ಕಾಗದದ ಟಿಕೆಟ್‌ನ ದರವನ್ನು ಒಬ್ಬರಿಗೆ ರೂ.50/–ರಂತೆ ನಿಗದಿಪಡಿಸಲಾಗಿತ್ತು ಈ ಟಿಕೆಟ್‌ಗಳನ್ನು ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆ ಮೆಟ್ರೋ ನಿಲ್ದಾಣಗಳಿಂದ ಹಸಿರು ಮತ್ತು ನೇರಳೆ ಮಾರ್ಗದಲ್ಲಿನ ಯಾವುದೇ ಮೆಟ್ರೋ ನಿಲ್ದಾಣಕ್ಕೆ ಪ್ರಯಾಣಿಸಲು ಮಾತ್ರ ಬಳಸಬಹುದಾಗಿತ್ತು.



ಹಣಕಾಸಿನ ವರ್ಷ 2018–19ರ ಅವಧಿಯಲ್ಲಿ ಹಂತ–1ರ ನೇರಳೆ ಮತ್ತು ಹಸಿರು ಮಾರ್ಗಗಳ ಸಂಪರ್ಕ ಜಾಲದ ಕಾರ್ಯಾಚರಣೆ ಮತ್ತು ನಿರ್ವಹಣೆ (ಒ ಅಂಡ್ ಎಂ) ವಿಭಾಗದ ಹಣಕಾಸಿನ ಕಾರ್ಯಕ್ಷಮತೆಯ ಸಾರಾಂಶ ಈ ಕೆಳಕಂಡಂತಿರುವುದು:

(ರೂ. ಕೋಟಿಗಳಲ್ಲಿ)

ವಿವರಗಳು	**2018–19**
1) ಆದಾಯ	
ಎ. ಫೇರ್ ಬಾಕ್ಸ್	355.02
ಬಿ. ನಾನ್ ಫೇರ್ ಬಾಕ್ಸ್	47.33
ಸಿ. ಇತರೆ ಆದಾಯ	17.12
ಒಟ್ಟು	**419.47**
2) ಖರ್ಚು	**335.96**
3) ನಗದು ಲಾಭ/(ನಷ್ಟ)	**83.50**

ಹಂತ–1ರ ಸಂಪೂರ್ಣ ಸಂಪರ್ಕ ಜಾಲದಲ್ಲಿನ ಕಾರ್ಯಾಚರಣೆಗಳು ಪ್ರಾರಂಭವಾದ್ದರಿಂದ ನಿಮ್ಮ ಕಂಪನಿ 2018–19ರ ಸಾಲಿನಲ್ಲಿ ರೂ.83.50 ಕೋಟಿ ಕಾರ್ಯಾಚರಣೆ ಹೆಚ್ಚುವರಿ ಗಳಿಕೆ ಮಾಡಿದೆ. ಹಿಂದಿನ ವರ್ಷ 2017–18ರಲ್ಲಿ ದಾಖಲಾಗಿರುವ ರೂ.37.58 ಕೋಟಿ ನಗದು ನಷ್ಟಕ್ಕೆ ಹೋಲಿಸಿದರೆ, 2018–19ರ ಸಾಲಿನಲ್ಲಿ ರೂ.29.00 ಕೋಟಿ ಮಾರ್ಜಿನಲ್ ನಗದು ನಷ್ಟ ಉಂಟಾಗಿದೆ.

ಪ್ರಯಾಣಿಕರು ಬಳಸಿದ ವಿವಿಧ ಬಗೆಯ ಟಿಕೇಟುಗಳಿಂದ ಬಂದ ಶೇಕಡವಾರು ವಂತಿಕೆ:

ಟಿಕೆಟ್‌ನ ವಿಧ	**ಮಾರ್ಗ 1 (%)**		**ಮಾರ್ಗ 2 (%)**	
	ಆರ್ಥಿಕ ವರ್ಷ 2018–19	**ಆರ್ಥಿಕ ವರ್ಷ 2017–18**	**ಆರ್ಥಿಕ ವರ್ಷ 2018–19**	**ಆರ್ಥಿಕ ವರ್ಷ 2017–18**
ಸಿಎಸ್‌ಟಿ	37.27	43.89	43.53	53.43
ಸಿಎಸ್‌ಸಿ	62.63	55.96	56.40	46.48
ಗ್ರೂಪ್ ಟಿಕೆಟ್	0.10	0.15	0.07	0.09
ಒಟ್ಟು	**100.00**	**100.00**	**100.00**	**100.00**

ಮೆಟ್ರೋ ಸಂಪರ್ಕ ಜಾಲ ಬಳಸುತ್ತಿರುವ ಪ್ರಯಾಣಿಕರುಗಳಿಂದ ರೈಲುಗಳ ಸಂಚಾರದ ಸಮಯದ ಅಂತರವನ್ನು ಕಡಿಮೆ ಮಾಡುವಂತೆ, ರೈಲು ಸೇವೆಯ ಸಮಯದ ವಿಸ್ತರಣೆ ಮುಂತಾದ ವಿಚಾರಗಳ ಬಗ್ಗೆ ನಿಮ್ಮ ಕಂಪನಿಗೆ ಹಲವಾರು ಸಲಹೆಗಳು ಬಂದಿವೆ. ಎಲ್ಲಾ ತಾಂತ್ರಿಕ ಮತ್ತು ಸುರಕ್ಷತೆ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಈ ಸಲಹೆಗಳನ್ನು ಪರಿಗಣಿಸಲಾಗುತ್ತಿದೆ. ಬಿಎಂಆರ್‌ಸಿಎಲ್ ದಟ್ಟಣೆಯ ಸಮಯದಲ್ಲಿ ನೇರಳೆ ಮಾರ್ಗದಲ್ಲಿ 21 ರೈಲುಗಳನ್ನು ಮತ್ತು ಹಸಿರು ಮಾರ್ಗದಲ್ಲಿ 19 ರೈಲುಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ. ಇದ್ದಕ್ಕಿದ್ದ ಹಾಗೆ ಸಂಚಾರ ದಟ್ಟಣೆ ಹೆಚ್ಚಾದಾಗ ಅದನ್ನು ನಿವಾರಿಸಲು ಕೆಲವು ಭಾಗಗಳಲ್ಲಿ ಹೆಚ್ಚುವರಿ ರೈಲುಗಳನ್ನು ಸಹ ಓಡಿಸಲಾಗುತ್ತಿದೆ.

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ನಮ್ಮ ಮೆಟ್ರೋ ಸಂಪರ್ಕ ಜಾಲವು 17ನೇ ಅಕ್ಟೋಬರ್ 2018ರಂದು 4,49,401 ಪ್ರಯಾಣಿಕರು ಪ್ರಯಾಣಿಸಿದ ಅತ್ಯಧಿಕ ದಾಖಲೆ ಸಾಧಿಸಿದೆ. ಹಾಗೆಯೇ 3ನೇ ಸೆಪ್ಟೆಂಬರ್ 2018ರಂದು ರೂ.1.40 ಕೋಟಿಯ ಅತ್ಯಧಿಕ ಗಳಿಕೆಯನ್ನು ದಾಖಲಿಸಿದೆ. ರೈಲುಗಳು 99.8% ಸಕಾಲದಲ್ಲಿ ಕಾರ್ಯಾಚರಣೆಯಾಗುತ್ತಿವೆ. ದೇಶದಲ್ಲಿನ ಎಲ್ಲಾ ಮೆಟ್ರೋ ಕಾರ್ಯಾಚರಣೆಗಳಲ್ಲಿನ ಅತ್ಯುತ್ತಮ ಸೇವೆಗಳಲ್ಲಿ ಇದೂ ಒಂದು ಎಂಬ ಗಣನೆಗೆ ಪಾತ್ರವಾಗಿದೆ. ಸಂಪೂರ್ಣ ಹಂತ–1ರ ಕಾರ್ಯಾಚರಣೆ ಪ್ರಾರಂಭವಾದ ಸಮಯದಿಂದ ಇಪ್ಪತ್ತು ತಿಂಗಳಿಗೂ ಹೆಚ್ಚಿನ ಅವಧಿಯನ್ನು ನಮ್ಮ ಮೆಟ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿರುವುದು



ಅಮೋಘ ಹೆಮ್ಮೆಯ ವಿಚಾರವಾಗಿದೆ. ಈ ಅವಧಿಯಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಆದಾಯವೂ ಗಮನಾರ್ಹವಾಗಿ ಹೆಚ್ಚಾಗಿದೆ. ದಟ್ಟಣೆ ರಹಿತ ಸಮಯದಲ್ಲಿನ ರೈಲುಗಳ ಆಚರಣೆಯ ಕಾಲಾಂತರದಲ್ಲಿ ಇಳಿಕೆ ಮತ್ತು ಇನ್ನೂ ಇಂತಹ ಅನೇಕ ಸುಧಾರಣೆಗಳು ಉಂಟಾಗಿವೆ. ಬೆಂಗಳೂರಿನ ನಾಗರಿಕ ಬಂಧುಗಳು ನಗರದಾದ್ಯಂತ ಪ್ರತಿದಿನ ಸಂಚಾರಕ್ಕೆ ನಮ್ಮ ಮೆಟ್ರೋ ಬಳಸುವಲ್ಲಿ ಹೆಚ್ಚಿನ ಬೆಂಬಲ ನೀಡಿದ್ದರಿಂದ ಹಾಗೂ ಆಸಕ್ತಿ ತೋರಿದ್ದರಿಂದ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವಾಗಿದೆ. ನಿಮ್ಮ ಕಂಪನಿಯು ಅನೇಕ ಮೆಟ್ರೋ ನಿಲ್ದಾಣಗಳಲ್ಲಿ ವಿವಿಧ ಸಾರಿಗೆ ವ್ಯವಸ್ಥೆಯ ಬಹು ಮಾದರಿಯ ಸಂಯೋಜನೆಯ ಸೌಲಭ್ಯ ಮತ್ತು ಕೆಂಪೇಗೌಡ (ಮೆಜಸ್ಟಿಕ್) ನಿಲ್ದಾಣದಲ್ಲಿ ಆಂಬ್ಯುಲೆನ್ಸ್ ಸೌಲಭ್ಯ ಒದಗಿಸಿದೆ. ಇಂತಹ ಇನ್ನೂ ಹಲವಾರು ಪ್ರಯಾಣಿಕರ ಸೌಲಭ್ಯ ಕ್ರಮಗಳನ್ನು ಕೈಗೊಂಡಿದೆ. ನಿಮ್ಮ ಕಂಪನಿಯು ಮೆಟ್ರೋ ನಿಲ್ದಾಣಗಳಲ್ಲಿ ಪ್ರಯಾಣಿಕರ ಮೂಲಸೌಲಭ್ಯಗಳನ್ನು ಸುಧಾರಿಸಲು ಸಹ ಕ್ರಮಗಳನ್ನು ಕೈಗೊಂಡಿದೆ. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಇಪ್ಪತ್ತ ಒಂದು (21) ಹೆಚ್ಚುವರಿ ಎಸ್ಕಲೇಟರುಗಳನ್ನು ಅಳವಡಿಸಲಾಗಿದೆ. ನಿಲ್ದಾಣ ಒಳಗೆ ಓಡಾಡಲು ಇದರಿಂದ ಪ್ರಯಾಣಿಕರಿಗೆ ಸುಲಭವಾಗಿದೆ.

ಹಾಲಿಯಿರುವ ಮೂರು (3) ಬೋಗಿಗಳ ರೈಲುಗಳನ್ನು ಆರು (6) ಬೋಗಿಗಳ ರೈಲುಗಳನ್ನಾಗಿ ಪರಿವರ್ತಿಸುವ ಕಾರ್ಯ ನಡೆಯುತ್ತಿದೆ. ಮಾರ್ಚ್ 2019ರ ಕೊನೆಯ ವೇಳೆಗೆ ಹಂತ–1ರ ಸಂಪರ್ಕ ಜಾಲದಲ್ಲಿ ಹತ್ತು (10) ಆರು ಬೋಗಿಗಳ ರೈಲುಗಳನ್ನು (ನೇರಳೆ ಮಾರ್ಗದಲ್ಲಿ 9 ಮತ್ತು ಹಸಿರು ಮಾರ್ಗದಲ್ಲಿ 1) ಪರಿಚಯಿಸಲಾಗಿದೆ. ಹಸಿರು ಮಾರ್ಗದಲ್ಲಿ ಪರಿಚಯಿಸಲಾದ ಮೊದಲ ಆರು ಬೋಗಿಗಳ ರೈಲನ್ನು 28ನೇ ಜನವರಿ 2019ರಂದು ಸಂಪಿಗೆ ರಸ್ತೆ ಮಂತ್ರಿ ಸ್ಕ್ವ್ಯಯರ್ ನಿಲ್ದಾಣದಿಂದ ಕರ್ನಾಟಕ ಸರ್ಕಾರದ ಉಪ ಮುಖ್ಯ ಮಂತ್ರಿಗಳು ಮತ್ತು ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಯವರು ಚಾಲನೆಗೊಳಿಸಿದರು. ಜೂನ್ 2019ರ ಕೊನೆಯ ವೇಳೆಯಲ್ಲಿ ಮೆಟ್ರೋ ಸಂಪರ್ಕ ಜಾಲದಲ್ಲಿ ಇಪತ್ತ ಏಳು (27) ಆರು ಬೋಗಿಗಳ ರೈಲುಗಳು ಕಾರ್ಯಾಚರಣೆಯಾಗುತ್ತಿವೆ. ಸಂಪರ್ಕ ಜಾಲಕ್ಕೆ ಶೀಘ್ರಗತಿಯಲ್ಲಿ ಆರು ಬೋಗಿಗಳ ರೈಲುಗಳನ್ನು ಪರಿಚಯಿಸಿದರಿಂದ ಸಾರ್ವಜನಿಕ ಪ್ರಯಾಣಿಕರಿಗೆ ರೈಲುಗಳಲ್ಲಿ ಆರಾಮವಾಗಿ ಪ್ರಯಾಣಿಸಲು ಹೆಚ್ಚು ಸ್ಥಳಾವಕಾಶ ದೊರೆತಿರುವುದಲ್ಲದೆ, ಉತ್ತಮ ಸುರಕ್ಷತೆಯೂ ಸಹ ಉಂಟಾಗಿದೆ. ಮಹಿಳಾ ಪ್ರಯಾಣಿಕರುಗಳಿಗೆ ಸುರಕ್ಷಿತ ಹಾಗೂ ಅನುಕೂಲಕರ ಪ್ರಯಾಣದ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಆರು ಬೋಗಿಗಳ ರೈಲಿನಲ್ಲಿ ಮೊದಲ ಬೋಗಿಯನ್ನು ಪೂರ್ಣವಾಗಿ ಮೀಸಲಿರಿಸಲಾಗಿದೆ. ಹಾಗೆಯೇ ಮೂರು ಬೋಗಿಗಳ ರೈಲಿನ ಮೊದಲ ಬೋಗಿಯ ಮೊದಲ ಎರಡು (2) ಬಾಗಿಲುಗಳನ್ನು ಮಹಿಳಾ ಪ್ರಯಾಣಿಕರ ಪ್ರವೇಶ ಮತ್ತು ನಿರ್ಗಮನಕ್ಕೆ ಮೀಸಲಿರಿಸಲಾಗಿದೆ. ನಮ್ಮ ಮೆಟ್ರೋ ಸೇವೆಗಳನ್ನು ಬಳಸುತ್ತಿರುವ ಮಹಿಳಾ ಪ್ರಯಾಣಿಕರು ಈ ವ್ಯವಸ್ಥೆಯನ್ನು ಸಂತಸದಿಂದ ಸ್ವಾಗತಿಸಿದ್ದಾರೆ ಮತ್ತು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮೆಟ್ರೋ ಸಂಪರ್ಕ ಜಾಲಕ್ಕೆ ಆರು ಬೋಗಿಗಳ ರೈಲುಗಳನ್ನು ಹಂತಹಂತವಾಗಿ ಪರಿಚಯಿಸಿರುವುದರಿಂದ ರೈಲುಗಳಲ್ಲಿ ದಟ್ಟಣೆಯ ಸಮಯದಲ್ಲಿ ಉಂಟಾಗುತ್ತಿದ್ದ ಒತ್ತಡ ಗಣನೀಯವಾಗಿ ಕಡಿಮೆಯಾಗಿರುವುದು ಮತ್ತು ಪ್ರಯಾಣದ ಸುರಕ್ಷತೆ ಮತ್ತು ಆಹ್ಲಾದಕತೆಯೂ ಸಹ ಹೆಚ್ಚಾಗಿದೆ. ಇದರಿಂದಾಗಿ ಸಾರ್ವಜನಿಕರು ತಮ್ಮ ದಿನನಿತ್ಯದ ಪ್ರಯಾಣಕ್ಕೆ ಮೆಟ್ರೋ ರೈಲನ್ನು ಬಳಸಲು ಹೆಚ್ಚು ಹೆಚ್ಚಾಗಿ ಆಕರ್ಷಿತರಾಗುವ ಸಂಭವವಿರುವುದು.

ನಾನ್‌ಫೇರ್ ಬಾಕ್ಸ್ ರೆವಿನ್ಯೂ ಸಂಗ್ರಹಣೆಗೆ ಉಪಕ್ರಮಗಳು

ನಾನ್‌ಫೇರ್ ಬಾಕ್ಸ್ ರೆವಿನ್ಯೂ ಉತ್ಪಾದನೆಗೆ ನಿರಂತರವಾಗಿ ಶ್ರಮ ವಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕಂಪನಿಯ ಆಸ್ತಿ ಅಭಿವೃದ್ಧಿ ವಿಭಾಗವು, ಫೇರ್ ಭಾಕ್ಸ್ ರೆವಿನ್ಯೂಗಳಿಗೆ ಪೂರಕವಾಗಿ ನಾನ್‌ಫೇರ್ ಬಾಕ್ಸ್ ರೆವಿನ್ಯೂ ಬಗ್ಗೆ ಸಾಕಷ್ಟು ಪೂರಕವಾಗಿ ಹಣ ಸಂಗ್ರಹಿಸಲು ಹಲವಾರು ನವೀನ ಕ್ರಮಗಳನ್ನು ಸಹ ಕೈಗೊಂಡಿದೆ. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ರೂ.47.33 ಕೋಟಿ ನಾನ್‌ಫೇರ್ ಬಾಕ್ಸ್ ಆದಾಯ ಗಳಿಸಿದೆ. ಹಿಂದಿನ ವರ್ಷ ಗಳಿಸಿದ ನಾನ್‌ಫೇರ್ ಬಾಕ್ಸ್ ಆದಾಯ ರೂ.44.00 ಕೋಟಿಯಾಗಿತ್ತು. ಮೆಟ್ರೋ ನಿಲ್ದಾಣಗಳು ಇತ್ಯಾದಿಯಲ್ಲಿ ಚಿಲ್ಲರೆ ಮಾರಾಟ ಮಳಿಗೆಗಳಿಂದ ಪಡೆದಿರುವ ಪರವಾನಗಿ ಶುಲ್ಕ, ಎಟಿಎಂಗಳು, ವಾಹನ ನಿಲುಗಡೆ ಸ್ಥಳ, ದ್ವಿಚಕ್ರ ವಾಹನಗಳ ಬಾಡಿಗೆ ಸೇವೆಯಿಂದ ಗಳಿಸಿರುವ ಆದಾಯದಿಂದ ಸದರಿ ವರ್ಷದಲ್ಲಿನ ನಾನ್‌ಫೇರ್ ಬಾಕ್ಸ್ ಆದಾಯ ಹೆಚ್ಚಳವಾಗಿದೆ. ಕರ್ನಾಟಕದ ಘನ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೊರಾಂಗಣ ಜಾಹೀರಾತುಗಳನ್ನು ನಿಷೇಧಿಸಿರುವ ಪ್ರಯುಕ್ತ ಪಿಆರ್‌ಗಳು ಮತ್ತು ಪೋರ್ಟಲ್‌ಗಳ ಮೇಲೆ ಪ್ರದರ್ಶಿಸುತ್ತಿದ್ದ ಜಾಹೀರಾತುಗಳನ್ನು ನಿಲುಗಡೆ ಮಾಡಿರುವುದರಿಂದ ಜಾಹೀರಾತುಗಳಿಂದ ಬರುತ್ತಿದ್ದ ಗಳಿಕೆ ಪೂರ್ಣವಾಗಿ ನಿಂತು ಹೋಗಿದೆ. ಕೆಲವು ದೃಢ ಪ್ರಯತ್ನಗಳನ್ನು ಕೈಗೊಂಡಿರುವುದರಿಂದ ಮತ್ತು ಬಹುಮುಖ ತಂತ್ರೋಪಾಯಗಳನ್ನು ಅಳವಡಿಸಿಕೊಂಡಿರುವುದರಿಂದ ಮುಂಬರುವ ವರ್ಷಗಳಲ್ಲಿ ನಾನ್‌ಫೇರ್ ಬಾಕ್ಸ್‌ನ ಆದಾಯವು ಬಹುಪಟ್ಟು ಹೆಚ್ಚಳವಾಗುವ ಸಂಭವವಿದೆ. ಇದರಿಂದ ಕಂಪನಿಯ ಸಮಗ್ರ ಆದಾಯದ ಪ್ರಗತಿಗೆ ಗಣನೀಯ ಬೆಂಬಲ ದೊರೆತಂತಾಗುವುದು. ನಾನ್‌ಫೇರ್ ಬಾಕ್ಸ್ ರೆವಿನ್ಯೂ ಹೆಚ್ಚಳ ಮಾಡುವ ದೃಷ್ಟಿಯಿಂದ ಕೈಗೊಳ್ಳಲಾಗಿರುವ



ಉಪಕ್ರಮಗಳಲ್ಲಿ ಒಂದಾಗಿ ಮೆಟ್ರೋ ನಿಲ್ದಾಣಗಳ ಕೋ–ಬ್ರಾಂಡಿಂಗ್ ಮೂಲಕ ನಾನ್‌ಫೇರ್ ಬಾಕ್ಸ್ ಆದಾಯವನ್ನು ಇನ್ನೂ ಹೆಚ್ಚು ಮಾಡಲು ನಿಮ್ಮ ಕಂಪನಿಯು ಯೋಜನೆ ಮಾಡುತ್ತಿದೆ.

ಮೆಟ್ರೋ ಯೋಜನೆಗಳಿಗೆ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಕೈಗೊಂಡಿರುವ ನವೀನ ಕ್ರಮಗಳು

ಯೋಜನೆಯ ವಿವಿಧ ಕಾರಿಡಾರ್‌ಗಳಲ್ಲಿ ಮೆಟ್ರೋ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆಗೆ ಕೊಡುಗೆ ನೀಡುವ ಮೂಲಕ ಮೆಟ್ರೋ ಯೋಜನೆ ಮತ್ತು ಅದರ ಕಾರ್ಯಾಚರಣೆಗಳಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡಲು ಪ್ರಮುಖ ಬ್ರಾಂಡ್‌ಗಳು ಹಾಗೂ ಪ್ರಸಿದ್ಧ ಕಾರ್ಪೊರೇಟಗಳ ಜೊತೆ ದೀರ್ಘಾವಧಿ ಬಾಂಧವ್ಯ ಬೆಳೆಸಲು ಕಂಪನಿಯ ಆಸ್ತಿ ಅಭಿವೃದ್ಧಿ ವಿಭಾಗವು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಇದಕ್ಕೆ ಪ್ರತಿಯಾಗಿ ಇವರಿಗೆ ಅವರ ಒಪ್ಪಂದವಾದ ಪಾಲ್ಗೊಳ್ಳುವಿಕೆ ಅವಧಿಗೆ ವಿವಿಧ ರಿಯಾಯಿತಿ ಸೌಲಭ್ಯಗಳನ್ನು ನೀಡಲಾಗುವುದು. ಮೆಟ್ರೋ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಕಾರ್ಪೊರೇಟ್ ಕಂಪನಿಗಳಾದ ಇಂಟೆಲ್, ಎಂಬಸಿ, ಪ್ರಿಸ್ಟೀಜ್ ಇತ್ಯಾದಿಗಳ ಜೊತೆ ಒಪ್ಪಂದ (ಎಂಒಯು)ಗಳನ್ನು ಮಾಡಿಕೊಳ್ಳಲಾಗಿದೆ. ಈ ಮೆಟ್ರೋ ನಿಲ್ದಾಣಗಳಿಂದ ಅವರ ಆವರಣಗಳು/ಸಂಸ್ಥೆಗೆ ಸಂಪರ್ಕ ಒದಗಿಸುವುದಲ್ಲದೆ ಪ್ರಯಾಣಿಕರು ಸುಲಭವಾಗಿ ರಸ್ತೆಯನ್ನು ದಾಟಲು ವಾಕ್‌ವೇಗಳನ್ನು ನಿರ್ಮಿಸುವ ಸಂಬಂಧ ಒಪ್ಪಂದಕ್ಕೂ ಸಹ ಸಹಿ ಮಾಡಲಾಗಿದೆ. ಇದರಿಂದಾಗಿ ಯೋಜನೆ ನಿರ್ಮಾಣದ ವೆಚ್ಚವನ್ನು ಭರಿಸಲು ಸಾಕಷ್ಟು ಮೊತ್ತದ ಹಣ ಲಭ್ಯವಾಗುವುದು ಹಾಗೂ ಮೆಟ್ರೋ ಸಂಪರ್ಕ ಜಾಲದ ಕಾರ್ಯಾಚರಣೆ ವೆಚ್ಚಗಳಿಗೆ ಬೆಂಬಲ ಒದಗಿಸಲು ಆದಾಯವನ್ನು ಹೆಚ್ಚಿಸಲು ಸಹ ಇದು ಅನುವು ಮಾಡಿಕೊಡುವುದು.

ತರಬೇತಿ ಸಂಸ್ಥೆ

ಬೆಂಗಳೂರು ಮೆಟ್ರೋ ರೈಲು ತರಬೇತಿ ಸಂಸ್ಥೆಯು (ಬಿಎಂಆರ್‌ಟಿಐ) 2018–19ರ ಅವಧಿಯಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

ಬಿಎಂಆರ್‌ಸಿಎಲ್ ನೌಕರರುಗಳಿಗೆ ತರಬೇತಿ

- 50 ಬಿಎಂಆರ್‌ಸಿಎಲ್ ಎಸ್‌ಸಿ/ಟಿಒ ಮತ್ತು ನಿರ್ವಹಣೆಕಾರರಿಗೆ ತರಬೇತಿ.
- ಎಲ್ಲಾ ಇಲಾಖೆ ನೌಕರರುಗಳಿಗೆ 183 ರಿಫ್ರೆಷರ್ ಕೋರ್ಸ್‌ಗಳು.
- ನಿಲ್ದಾಣ ನಿಯಂತ್ರಕರುಗಳ ಪರಿವರ್ತನೆಗಾಗಿ 61 ರೈಲು ಆಪರೇಟರುಗಳು.
- ಯೋಜನಾ ಇಂಜಿನಿಯರ್‌ಗಳಿಗೆ (ಎಸ್‌ಸಿ/ಟಿಒ) 49 ಇತರೆ ಕಾರ್ಯಾಚರಣೆ ಕೋರ್ಸುಗಳು.

ವಿಶೇಷ ತರಬೇತಿ

- ಪ್ರಿಮವೆರ ತರಬೇತಿ
- ಆರ್‌ಜಿಎಂ ತರಬೇತಿ
- ಆರ್‌ಎಸ್ ಮೇಲ್ವಿಚಾರಕರು
- ಆರು ಕಾರ್ ತರಬೇತಿ
- ರೂಟ್ ಲರ್ನರ್
- ಯುಪಿಎಸ್ ತರಬೇತಿ
- ಆರ್‌ಎಸ್ ವಿಶೇಷ ತರಬೇತಿ
- ಎಬಿಬಿಯಿಂದ ಟ್ರ್ಯಾಕ್ಷನ್ ತರಬೇತಿ
- ಸಿಬಿಟಿಸಿ ಸಿಗ್ನಲಿಂಗ್
- 110 ಹೊರಗುತ್ತಿಗೆ ನೌಕರರುಗಳಿಗೆ ಟಿಒಎಂ ಆಪರೇಟರ್ ತರಬೇತಿ



- 1030 ನೌಕರರಿಗೆ ಸಾಮರ್ಥ್ಯ ನವೀಕರಣ ತರಬೇತಿ ಇಲಾಖೆ
- 3885 ಹೊರಗುತ್ತಿಗೆ ಭದ್ರತಾ ಸಿಬ್ಬಂದಿ/ಗೃಹರಕ್ಷಕರಿಗೆ ಭದ್ರತೆ ಮತ್ತು ಪರಿಚಯಾತ್ಮಕ ತರಬೇತಿ

ಇನ್ನಿತರೆ ಮೆಟ್ರೋ ನೌಕರರಿಗೆ ತರಬೇತಿ:

- 50 ಕೋಲ್ಕೊತ್ತ ಮೆಟ್ರೋ ಎಸ್‌ಸಿ/ಟಿಒ ಮತ್ತು ನಿರ್ವಹಣೆಕಾರರಿಗೆ ತರಬೇತಿ
- 157 ಎಂಇಜಿಎ ಮೆಟ್ರೋ ಎಸ್‌ಸಿ/ಟಿಒಗಳು ಮತ್ತು ನಿರ್ವಹಣೆಕಾರರಿಗೆ ಜಿಎಂಆರ್‌ಎಸ್

ತರಬೇತಿ ಕಾರ್ಯಕ್ರಮಗಳಿಂದ ಬಂದಿರುವ ಗಳಿಕೆಗಳ ವಿವರ:

ಮೆಟ್ರೋ ರೈಲ್ ಕಂಪನಿ ಹೆಸರು	ವರ್ಷ	ಗಳಿಸಿದ ಆದಾಯ (ರೂ. ಲಕ್ಷಗಳಲ್ಲಿ)
ಕೋಲ್ಕೊತ್ತ ಮೆಟ್ರೋ ರೈಲು ನಿಗಮ ನಿಯಮಿತ	2018–19	22.36
ಗುಜರಾತ್ ಮೆಟ್ರೋ ರೈಲು ನಿಗಮ ನಿಯಮಿತ	2018–19	266.70
ಒಟ್ಟು		**289.06**

ಇತರೆ ಚಟುವಟಿಕೆಗಳು:

- ನಗರದ 1605 ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳು ಬಿಎಂಆರ್‌ಸಿಎಲ್ ತರಬೇತಿ ಸಂಸ್ಥೆಗೆ ಭೇಟಿ ನೀಡಿದ್ದರು.
- ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಯದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು.
- ತರಬೇತಿ ಪಡೆಯುತ್ತಿರುವವರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.
- ತರಬೇತಿ ಪಡೆಯುತ್ತಿರುವವರಿಗೆ ಕಣ್ಣು ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.
- ಬೇರೆ ರಾಜ್ಯಗಳಿಂದ ಬಂದಿರುವ ಭದ್ರತಾ ಸಿಬ್ಬಂದಿಗೆ ಕನ್ನಡ ಕಲಿಸುವ ತರಗತಿಗಳನ್ನು ತರಬೇತಿ ಸಂಸ್ಥೆ ಪ್ರಾರಂಭಿಸಿದೆ.
- ವಿಪತ್ತ ನಿರ್ವಹಣೆ ಕಾರ್ಯಕ್ರಮದ ಅಡಿಯಲ್ಲಿ ಅಣಕು ಕಾರ್ಯ ಮತ್ತು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.
- ಬೆಂಗಳೂರಿನ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮೆಟ್ರೋ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ.
- 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೆಟ್ರೋ ನಿಲ್ದಾಣ ಮತ್ತು ನಿರ್ವಹಣೆ ವಿಭಾಗಕ್ಕೆ ಭೇಟಿ ನೀಡಿದ್ದರು.
- ಮೆಟ್ರೋ ತಂತ್ರಜ್ಞಾನ ತಿಳುವಳಿಕೆ ಬಗ್ಗೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸಲಹಾ ಕಾರ್ಯಗಳು

ಪ್ರಸಕ್ತ ವರ್ಷದಲ್ಲಿ ನಿಮ್ಮ ಕಂಪನಿಯು ಗುಜರಾತ್ ಮೆಟ್ರೋ (ಜಿಎಂಆರ್‌ಸಿಎಲ್) ಕಾರ್ಯಾಚರಣೆಗೊಳಿಸಲು ರೂ.330 ಲಕ್ಷದ ಮೌಲ್ಯದ ಪ್ರಥಮ ಸಲಹಾ ಗುತ್ತಿಗೆಯನ್ನು ಪಡೆದಿದೆ. ನಿಮ್ಮ ಕಂಪನಿಯಲ್ಲಿ ಲಭ್ಯವಿರುವ ಪರಿಣತಿಗೆ ಉತ್ತಮ ಮಾನ್ಯತೆ ದೊರೆತಿದೆ. ಕಂಪನಿಯು 25 ದಿನಗಳ ಅವಧಿ ಒಳಗೆ ವರದಿ ಸಲ್ಲಿಸಲು ಮೊದಲ ಸಲಹಾ ಕಾರ್ಯವನ್ನು ಪೂರ್ಣಗೊಳಿಸಿದೆ. ಇದರಿಂದಾಗಿ ಅಹಮದಾಬಾದ್‌ನಲ್ಲಿ ಮೆಟ್ರೋ ಸೇವೆಗಳನ್ನು ಸಕಾಲಿಕವಾಗಿ ಪ್ರಾರಂಭಿಸಲು ನೆರವಾಗಿದೆ. ಮತ್ತೊಂದು ಸಂತೋಷದ ವಿಚಾರವೆಂದರೆ ಇದೇ ರೀತಿಯ ಸಲಹಾ ಕಾರ್ಯಗಳಿಗಾಗಿ ಇನ್ನೂ ಬೇರೆ ಬೇರೆ ಮೆಟ್ರೋ ರೈಲು ಕಂಪನಿಗಳಿಂದ ವಿಚಾರಣೆಗಳು ನಿಮ್ಮ ಕಂಪನಿಗೆ ಬರುತ್ತಿವೆ.



ಸುಗಮ ಪ್ರವೇಶ ವ್ಯವಸ್ಥೆ

ನಿಮ್ಮ ಕಂಪನಿಯು ವಿಶೇಷಚೇತನರು ಮೆಟ್ರೋಗೆ ಸುಗಮವಾಗಿ ತಲುಪಲು ಅನುಕೂಲವಾಗುವಂತೆ ಕೆಳಕಂಡ ವಿಶೇಷಚೇತನರ ಸ್ನೇಹಿ ಕ್ರಮಗಳನ್ನು ಕೈಗೊಂಡಿದೆ. ವಿಶೇಷಚೇತನರು ಸುಗಮವಾಗಿ ಮೆಟ್ರೋ ರೈಲನ್ನು ತಲುಪಲು ಎಲ್ಲಾ ನಿಲ್ದಾಣಗಳನ್ನು ಅನುಕೂಲಕರವಾಗಿ ವಿನ್ಯಾಸಗೊಳಿಸಿದೆ. ವಾಸ್ತವವಾಗಿ ಬಿಎಂಆರ್‌ಸಿಎಲ್‌ನ ಎಲ್ಲಾ ಸಿಬ್ಬಂದಿಗಳು ವಿಶೇಷಚೇತನರ ಅವಶ್ಯಕತೆಗಳಿಗೆ ಹಾಗೂ ನೆವಿಗೆ ಸನ್ನದ್ಧರಾಗಿರುವವರು, ಅಂಗನ್ಯೂನತೆಯವರಿಗೆ ಕಲ್ಪಿಸಿರುವ ಸೌಲಭ್ಯಗಳ ಬಗ್ಗೆ ಮೊಬಿಲಿಟಿ ಇಂಡಿಯಾ ಸಂಸ್ಥೆ ಪರಿಶೀಲನೆ ನಡೆಸಿ ಮೆಟ್ರೋ ನಿಲ್ದಾಣಗಳು ವಿಶೇಷಚೇತನರ ಸ್ನೇಹಿಯಾಗಿವೇ ಎಂದು ಪ್ರಮಾಣೀಕರಿಸಿದೆ. ಎಲ್ಲಾ ನಿಲ್ದಾಣಗಳಲ್ಲಿ ಗಾಲಿ ಕುರ್ಚಿಗಳು ಲಭ್ಯವಿದ್ದು ಅವುಗಳನ್ನು ನೆಲಮಟ್ಟದಲ್ಲಿ ಮತ್ತು ಪ್ಲಾಟ್‌ಫಾರಂ ಮಟ್ಟದಲ್ಲಿ ಇರಿಸಲಾಗಿದೆ. ಗಾಲಿ ಕುರ್ಚಿ ಅಗತ್ಯವಿರುವವರು ನಿಲ್ದಾಣದ ನಿಯಂತ್ರಕರನ್ನು ಸಂಪರ್ಕಿಸಿದರೆ ಆ ವಿಶೇಷಚೇತನ ಪ್ರಯಾಣಿಕರನ್ನು ರೈಲಿಗೆ ಹತ್ತಿಸಲು ಸಹಾಯಕರೊಬ್ಬರ ಜೊತೆಗೆ ಗಾಲಿಕುರ್ಚಿ ವ್ಯವಸ್ಥೆ ಮಾಡುವರು. ಹೊರಹೋಗುವ ನಿಲ್ದಾಣದಲ್ಲಿ ಇಂತಹ ಪ್ರಯಾಣಿಕರು ರೈಲಿನಿಂದ ಇಳಿದಾಗ ಅವರು ಮತ್ತೊಂದು ಗಾಲಿಕುರ್ಚಿಯಲ್ಲಿ ಹೊರಗೆ ತೆರಳಲು ಅಲ್ಲಿ ಸಹಾಯಕರು ನೆರವು ನೀಡುವರು. ನಿಲ್ದಾಣಗಳೆಲ್ಲವುಗಳ ಪ್ರವೇಶ/ನಿರ್ಗಮನ ದ್ವಾರವು ರ್‍ಯಾಂಪ್ ಸೌಲಭ್ಯ, ಬ್ರೈಲ್ ಕೀ ಗುಂಡಿಗಳುಳ್ಳ ಲಿಫ್ಟ್‌ಗಳು/ಎಲಿವೇಟರ್‌ಗಳನ್ನು ಹೊಂದಿರುವವು. ದೃಷ್ಟಿದೋಷ ಇರುವವರು ಪ್ಲಾಟ್‌ಫಾರಂ ಮಟ್ಟದವರೆಗೆ ಸುಲಭವಾಗಿ ತಲುಪಲು ನೆರವಾಗಲು ನೆಲಮಟ್ಟದಿಂದ ಸ್ಪರ್ಶಗ್ರಾಹ್ಯ (ಟ್ಯಾಕ್ಟೈಲ್) ನೆಲಹಾಸಿನ ಟೈಲ್‌ಗಳನ್ನು ಅಳವಡಿಸಿದೆ. ಸನ್ನೆ ಭಾಷೆ ಕಲಿಯಲು ಎನೇಬಲ್ ಇಂಡಿಯಾ ಸಂಸ್ಥೆ ಸಹಯೋಗದೊಡನೆ ಮೆಟ್ರೋ ಸಿಬ್ಬಂದಿಗೆ ತರಬೇತಿಯನ್ನು ಸಹ ಕಂಪನಿ ನೀಡುವ ವ್ಯವಸ್ಥೆ ಮಾಡಿದೆ.

ಭದ್ರತಾ ವ್ಯವಸ್ಥೆ

ಕಂಪನಿಯ ಕೋರಿಕೆ ಮೇರೆಗೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯು (ಸಿಐಎಸ್‌ಎಫ್) ಬೆಂಗಳೂರು ಮೆಟ್ರೋ ರೈಲು ಯೋಜನೆಯ ಎಲ್ಲಾ ಭದ್ರತಾ ವ್ಯವಸ್ಥೆಗಳ ಬಗ್ಗೆ ಒಂದು ಸಮೀಕ್ಷೆ ನಡೆಸಿ ತನ್ನ ವರದಿ ಸಲ್ಲಿಸಿದೆ. ಪ್ರಸ್ತಾವನೆಯನ್ನು ಕಂಪನಿ ಪರಿಶೀಲಿಸಿದೆ. ಸಿಐಎಸ್‌ಎಫ್ ಮೂಲಕ ಭದ್ರತಾ ಸೌಲಭ್ಯ ಒದಗಿಸುವುದು ಮಿತವ್ಯಯಕಾರಿಯಲ್ಲ ಎಂದು ಭಾವಿಸಿ, ಸಿಐಎಸ್‌ಎಫ್ ನಿಂದ ಭದ್ರತಾ ಸೇವೆಗಳನ್ನು ಪಡೆಯಬಾರದೆಂದು ನಿರ್ಧರಿಸಲಾಯಿತು. ಕರ್ನಾಟಕ ಸರ್ಕಾರದ ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು, ಡಿಐಜಿ, ಐಎಸ್‌ಡಿ/ಕೆಎಸ್‌ಐಎಸ್‌ಎಫ್ ನ ಅಧ್ಯಕ್ಷತೆಯಲ್ಲಿ ಬೆಂಗಳೂರು ಮೆಟ್ರೋಗೆ ಭದ್ರತಾ ಯೋಜನೆ ಒಂದನ್ನು ಸಿದ್ಧಪಡಿಸಲು ಸಮಿತಿ ಒಂದನ್ನು ರಚಿಸಿದ್ದು, ಈ ಸಮಿತಿ ಯೋಜನೆಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿದೆ.

ಪ್ರಸ್ತುತದಲ್ಲಿ ಕಂಪನಿಯಲ್ಲಿ 192 ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಇದ್ದು, ಇವರನ್ನು ನೆಲಮಾಳಿಗೆ ನಿಲ್ದಾಣಗಳಲ್ಲಿ ಮುಖ್ಯ ಭದ್ರತಾ ಕಾರ್ಯಗಳನ್ನು ನೋಡಿಕೊಳ್ಳಲು ನಿಯೋಜಿಸಲಾಗಿದೆ. ತನ್ನ ಕಾರ್ಯಾಚರಣೆ ಮಾರ್ಗಗಳಿಗಾಗಿ ಬಿಎಂಆರ್‌ಸಿಎಲ್ ಭದ್ರತಾ ವ್ಯವಸ್ಥೆಯೊಂದನ್ನು ಅಳವಡಿಸಿಕೊಂಡಿದ್ದು, ಸದರಿ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿ ಮುಕ್ತ ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆಗೊಂಡ ಖಾಸಗಿ ಭದ್ರತಾ ಏಜೆನ್ಸಿಗಳು ಬ್ಯಾಗುಗಳ ಸ್ಕ್ಯಾನಿಂಗ್, ಪ್ರಯಾಣಿಕರ ತಪಾಸಣೆ, ಸಾಮಾನ್ಯ ಭದ್ರತಾ ಕರ್ತವ್ಯಗಳು ಮೊದಲಾದಂಥ ಸೇವೆಗಳನ್ನು ಒದಗಿಸಲು ಭದ್ರತಾ ಸಿಬ್ಬಂದಿ (ಸೆಕ್ಯೂರಿಟಿ ಗಾರ್ಡ್‌ಗಳು) ಮತ್ತು ಮೇಲ್ವಿಚಾರಕರ ಸೇವೆಗಳನ್ನು ಒದಗಿಸುತ್ತಿದ್ದಾರೆ. ಬ್ಯಾಗೇಜ್ ಸ್ಕ್ಯಾನರ್‌ಗಳು, ಎಚ್‌ಎಚ್‌ಎಂಡಿಗಳು ಮತ್ತು ಡಿಎಫ್‌ಎಂಡಿಗಳನ್ನು ಕಂಪನಿ ಪಡೆದು ಒದಗಿಸಿದೆ. ನಿಲ್ದಾಣಗಳಲ್ಲಿ ಭದ್ರತಾ ಸೇವೆ ಒದಗಿಸಲು ಸುಮಾರು 738 ಗೃಹರಕ್ಷಕರುಗಳನ್ನು ನಿಯೋಜಿಸಲಾಗಿದೆ. ಪ್ರತಿವರ್ಷ ನಗರ ಪೊಲೀಸರು ಬೆಂಗಳೂರು ಮೆಟ್ರೋ ಜಾಲದ ಭದ್ರತಾ ವ್ಯವಸ್ಥೆ ಪರಿಶೀಲನೆ ನಡೆಸುವರು ಮತ್ತು ಅಗತ್ಯವಿದ್ದಾಗ ನೆರವು ನೀಡುವರು.

ಕೊನೆ ಭಾಗದವರೆಗೂ ಸಾರಿಗೆ ಸಂಪರ್ಕ ಸೌಲಭ್ಯ

ನಿಮ್ಮ ಕಂಪನಿಯು ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನಗಳ ಬಾಡಿಗೆ ಸೇವೆ ಕಾರ್ಯಾಚರಣೆ ಮಾಡಲು ಸ್ಥಳಾವಕಾಸ ಕಲ್ಪಿಸಿದೆ. ಮೆಟ್ರೋ ಪ್ರಯಾಣಿಕರುಗಳ ಬಳಕೆಗಾಗಿ ಸುಮಾರು 1000 ಬೈಕುಗಳು ಬಾಡಿಗೆಗೆ ದೊರೆಯುತ್ತಿವೆ. ನಿಮ್ಮ ಕಂಪನಿಯು ಕರ್ನಾಟಕ ಸರ್ಕಾರದ ನಗರ ಭೂ ಸಾರಿಗೆ ಇಲಾಖೆ (ಡಿಯುಎಲ್‌ಟಿ) ಜೊತೆ ಸಮನ್ವಯ ಸಹಕಾರ ನೀಡುತ್ತಿದೆ. ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಗಾಗಿ ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ಸ್ಥಳಾವಕಾಶ ಒದಗಿಸಿದೆ. ಪ್ರತಿ ನಿಲ್ದಾಣಗಳಲ್ಲಿ ಸುಮಾರು 50 ಬೈಸಿಕಲ್‌ಗಳನ್ನು ನಿಲುಗಡೆ ಮಾಡಲು ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ಸ್ಥಳಾವಕಾಶ ಒದಗಿಸಿದೆ. ನಿಮ್ಮ ಕಂಪನಿಯು ಬೆಂಗಳೂರು ನಗರ ಸಂಚಾರ ಪೊಲೀಸರ



ಜೊತೆ ಕೂಡ ಸಹಭಾಗಿತ್ವ ಹೊಂದಿದೆ. ಬಿಎಂಟಿಸಿ (ಬೆಂಗಳೂರು ಮಹಾನಗರ ಸಾರಿಗೆ ನಿಗಮ), ನಗರ ಸಾರಿಗೆ ಸೇವೆ ಒದಗಿಸುವವರು, ಸಮೀಪದ ಮೆಟ್ರೋ ನಿಲ್ದಾಣಕ್ಕೆ ತಲುಪಲು ಹಾಗೂ ಅವರ ಕೆಲಸದ ಸ್ಥಳಕ್ಕೆ ಹೋಗಲು ಮೆಟ್ರೋ ರೈಲು ಪ್ರಯಾಣಿಕರುಗಳಿಗೆ ಕೊನೆಯ ಭಾಗದವರೆಗೂ ಸಂಪರ್ಕ ಕಲ್ಪಿಸಲು ನಿಮ್ಮ ಕಂಪನಿ ಜೊತೆ ಸಂಪರ್ಕ ಕಲ್ಪಿಸಿದೆ. ಬಿಎಂಟಿಸಿ ಪ್ರಮುಖ ಮೆಟ್ರೋ ನಿಲ್ದಾಣಗಳಲ್ಲಿ ಫೀಡರ್ ಮಾರ್ಗದ ಸೇವೆ ಒದಗಿಸುತ್ತಿದೆ. ಅತ್ಯಧಿಕ ಜನಸಾಂದ್ರತೆಯಿರುವ ವಾಣಿಜ್ಯ, ಐಟಿ ವಲಯಗಳು, ಮತ್ತು ವಸತಿ ಪ್ರದೇಶಗಳಿಗೂ ಫೀಡರ್ ಸೇವೆಯನ್ನು ಸಹ ಬಿಎಚಿಟಿಸಿ ಒದಗಿಸುತ್ತಿದೆ

ಮೆಟ್ರೋ ಟಿಕೆಟ್ ದರ

ಹಂತ–1ರ ಮೆಟ್ರೋ ಜಾಲ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭವಾದ ಸಮಯದಲ್ಲಿ, ಹಂತ–1ರ ಮೆಟ್ರೋ ಜಾಲದ ಸಂಪೂರ್ಣ ಭಾಗಕ್ಕೆ ಕಂಪನಿಯು ಪ್ರಾರಂಭಿಕ ಟಿಕೆಟ್ ದರವನ್ನು ನಿಗದಿಪಡಿಸಿ, ಅದನ್ನು 18ನೇ ಜೂನ್ 2017ರಿಂದ ಅನುಷ್ಠಾನಗೊಳಿಸಿದೆ. ಇದರಂತೆ ಒಂದು ನಿಲ್ದಾಣದಿಂದ ಮತ್ತೊಂದು ನಿಲ್ದಾಣಕ್ಕೆ ತೆರಳುವ ಒಂದು ಸಾರಿಯ ಪ್ರಯಾಣಕ್ಕೆ ಕನಿಷ್ಠ ರೂ.10/– ಅನ್ನು ಮತ್ತು ಗರಿಷ್ಠ ರೂ.60/– ಅನ್ನು ನಿಗದಿ ಮಾಡಿದೆ. ಸ್ಮಾರ್ಟ್ ಕಾರ್ಡ್‌ಗಳ ಬಳಕೆ ಮೇರೆಗೆ ಬಹುಮುಖ ಪ್ರಯಾಣಕ್ಕೆ ಸ್ಕೋರ್ ಮಾಡಿದ ಮೌಲ್ಯದ ಟಿಕೆಟ್‌ಗಳಿಗೆ 15% ರಿಯಾಯಿತಿ ದೊರೆಯುವುದು. ಸ್ಮಾರ್ಟ್ ಕಾರ್ಡ್‌ಗಳಲ್ಲಿ ಈ ರೂ.50/–ರ ಕನಿಷ್ಠ ಮೌಲ್ಯವನ್ನು ಸ್ಕೋರ್ ಮಾಡಿರಬೇಕಾಗಿರುವುದು.

ಯೋಜನೆಯ ಹಂತ–2ರಲ್ಲಿ ಸ್ವಯಂ ಚಾಲಿತ ಟಿಕೆಟ್ ದರ ಪಡೆಯುವಿಕೆ (ಎಎಫ್‌ಸಿ) ಸಿಸ್ಟಮ್ ಅನುಷ್ಠಾನ ಮಾಡಲಾಗುತ್ತಿದೆ. ಇದಕ್ಕೆ ನ್ಯಾಷನಲ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಬೆಂಬಲವಿರುವುದು. ಈ ಸಿಸ್ಟಮ್ ಕ್ಯು ಆರ್ ಕೋಡ್ ಆಧಾರಿತ ಮೊಬೈಲ್ ಟಿಕೆಟಿಂಗ್ ವ್ಯವಸ್ಥೆಯನ್ನು ಸಹ ಹೊಂದಿದೆ. ಈ ಉಪಕ್ರಮಗಳು ಕಾರ್ಯಗತಗೊಳ್ಳುವ ಕ್ರಮದಲ್ಲಿವೆ. ಇದನ್ನು ಹಂತ–1ರ ನಿಲ್ದಾಣಗಳಲ್ಲಿಯೂ ಸಹ ಕ್ರಮೇಣವಾಗಿ ಪರಿಚಯಿಸಲಾಗುವುದು.

ಪ್ರಯಾಣಿಕರ ಸ್ನೇಹಿ ಅನುಕೂಲಗಳು

ನಿಮ್ಮ ಕಂಪನಿಯು ಟಿಕೆಟ್ ನೀಡಿಕೆಯಲ್ಲಿ ಹಲವಾರು ಪ್ರಯಾಣಿಕರ ಸ್ನೇಹಿ ಕ್ರಮಗಳನ್ನು ಪರಿಚಯಿಸಿದೆ. ಪ್ರತಿದಿನ ಪ್ರಯಾಣಿಸುವ ಪ್ರಯಾಣಿಕರು ಸ್ಕೋರ್ ಆಗಿರುವ ಮೌಲ್ಯದ ಟಿಕೆಟ್ ಒಳಗೊಂಡ ಸ್ಮಾರ್ಟ್‌ಕಾರ್ಡ್‌ಗಳನ್ನು ಉಪಯೋಗಿಸಬಹುದು. ನಿಲ್ದಾಣಗಳಲ್ಲಿ ಸ್ಮಾರ್ಟ್‌ಕಾರ್ಡ್‌ಗಳನ್ನು ಟಾಪ್‌ಅಪ್ ಮಾಡಲು ನಗದು ಪಾವತಿ ಮಾಡದೆ ಕ್ರೆಡಿಟ್/ಡೆಬಿಟ್ ಕಾರ್ಡ್ ಬಳಸುವ ಸೌಲಭ್ಯಗಳಿವೆ. ಇದರ ಜೊತೆಗೆ ಪೇಟಿಎಂ ಆ್ಯಪ್ ಬಳಸಿ ಕ್ಯೂಆರ್ ಕೋಡ್ ಮೂಲಕವೂ ಪಾವತಿ ಮಾಡಬಹುದು. ಪ್ರಯಾಣಿಕರು ನಿಲ್ದಾಣಗಳಲ್ಲಿನ ಟಿಕೆಟ್ ಕೌಂಟರುಗಳಿಗೆ ಭೇಟಿ ನೀಡದೆ ಬಿಎಂಆರ್‌ಸಿಎಲ್‌ನ ವೆಬ್‌ಸೈಟ್ ಮೂಲಕವೂ ಸ್ಮಾರ್ಟ್‌ಕಾರ್ಡ್‌ಗಳನ್ನು ರಿಚಾರ್ಜ್ ಮಾಡಬಹುದು.

ನಿಮ್ಮ ಕಂಪನಿಯು ಪ್ರಯಾಣಿಕರುಗಳಿಗಾಗಿ ಸಿ–ಡಾಕ್ ಸಹಯೋಗದೊಡನೆ ಮೊಬೈಲ್ ಅಪ್ಲಿಕೇಶನ್ ನಮ್ಮ ಮೆಟ್ರೋ ಇನ್‌ಫಾರ್ಮೇಶನ್ ಆ್ಯಪ್ ಅನ್ನು ಸಹ ಅಭಿವೃದ್ಧಿಪಡಿಸಿದೆ. ಈ ಅಪ್ಲಿಕೇಶನ್ ಪ್ರಯಾಣಿಕರಿಗೆ ರೈಲಿನ ವೇಳೆಗಳು, ಮೆಟ್ರೋ ಸಕಾಲಿಕಗೊಳಿಸಿದ ವಿಚಾರಗಳು ಮತ್ತು ನಿಲ್ದಾಣಗಳಲ್ಲಿ ಬಿಎಂಆರ್‌ಸಿಎಲ್ ಒದಗಿಸಿರುವ ಸೇವೆಗಳ ಬಗ್ಗೆ ವಿವರಗಳನ್ನು ಒದಗಿಸುವುದು.

ನೆಲಮಾಳಿಗೆಯಲ್ಲಿ ಸಂಪರ್ಕ ಸೌಲಭ್ಯ ಮತ್ತು ರೈಲುಗಳಲ್ಲಿ ವೈ–ಫೈ ಸೌಲಭ್ಯ

ಪ್ರಯಾಣಿಕರು ರೈಲುಗಳು ಮತ್ತು ನಿಲ್ದಾಣಗಳಲ್ಲಿ ಹಾಗೂ ಸುರಂಗ ಮಾರ್ಗದ ಭಾಗಗಳಲ್ಲಿನ ನೆಲಮಾಳಿಗೆ ನಿಲ್ದಾಣಗಳಲ್ಲಿ ಅಡಚಣೆ ರಹಿತ 4ಜಿ ಮೊಬೈಲ್ ಸೇವೆಯ ಅನುಕೂಲ ಪಡೆದು ಸಂಭ್ರಮಿಸಬಹುದು. ಎಟಿಸಿ (ಅಮೆರಿಕನ್ ಟೆಲಿಕಾಂ ಟವರ್ ಕಾರ್ಪೊರೇಷನ್ ಲಿ.) ಇವರ ಸಹಭಾಗಿತ್ವದೊಡನೆ ಈ ಸೌಲಭ್ಯಗಳನ್ನು ಈಗ ಒದಗಿಸಲಾಗುತ್ತಿದೆ.



ನಗರದ ಸೌಂದರ್ಯ ಹೆಚ್ಚಿಸಲು ಮತ್ತು ಸಾರ್ವಜನಿಕ ಸ್ಥಳಗಳ ಆಕರ್ಷಣೆಗೆ ರಂಗೋಲಿ ಮೆಟ್ರೋ ಕಲಾ ಕೇಂದ್ರ ಮತ್ತು ಬೆಂಗಳೂರು ಸಂತೆಯು ಸಲ್ಲಿಸಿರುವ ಕೊಡುಗೆ.

ರಂಗೋಲಿ ಮೆಟ್ರೋ ಕಲಾ ಕೇಂದ್ರ

ಎಂ.ಜಿ. ರಸ್ತೆ ಬುಲೆವಾರ್ಡ್‌ನಲ್ಲಿರುವ ರಂಗೋಲಿ ಮೆಟ್ರೋ ಕಲಾ ಕೇಂದ್ರವು ಮೂರು ಆರ್ಟ್ ಗ್ಯಾಲರಿಗಳು, ಒಂದು ಥಿಯೇಟರ್ ಆಡಿಟೋರಿಯಂ ಮತ್ತು ಒಂದು ಬಯಲು ರಂಗಮಂದಿರ ಮತ್ತು ಅನೇಕ ಬಯಲು ಸ್ಥಳಗಳನ್ನು ಹೊಂದಿದೆ. ಇದು ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗಿದೆ. ಇಲ್ಲಿ ವರ್ಷ ಪೂರ್ತಿ ಅನೇಕ ಕಲಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಂಗಮಂದಿರವು ಹವ್ಯಾಸಿ ಮತ್ತು ಹಿರಿಯ ಕಲಾವಿದರುಗಳಿಗೆ ಜನಪ್ರಿಯವಾಗಿದೆ. ಕಲೆ ಮತ್ತು ಸಾಂಸ್ಕೃತಿಕ ಸಮಾರಂಭಗಳು ಮತ್ತು ಕಾರ್ಯಕ್ರಮಗಳನ್ನು ನಡೆಸಲು ಈ ರಂಗ ಮಂದಿರಗಳು ವರ್ಷ ಪೂರ್ತಿ ಬುಕ್ ಆಗಿರುತ್ತವೆ. ಎಂ.ಜಿ. ರಸ್ತೆ ಮೆಟ್ರೋ ನಿಲ್ದಾಣದಿಂದ ಸುಲಭವಾಗಿ ತಲುಪುವ ಅನುಕೂಲವಿರುವುದರಿಂದ ರಂಗಮಂದಿರ ಮತ್ತು ಗ್ಯಾಲರಿಗಳು ಜನಪ್ರಿಯವಾಗಿವೆ. ವಸ್ತುಪ್ರದರ್ಶನಗಳಿಗೆ ಮತ್ತು ನಾಟಕ ಪ್ರದರ್ಶನಕ್ಕೆ ಆದ್ಯತೆಯ ಸ್ಥಳವೂ ಕೂಡ ಆಗಿದೆ.

ರಂಗೋಲಿ ಮೆಟ್ರೋ ಹೆಸರಾಂತ ಡ್ರಮ್ಮಿಂಗ್ ದಂಪತಿಗಳಾದ ಶ್ರೀ ರೊಬೋಟ್ರೊ ನರೈನ್ ಮತ್ತು ಶ್ರೀಮತಿ ವಸುಂದ್ರ ದಾಸ್ ಇವರ ಸಹಭಾಗಿತ್ವದಲ್ಲಿ ಪ್ರತಿ ತಿಂಗಳು ಸಮುದಾಯ ಡ್ರಮ್ ಜಾಮ್ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸುತ್ತಿದೆ. ಈ ಕಾರ್ಯಕ್ರಮ ಅಂತರರಾಷ್ಟ್ರೀಯ ಮಾಧ್ಯಮದ ಗಮನ ಸೆಳೆದಿದೆ. ಈ ಕಾರ್ಯಕ್ರಮದ ಬಗ್ಗೆ ಈ ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿಗಳು ಪ್ರಕಟವಾಗುತ್ತಿವೆ. ರಂಗೋಲಿ ಮೆಟ್ರೋ ಇತರೆ ಕಾಯಂ ಕಾರ್ಯಕ್ರಮಗಳಾದ ಫ್ರೆಂಡ್ಸ್ ಆನೆ ಮಿತ್ರರು ಕಥೆ ಹೇಳುವಿಕೆ ಮತ್ತು ಹಾಸ್ಯ ಕಾರ್ಯಕ್ರಮಗಳು ಕಳೆದ 3 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿವೆ. ಈ ಕಾರ್ಯಕ್ರಮಗಳು ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರವಾಗಿವೆ. ಸಾಮಾಜಿಕ ಮಾಧ್ಯಮ ಕೂಡು ಈ ಕಾರ್ಯಕ್ರಮಗಳನ್ನು ಪ್ರಚುರಪಡಿಸುತ್ತಿವೆ. ರಂಗೋಲಿ ಮೆಟ್ರೋ ಪ್ರತಿ ವರ್ಷ ಜೂನ್ 21ರಂದು ವಿಶ್ವ ಸಂಗೀತ ದಿನಾಚರಣೆ ಏರ್ಪಡಿಸುತ್ತದೆ. 100 ತಂಡಗಳಿಗೂ ಹೆಚ್ಚು ತಂಡಗಳು ತಮ್ಮ ವಾದ್ಯ ಸಲಕರಣೆಗಳ ಸಮೇತ ಸಂಗೀತ ಪ್ರದರ್ಶಿಸಲು ಹಾಗೂ ಸಂಗೀತ ವಾದ್ಯಗಳನ್ನು ನುಡಿಸಲು ಈ ಕೇಂದ್ರಕ್ಕೆ ಆಗಮಿಸುವವರು ಎಂ.ಜಿ. ರಸ್ತೆಯ ಬುಲೆವಾರ್ಡ್ ದಂತಕತೆ ಮತ್ತೆ ತನ್ನ ವೈಭವವನ್ನು ಮೈದೆಳೆದುಕೊಂಡಿದೆ.

ಮೆಟ್ರೋ ನಿಲ್ದಾಣಗಳಲ್ಲಿ ಕಲೆಯನ್ನು ಜೀವಂತಗೊಳಿಸುವ ನಿಮ್ಮ ಕಂಪನಿಯ ಪ್ರಯತ್ನ ಅಂತರರಾಷ್ಟ್ರೀಯ ಗಮನ ಸೆಳೆದಿದೆ. ಸ್ಥಳೀಯ ಸಂಸ್ಥೆಗಳ ಜೊತೆಗೂಡಿ ನಡೆಸುತ್ತಿರುವ ಈ ಸೃಜನಾತ್ಮಕ ಕಾರ್ಯದಿಂದ ವಿಶ್ವದಾದ್ಯಂತ ಇರುವ ಅನೇಕ ಮೆಟ್ರೋ ವ್ಯವಸ್ಥೆಗಳು ಪ್ರಭಾವಿತವಾಗಿವೆ. ನಮ್ಮ ಬ್ರಾಂಡ್ ಪ್ರತಿಮೆ "ನಮ್ಮ ಮೆಟ್ರೋ"ದ ಜನಪ್ರಿಯತೆ ಹೆಚ್ಚಿಸಲು ಸಾಧ್ಯವಾದಷ್ಟು ಮೆಟ್ರೋ ನಿಲ್ದಾಣಗಳಲ್ಲಿ ಕಲೆಯನ್ನು ಅದರ ವಿವಿಧ ರೂಪ ಮತ್ತು ಶೈಲಿಯಲ್ಲಿ ಪ್ರದರ್ಶಿಸಲು ಬಿಎಂಆರ್‌ಸಿಎಲ್ ಸ್ಥಳೀಯ ಸಂಸ್ಥೆಗಳು ಮತ್ತು ಸಮುದಾಯದ ಜೊತೆ ಪಾಲ್ಗೊಳ್ಳುವ ಕಾರ್ಯವನ್ನು ಮುಂದುವರೆಸುವುದು.

ಬೆಂಗಳೂರು ಸಂತೆ

ಬಿಎಂಆರ್‌ಸಿಎಲ್ ಗ್ರಾಮೀಣ ಕಲಾ ಕೇಂದ್ರಕ್ಕೆ ಮತ್ತೊಂದು ಸ್ಥಳವನ್ನು ಅಭಿವೃದ್ಧಿಪಡಿಸಿದೆ. ಇದಕ್ಕೆ 'ಬೆಂಗಳೂರು ಸಂತೆ' ಎಂದು ನಾಮಕರಣ ಮಾಡಿದೆ. ರಂಗೋಲಿ ಮೆಟ್ರೋ ಕಲಾ ಕೇಂದ್ರ ನಗರದ ಕಲೆಗಳನ್ನು ಅತ್ಯುತ್ತಮವಾಗಿ ಪ್ರತಿನಿಧಿಸಿದರೆ, ಬೆಂಗಳೂರು ಸಂತೆಯನ್ನು ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದಲ್ಲಿ ಸ್ಥಾಪಿಸಲಾಗಿದ್ದು, ಇದನ್ನು ಗ್ರಾಮೀಣ ಸಂತೆ (ರೂರಲ್ ಹಾಟ್) ಎಂದು ಕರೆಯಲಾಗುತ್ತಿದೆ. ಇದು ದೇಶದ ಸಾಂಪ್ರದಾಯಿಕ ಭಾವನೆಗಳನ್ನು ಮೂಡಿಸುತ್ತದೆ. ಗ್ರಾಮೀಣ ಸಂತೆಯು ಬೀದಿ ತರಹದ ಭಾವನೆಯನ್ನು ಮೂಡಿಸುವಂತಹ ಸೆಂಟ್ರಲ್ ಸ್ಪೈನ್ ಉದ್ದಕ್ಕೂ ಅಂಗಡಿಗಳ ಸಮೂಹವನ್ನು ಒಳಗೊಂಡಿರುವುದು. ವಾಸ್ತುಶಿಲ್ಪ ವಿನ್ಯಾಸವು ಕರ್ನಾಟಕ ಜಾನಪದ ವಾಸ್ತುಶಿಲ್ಪವನ್ನು ಹೋಲುವಂತಿದೆ. ಪ್ರವಾಸಿಗರನ್ನು ಆಕರ್ಷಿಸುವ ಸ್ಥಳವನ್ನಾಗಿ ಮಾಡಿದೆ.



ಮಾನವ ಸಂಪನ್ಮೂಲ ಅಭಿವೃದ್ಧಿ

ಕಂಪನಿಯು ಪ್ರಥಮ ಆಯ್ಕೆಯ ಹಾಗೂ ಆಕರ್ಷಕ ಉದ್ಯೋಗದಾರು ಎಂಬ ಜನಪ್ರಿಯತೆ ಗಳಿಸಲು ಹಾಗೂ ಅತ್ಯುತ್ತಮ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಸಂಸ್ಥೆ ಎಂಬ ಅಭಿಪ್ರಾಯ ಮೂಡಿಸಲು ಸಾಕಷ್ಟು ಸಮಯ, ಪರಿಶ್ರಮ ಮತ್ತು ಸಂಪನ್ಮೂಲಗಳನ್ನು ವ್ಯಯಿಸಿದೆ. ಕಂಪನಿಯು ಎರಡು ವಿಭಾಗಗಳನ್ನು ಅಂದರೆ ಯೋಜನಾ ವಿಭಾಗ ಮತ್ತು ಒ ಅಂಡ್ ಎಂ ವಿಭಾಗಗಳನ್ನು ಹೊಂದಿದೆ. ಯೋಜನಾ ವಿಭಾಗದ ಎಲ್ಲಾ ಸಿಬ್ಬಂದಿಯನ್ನು ಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತದೆ ಅಥವಾ ಕೇಂದ್ರ ಸರ್ಕಾರದ ಇಲಾಖೆಗಳು/ಕೇಂದ್ರ ಪಿಎಸ್‌ಯುಗಳಿಂದ, ರಾಜ್ಯ ಸರ್ಕಾರದ ಇಲಾಖೆಗಳು/ರಾಜ್ಯ ಪಿಎಸ್‌ಯುಗಳಿಂದ ನಿಯೋಜನೆ ಮೇಲೆ ಪಡೆಯಲಾಗುತ್ತದೆ. ಒ ಅಂಡ್ ಎಂ ವಿಭಾಗದ ಸಿಬ್ಬಂದಿಯನ್ನು ಖಾಯಂ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ.

ಮಾನವ ಸಂಪನ್ಮೂಲ – ಯೋಜನಾ ವಿಭಾಗ

ದಿನಾಂಕ: 31.03.2019ರಂದು ಇದ್ದಂತೆ ಯೋಜನಾ ವಿಭಾಗದ ಮಾನವ ಶಕ್ತಿ ಸಂಖ್ಯೆ 868. ಇದರಲ್ಲಿ ಇಬ್ಬರು ಕಾರ್ಯನಿರ್ವಹಣೆ ನಿರ್ದೇಶಕರು, ಏಳು ಮಂದಿ ಕಾರ್ಯನಿರ್ವಾಹಕ ನಿರ್ದೇಶಕರು, 18 ಪ್ರಧಾನ ವ್ಯವಸ್ಥಾಪಕರು ಮತ್ತು ಮುಖ್ಯ ಇಂಜಿನಿಯರುಗಳು, 718 ಇಂಜಿನಿಯರುಗಳು, 73 ಬೆಂಬಲ ಸಿಬ್ಬಂದಿ ಮತ್ತು 34 ತಾಂತ್ರಿಕೇತರ ಅಧಿಕಾರಿಗಳು ಒಳಗೊಂಡಿರುವರು. ಇವರ ಪೈಕಿ 33 ಎಕ್ಸಿಕ್ಯುಟಿವ್‌ಗಳು ನಿಯೋಜನೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. 835 ಮಂದಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಹೆಚ್ಚುವರಿಯಾಗಿ 381 ಸಿಬ್ಬಂದಿ (ಡಿಇಒಗಳು, ಅಟೆಂಡರುಗಳು, ಚಾಲಕರು, ಇಎಗಳು, ಭದ್ರತೆ ಮತ್ತು ಹೌಸ್‌ಕೀಪಿಂಗ್‌ನವರು ಇದರಲ್ಲಿ ಒಳಗೊಂಡಿರುವರು. ಇವರನ್ನು ಹೊರಗುತ್ತಿಗೆ ಏಜೆನ್ಸಿಯಿಂದ ಪಡೆಯಲಾಗಿದೆ. ಹೆಚ್ಚುವರಿ ಸಿಬ್ಬಂದಿಯನ್ನು ಯೋಜನೆಯ ಹಂತ–2ಕ್ಕೆ ಮಂಜೂರಾಗುವ ಹುದ್ದೆಗಳಿಗೆ ನೇಮಕ ಮಾಡಲಾಗಿದೆ. ಪರಾಮರ್ಶನೆಯಲ್ಲಿರುವ ಈ ವರ್ಷದ ಅವಧಿಯಲ್ಲಿ ಯೋಜನೆ ವಿಭಾಗದ ಇಂಜಿನಿಯರುಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಬಳ ಮತ್ತು ಸಂಭಾವನೆಗಳಿಗೆ ಆಗುತ್ತಿರುವ ಖರ್ಚು ರೂ.9.51 ಕೋಟಿ.

ಮಾನವ ಸಂಪನ್ಮೂಲ – ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ

ದಿನಾಂಕ: 31.03.2019ರಂದು ಇದ್ದಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದಲ್ಲಿನ ಮಾನವ ಸಂಪನ್ಮೂಲದ ಸಂಖ್ಯೆಯು 1483 ನೌಕರರಾಗಿದ್ದರು. ಇವರಲ್ಲಿ ಒಬ್ಬರು ಕಾರ್ಯನಿರ್ವಾಹಕ ನಿರ್ದೇಶಕರು, 41 ಎಕ್ಸಿಕ್ಯುಟಿವ್‌ಗಳು ಮತ್ತು 1442 ಎಕ್ಸಿಕ್ಯುಟಿವ್‌ಗಳಲ್ಲದ ಸಿಬ್ಬಂದಿ ಒಳಗೊಂಡಿರುವರು. ಇವರಲ್ಲಿ 1197 ಖಾಯಂ ನೌಕರರು, 284 ಗುತ್ತಿಗೆ ನೌಕರರು ಮತ್ತು 2 ನಿಯೋಜನೆ ಮೇಲೆ ಬಂದಿರುವ ಅಧಿಕಾರಿಗಳು ಸೇರಿರುವರು. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಒ ಅಂಡ್ ಎಂ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಬಳ ಮತ್ತು ಸಂಭಾವನೆಗಳಿಗೆ ಮಾಡಿರುವ ಒಟ್ಟು ಖರ್ಚು ರೂ.86.29 ಕೋಟಿ.

ಕಟ್ಟಡ ನಿರ್ಮಾಣ ಕಾರ್ಮಿಕರ ನೋಂದಣಿ

31ನೇ ಮಾರ್ಚ್ 2019ರಂದು ಇದ್ದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ (ಬಿಒಸಿಡಬ್ಲ್ಯೂ ಆ್ಯಕ್ಟ್)ಯ ಪ್ರಕರಣ 8ರ ಅನ್ವಯ 4350 ಕಟ್ಟಡ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸಲಾಗಿದೆ. ಬೃಹತ್ ಸಂಖ್ಯೆಯ ಕಟ್ಟಡ ನಿರ್ಮಾಣ ಕಾರ್ಮಿಕರು, ಮೆಟ್ರೋ ರೈಲು ಯೋಜನೆಯ ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆದಾರರಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕಾರ್ಮಿಕರನ್ನು "ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ನೇಮಕಾತಿ ಮತ್ತು ಸೇವಾ ನಿಬಂಧನೆಗಳ ನಿಯಂತ್ರಣ) ಕಾಯ್ದೆ, 1996ರ ಅಡಿಯಲ್ಲಿ ನೋಂದಣಿ ಮಾಡಲಾಗಿದೆ ಮತ್ತು ಇವರು ಕಾರ್ಮಿಕರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952, ಕಾರ್ಮಿಕರ ರಾಜ್ಯ ವಿಮೆ ಕಾಯ್ದೆ, 1948 ಇತ್ಯಾದಿ ಜೊತೆಗೆ "ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ" ಮೂಲಕ ವೈದ್ಯಕೀಯ ಸೌಲಭ್ಯ, ಅಪಘಾತ ಪರಿಹಾರ, ಅಂಗವಿಕಲತೆ ಪಿಂಚಣಿ, ಮಕ್ಕಳ ಶಿಕ್ಷಣ ಭತ್ಯೆಯಂತಹ ವಿವಿಧ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುವರು

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಅನ್ವಯ ಮುಖ್ಯ ಕಾರ್ಮಿಕ ಆಯುಕ್ತರು (ಕೇಂದ್ರ) ಇವರು ಕಂಪನಿಯ ಗುತ್ತಿಗೆದಾರರು, ಗುತ್ತಿಗೆ ಕಾರ್ಮಿಕರ ಪ್ರತಿನಿಧಿಗಳ ಜೊತೆಗೆ ಬಿಎಂಆರ್‌ಸಿಎಲ್ ಮತ್ತು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆ ಪ್ರತಿನಿಧಿಗಳ ಮಾಸಿಕ ಸಭೆಗಳನ್ನು ನಡೆಸುತ್ತಿರುವರು. ಈ ಸಭೆಯಲ್ಲಿ ಮುಖ್ಯ ಕಾರ್ಮಿಕ ಆಯುಕ್ತರು, ಕಟ್ಟಣ ನಿರ್ಮಾಣ ಕಾರ್ಮಿಕರುಗಳಿಗೆ



ಕಲ್ಯಾಣ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಶಾಸನಬದ್ಧ ಅಗತ್ಯತೆಗಳನ್ನು ಅನುಷ್ಠಾನಗೊಳಿಸುವಂತೆ ಮತ್ತು ಪರಿಪಾಲಿಸುವಂತೆ ಸಲಹೆ ನೀಡಿದರು. ಎಲ್ಲಾ ಶಾಸನಬದ್ಧ ಅನುಸರಣೆಗಳನ್ನು ಮಾಡಲಾಗುತ್ತಿದೆಯೇ ಎಂಬುದರ ಬಗ್ಗೆ ಖಾತರಿ ಪಡಿಸಿಕೊಳ್ಳಲು ಗುತ್ತಿಗೆದಾರರುಗಳ ಕಾರ್ಯವನ್ನು ನಿಮ್ಮ ಕಂಪನಿಯು ನಿಕಟವಾಗಿ ಗಮನಿಸುತ್ತಿದೆ ಹಾಗೂ ಅವರಿಂದ ಅನುಪಾಲನಾ ವರದಿಗಳನ್ನು ಸಹ ಪಡೆಯುತ್ತಿದೆ. ಇದನ್ನು ನಿಯತಕಾಲಿಕವಾಗಿ ಮಂಡಲಿಗೆ ವರದಿ ಮಾಡಲಾಗಿದೆ.

ಕಾರ್ಮಿಕರ ಬಾಂಧವ್ಯ

ಸದರಿ ವರ್ಷಾವಧಿಯಲ್ಲಿ ಕಂಪನಿಯಲ್ಲಿ ಕಾರ್ಮಿಕರ ಬಾಂಧವ್ಯ ಶಾಂತಿ ಹಾಗೂ ಸೌಹಾರ್ದಯುತವಾಗಿತ್ತು.

ಮಹಿಳಾ ನೌಕರರ ಸುರಕ್ಷತೆ ಮತ್ತು ಯೋಗಕ್ಷೇಮ

ಕಂಪನಿಯು ಸಮಾನ ಅವಕಾಶ ನೀಡುವ ಉದ್ಯೋಗದಾತ ಸಂಸ್ಥೆಯಾಗಿದ್ದು, ಎಲ್ಲಾ ನೌಕರರ ಘನತೆಯನ್ನು ಕಾಪಾಡುವ ಕಾರ್ಯ ಸಂಸ್ಕೃತಿಯನ್ನು ಬೆಳೆಸಲು ಪ್ರಜ್ಞಾಪೂರ್ವಕವಾಗಿ ಶ್ರಮಿಸುತ್ತಿದೆ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹರಿಸುವಿಕೆ) ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಅಗತ್ಯವಾದಂತೆ, ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆ, ನಿಷೇಧ ಮತ್ತು ಪರಿಹರಿಸುವಿಕೆ ನೀತಿಯನ್ನು ಕಂಪನಿ ಅನುಷ್ಠಾನಗೊಳಿಸಿದೆ. ಖಾಯಂ, ತಾತ್ಕಾಲಿಕ ಅಥವಾ ಗುತ್ತಿಗೆ ಮೇಲಿನ ಎಲ್ಲಾ ಮಹಿಳಾ ನೌಕರರು ಈ ನೀತಿ ಅಡಿ ಒಳಪಡುವರು. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹರಿಸುವಿಕೆ) ಕಾಯ್ದೆ, 2013ರ ಕಲಂ 4ರ ಅನ್ವಯ ಆಂತರಿಕ ದೂರು ಸಮಿತಿಯನ್ನು ಕಂಪನಿಯು ರಚಿಸಿದ್ದು, ಇದಕ್ಕೆ ಹಿರಿಯ ಮಟ್ಟದ ಮಹಿಳಾ ಎಕ್ಸಿಕ್ಯುಟಿವ್ ಅಧ್ಯಕ್ಷರಾಗಿರುವರು, ಎನ್‌ಜಿಒ ದಿಂದ ಒಬ್ಬರು ಮಹಿಳೆಯನ್ನು ಸದಸ್ಯರನ್ನಾಗಿ ಮತ್ತು ಬಿಎಂಆರ್‌ಸಿಎಲ್ ಯೋಜನೆ ಕಚೇರಿ ಮತ್ತು ಒ ಅಂಡ್ ಎಂ ವಿಭಾಗದಿಂದ 8 ಸದಸ್ಯರನ್ನು (6 ಮಹಿಳೆಯರು ಮತ್ತು 2 ಪುರುಷರು) ಈ ಸಮಿತಿ ಒಳಗೊಂಡಿರುವುದು. ಈ ವರ್ಷದ ಅವಧಿಯಲ್ಲಿ ಕಂಪನಿಗೆ ಲೈಂಗಿಕ ದೌರ್ಜನ್ಯದ ಬಗ್ಗೆ ಒಂದು ದೂರು ಬಂದಿದ್ದು, ಈ ಬಗ್ಗೆ ವಿಚಾರಣೆಯನ್ನು ಪೂರ್ಣಗೊಳಿಸಲಾಗಿದೆ. ಈ ಬಗ್ಗೆಗಿನ ವರದಿ ಅಂತಿಮ ಹಂತದಲ್ಲಿದ್ದು, ಅದನ್ನು ಶೀಘ್ರದಲ್ಲೇ ಸಲ್ಲಿಸಲಾಗುವುದು. ಕಂಪನಿಯು ರೈಲಿನ ಆಪರೇಟರ್‌ಗಳು/ನಿಲ್ದಾಣ ನಿಯಂತ್ರಕರುಗಳನ್ನಾಗಿ (118), ಮೈಂಟೇನರ್ಸ್ (124), ಜೂನಿಯರ್ ಇಂಜಿನಿಯರ್‌ಗಳು (18), ಸೆಕ್ಷನ್ ಇಂಜಿನಿಯರ್‌ಗಳು (3), ಅಸಿಸ್ಟೆಂಟ್ ಮ್ಯಾನೇಜರುಗಳು (4), ಸಿಆರ್‌ಒಗಳು (4), ಅಸಿಸ್ಟೆಂಟ್ (5) ಮತ್ತು ಇತರೆಯರು (8) ಆಗಿ ಒಟ್ಟು 284 ಮಹಿಳಾ ನೌಕರರುಗಳಿಗೆ ತರಬೇತಿ ನೀಡಿ ಕೆಲಸಕ್ಕೆ ನಿಯೋಜಿಸಿದೆ.

ಸುರಕ್ಷತೆ/ ಅಪಘಾತ ವಿವರಗಳು

ಬೆಂಗಳೂರು ಮೆಟ್ರೋ ರೈಲು ಯೋಜನೆಯು ಎಲ್ಲಾ ನಿರ್ಮಾಣ ಯೋಜನೆಗಳಲ್ಲಿ ಎಸ್‌ಎಚ್‌ಇ (ಸುರಕ್ಷತೆ, ಆರೋಗ್ಯ ಮತ್ತು ಪರಿಸರ) ಕೈಪಿಡಿಯನ್ನು ಅಳವಡಿಸಿಕೊಂಡಿದೆ. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ನಿರ್ಮಾಣ ಸ್ಥಳಗಳಲ್ಲಿ ಯಾವುದೇ ಪ್ರಮುಖ ಅಪಘಾತಗಳು ಸಂಭವಿಸಿರುವುದಿಲ್ಲ. ಕಾರ್ಯಾಚರಣೆ ಮಾರ್ಗದಲ್ಲಿ ಎರಡು ಅಪಘಾತಗಳು ಸಂಭವಿಸಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಿದೆ.

ದಿನಾಂಕ: 11.01.2019ರಂದು ಸುಮಾರು 11.20 ಗಂಟೆಯಲ್ಲಿ 20 ವರ್ಷದ ಯುವಕ ವೇಣುಗೋಪಾಲ್ ಎಂಬುವ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವಾಗಿ ಹಸಿರು ಮಾರ್ಗದ ನ್ಯಾಷನಲ್ ಕಾಲೇಜ್ ನಿಲ್ದಾಣದಲ್ಲಿ ಬರುತ್ತಿದ್ದ ಮೆಟ್ರೋ ರೈಲಿನ ಮುಂದೆ ರೈಲು ಮಾರ್ಗಕ್ಕೆ ಇದ್ದಕ್ಕಿದ್ದಂತೆ ಜಿಗಿದಿದ್ದ. ಆದರೆ ಆತನು ರೈಲಿನ ಕೆಳಭಾಗಕ್ಕೆ ಬಿದ್ದ ಕಾರಣ ಪ್ರಾಣಾಪಾಯವಾಗದೆ ಪಾರಾಗಿದ್ದಾನೆ. ಈ ಯುವಕ ರೈಲಿನ ಕೆಳಗೆ ಸಿಕ್ಕಿಹಾಕಿಕೊಂಡ ಪ್ರಯುಕ್ತ ರೈಲನ್ನು ಕೈಯಿಂದ ಹಿಂದಕ್ಕೆ ತಳ್ಳಿ ಆತನ್ನು ಅಲ್ಲಿಂದ ಎತ್ತಲಾಯಿತು. ಆ ನಂತರ ಗಾಯಗೊಂಡಿದ್ದ ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ಸೇರಿಸಲಾಯಿತು.

ಹಸಿರು ಮಾರ್ಗದ ಶ್ರೀರಾಮಪುರಂ ಮೆಟ್ರೋ ನಿಲ್ದಾಣದಲ್ಲಿ ದಿನಾಂಕ: 27.01.2019ರಂದು ಸುಮಾರು 20.07 ಗಂಟೆಯಲ್ಲಿ ಮಗುವನ್ನು ಎತ್ತಿಕೊಂಡಿದ್ದ ವಯಸ್ಸಾದ ವ್ಯಕ್ತಿಯೊಬ್ಬನ್ನು ಇಬ್ಬರು ಮಹಿಳೆಯರ ಜೊತೆಯಲ್ಲಿ ಎಸ್ಕಲೇಟರ್ ನಂ.6ರ ಹತ್ತಿರ (ಕನ್‌ಕೋರ್ಸ್‌ನಿಂದ ಪ್ಲಾಟ್‌ಫಾರಂ ನಂ.2ಕ್ಕೆ ಸಂಪರ್ಕಿಸುವುದು) ಬಂದು, ಎಸ್ಕಲೇಟರ್‌ನ ಮೆಟ್ಟಿಲಿನ ಬಳಿ ಹಿಂಜರಿಕೆಗೊಂಡು ಭಯದಿಂದ ಎಡಭಾಗದಿಂದ ಎಸ್ಕಲೇಟರ್‌ಗೆ ಪ್ರವೇಶಿಸಿದಾಗ ನಿಯಂತ್ರಣ ಕಳೆದುಕೊಂಡಿದ್ದಾರೆ. ಆಗ ಆತನ ಎಡಗೈಯಲ್ಲಿದ್ದ ಮಗು ಜಾರಿ ಎಸ್ಕಲೇಟರ್‌ನ ಎರಡೂ ಬದಿಯಲ್ಲಿದ್ದ ತೆರೆದ ಜಾಗದ ಮೂಲಕ ರಸ್ತೆ ಮೇಲೆ ಬಿದ್ದಿದೆ. ಎಸ್ಕಲೇಟರ್ ಬಳಿಯಿದ್ದ ಭದ್ರತಾ ಸಿಬ್ಬಂದಿ ತಕ್ಷಣ ಎಸ್ಕಲೇಟರನ್ನು ನಿಲುಗಡೆ ಮಾಡಿದ್ದಾರೆ. ಮಗುವಿನ ಪೋಷಕ ಕನ್‌ಕೋರ್ಸ್‌ಗೆ ಅಲ್ಲಿಂದ ನೆಲದ ಮಟ್ಟಕ್ಕೆ ಇಳಿದು ಬಂದಿದ್ದಾರೆ. ಕರ್ತವ್ಯದಲ್ಲಿದ್ದ ನಿಲ್ದಾಣ ನಿಯಂತ್ರಕರು ಎಸ್ಕಲೇಟರ್ ಬಳಿಗೆ ಧಾವಿಸಿದ್ದಾರೆ ಮತ್ತು ಅಷ್ಟರಲ್ಲಿ ಮಗು ನೆಲದ ಮೇಲೆ ಬಿದ್ದಿರುವುದು ಅವರಿಗೆ ಕಂಡಿದೆ. ಈ ದುರ್ಘಟನೆ ಬಗ್ಗೆ ಸಂಚಾರ ನಿಯಂತ್ರಣಾಧಿಕಾರಿಗೆ ಮಾಹಿತಿ ನೀಡಿದ ತಕ್ಷಣ ಅವರು ಮಗು ಬಿದ್ದಿದ್ದ ನೆಲದ ಜಾಗಕ್ಕೆ ಆಗಮಿಸಿ ತಕ್ಷಣ ವೈದ್ಯಕೀಯ ಚಿಕಿತ್ಸೆ ಮಾಡಿಸಲು ತಡ ಮಾಡದೆ ದ್ವಿಚಕ್ರವಾಹನ ಚಾಲಕರೊಡನೆ ಹತ್ತಿರದ ಕೆಸಿಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ ಚಿಕಿತ್ಸೆ ಕೊಡಿಸಿದರು. ಇಷ್ಟಾದರೂ ಮಗು ಚಿಕಿತ್ಸೆಗೆ ಸ್ಪಂದಿಸದೆ ಮಾರನೆಯ ದಿನ ಅಂದರೆ 28.01.2019ರಂದು ಬೆಳಿಗ್ಗೆ ಅಸು ನೀಗಿತು.

ಪರಿಸರ

<u>ಕೆರೆಗಳ ಅಭಿವೃದ್ಧಿ</u>

ಕಂಪನಿಯ ಸಿಎಸ್‌ಆರ್ ಧ್ಯೇಯಗಳ ಅಂಗವಾಗಿ ಬೆಂಗಳೂರಿನಲ್ಲಿನ ಎರಡು ಕೆರೆಗಳನ್ನು ಪುನಶ್ಚೇತನಗೊಳಿಸುವಂತೆ ಮತ್ತು ಸಮಗ್ರ ಅಭಿವೃದ್ಧಿಪಡಿಸುವಂತೆ ಕರ್ನಾಟಕ ಸರ್ಕಾರ ಕಂಪನಿಯನ್ನು ಕೋರಿತ್ತು. ಇದರಂತೆ ಕೆಂಗೇರಿ ಕೆರೆ ಮತ್ತು ವೀರಸಂದ್ರ ಕೆರೆಯನ್ನು ಅಭಿವೃದ್ಧಿಪಡಿಸಲು ಕಂಪನಿಗೆ ವಹಿಸಿತ್ತು.

ಕೆಂಗೇರಿ ಕೆರೆಯು ಬಿಎಂಆರ್‌ಸಿಎಲ್ ಯೋಜನೆಯ ಹಂತ–2ರ ಪೂರ್ವ–ಪಶ್ಚಿಮ ಮಾರ್ಗದ ಮೈಲಸಂದ್ರ ಮೆಟ್ರೋ ನಿಲ್ದಾಣದ ಮುಂದೆ ಇದ್ದು, ಕೆಂಗೇರಿ ಗ್ರಾಮದ ಸರ್ವೆ ನಂ.15ರಲ್ಲಿ ಮತ್ತು ವಳಗೆರಹಳ್ಳಿ ಗ್ರಾಮದ ಸರ್ವೆ ನಂ.85ರಲ್ಲಿ 32 ಎಕರೆ 16 ಗುಂಟೆಗಳ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಸಿಎಸ್‌ಆರ್ ಚಟುವಟಿಕೆಗಳನ್ನು ಕೈಗೊಳ್ಳಲು ಬಿಎಂಆರ್‌ಸಿಎಲ್‌ನಲ್ಲಿ ಹಣ ಇಲ್ಲದಿದ್ದ ಪ್ರಯುಕ್ತ ಕೆಂಗೇರಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸುವಂತೆ ಪ್ರಮುಖ ಕಾರ್ಪೊರೇಟ್ ಕಂಪನಿಯಾದ ಟೊಯೋಟ ಕಿರ್ಲೋಸ್ಕರ್ ಕಂಪನಿಯನ್ನು ಬಿಎಂಆರ್‌ಸಿಎಲ್ ಕೋರಿಕೊಂಡಿತ್ತು. ಈ ವಿಚಾರವು ಅವರ ಪರಿಗಣನೆಯಲ್ಲಿದೆ.

ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಡಿಪಿಆರ್ ಅನ್ವಯ ವೀರಸಂದ್ರ ಕೆರೆ ಅಭಿವೃದ್ಧಿ ಪಡಿಸುವಂತೆ ನಿಮ್ಮ ಕಂಪನಿಯು ಟೈಟನ್ ಇಂಡಸ್ಟ್ರೀಸ್ ಲಿ. ಜೊತೆ ಒಪ್ಪಂದ ಮಾಡಿಕೊಂಡಿದೆ. ಟೈಟನ್ ಕಂಪನಿಯು ಅದರ ಸಿಎಸ್‌ಆರ್ ಚಟುವಟಿಕೆ ಅಡಿಯಲ್ಲಿ ಈ ಕೆರೆಯನ್ನು ಅಭಿವೃದ್ಧಿಪಡಿಸಲು ಸುಮಾರು ರೂ.8 ಕೋಟಿ ಹಣವನ್ನು ಖರ್ಚು ಮಾಡುತ್ತಿದೆ. ಈ ಕಂಪನಿಯು ಕೆರೆಯನ್ನು ಅಭಿವೃದ್ಧಿಪಡಿಸಿದ ನಂತರ ಅದರ ನಿರ್ವಹಣೆ ಕಾರ್ಯವನ್ನು ಸಹ ಮಾಡುವುದು. ಕೆರೆಯ ಅಭಿವೃದ್ಧಿ ಕಾರ್ಯ ಈಗ ಪ್ರಾರಂಭವಾಗಿದ್ದು, ಅದನ್ನು 18 ತಿಂಗಳುಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ನಿಗದಿಪಡಿಸಿದೆ. ಕೆರೆಯ ಅಭಿವೃದ್ಧಿ ಕೆಲಸ ಪೂರ್ಣಗೊಂಡ ನಂತರ ಬಹುಶಃ ಈ ಕೆರೆಯು ದೊಡ್ಡ ಕಾರ್ಪೊರೇಟ್ ಕಂಪನಿಗಳ ಸಿಎಸ್‌ಆರ್ ಚಟುವಟಿಕೆಗಳ ಮೂಲಕ ಬೆಂಗಳೂರಿನಲ್ಲಿನ ಇಂತಹ ಇನ್ನೂ ಹೆಚ್ಚು ಕೆರೆಗಳನ್ನು ಅಭಿವೃದ್ಧಿಪಡಿಸಲು ಒಂದು ಮಾದರಿಯಾಗಿ ಮಾರ್ಪಡುವುದು.

<u>ನೀರಿನ ಕೊಯ್ಲು</u>

ಹಂತ–1ರ 42.3 ಕಿ.ಮೀ.ಗಳ ಮೆಟ್ರೋ ಮಾರ್ಗದ ಪೈಕಿ 33.42 ಕಿ.ಮೀ. ಎತ್ತರಿಸಿದ ಮಾರ್ಗವಾಗಿದ್ದು, 33 ನಿಲ್ದಾಣಗಳನ್ನು ಒಳಗೊಂಡಿದೆ. ವಯಾಡಕ್ಟ್ ಕಸಕಡ್ಡಿಗಳಿಲ್ಲದೆ ಮುಕ್ತವಾಗಿರುವುದರಿಂದ "ಮಳೆನೀರಿನ ಕೊಯ್ಲಿನ" ಮೂಲಕ ಮಳೆ ನೀರನ್ನು ಸಂಗ್ರಹಿಸಬಹುದಾಗಿದೆ. ಈ ರೀತಿ ಸಂಗ್ರಹಿಸಿದ ನೀರನ್ನು ಮತ್ತೆ ಶೋಧಿಸಿ ಅದನ್ನು ಕುಡಿಯುವ ನೀರನ್ನಾಗಿ ಮಾಡಲು ಆಸಕ್ತಿಯುಳ್ಳವರಿಗೆ ಮಾರಾಟ ಮಾಡಬಹುದಾಗಿದೆ. ವಯಾಡಕ್ಟ್‌ನಿಂದ ಸಂಗ್ರಹಿಸಿದ ಮಳೆ ನೀರಿನ ಗುಣಮಟ್ಟದ ಪ್ರಾರಂಭಿಕ ಅಧ್ಯಯನವು, ಈ ನೀರನ್ನು ಸಾಧಾರಣ ಶೋಧಿಸುವಿಕೆ ಪ್ರಕ್ರಿಯೆಗೆ ಒಳಪಡಿಸಿ ಅದನ್ನು ಕುಡಿಯುವ ನೀರನ್ನಾಗಿ ಮಾಡಬಹುದು ಎಂದು ತಿಳಿಸಿದೆ.



ವಯಾಡಕ್ಟ್‌ನ ಪ್ರತಿ ಪರ್ಯಾಯ ಸ್ಪ್ಯಾನ್‌ನಲ್ಲಿ ಮಳೆನೀರಿನ ಹಿಂದು ಬಾವಿಗಳನ್ನು ನಿರ್ಮಿಸಲಾಗಿದೆ. ವಯಾಡಕ್ಟ್‌ನ ಪೂರ್ಣ ಭಾಗದಲ್ಲಿ ಈ ವ್ಯವಸ್ಥೆ ಮಾಡಲಾಗಿದೆ. ಈ ಮಳೆನೀರಿನ ಕೊಯ್ಲು (ಆರ್‌ಡಬ್ಲ್ಯೂಎಚ್) ಕ್ರಮದಿಂದ ಮೆಟ್ರೋ ಮಾರ್ಗದ ಸುತ್ತ ಅಂತರ್ಜಲ ಮೂಲವು ಮರುಪೂರಣಗೊಂಡಿದೆ.

ಹಸಿರುವ ಹೊದಿಕೆ

ಬೆಂಗಳೂರು ಉದ್ಯಾನ ನಗರಿಗೆ ಹಸಿರು ಹೊದಿಕೆ ನೀಡುವ ಮರಗಿಡಗಳನ್ನು ಸಂರಕ್ಷಿಸಬೇಕೆಂಬ ಸಾರ್ವಜನಿಕರ ಕಳಕಳಿಯ ಬಗ್ಗೆ ನಿಮ್ಮ ಕಂಪನಿ ಅರಿವು ಹೊಂದಿದೆ ಹಾಗೂ ಅದಕ್ಕೆ ಸ್ಪಂದಿಸುತ್ತದೆ. ಆದಷ್ಟು ಕನಿಷ್ಠ ಪ್ರಮಾಣದಲ್ಲಿ ಮರಗಳನ್ನು ಕಡಿಯುವ ಮಾನದಂಡವನ್ನು ನಮ್ಮ ಮೆಟ್ರೋ ಯೋಜನೆಯು ಅಳವಡಿಸಿಕೊಂಡಿದೆ. ಮರಗಳನ್ನು ಸವರಿ ಹಾಕುವಲ್ಲಿಯೂ ಸಹ ನಿಮ್ಮ ಕಂಪನಿ ಆದಷ್ಟು ಭಾಗವನ್ನು ಉಳಿಸಲು ಪ್ರಯತ್ನಿಸುತ್ತದೆ. ಒಂದು ಮರ ಕಡಿದರೆ 10 ಸಸಿಗಳನ್ನು ನೆಡುವ ನೀತಿಯನ್ನು ಕಂಪನಿ ಅನುಸರಿಸುತ್ತಿದೆ. ನಗರದ ಎರಡು ಪ್ರಮುಖ ನಾಗರಿಕ ಸೌಲಭ್ಯ ಏಜೆನ್ಸಿಗಳಾದ ಬಿಬಿಎಂಪಿ ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿ ಸಹಯೋಗದೊಡನೆ ಈ ಕಾರ್ಯವನ್ನು ಮಾಡಲಾಗುತ್ತಿದೆ. ಯೋಜನಾ ಚಟುವಟಿಕೆಗಳ ಕಾರಣದಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ನಿರ್ಧರಣೆ ಮಾಡಲು ಹಂತ–2 ಕಾರಿಡಾರ್‌ಗಳ ಸಂಬಂಧ ಪರಿಸರದ ಮೇಲಿನ ಪರಿಣಾಮ ನಿರ್ಧರಣೆ (ಇಐಎ) ಅಧ್ಯಯನವನ್ನು ನಿಮ್ಮ ಕಂಪನಿ ನಡೆಸಿದೆ. ಅಗತ್ಯವಿರುವ ಸ್ಥಳಗಳಲ್ಲಿ ಪರಿಸರದ ಮೇಲೆ ಉಂಟಾಗುವ ಪರಿಣಾಮವನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹ ಉದ್ದೇಶಿಸಲಾಗಿದೆ. ನಿರ್ಮಾಣದ ಅವಧಿಯಲ್ಲಿ ಪರಿಸರ ಸಂರಕ್ಷಣೆ ನಿಗಾ ವಹಿಸಲು ಹೊರಗಿನ ಏಜೆನ್ಸಿ ಒಂದನ್ನು ಸಹ ನೇಮಕ ಮಾಡಿದೆ.

ಬಿಎಂಆರ್‌ಸಿ ಯೋಜನೆಯ ಹಂತ–2

ಬಿಎಂಆರ್‌ಸಿ ಯೋಜನೆಯ ಹಂತ–2 ಹಾಲಿಯಿರುವ ಎರಡೂ ಕಾರಿಡಾರ್‌ಗಳ ಅಂದರೆ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ಕಾರಿಡಾರ್‌ಗಳನ್ನು ವಿಸ್ತರಣೆ ಮಾಡಲು ರೂಪಿಸಿರುವ ಯೋಜನೆಯಾಗಿದೆ. ಈ ಯೋಜನೆಯು ಎತ್ತರಿಸಿದ ಮಾರ್ಗದ ಭಾಗಗಳನ್ನು ಒಳಗೊಂಡಿರುವುದು. ಪೂರ್ವ–ಪಶ್ಚಿಮ ಕಾರಿಡಾರ್ ಪಶ್ಚಿಮದ ಕಡೆಯಲ್ಲಿ ಮೈಸೂರು ರಸ್ತೆ ಟರ್ಮಿನಲ್‌ನಿಂದ ಕೆಂಗೇರಿವರೆಗೆ 6.45 ಕಿ.ಮೀ.ವರೆಗೆ ಮತ್ತು ಪೂರ್ವದ ಕಡೆಯಲ್ಲಿ ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ಗೆ 15.60 ಕಿ.ಮೀ.ವರೆಗೆ ವಿಸ್ತರಣೆಯಾಗುವುದು. ಇದೇ ರೀತಿ ಉತ್ತರ–ದಕ್ಷಿಣ ಕಾರಿಡಾರನ್ನು ಉತ್ತರದ ಕಡೆಗೆ ನಾಗಸಂದ್ರದಿಂದ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ (ಬಿಐಇಸಿ)ವರೆಗೆ 3.77 ಕಿ.ಮೀ.ವರೆಗೆ ಮತ್ತು ದಕ್ಷಿಣದ ಕಡೆಗೆ ಯಲಚೇನಹಳ್ಳಿಯಿಂದ ಅಂಜನಾಪುರ ಟೌನ್‌ಶಿಪ್ (ನೈಸ್ ರಸ್ತೆ) ವರೆಗೆ 6.29 ಕಿ.ಮೀ ದೂರಕ್ಕೆ ವಿಸ್ತರಣೆಯಾಗುವುದು. ಈ ನಾಲ್ಕು ವಿಸ್ತರಣೆಗಳಿಂದ ಈ ಪ್ರದೇಶದ ಪ್ರಯಾಣಿಕರಿಗೆ ಅವಶ್ಯವಾಗಿದ್ದ ಮೆಟ್ರೋ ಸಂಪರ್ಕ ದೊರೆಯುವುದು. ಬೊಮ್ಮಸಂದ್ರದಿಂದ ಆರ್.ವಿ. ರಸ್ತೆವರೆಗೆ (18.82 ಕಿ.ಮೀ) ಮತ್ತು ಐಐಎಂಬಿ–ಗೊಟ್ಟಿಗೆರೆಯಿಂದ ನಾಗವಾರದವರೆಗೆ (21.20 ಕಿ.ಮೀ.) ಸಾಗುವ ಎರಡು ಮಾರ್ಗಗಳು ಬೆಂಗಳೂರಿನ ಕೆಲವು ಜನಸಂದಣಿಯ ಮತ್ತು ಹೆಚ್ಚು ಸಂಚಾರ ದಟ್ಟಣೆಯ ಪ್ರದೇಶಗಳ ಮೂಲಕ ಹಾದು ಹೋಗುವುದು. ಯೋಜನೆಯ ಹಂತ–2 ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಕೈಗಾರಿಕಾ ಕೇಂದ್ರಗೆ ಬಹು ನಿರೀಕ್ಷಿತ ಸಂಪರ್ಕವನ್ನು ಒದಗಿಸುವುದು. ಹಂತ–1 (42.3 ಕಿ.ಮೀ.) ಮತ್ತು ಹಂತ–2 (72.09 ಕಿ.ಮೀ) ಈ ಎರಡೂ ಒಟ್ಟಾರೆಯಾಗಿ 114.39 ಕಿ.ಮೀ. ಮೆಟ್ರೋ ಸಂಪರ್ಕ ಜಾಲವನ್ನು ಒದಗಿಸುವವು. ಈ ಸಂಪರ್ಕ ಜಾಲವು 101 ನಿಲ್ದಾಣಗಳನ್ನು (80 ಎತ್ತರಿಸಿದ ಮತ್ತು 19 ನೆಲಮಾಳಿಗೆಯ ನಿಲ್ದಾಣಗಳು ಮತ್ತು 2 ಅಪ್‌ಗ್ರೇಡ್ ನಿಲ್ದಾಣಗಳು) ಒಳಗೊಂಡಿರುವುದು. ಮೆಟ್ರೋ ಯೋಜನೆಯ ಹಂತ–2ಕ್ಕೆ ಮಂಜೂರಾಗಿರುವ ಅಂದಾಜು ಯೋಜನಾ ವೆಚ್ಚ ರೂ.26,405.14 ಕೋಟಿ. ಹಂತ–2 ಯೋಜನೆಯು 2020ರ ನಂತರದಿಂದ ಹಂತ ಹಂತವಾಗಿ ಪೂರ್ಣಗೊಳ್ಳುವುದು ಮತ್ತು ಮೆಟ್ರೋ ಸಂಪರ್ಕ ಜಾಲವನ್ನು 2024ರ ಜೂನ್ ವೇಳೆಗೆ ಪೂರ್ಣಗೊಳಿಸಲು ನಿಗದಿ ಮಾಡಲಾಗಿದೆ.

31ನೇ ಮಾರ್ಚ್ 2019ರಂದು ಇದ್ದಂತೆ ಭೌತಿಕ ಪ್ರಗತಿ ಮತ್ತು ಹಂತ–2ರ ಅನುಷ್ಠಾನದ ಸ್ಥಿತಿಗತಿ:

31ನೇ ಮಾರ್ಚ್ 2019ರವರೆಗೆ ಹಂತ–2ರಲ್ಲಿ ಆಗಿರುವ ಭೌತಿಕ ಪ್ರಗತಿ ಶೇ.36ರಷ್ಟು. ಹಂತ–2ರ ನಿರ್ಮಾಣ ಕಾರ್ಯವು ವಿವಿಧ ರೀಚ್‌ಗಳಲ್ಲಿ ಪ್ರಗತಿಯಲ್ಲಿದೆ. ರೀಚ್‌ವಾರು ಭೌತಿಕ ಪ್ರಗತಿಯು ಈ ಕೆಳಕಂಡಂತಿರುವುದು:



ರೀಚ್–1 ವಿಸ್ತರಣೆ:

ರೀಚ್–1 ವಿಸ್ತರಣೆಯನ್ನು ಎರಡು ಪ್ಯಾಕೇಜ್‌ಗಳಾಗಿ ವಿಂಗಡಿಸಿದೆ. ಬೈಯಪ್ಪನ ಹಳ್ಳಿಯಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದವರೆಗಿನ ಮಾರ್ಗವನ್ನು ಒಂದನೇ ಪ್ಯಾಕೇಜ್ ಮತ್ತು ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದಿದ ವೈಟ್‌ಫೀಲ್ಡ್ ನಿಲ್ದಾಣದವರೆಗಿನ ಮಾರ್ಗವನ್ನು ಮತ್ತೊಂದು ಪ್ಯಾಕೇಜ್ ಆಗಿ ವಿಂಗಡಿಸಿದೆ.

ರೀಚ್–1ಎ ವಿಸ್ತರಣೆ: ಬೈಯಪ್ಪನಹಳ್ಳಿ ನಿಲ್ದಾಣದಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶದ ನಿಲ್ದಾಣದವರೆಗೆ.

ಬೈಯಪ್ಪನಹಳ್ಳಿ ನಿಲ್ದಾಣದಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದವರೆಗೆ 8.03 ಕಿ.ಮೀ. ದೂರಕ್ಕೆ, ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳ ಜೊತೆಗೆ ಆರು ಎತ್ತರಿಸಿದ ನಿಲ್ದಾಣಗಳ ನಿರ್ಮಾಣ ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್‌ಗಳ (ವಯಾಡಕ್ಟ್ ಮತ್ತು ನಿಲ್ದಾಣಗಳು) ನಿರ್ಮಾಣಕ್ಕಾಗಿ ಗುತ್ತಿಗೆಯನ್ನು ಮೆ॥ ಐಟಿಡಿ ಸೆಮ್ ಇಂಡಿಯಾ ಜೆವಿಗೆ ನೀಡಲಾಗಿದೆ. ಈ ಸಂಬಂಧ ಟೆಂಡರನ್ನು ಏಪ್ರಿಲ್ 2017ರಲ್ಲಿ ನೀಡಲಾಗಿದೆ. ಆಗಸ್ಟ್ 2019ರವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇಕಡ 43.60.
- ಪೈಲ್/ಪೈಲ್ ಕ್ಯಾಪ್ – ಶೇ.72ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.64ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.48ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.40ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–1ಬಿ ವಿಸ್ತರಣೆ: ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದಿಂದ ವೈಟ್‌ಫೀಲ್ಡ್ ನಿಲ್ದಾಣದವರೆಗೆ.

ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದಿಂದ ವೈಟ್‌ಫೀಲ್ಡ್ ನಿಲ್ದಾಣದವರೆಗೆ 7.21 ಕಿ.ಮೀ.ಗಳ ದೂರಕ್ಕೆ, ವೈಟ್‌ಫೀಲ್ಡ್ ಡಿಪೋಗೆ ವಯಾಡಕ್ಟ್ ಮಾರ್ಗದ ಪ್ರವೇಶ, ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳು ಜೊತೆಗೆ ಏಳು ಎತ್ತರಿಸಿದ ನಿಲ್ದಾಣಗಳು ಒಳಗೊಂಡಂತೆ ಎತ್ತರಿಸಿದ ಸ್ಟ್ರಕ್ಚರುಗಳ (ವಯಾಡಕ್ಟ್ ಮತ್ತು ನಿರ್ಮಾಣಕ್ಕೆ ಮೆ॥ ಐಟಿಡಿ ಸೆಮ್‌ಇಂಡಿಯಾ ಜೆವಿ ಕಂಪನಿಗೆ ಗುತ್ತಿಗೆ ನೀಡಿದೆ. ಟೆಂಡರನ್ನು ಏಪ್ರಿಲ್ 2017ರಲ್ಲಿ ನೀಡಲಾಗಿದೆ. ಆಗಸ್ಟ್ 2019ರ ಕೊನೆಯವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು.

- ಒಟ್ಟಾರೆ ಪ್ರಗತಿ: ಶೇಕಡ 57.69ರಷ್ಟು
- ಪೈಲ್/ಪೈಲ್ ಕ್ಯಾಪ್ – ಶೇ.99ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.89ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.60ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.45ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–2ಎ ವಿಸ್ತರಣೆ: ನಾಯಂಡಹಳ್ಳಿ ನಿಲ್ದಾಣದಿಂದ ಪಟ್ಟಣಗೆರೆ ನಿಲ್ದಾಣದವರೆಗೆ

ನಾಯಂಡಹಳ್ಳಿ ನಿಲ್ದಾಣದಿಂದ ಪಟ್ಟಣಗೆರೆ ನಿಲ್ದಾಣದವರೆಗೆ 3.94 ಕಿ.ಮೀ. ದೂರಕ್ಕೆ ನಾಲ್ಕು ಎತ್ತರಿಸಿದ ನಿಲ್ದಾಣಗಳು ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್ (ವಯಾಡಕ್ಟ್) ನಿರ್ಮಾಣಕ್ಕೆ ಗುತ್ತಿಗೆಯನ್ನು ಮೆ॥ ಐಎಲ್ ಅಂಡ್ ಎಫ್‌ಎಸ್ ಇಂಜಿನಿಯರಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಕಂಪನಿ ಲಿ.ಗೆ ನೀಡಲಾಗಿದೆ. ಏಪ್ರಿಲ್ 2015ರಲ್ಲಿ ಇವರಿಗೆ ಟೆಂಡರ್ ನೀಡಲಾಗಿದೆ. ಮಾರ್ಚ್ 2019ರ ಕೊನೆಯವರೆಗೆ ಆಗಿರುವ ಪ್ರಗತಿ ಈ ಕೆಳಕಂಡಂತಿರುವುದು.

- ಒಟ್ಟಾರೆ ಪ್ರಗತಿ: ಶೇ. 91.50ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.100ರಷ್ಟು ಪೂರ್ಣಗೊಂಡಿದೆ.



- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.100ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.100ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.86ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–2ಬಿ ವಿಸ್ತರಣೆ: ಪಟ್ಟಣಗೆರೆ ನಿಲ್ದಾಣದಿಂದ ಕೆಂಗೇರಿ ನಿಲ್ದಾಣದವರೆಗೆ

ಪಟ್ಟಣಗೆರೆ ನಿಲ್ದಾಣದಿಂದ ಚಳ್ಳಘಟ್ಟ ಡಿಪೋ ಪ್ರಾರಂಭದವರೆಗೆ 4.86 ಕಿ.ಮೀ. ದೂರಕ್ಕೆ ಎರಡು ಎತ್ತರಿಸಿದ ನಿಲ್ದಾಣಗಳು ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್ (ವಯಾಡಕ್ಟ್) ನಿರ್ಮಾಣಕ್ಕೆ ಗುತ್ತಿಗೆಯನ್ನು ಮೆ॥ ಸೋಮಾ ಎಂಟರ್‌ಪ್ರೈಸ್ ಲಿ. ಕಂಪನಿಗೆ ನೀಡಲಾಗಿದೆ. ಇವರಿಗೆ ಟೆಂಡರನ್ನು ಮಾರ್ಚ್ 2016ರಲ್ಲಿ ನೀಡಲಾಗಿದೆ. ಮಾರ್ಚ್ 2019ರ ಕೊನೆಯವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ.76.46ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.95ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.83ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.64ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.68ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–3ಸಿ ವಿಸ್ತರಣೆ: ನಾಗಸಂದ್ರ ನಿಲ್ದಾಣದಿಂದ ಬಿಐಇಸಿ ನಿಲ್ದಾಣದವರೆಗೆ

ಹೆಸರಘಟ್ಟ ಕ್ರಾಸ್ ನಿಲ್ದಾಣದಿಂದ ಬಿಐಇಸಿ ನಿಲ್ದಾಣದವರೆಗೆ 3.03 ಕಿ.ಮೀ. ದೂರಕ್ಕೆ, ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳು ಜೊತೆಗೆ ಮೂರು (3) ಎತ್ತರಿಸಿದ ನಿಲ್ದಾಣಗಳು ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್‌ಗಳ (ವಯಾಡಕ್ಟ್ ಮತ್ತು ನಿಲ್ದಾಣಗಳು) ನಿರ್ಮಾಣಕ್ಕೆ ಗುತ್ತಿಗೆಯನ್ನು ಮೆ॥ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಲಾಗಿದೆ. ಇವರಿಗೆ ಟೆಂಡರನ್ನು ಏಪ್ರಿಲ್ 2017ರಲ್ಲಿ ನೀಡಲಾಗಿದೆ. ಆಗಸ್ಟ್ 2019ರ ಕೊನೆಯವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ.40.44ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.80ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.79ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.51ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.21ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–4ಬಿ ವಿಸ್ತರಣೆ: ಯಲಚೇನಹಳ್ಳಿ ನಿಲ್ದಾಣದಿಂದ ಅಂಜನಾಪುರ ನಿಲ್ದಾಣದವರೆಗೆ

ಪುಟ್ಟೇನಹಳ್ಳಿ ಕ್ರಾಸ್ ನಿಲ್ದಾಣದ ಕೊನೆಯಿಂದ ಅಂಜನಾಪುರ ಟೌನ್‌ಶಿಪ್ ನಿಲ್ದಾಣದವರೆಗೆ 6.52 ಕಿ.ಮೀ. ದೂರಕ್ಕೆ ಮತ್ತು ಡಿಪೋ ಮಾರ್ಗಕ್ಕೆ ಮುಂದುವರಿದ ವಯಾಡಕ್ಟ್‌ಗೆ, ಐದು ಎತ್ತರಿಸಿದ ನಿಲ್ದಾಣಗಳೊಡನೆ ಎತ್ತರಿಸಿದ ಸ್ಟ್ರಕ್ಚರ್‌ಗಳ ನಿರ್ಮಾಣದ ಗುತ್ತಿಗೆಯನ್ನು ಮೆ॥ ಎನ್‌ಸಿಸಿ ಲಿ, ಕಂಪನಿಗೆ ನೀಡಿದೆ. ಜನವರಿ 2016ರಲ್ಲಿ ಟೆಂಡರ್ ಅನ್ನು ಇವರಿಗೆ ನೀಡಲಾಗಿತ್ತು. ಆಗಸ್ಟ್ 2019ರ ಕೊನೆಯವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ.83.54ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.96ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.91ರಷ್ಟು ಪೂರ್ಣಗೊಂಡಿದೆ.



- ಸೆಗ್‌ಮೆಂಟ್ ಸ್ಥಾಪನೆ – ಶೇ.87ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.80ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–5 ಹೊಸ ಮಾರ್ಗ

ರೀಚ್–5 ಅನ್ನು ಹೊಸರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರ ನಿಲ್ದಾಣದವರೆಗೆ, ಹೊಸರಸ್ತೆ ನಿಲ್ದಾಣದಿಂದ ಎಚ್‌ಎಸ್‌ಆರ್ ಲೇಔಟ್ ನಿಲ್ದಾಣದವರೆಗೆ ಮತ್ತು ಎಚ್‌ಎಸ್‌ಆರ್ ಲೇಔಟ್ ನಿಲ್ದಾಣದಿಂದ ಆರ್.ವಿ. ರಸ್ತೆ ನಿಲ್ದಾಣದವರೆಗೆ ಮೂರು (3) ಪ್ಯಾಕೇಜ್‌ಗಳನ್ನಾಗಿ ವಿಭಾಗಿಸಲಾಗಿದೆ.

ರೀಚ್ 5 ಪ್ಯಾಕೇಜ್ 1

ಬೊಮ್ಮಸಂದ್ರದಿಂದ ಹೊಸ ರಸ್ತೆ ನಿಲ್ದಾಣದವರೆಗೆ (ಇದನ್ನು ಹೊರತುಪಡಿಸಿ) 6.41 ಕಿ.ಮೀ. ದೂರಕ್ಕೆ, ಹೆಬ್ಬಗೋಡಿ ಡಿಪೋಗೆ ಡಿಪೋ ಪ್ರವೇಶ ಮಾರ್ಗ, ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳು ಜೊತೆಗೆ ಐದು ಎತ್ತರಿಸಿದ ನಿಲ್ದಾಣಗಳೂ ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್‌ಗಳ (ವಯಾಡಕ್ಟ್ ಮತ್ತು ನಿಲ್ದಾಣಗಳು) ನಿರ್ಮಾಣಕ್ಕಾಗಿ ಗುತ್ತಿಗೆಯನ್ನು ಮೆ॥ ಐಟಿಡಿ ಸೆಮ್ ಇಂಡಿಯಾ ಜೆವಿ ಕಂಪನಿಗೆ ನೀಡಲಾಗಿದ್ದು, ಇವರಿಗೆ ಜೂನ್ 2017ರಲ್ಲಿ ಟೆಂಡರ್ ನೀಡಲಾಗಿದೆ. ಆಗಸ್ಟ್ 2019ರವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ.50.91 ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.91ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.83ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.40ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.33ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–5 ಪ್ಯಾಕೇಜ್–2

ಹೊಸ ರಸ್ತೆ ನಿಲ್ದಾಣದಿಂದ (ಇದೂ ಸೇರಿದಂತೆ) ಎಚ್‌ಎಸ್‌ಆರ್ ಲೇಔಟ್ ನಿಲ್ದಾಣದವರೆಗೆ 6.38 ಕಿ.ಮೀ. ದೂರಕ್ಕೆ ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳು ಜೊತೆಗೆ ಎತ್ತರಿಸಿದ ನಿಲ್ದಾಣಗಳು ಸೇರಿದಂತೆ ಎತ್ತರಿಸಿದ ಸ್ಟ್ರಕ್ಚರ್‌ಗಳ (ವಯಾಡಕ್ಟ್ ಮತ್ತು ನಿಲ್ದಾಣಗಳು) ನಿರ್ಮಾಣಕ್ಕೆ ಗುತ್ತಿಗೆಯನ್ನು ಮೆ॥ ಐಡಿಟಿ ಸೆಮ್‌ಇಂಡಿಯಾ ಜೆವಿ ಕಂಪನಿಗೆ ನೀಡಲಾಗಿದೆ. ಇವರಿಗೆ ಜೂನ್ 2017ರಲ್ಲಿ ಟೆಂಡರ್ ನೀಡಲಾಗಿದ್ದು, ಆಗಸ್ಟ್ 2019ರವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ. 56.38ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.99ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.96ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.55ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.28ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–5 ಪ್ಯಾಕೇಜ್–3

ಎಚ್‌ಎಸ್‌ಆರ್ ಲೇಔಟ್ ನಿಲ್ದಾಣ (ಇದು ಹೊರತಾಗಿ)ದಿಂದ ಆರ್‌ವಿ ರಸ್ತೆ ನಿಲ್ದಾಣದ (ಇದೂ ಸೇರಿ) ವರೆಗೆ ಹಾಗೂ ಮಾರ್ಗ ಕೊನೆಗೊಳ್ಳುವವರೆಗೆ 6.340 ಕಿ.ಮೀ. ದೂರಕ್ಕೆ ರಸ್ತೆ ಅಗಲೀಕರಣ ಮತ್ತು ಸಂಬಂಧಪಟ್ಟ ಕೆಲಸಗಳು ಜೊತೆಗೆ ಐದು (5) ಎತ್ತರಿಸಿದ ನಿಲ್ದಾಣಗಳು ಒಳಗೊಂಡಂತೆ ಎತ್ತರಿಸಿದ ಸ್ಟ್ರಕ್ಚರ್‌ಗಳ (ಮೆಟ್ರೋ ವಯಾಡಕ್ಟ್, ನಿಲ್ದಾಣಗಳು ಮತ್ತು ರಸ್ತೆ ಹಾಗೂ ರೈಲು ಮೇಲುರಸ್ತೆ



ಸೇತುವೆ) ನಿರ್ಮಾಣಕ್ಕಾಗಿ ಮೆ॥ ಎಚ್‌ಸಿಸಿ–ಯುಆರ್‌ಸಿಸಿ (ಜೆವಿ) ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಇವರಿಗೆ ಜೂನ್ 2017ರಲ್ಲಿ ಟೆಂಡರ್ ನೀಡಲಾಗಿದ್ದು, ಆಗಸ್ಟ್ 2019ರವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು:

- ಒಟ್ಟಾರೆ ಪ್ರಗತಿ: ಶೇ. 26.38ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.68ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.28ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.10ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.11ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–6 ಎತ್ತರಿಸಿದ ಮಾರ್ಗ: ಗೊಟ್ಟಿಗೆರೆಯಿಂದ ಸ್ವಾಗತ್ ರಸ್ತೆ ಕ್ರಾಸ್‌ವರೆಗೆ

ಗೊಟ್ಟಿಗೆರೆಯಿಂದ ಸ್ವಾಗತ್ ರಸ್ತೆ ಕ್ರಾಸ್‌ವರೆಗೆ 7.05 ಕಿ.ಮೀ. ಉದ್ದಕ್ಕೆ ಐದು (5) ನಿಲ್ದಾಣಗಳು ಒಳಗೊಂಡಂತೆ ಎತ್ತರಿಸಿದ ಮಾರ್ಗ ನಿರ್ಮಾಣಕ್ಕೆ ಮೆ॥ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಈ ಕಂಪನಿಗೆ ಜೂನ್ 2017ರಲ್ಲಿ ಟೆಂಡರ್ ನೀಡಲಾಗಿದ್ದು, ಆಗಸ್ಟ್ 2019ರ ಕೊನೆಯವರೆಗೆ ಆಗಿರುವ ಪ್ರಗತಿಯು ಈ ಕೆಳಕಂಡಂತಿರುವುದು.

- ಒಟ್ಟಾರೆ ಪ್ರಗತಿ: ಶೇ. 17.77ರಷ್ಟು.
- ಪೈಲ್/ಪೈಲ್ ಕ್ಯಾಪ್ – ಶೇ.46ರಷ್ಟು ಪೂರ್ಣಗೊಂಡಿದೆ.
- ಪಿಆರ್ ಅಂಡ್ ಪಿಆರ್ ಕ್ಯಾಪ್ – ಶೇ.32ರಷ್ಟು ಪೂರ್ಣಗೊಂಡಿದೆ.
- ಸೆಗ್‌ಮೆಂಟ್ ಸ್ಥಾಪನೆ – ಶೇ.9ರಷ್ಟು ಪೂರ್ಣಗೊಂಡಿದೆ.
- ನಿಲ್ದಾಣಗಳು – ಶೇ.11ರಷ್ಟು ಸಿವಿಲ್ ಕೆಲಸಗಳು ಪೂರ್ಣಗೊಂಡಿವೆ.

ರೀಚ್–6 ನೆಲಮಾಳಿಗೆ ಮಾರ್ಗ: ಸ್ವಾಗತ್ ರಸ್ತೆ ಕ್ರಾಸ್‌ನಿಂದ ನಾಗವಾರದ ವರೆಗೆ

ಸ್ವಾಗತ್ ರಸ್ತೆ ಕ್ರಾಸ್‌ನಿಂದ ನಾಗವಾರದವರೆಗಿನ ಮಾರ್ಗ ನೆಲಮಾಳಿಗೆ ವಿಭಾಗವಾಗಿದ್ದು, ಇದು 14 ಕಿ.ಮೀ.ಗಲ ಒಟ್ಟಾರೆ ಉದ್ದವನ್ನು ಒಳಗೊಂಡಿರುವುದು. ಈ ಇಡೀ ನೆಲಮಾಳಿಗೆ ವಿಭಾಗವನ್ನು, ವೆಚ್ಚಗಳು ಮತ್ತು ಕೆಲಸಗಳನ್ನು ಸಕಾಲಿಕವಾಗಿ ಕಾರ್ಯಗತಗೊಳಿಸುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಸಮಾನವಾಗಿ ಹಂಚಿಕೆ ಮಾಡುವ ದೃಷ್ಟಿಯಿಂದ ನಾಲ್ಕು (4) ಪ್ಯಾಕೇಜುಗಳನ್ನಾಗಿ ವಿಭಾಗಿಸಲಾಗಿದೆ.

- **ಯುಜಿ ಪ್ಯಾಕೇಜ್–1:** ಡೈರಿ ವೃತ್ತದಿಂದ ವೆಲ್ಲಾರ ಜಂಕ್ಷನ್‌ವರೆಗೆ, ಸಿವಿಲ್ ಟೆಂಡರುಗಳು ಪ್ರಗತಿಯಲ್ಲಿವೆ.
- **ಯುಜಿ ಪ್ಯಾಕೇಜ್–2:** ವೆಲ್ಲಾರ್ ಜಂಕ್ಷನ್‌ನಿಂದ ಶಿವಾಜಿನಗರದ ವರೆಗೆ, ಸಿವಿಲ್ ಕೆಲಸದ ಆದೇಶ ನೀಡಲಾಗಿದೆ ಹಾಗೂ ಕೆಲಸವನ್ನು ಪ್ರಾರಂಭಿಸಲಾಗಿದೆ. ಈ ಕೆಲಸವನ್ನು ದಿನಾಂಕ: 08.03.2019ರಂದು ಮೆ॥ ಎಲ್ ಅಂಡ್ ಟಿ ಲಿ. ಕಂಪನಿಗೆ ವಹಿಸಲಾಗಿದೆ.
    - ಒಟ್ಟಾರೆ ಪ್ರಗತಿ: ಶೇ. 3ರಷ್ಟು.
- **ಯುಜಿ ಪ್ಯಾಕೇಜ್–3:** ಶಿವಾಜಿನಗರದಿಂದ ಟ್ಯಾನರಿ ರಸ್ತೆವರೆಗೆ, ಸಿವಿಲ್ ಕೆಲಸದ ಆದೇಶವನ್ನು ನೀಡಲಾಗಿದ್ದು, ಕೆಲಸವು ಪ್ರಾರಂಭವಾಗಿದೆ. ಈ ಕೆಲಸವನ್ನು ದಿನಾಂಕ: 08.03.2019ರಂದು ಮೆ॥ ಎಲ್ ಅಂಡ್ ಟಿ ಲಿ. ಕಂಪನಿಗೆ ವಹಿಸಲಾಗಿದೆ.
    - ಒಟ್ಟಾರೆ ಪ್ರಗತಿ: ಶೇ. 2ರಷ್ಟು.
- **ಯುಜಿ ಪ್ಯಾಕೇಜ್–4:** ಟ್ಯಾನರಿ ರಸ್ತೆಯಿಂದ ನಾಗವಾರದವರೆಗೆ, ಸಿವಿಲ್ ಟೆಂಡರುಗಳು ಪ್ರಗತಿಯಲ್ಲಿವೆ.



ಬಿಎಂಆರ್‌ಸಿ ಯೋಜನೆಯ ಹಂತ–2ಕ್ಕೆ 2018–19ರ ಸಾಲಿನಲ್ಲಿ ಪ್ರಮುಖ ಗುತ್ತಿಗೆಗಳನ್ನು ನೀಡಲಾಗಿದೆ.

<u>ಹಂತ–2ರ ಟ್ರ್ಯಾಕ್ ಕೆಲಸ</u>

"ಡಿಪೋಗಳಲ್ಲಿ ಬಲ್ಲಾಸ್ಟ್ ಟ್ರ್ಯಾಕ್‌ನ ಜೊತೆಗೆ ಎತ್ತರಿಸಿದ ವಯಾಡಕ್ಟ್ ವಿಭಾಗ ಮತ್ತು ನೆಲಮಾಳಿಗೆ ವಿಭಾಗದಲ್ಲಿ ಸ್ಟ್ಯಾಂಡರ್ಡ್ ಗೇಜ್‌ನ ಬಲ್ಲಾಸ್ಟ್ ರಹಿತ ಟ್ರ್ಯಾಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ಕಾರ್ಯಾಚರಣೆಗೊಳಿಸಲು" ಟೆಂಡರನ್ನು ಮೆ॥ ಟೆಕ್ಸ್‌ಮ್ಯಾಕೊ ರೈಲ್ ಅಂಡ್ ಇಂಜಿನಿಯರಿಂಗ್ ಲಿಮಿಟೆಡ್‌ಗೆ ದಿನಾಂಕ: 31.07.2018ರಂದು ನೀಡಲಾಗಿದೆ ಮತ್ತು ರೂ.571.76 ಕೋಟಿ ಗುತ್ತಿಗೆ ಮೌಲ್ಯಕ್ಕೆ ದಿನಾಂಕ: 24.09.2018ರಂದು ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ರೀಚ್–6 (ನೆಲಮಾಲಿಗೆ ಮಾರ್ಗ) ಸ್ವಾಗತ್ ರಸ್ತೆ ಕ್ರಾಸ್‌ನಿಂದ ನಾಗವಾರದವರೆಗೆ

ದಕ್ಷಿಣದ ರ್‍ಯಾಂಪ್‌ನಿಂದ (ಸ್ವಾಗತ್ ರಸ್ತೆ ಕ್ರಾಸ್) ನಾಗವಾರದ ವರೆಗೆ ಸಂಪೂರ್ಣ ನೆಲಮಾಳಿಗೆ ವಿಭಾಗವು 13.892 ಕಿ.ಮೀ. ಉದ್ದ ಮತ್ತು 12 ನೆಲಮಾಳಿಗೆ ನಿಲ್ದಾಣಗಳನ್ನು ಒಳಗೊಂಡಿರುವುದು. ಕೆಲಸಗಳ ವೆಚ್ಚಗಳು ಮತ್ತು ಕೆಲಸಗಳನ್ನು ಸಕಾಲಿಕವಾಗಿ ಕಾರ್ಯಗತಗೊಳಿಸುವ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ಕೆಲಸವನ್ನು ಸಮಾನವಾಗಿ ಹಂಚಿಕೆ ಮಾಡುವ ದೃಷ್ಟಿಯಿಂದ ಈ ವಿಭಾಗವನ್ನು ನಾಲ್ಕು (4) ಪ್ಯಾಕೇಜುಗಳನ್ನಾಗಿ ವಿಭಾಗಿಸಲಾಗಿದೆ. ಬಿಡ್‌ದಾರರು ಅತಿ ಹೆಚ್ಚು ದರಗಳನ್ನು ನಮೂದಿಸಿದ್ದರಿಂದ ಈ ಎಲ್ಲಾ ನಾಲ್ಕು ಪ್ಯಾಕೇಜುಗಳ ಪ್ರಾರಂಭಿಕ ಟೆಂಡರ್ ಸಲ್ಲಿಸಿದ್ದನ್ನು ತಿರಸ್ಕರಿಸಲಾಗಿದೆ. ತದನಂತರ ಪ್ಯಾಕೇಜ್–2 ಮತ್ತು ಪ್ಯಾಕೇಜ್–3ಕ್ಕೆ ಪ್ರಾರಂಭಿಕವಾಗಿ ಮರು ಟೆಂಡರ್ ಕರೆಯಲಾಗಿದ್ದು, ಸ್ವೀಕರಿಸಿದ ಸ್ಪರ್ಧಾತ್ಮಕ ದರಗಳ ಆಧಾರದ ಮೇಲೆ ಅತಿ ಕಡಿಮೆ ದರಗಳನ್ನು ನಮೂದಿಸಿದ್ದ ಬಿಡ್‌ದಾರರಿಗೆ ಈ ಕೆಲಸವನ್ನು ಫೆಬ್ರುವರಿ 2019ರಲ್ಲಿ ನೀಡಲಾಗಿದೆ. ಇದಾದ ನಂತರ ಪ್ಯಾಕೇಜ್–1 ಮತ್ತು ಪ್ಯಾಕೇಜ್–4ಕ್ಕೆ ಟೆಂಡರ್ ಪ್ರಕಟಣೆ ಪ್ರಕಟಿಸಲಾಗಿದ್ದು, ಇದನ್ನು ಮೇ 2019ರಲ್ಲಿ ತೆರೆದಿದ್ದು ಅವುಗಳ ತಾಂತ್ರಿಕ ಮೌಲ್ಯಮಾಪನ ಮಾಡಲಾಗುತ್ತಿದೆ. ಟೆಂಡರ್ ನೀಡಿರುವ ಎರಡು ನೆಲಮಾಳಿಗೆ ಪ್ಯಾಕೇಜ್‌ಗಳ ವಿವರಗಳು ಈ ಕೆಳಕಂಡಂತಿರುವವು:

i) **ಪ್ಯಾಕೇಜ್–2:** ವೆಲ್ಲಾರ ಜಂಕ್ಷನ್ ನಿಲ್ದಾಣ (ಸೇರಿದಂತೆ) ದಿಂದ ಶಿವಾಜಿನಗರ (ಸೇರಿದಂತೆ) ನಿಲ್ದಾಣದವರೆಗೆ 2.762 ಕಿ.ಮೀ. (ಅಂದಾಜು) ಉದ್ದಕ್ಕೆ ನೆಲಮಾಳಿಗೆ ಸ್ಟ್ರಕ್ಚರ್‌ಗಳು (ಸುರಂಗ ಮತ್ತು ನಿಲ್ದಾಣಗಳು) ಮತ್ತು 3 ಸಂಖ್ಯೆ ನೆಲಮಾಳಿಗೆ ಮೆಟ್ರೋ ನಿಲ್ದಾಣಗಳ ವಿನ್ಯಾಸ ಮತ್ತು ನಿರ್ಮಾಣಕ್ಕೆ ಟೆಂಡರನ್ನು ಮೆ॥ ಲಾರ್ಸೆನ್ ಅಂಡ್ ಟೂಬ್ರೊ ಲಿ.ಗೆ ದಿನಾಂಕ: 28.02.2019ರಂದು ನೀಡಲಾಗಿದೆ. ಮತ್ತು ರೂ.1329.14 ಕೋಟಿ ಗುತ್ತಿಗೆ ಮೌಲ್ಯಕ್ಕೆ ದಿನಾಂಕ: 08.03.2019ರಂದು ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ii) **ಪ್ಯಾಕೇಜ್–3:** "ಶಿವಾಜಿನಗರ ನಿಲ್ದಾಣ (ಹೊರತಾಗಿ)ದಿಂದ ಟ್ಯಾನರ್ ರಸ್ತೆ ನಿಲ್ದಾಣ (ಹೊರತಾಗಿ) ವರೆಗೆ 2.884 ಕಿ.ಮೀ. (ಅಂದಾಜು) ಉದ್ದಕ್ಕೆ ಸಂಬಂಧಪಟ್ಟ ಕೆಲಸಗಳು ಮತ್ತು ಎರಡು ಸಂಖ್ಯೆಗಳ ಯುಜಿ ಮೆಟ್ರೋ ನಿಲ್ದಾಣಗಳು ಸೇರಿದಂತೆ ನೆಲಮಾಳಿಗೆ ಸ್ಟ್ರಕ್ಚರ್‌ಗಳ (ಸುರಂಗಗಳು ಮತ್ತು ನಿಲ್ದಾಣಗಳು) ವಿನ್ಯಾಸ ಮತ್ತು ನಿರ್ಮಾಣಕ್ಕೆ" ಟೆಂಡರನ್ನು ಮೆ॥ ಲಾರ್ಸೆನ್ ಅಂಡ್ ಟೂಬ್ರೋ ಲಿ.ಗೆ ದಿನಾಂಕ: 28.02.2019ರಂದು ನೀಡಿದೆ. ಮತ್ತು ರೂ.1299.24 ಕೋಟಿ ಗುತ್ತಿಗೆ ಮೌಲ್ಯಕ್ಕೆ ದಿನಾಂಕ: 08.03.2019ರಂದು ಗುತ್ತಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಹೆಬ್ಬಗೋಡಿ ಡಿಪೋ ನಿರ್ಮಾಣ

ಬೆಂಗಳೂರು ಮೆಟ್ರೋ ರೈಲ್ ಯೋಜನೆಯ ರೀಚ್ –5 ಸಾಲಿನಲ್ಲಿ ಹೆಬ್ಬಗೋಡಿನಲ್ಲಿರುವ ಡಿಪೋ ಪ್ರದೇಶದಲ್ಲಿ ಮೆಟ್ರೋ ರೈಲ್ ಡಿಪೋ ರಚನೆಗಳು, ಸೈಟ್ ಅಭಿವೃದ್ಧಿ ಕಾರ್ಯಗಳು, ಆಂತರಿಕ ರಸ್ತೆಗಳು ಮತ್ತು ಒಳಚರಂಡಿ ಕಾಮಗಾರಿಗಳ ನಿರ್ಮಾಣ, ಹಂತ –2 ಅನ್ನು ಮೆ. ಪರ್ಣಿಕಾ ಕರ್ಮರ್ಷಿಯಲ್ ಮತ್ತು ಎಸ್ಟೇಟ್ಸ್ ಪೈವೇಟ್ ಲಿಮಿಟೆಡ್ ಗುತ್ತಿಗೆ ಒಪ್ಪಂದವನ್ನು 12.09.2019 ರಂದು ರೂ.170.42 ಕೋಟಿಗಳ ಗುತ್ತಿಗೆ ಮೌಲ್ಯಕ್ಕೆ ಕಾರ್ಯಗತಗೊಳಿಲಾಯಿತು.



31ನೇ ಮಾರ್ಚ್ 2019ರಂದು ಇದ್ದಂತೆ ಹಂತ–2ರ ಹಣಕಾಸಿನ ಪ್ರಗತಿ

31ನೇ ಮಾರ್ಚ್ 2019ರ ಕೊನೆಯಲ್ಲಿದ್ದಂತೆ ಹಂತ–2ರ ಕಾಮಗಾರಿಗಳ ಹಣಕಾಸಿನ ಪ್ರಗತಿಯು (ರೂ.30,695.12 ಕೋಟಿಗಳ ಪೈಕಿ ರೂ. 8,823.54 ಕೋಟಿ ವೆಚ್ಚವಾಗಿದೆ). ಇದಕ್ಕೆ ಸಂಬಂಧಿಸಿದ ವಿವರಗಳು ಈ ಕೆಳಕಂಡಂತಿರುವುದು:

ಹಂತ–2ರ 31.03.2019ರ ವರೆಗಿನ ಅವಧಿಯ ಸಂಚಿತ ಆರ್ಥಿಕ ಪ್ರಗತಿ

(ರೂ. ಕೋಟಿಗಳಲ್ಲಿ)

ಹಣ ಬಿಡುಗಡೆ ವಿವರ	ಕರ್ನಾಟಕ ಸರ್ಕಾರ	ಭಾರತ ಸರ್ಕಾರ	ಸೀನಿಯರ್ ಅವಧಿ ಸಾಲ	ಒಟ್ಟು
ಈಕ್ವಿಟಿ	998.23	1510.63	–	**2508.86**
ಅಧೀನ ಸಾಲ	6205.83	1063.17	–	**7269.00**
ಎಎಫ್‌ಡಿ (ಭಾರತದ ಸರ್ಕಾರದ ಮೂಲಕ ಪಿಟಿಎ)	–	–	608.15	**608.15**
ಬಿಡುಗಡೆಯಾದ ಒಟ್ಟು ಹಣ	**7,204.06**	**2573.80**	**608.15**	**10386.01**
ಒಟ್ಟು ಹಣ ಪಾವತಿಗಳು				**8823.54**
ಮಂಜೂರಾದ ವೆಚ್ಚದ ಶೇಕಡದಂತೆ ಒಟ್ಟು ಹಣ ಸ್ವೀಕರಿಸಲಾಗಿದೆ (8823.54 / 10386.01)				**84.95%**

ಹಂತ–2ರ 2018–19ರ ಸಾಲಿನ ಆರ್ಥಿಕ ಪ್ರಗತಿ

(ರೂ. ಕೋಟಿಗಳಲ್ಲಿ)

2018–19ರ ಅವಧಿಯಲ್ಲಿ ಬಿಡುಗಡೆಯಾದ ಹಣ	ಕರ್ನಾಟಕ ಸರ್ಕಾರ	ಭಾರತ ಸರ್ಕಾರ	ಸೀನಿಯರ್ ಅವಧಿ ಸಾಲ	ಒಟ್ಟು
ಈಕ್ವಿಟಿ	300.00	582.00	–	**882.00**
ಅಧೀನ ಸಾಲ	2296.96	405.00	–	**2701.96**
ಎಎಫ್‌ಡಿ (ಭಾರತ ಸರ್ಕಾರದ ಮೂಲಕ ಎಎಫ್‌ಡಿ)	–	–	–	–
ಬಿಡುಗಡೆಯಾದ ಒಟ್ಟು ಹಣ	**2596.96**	**987.00**	–	**3583.96**
ಒಟ್ಟು ಪಾವತಿಗಳು				**4107.85**

ಹಂತ–2ರ ಹಣಕಾಸು ವ್ಯವಹಾರಗಳ ಸಮಾಪ್ತ

ಹಂತ–2ರ ಯೋಜನಾ ವೆಚ್ಚ ರೂ.26,405.14 ಕೋಟಿ. ದಿನಾಂಕ: 31.03.2019ರಂದಿದ್ದಂತೆ ಪರಿಷ್ಕೃತ ಯೋಜನೆ ವೆಚ್ಚ ರೂ.30,695.12 ಕೋಟಿಯಾಗಿದೆ. ಜಮೀನಿನ ಬೆಲೆ ಹೆಚ್ಚಳದಿಂದಾಗಿ ಯೋಜನಾ ವೆಚ್ಚ ಹೆಚ್ಚಾಗಿದೆ. ಜಮೀನಿನ ಬೆಲೆಯನ್ನು ಕರ್ನಾಟಕ ಸರ್ಕಾರ ಸೆಪ್ಟೆಂಬರ್ 2017ರಲ್ಲಿ ಹೆಚ್ಚಳ ಮಾಡಲು ಅನುಮೋದನೆ ನೀಡಿದೆ. ಯೋಜನೆಯ ಹಂತ–2ರ ಅನುಷ್ಠಾನದ ಮಧ್ಯಂತರದಲ್ಲಿ ನಿಮ್ಮ ಕಂಪನಿ ಇದೆ. ಎರಡು ನೆಲಮಾಳಿಗೆ ಪ್ಯಾಕೇಜುಗಳನ್ನು ಹೊರತುಪಡಿಸಿ ಉಳಿದ ನಿರ್ಮಾಣ ಕಾರ್ಯಕ್ಕೆ ಬಹುಪಾಲು ಸಿವಿಲ್ ಗುತ್ತಿಗೆಗಳನ್ನು ಈಗಾಗಲೇ ನೀಡಲಾಗಿದೆ. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಈ ಯೋಜನೆಗೆ ಮಂಜೂರಾಗಿರುವ ಹಣವನ್ನು ಬಿಡುಗಡೆ ಮಾಡಿವೆ. ಬಿಎಂಆರ್‌ಸಿ ಯೋಜನೆಯ ಹಂತ–2ಕ್ಕೆ ಹಣ ಒದಗಿಸಲು ಸೆಪ್ಟೆಂಬರ್ 2015ರಲ್ಲಿ ಯೂರೊ 200 ಮಿಲಿಯನ್ ಸಾವರಿನ್ ಸಾಲಕ್ಕೆ ಏಜೆನ್ಸ್ ಫ್ರಾಂಕೈಸ್ ಡೆವಲಪ್‌ಮೆಂಟ್ (ಎಎಫ್‌ಡಿ) ಮತ್ತು ಭಾರತ ಸರ್ಕಾರ ಸಹಿ ಮಾಡಿವೆ. ಮುಂದುವರೆದು, ಯುರೋಪಿಯನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (ಇಐಬಿ) ಮತ್ತು ಭಾರತ ಸರ್ಕಾರ ಯೂರೊ 300 ಮಿಲಿಯನ್ ಮತ್ತು 200 ಮಿಲಿಯನ್ ಸಾಲಕ್ಕೆ ಅನುಕ್ರಮವಾಗಿ ಅಕ್ಟೋಬರ್ 2017 ಮತ್ತು ಸೆಪ್ಟೆಂಬರ್ 2018ರ ಅವಧಿಯಲ್ಲಿ ಸಹಿ ಮಾಡಿವೆ.



ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (ಎಐಐಬಿ) ಮತ್ತು ಭಾರತ ಸರ್ಕಾರವು ಯುಎಸ್‌ಡಿ 335 ಮಿಲಿಯನ್ ಸಾವರಿನ್ ಸಾಲಕ್ಕೆ 4ನೇ ಜೂನ್ 2019ರಂದು ಸಹಿ ಮಾಡಿವೆ. ಇಐಬಿ ಮತ್ತು ಎಐಐಬಿ ಇವರು ಇಐಬಿ ಜೊತೆ ಸಹ–ಹಣಕಾಸು ಪೂರೈಕೆದಾರರಾಗಿ ಹಂತ–2ರ ರೀಚ್–6ಕ್ಕೆ (ಹೊಸ ಮಾರ್ಗ) ಭಾಗಶಃ ಹಣ ಪೂರೈಕೆ ಮಾಡಿದ್ದಾರೆ. ಆಕರ್ಷಕ ಬಡ್ಡಿ ದರಗಳಲ್ಲಿ ಖಾಸಗಿಯವರಿಗೆ ನೀಡುವ ಮುಖೇನ ಭದ್ರತೆಯುಳ್ಳ, ಪರಿವರ್ತನೆಯಾಗದ ಸಾಲ ಪತ್ರಗಳ (ಡಿಬೆಂಚರ್) ನೂತನ ಶ್ರೇಣಿಗಳನ್ನು ಬಿಡುಗಡೆ ಮಾಡುವ ಮೂಲಕ ಸಾಲದ ಬಂಡವಾಳ ಪಡೆಯುವುದು ಸೇರಿದಂತೆ ಹಂತ–2 ಯೋಜನೆಗೆ ಹಣ ಒದಗಿಸಲು ಇನ್ನಿತರ ಹಣಕಾಸಿನ ಅವಕಾಶಗಳನ್ನು ಕಂಪನಿ ಪರಿಶೋಧಿಸುತ್ತಿದೆ. ಈ ವಿಚಾರವಾಗಿ ಹಣದ ಅಗತ್ಯತೆ ಆಧಾರದ ಮೇಲೆ ಅನ್ವಯವಾಗುವ ಎಲ್ಲಾ ಶಾಸನಬದ್ಧ ಕ್ರಮಾನುಸರಣೆ ಮಾಡಿದ ನಂತರ ಮತ್ತು ನಿಯಂತ್ರಕ ಅನುಮೋದನೆ ಪಡೆದ ನಂತರ ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಸದರಿ ಯೋಜನೆಯ (ಹಂತ–2) ರೀಚ್–5 ಮಾರ್ಗದ ಪಕ್ಕದಲ್ಲಿ ತಮ್ಮ ಕಂಪನಿಗಳನ್ನು ಹೊಂದಿರುವ ಇನ್‌ಫೋಸಿಸ್ ಇತ್ಯಾದಿ ಕೆಲವು ಕಾರ್ಪೊರೇಟ್ ಕಂಪನಿಗಳು ಪರಿಹಾರ ಪಡೆಯದೆ ಈ ಯೋಜನೆಗೆ ಉಚಿತವಾಗಿ ಜಮೀನು ನೀಡುವ ಮೂಲಕ ಕೈ ಜೋಡಿಸಲು ಮುಂದೆ ಬಂದಿರುವ ವಿಚಾರ ತಿಳಿಸಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ. ಇದಲ್ಲದೆ, ಈ ಯೋಜನೆಯ ಹಂತ–2ಎಗೆ ನವೀನ ಹಣ ಹೂಡಿಕೆ ತಂತ್ರೋಪಾಯದ ರೂಪದಲ್ಲಿ ಕೆಲವು ರಿಯಾಯಿತಿಗಳನ್ನು ಪಡೆದುಕೊಳ್ಳುವ ಮೇರೆಗೆ ಮೆಟ್ರೋ ನಿಲ್ದಾಣಗಳೂ ಸೇರಿದಂತೆ ಸದರಿ ಮಾರ್ಗದ ನಿರ್ಮಾಣಕ್ಕೆ ಹಣವನ್ನೂ ಸಹ ಈ ಕಾರ್ಪೊರೇಟ್ ಕಂಪನಿಗಳು ಒದಗಿಸಿವೆ. ಮೆಟ್ರೋ ಯೋಜನೆಯಲ್ಲಿ ಖಾಸಗಿಯವರು ಪಾಲ್ಗೊಳ್ಳಲು ನೂತನ ಮೆಟ್ರೋ ರೈಲು ನೀತಿ ಅಡಿಯಲ್ಲಿನ ಭಾರತ ಸರ್ಕಾರದ ಉಪಕ್ರಮಗಳಿಗೆ ಈ ವ್ಯವಸ್ಥೆಯಿಂದ ಮತ್ತಷ್ಟು ಉತ್ತೇಜನ ದೊರೆಯುತ್ತದೆ. ಇದರಿಂದಾಗಿ ಖಜಾನೆಯ ಹೊರೆ ಭಾಗಶಃ ಕಡಿಮೆಯಾಗುತ್ತದೆ. ಈ ಅತ್ಯಾಧುನಿಕ ಸೌಲಭ್ಯಗಳ ಬಳಕೆದಾರರಲ್ಲಿ ಮಾಲಿಕತ್ವದ ಭಾವನೆ ಉಂಟಾಗುತ್ತದೆ. ಕಂಪನಿಗಳ ಕಾಯ್ದೆ ಅನ್ವಯ ಕಡ್ಡಾಯವಾಗಿರುವ ತಮ್ಮ ಸಿಎಸ್‌ಆರ್ ಕಾರ್ಯಕ್ರಮದ ಅಡಿಲ್ಲಿ ಇಂಥ ಕಾರ್ಪೊರೇಟ್ ಕಂಪನಿಗಳಿಂದ ಕೊಡುಗೆಗಳ ನೀಡಿಕೆ/ಪಾಲ್ಗೊಳ್ಳುವಿಕೆಯನ್ನು ಸೇರ್ಪಡೆ ಮಾಡಿಕೊಳ್ಳುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಮೆಟ್ರೋ ರೈಲು ಯೋಜನೆಯ ಮುಂದಿನ ವಿಸ್ತರಣೆಗೆ ಇದು ಒಂದು ನಿಯಮವಾಗಿ ಮಾರ್ಪಡುತ್ತದೆ ಎಂಬುದಾಗಿಯೂ ಸರ್ಕಾರಕ್ಕೆ ತಿಳಿಸಲಾಗಿದೆ.

ಹಂತ–2ಕ್ಕೆ ಜಮೀನು ಸ್ವಾಧೀನದ ಸ್ಥಿತಿಗತಿ:

ನಿಮ್ಮ ಕಂಪನಿಯು ಎರಡು ವಿಸ್ತರಣೆ ಮಾರ್ಗಗಳು ಹಾಗೂ ಹೊಸ ಮಾರ್ಗಗಳ ಯೋಜನೆಯ ಹಂತ–2ಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ, 1966ರ ಉಪಬಂಧಗಳ ಅನ್ವಯ ಕೆಐಎಡಿಬಿ ಮೂಲಕ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಂಡಿದೆ. ಬಿಎಂಆರ್‌ಸಿ ಯೋಜನೆಯ ಹಂತ–2ಕ್ಕೆ ಒಟ್ಟು 126.46 ಹೆಕ್ಟೇರ್‌ಗಳ ಜಮೀನು ಬೇಕಾಗುತ್ತದೆ. ಇದರ ಪೈಕಿ 91.20 ಹೆಕ್ಟೇರ್ ಜಮೀನು ಖಾಸಗಿ ಜಮೀನಾದರೆ, 35.26 ಹೆಕ್ಟೇರ್ ಸರ್ಕಾರಿ ಜಮೀನು ಆಗಿದೆ. ಈ ಹಂತದ ಯೋಜನೆಗೆ ಜಮೀನಿನ ಸ್ವಾಧೀನ ಮತ್ತು ಪುನರ್ವಸತಿ ಕಲ್ಪಿಸಲು ಉಂಟಾಗುವ ವೆಚ್ಚಕ್ಕಾಗಿ ಒಟ್ಟು ರೂ.6293.00 ಕೋಟಿ ಹಣವನ್ನು ನಿಗದಿಪಡಿಸಲಾಗಿದೆ. ಇಷ್ಟೂ ಹಣವನ್ನು ಪೂರ್ಣವಾಗಿ ಕರ್ನಾಟಕ ಸರ್ಕಾರ ಭರಿಸಲಿರುವುದು. ಹಂತ–2ರ ಯೋಜನೆಗೆ ಬೇಕಾಗಿರುವ ಬಹುಪಾಲು ಜಮೀನು 5 ಡಿಪೋಗಳ ನಿರ್ಮಾಣಕ್ಕೆ ಬಳಕೆಯಾಗುವುದು. ಹೆಬ್ಬಗೋಡಿ ಡಿಪೋಗೆ 14.12 ಹೆಕ್ಟೇರ್ ಮತ್ತು ಕೊತ್ತನೂರು ಡಿಪೋಗೆ 12.40 ಹೆಕ್ಟೇರ್ ಜಮೀನು ಬೇಕಾಗಿದ್ದು, ಈ ಜಮೀನುಗಳ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಚಳ್ಳಘಟ್ಟ ಡಿಪೋಗೆ 17.75 ಹೆಕ್ಟೇರ್ ಮತ್ತು ಅಂಜನಾಪುರ ಡಿಪೋಗೆ 3.85 ಹೆಕ್ಟೇರ್‌ಗಳ ಜಮೀನು ಸ್ವಾಧೀನವು ಅಂತಿಮ ಹಂತದಲ್ಲಿದೆ. ಕಾಡುಗೋಡಿ ಡಿಪೋಗೆ 17.5 ಹೆಕ್ಟೇರ್‌ಗಳ ಅರಣ್ಯ ಜಮೀನು ಬೇಕಾಗಿದೆ. ಈ ಜಮೀನು ಪಡೆಯಲು ಸದರಿ ಜಮೀನುಗಳ ಪರಿವರ್ತನೆಗೆ ಜೀವಿ ಪರಿಸರ ಮತ್ತು ವಾತಾವರಣ ಬದಲಾವಣೆ ಸಚಿವಾಲಯವು ಹಂತ–1 ಅನುಮತಿ ನೀಡಿದೆ. ಇನ್ನಿತರೆ ಅನುಮತಿಗಳನ್ನು ಶೀಘ್ರದಲ್ಲೇ ಪಡೆಯಲಾಗುವುದು.

ಹಂತ–2ಎ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ (ಒಆರ್‌ಆರ್ ಮಾರ್ಗ)

ನಿಮ್ಮ ಕಂಪನಿಯು ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂ ವರೆಗೆ ಹೊರವರ್ತುಲ ರಸ್ತೆಯಲ್ಲಿ (ಒಆರ್‌ಆರ್) 17 ಕಿ.ಮೀ.ಗಳ ಉದ್ದಕ್ಕೆ ಪ್ರತ್ಯೇಕ ಮೆಟ್ರೋ ಮಾರ್ಗ ನಿರ್ಮಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಯೋಜನೆಯ ಪರಿಷ್ಕೃತ ವೆಚ್ಚ ರೂ.5994.90 ಕೋಟಿ. ಈ ಮಾರ್ಗವು ಹದಿಮೂರು (13) ಎತ್ತರಿಸಿದ ನಿಲ್ದಾಣಗಳನ್ನು ಹೊಂದಿರುವುದು ಈ ಯೋಜನೆಗೆ ನವೀನ ಸ್ವರೂಪದ ಹಣಕಾಸಿನ ಪೂರೈಕೆ ಕಾರ್ಯತಂತ್ರದ (ಮೆಟ್ರೋ ಯೋಜನೆ ಹಂತ–2ಎ) ಮೂಲಕ ಮತ್ತು ಬಹುಪಕ್ಷೀಯ/ದ್ವಿಪಕ್ಷೀಯ ಸಾಲ ನೀಡಿಕೆ ಏಜೆನ್ಸಿಗಳ ಮೂಲಕ ಹಣ ಒದಗಿಸುವಿಕೆ ಮತ್ತು 50:50 ಜೆವಿ ಕಂಪನಿಗಳಿಗೆ ಹೊಸ ಮೆಟ್ರೋ ರೈಲು ನೀತಿಯಲ್ಲಿ



ತಿಳಿಸಿರುವಂತೆ ಈಕ್ವಿಟಿ ರೂಪದಲ್ಲಿ ಯೋಜನೆಗೆ ಹಣ ಒದಗಿಸಲಾಗುವುದು. ಕಂಪನಿಗೆ ದೊಡ್ಡ ಮೊತ್ತದ ಹಣ ಪಾವತಿಸುವುದಕ್ಕೆ ಒಳಪಟ್ಟು, ಒಂದು ನಿರ್ದಿಷ್ಟ ಅವಧಿಗೆ ಅವರ ಕ್ಯಾಂಪಸ್‌ಗಳು/ಆವರಣಗಳು ಇತ್ಯಾದಿಗೆ ಸೇತುವೆಗಳು/ವಾಕ್‌ವೇ ಮೂಲಕ ಸಂಪರ್ಕ ವ್ಯವಸ್ಥೆ ಕಲ್ಪಿಸುವುದು, ನಿಲ್ದಾಣಗಳಿಗೆ ಅವರ ಹೆಸರಿಡುವ ಹಕ್ಕು, ಜಾಹೀರಾತು ಪ್ರಕಟಿಸುವ ಹಕ್ಕುಗಳು, ವಾಣಿಜ್ಯ ಚಿಲ್ಲರೆ ಮಾರಾಟ ಮಳಿಗೆಗಳ ಸ್ಥಳಾವಕಾಶದಂತಹ ಹಕ್ಕುಗಳು/ಅವಕಾಶಗಳನ್ನು ನೀಡುವ ಮೂಲಕ ನವೀನ ರೀತಿಯ ಹಣಕಾಸು ಒದಗಿಸುವಿಕೆ ವಿಧಾನಗಳ ಅಡಿಯಲ್ಲಿ ಹಣ ಸಂಗ್ರಹಣೆ ಮಾಡಲು ವಿವಿಧ ಕಾರ್ಪೊರೇಟ್ ಕಂಪನಿಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಇದರಿಂದ ನಿಲ್ದಾಣಗಳು/ಮಾರ್ಗದ ನಿರ್ಮಾಣದ ವೆಚ್ಚವನ್ನು ಭಾಗಶಃವಾಗಿ ಭರಿಸಲು ಕಂಪನಿಗೆ ನೆರವಾಗುವುದು. ನವೀನ ವಿಧಾನದಲ್ಲಿ ಹಣಕಾಸು ಒದಗಿಸುವ ಮೂಲಕ ಕಾರ್ಪೊರೇಟ್ ಕಂಪನಿಗಳು ಮೆಟ್ರೋ ಯೋಜನೆಯಲ್ಲಿ ಭಾಗವಹಿಸುವಂತಾಗಲು ಅನುವಾಗುವ ವಿಧಿ ವಿಧಾನಗಳಿಗೆ ರಾಜ್ಯ ಸರ್ಕಾರವು ತನ್ನ ಅನುಮೋದನೆ ನೀಡಿದೆ. ಸದರಿ ಯೋಜನೆಗೆ ಹೊಸ ಮೆಟ್ರೋ ರೈಲು ನೀತಿ 2017ರ ಅಡಿಯಲ್ಲಿ ಹಣ ಒದಗಿಸಲು ಭಾರತ ಸರ್ಕಾರದ ಅನುಮೋದನೆಗಾಗಿ ಕಂಪನಿ ಕೋರಿದೆ. ಈ ಕೋರಿಕೆ ಪರಿಗಣನೆಯಲ್ಲಿದೆ. ಈ ಮಧ್ಯೆ ಸದರಿ ಯೋಜನೆಗೆ ಭೂಸ್ವಾಧೀನ ಒಳಗೊಂಡಂತೆ ಯೋಜನೆ ಪೂರ್ವಭಾವಿ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

ಹಂತ–2ಎ (ಒಆರ್‌ಆರ್ ಲೈನ್)ಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ, ಇದಕ್ಕಾಗಿ ಭೂಮಿಯ ಒಟ್ಟು ಅವಶ್ಯಕತೆ 4 ಹೆಕ್ಟೇರ್ ಆಗಿದೆ. ಇದರಲ್ಲಿ 1.90 ಹೆಕ್ಟೇರ್ ಭೂಮಿ ಸರ್ಕಾರಿ ಜಮೀನು ಮತ್ತು 2.10 ಹೆಕ್ಟೇರ್ ಖಾಸಗಿ ಜಮೀನು. ಭೂಸ್ವಾಧೀನ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ ಮತ್ತು 2019ರ ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ.

ಹಂತ–2ಬಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ಸಂಪರ್ಕ

ನಿಮ್ಮ ಕಂಪನಿಯು ಕೆ.ಆರ್. ಪುರಂ ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಇಲ್ಲಿಯವರೆಗೆ ಹೆಬ್ಬಾಳದ ಮುಖೇನ ಮೆಟ್ರೋ ಯೋಜನೆಯ ಹಂತ–2 ಬಿ ಆಗಿ ಹೊರವರ್ತುಲ ರಸ್ತೆ ಮಾರ್ಗದ ವಿಸ್ತರಣೆಯಾಗಿ ವಿಮಾನ ನಿಲ್ದಾಣ ಮಾರ್ಗ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದೆ. ಸದರಿ ಪರಿಷ್ಕೃತ ಮಾರ್ಗದ ವ್ಯವಸ್ಥೆಯು ಈ ಮಾರ್ಗದ ಒಟ್ಟು ಉದ್ದವನ್ನು 29.062 ಕಿ.ಮೀ.ಯಿಂದ 38 ಕಿ.ಮೀ.ಗಳಿಗೆ ಹೆಚ್ಚು ಮಾಡುವುದು. ನಿಲ್ದಾಣಗಳ ಸಂಖ್ಯೆಯೂ ಸಹ 7ರಿಂದ 17ಕ್ಕೆ ಹೆಚ್ಚಳವಾಗುವುದು. ಈ ಮಾರ್ಗದ ಪರಿಷ್ಕೃತ ಯೋಜನಾ ವೆಚ್ಚ ರೂ.10,584.15 ಕೋಟಿ ಎಂದು ಅಂದಾಜು ಮಾಡಲಾಗಿದೆ. ಇದರನುಸಾರ ಕರ್ನಾಟಕ ಸರ್ಕಾರವು ಪರಿಷ್ಕೃತ ಯೋಜನೆಯ ಪ್ರಸ್ತಾವನೆಯನ್ನು ಅನುಮೋದಿಸಿದೆ. ಜೊತೆಗೆ ಪರಿಷ್ಕೃತ ಮಾರ್ಗ ಮತ್ತು ವೆಚ್ಚವನ್ನು ಹಾಗೂ 50:50 ಜೆವಿ ಕಂಪನಿಗಳಿಗೆ ನೂತನ ಮೆಟ್ರೋ ರೈಲು ನೀತಿಯಲ್ಲಿ ಪ್ರತಿಪಾದಿಸಿರುವಂತೆ ಈಕ್ವಿಟಿ ರೂಪದಲ್ಲಿ ಯೋಜನೆಗೆ ಹಣಕಾಸು ಒದಗಿಸುವಿಕೆ ಮತ್ತು ಬಹುಪಕ್ಷೀಯ/ದ್ವಿಪಕ್ಷೀಯ ಸಾಲ ನೀಡಿಕೆ ಏಜೆನ್ಸಿಗಳ ಮೂಲಕ ಹಣ ಒದಗಿಸುವಿಕೆಗೂ ಸಹ ಕರ್ನಾಟಕ ಸರ್ಕಾರ ಅನುಮೋದನೆ ನೀಡಿದೆ. ಈ ಯೋಜನೆಗೆ ಕಂಪನಿ ಕೂಡ, ನೂತನ ಮೆಟ್ರೋ ರೈಲು ನೀತಿ 2017ರ ಅನ್ವಯ ಹಣಕಾಸಿನ ನೆರವು ನೀಡುವಂತೆ ಭಾರತ ಸರ್ಕಾರವನ್ನು ಕೋರಿದೆ. ಈ ಕೋರಿಕೆಯು ಪರಿಗಣನೆಯಲ್ಲಿದೆ. ಈ ಯೋಜನೆಗೆ ಭೂಸ್ವಾಧೀನ ಮಾಡಿಕೊಳ್ಳುವುದು ಸೇರಿದಂತೆ ಪೂರ್ವಭಾವಿ ಯೋಜನಾ ಪೂರ್ವ ಚಟುವಟಿಕೆಗಳು ಪ್ರಾರಂಭವಾಗಿವೆ. ಭಾರತ ಸರ್ಕಾರದಿಂದ ಅನುಮೋದನೆ ಪಡೆದ ಮೇಲೆ ಮುಖ್ಯ ಯೋಜನಾ ಕಾರ್ಯ ಪ್ರಾರಂಭವಾಗುವುದು.

ಹಂತ–2ಬಿ (ವಿಮಾನ ನಿಲ್ದಾಣ ಮಾರ್ಗ)ಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಸರ್ಕಾರ ಅನುಮತಿ ನೀಡಿದೆ. ಮೆಟ್ರೋಯೋಜನೆಯ ಈ ಹಂತಕ್ಕೆ ಒಟ್ಟು ಭೂಮಿಯ ಅವಶ್ಯಕತೆ 31.64 ಹೆಕ್ಟೇರ್ ಆಗಿದ್ದು, ಅದರಲ್ಲಿ 2.79 ಹೆಕ್ಟೇರ್ ಸರ್ಕಾರಿ ಭೂಮಿ ಮತ್ತು 28.85 ಹೆಕ್ಟೇರ್ ಖಾಸಗಿ ಭೂಮಿಯಾಗಿದೆ. ಎಲ್ಲಾ ಖಾಸಗಿ ಜಮೀನುಗಳಿಗೆ ಸಂಬಂಧಿಸಿದಂತೆ ಸೆಕ್ಷನ್ 28 (1)ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆಗಳು ನೀಡಲಾಗಿದೆ.

ಹಂತ–3

ಟ್ರ್ಯಾಕ್‌ನ ಉದ್ದ 105 ಕಿ.ಮೀ. ಒಳಗೊಂಡಿರುವ ಮೆಟ್ರೋ ಮಾರ್ಗವಾಗಿರುವ ಯೋಜನೆಯ ಹಂತ–3ಕ್ಕೆ ರಸ್ತೆ ಜೋಡಣೆ ಸಾಧ್ಯಾಸಾಧ್ಯತೆ ಅಧ್ಯಯನ ನಡೆಯುತ್ತಿರುವುದು.



ಸಾಮಾನ್ಯ ಮಾಹಿತಿ

ಸಾಂಸ್ಥಿಕ ವ್ಯವಸ್ಥೆ

ಕಂಪನಿಯ ಸಂಸ್ಥಾಪನಾ ನಿಯಮಾವಳಿಯಲ್ಲಿ ತಿಳಿಸಿರುವಂತೆ ಗರಿಷ್ಠ ಹದಿನೈದು (15) ನಿರ್ದೇಶಕರನ್ನು ಒಳಗೊಂಡಿರಬಹುದೆಂಬುದರ ಪೈಕಿ ಕಂಪನಿಯ ನಿರ್ದೇಶಕರ ಮಂಡಳಿಯು ಹನ್ನೆರಡು (12) ನಿರ್ದೇಶಕರುಗಳನ್ನು ಒಳಗೊಂಡಿರುವುದು. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ತಲಾ ಐದು (5) ನಿರ್ದೇಶಕರುಗಳನ್ನು ನಾಮ ನಿರ್ದೇಶನ ಮಾಡುವವು. ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಯವರು ಕಂಪನಿಯ ಅಧ್ಯಕ್ಷರಾಗಿರುವರು. ವ್ಯವಸ್ಥಾಪಕ ನಿರ್ದೇಶಕರನ್ನು ಭಾರತ ಸರ್ಕಾರದ ಒಪ್ಪಿಗೆ ಮೇರೆಗೆ ಕರ್ನಾಟಕ ಸರ್ಕಾರ ನಾಮ ನಿರ್ದೇಶನ ಮಾಡುವುದು ಮತ್ತು ನಿರ್ದೇಶಕರ ಮಂಡಳಿ ನೇಮಕ ಮಾಡುವುದು. ವ್ಯವಸ್ಥಾಪಕ ನಿರ್ದೇಶಕರು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವರು. ಪ್ರಸ್ತುತದಲ್ಲಿ ಇವರಿಗೆ ಇಬ್ಬರು (2) ಕಾರ್ಯನಿರ್ವಹಣೆ ನಿರ್ದೇಶಕರು, ಕಾರ್ಯನಿರ್ವಾಹಕ ನಿರ್ದೇಶಕರು, ಕಂಪನಿ ಕಾರ್ಯದರ್ಶಿ/ಮುಖ್ಯ ಜಾಗೃತ ಅಧಿಕಾರಿ, ಮುಖ್ಯ ಹಣಕಾಸು ಅಧಿಕಾರಿ, ಮುಖ್ಯ ಇಂಜಿನಿಯರುಗಳು, ಪ್ರಧಾನ ವ್ಯವಸ್ಥಾಪಕರು, ಮುಖ್ಯ ಭದ್ರತಾ ಅಧಿಕಾರಿ, ಯೋಜನ ವ್ಯವಸ್ಥಾಪಕ ಮತ್ತು ನಿಯೋಜನೆ/ಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಇತರೆ ಅಧಿಕಾರಿಗಳು ನೆರವು ನೀಡುತ್ತಿರುವರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಗಣನೀಯವಾಗಿ ಪಡೆಯಲಾಗಿರುವ ಸಮರ್ಥ ಹಾಗೂ ಸಮರ್ಪಣ ಮನೋಭಾವದ ಅಧಿಕಾರಿಗಳ ಒಂದು ತಂಡದ ನೆರವಿನೊಂದಿಗೆ ವ್ಯವಹಾರದ ನಿರ್ದೇಶಕರು ಮತ್ತು ಕಾರ್ಯನಿರ್ವಹಣೆ ನಿರ್ದೇಶಕರು ನಿಯಮಿತವಾಗಿ ಕೆಲಸ ಕಾರ್ಯಗಳ ಮೇಲ್ವಿಚಾರಣೆ ನಡೆಸುವರು. ಇವರು ಯೋಜನೆಯ ಅನುಷ್ಠಾನದಲ್ಲಿ ಸಾಧಿಸಲಾಗಿರುವ ಪ್ರಗತಿ ಬಗ್ಗೆ ಹಾಗೂ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ಷಮತೆ ಬಗ್ಗೆ ಕೂಡ ನಿರ್ದೇಶಕರ ಮಂಡಳಿಯ ಪರಾಮರ್ಶನೆಗಾಗಿ ವರದಿ ಮಾಡುವರು. ಅಗತ್ಯವಿರುವೆಡೆಗಳಲ್ಲಿ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳುವರು.

ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ (ಕೆಎಂಪಿ)

ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗಳಲ್ಲಿ ಈ ಕೆಳಗಿನ ಬದಲಾವಣೆಗಳು ಹಣಕಾಸು ವರ್ಷದಲ್ಲಿ ನಡೆದವು.

- ಶ್ರೀ ವಿಜಯ್ ಕುಮಾರ್ ಧೀರ್, ನಿರ್ದೇಶಕರು (ಯೋಜನೆಗಳು ಮತ್ತು ಪ್ಲಾನಿಂಗ್) ಇವರು ನಿರ್ದೇಶಕರಾಗಿ 5 ವರ್ಷಗಳ ಅಧಿಕಾರ ಅವಧಿಯನ್ನು ಪೂರ್ಣಗೊಳಿಸಿರುವುದರಿಂದ 31 ಮಾರ್ಚ್ 2019ರಿಂದ ಅನ್ವಯವಾಗುವಂತೆ ಅವರ ನಿರ್ದೇಶಕ ಸ್ಥಾನ ಸಮಾಪ್ತಿಯಾಗಿದೆ.
- ಶ್ರೀ ಎನ್.ಎಂ.ಧೋಕ್, ನಿರ್ದೇಶಕರು (ರೋಲಿಂಗ್ ಸ್ಟಾಕ್, ಎಲೆಕ್ಟ್ರಿಕಲ್, ಟೆಲಿಕಮ್ಯುನಿಕೇಷನ್ ಮತ್ತು ಒ & ಎಂ) ಇವರ ನೇಮಕಾತಿ ಅವಧಿ ಪೂರ್ಣಗೊಂಡ ಮೇಲೆ ಅವರ ಅಧಿಕಾರ ಅವಧಿಯನ್ನು 1 ಮಾರ್ಚ್ 2019ರಿಂದ ಜಾರಿಗೆ ಬರುವಂತೆ ಮತ್ತು ಎರಡು (2) ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ.

ಹಣಕಾಸು ವರ್ಷದ ಅಂತ್ಯದ ನಂತರ ನಿರ್ದೇಶಕರ ನೇಮಕ

ವರದಿಯ ದಿನಾಂಕದಂದು ಇದಂತೆ ಈ ಕೆಳಗಿನ ಬದಲಾವಣೆಗಳು ನಡೆದಿವೆ:

- ಶ್ರೀ ಡಿ.ರಾಧಾಕೃಷ್ಣ ರೆಡ್ಡಿ ಅವರನ್ನು ನಿರ್ದೇಶಕರಾಗಿ (ಯೋಜನೆಗಳು ಮತ್ತು ಪ್ಲಾನಿಂಗ್) ನೇಮಕ ಮಾಡಲಾಗಿದೆ, ಇದು 26 ಏಪ್ರಿಲ್ 2019ರಿಂದ ಜಾರಿಗೆ ಬರುತ್ತದೆ, ಅವರು 5 ವರ್ಷಗಳ ಅವಧಿಗೆ ರೈಟ್ಸ್ ಲಿಮಿಟೆಡ್‌ನಿಂದ ಡೆಪ್ಯುಟೇಶನ್‌ನಲ್ಲಿದ್ದಾರೆ.
- ಶ್ರೀ ಮಹೇಂದ್ರ ಜೈನ್ ರವರ ಸ್ಥಾನದಲ್ಲಿ ಜುಲೈ 25 2019ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಪಾರ ಮುಖ್ಯ ಕಾರ್ಯದರ್ಶಿಯಾಗಿ ಶ್ರೀ ಬಿ. ಎಚ್.ಅನಿಲ್ ಕುಮಾರ್ ಅವರನ್ನು ಕರ್ನಾಟಕ ಸರ್ಕಾರದ ನಿರ್ದೇಶಕರಾಗಿ ಮತ್ತು ನಾಮಿನಿಯಾಗಿ ನೇಮಿಸಲಾಯಿತು.



- ಶ್ರೀ ಪಿ.ರವಿಕುಮಾರ್, ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯ ಅಪಾರ ಮುಖ್ಯ ಕಾರ್ಯದರ್ಶಿ ಅವರನ್ನು ಕರ್ನಾಟಕ ಸರ್ಕಾರದ ನಿರ್ದೇಶಕರಾಗಿ ಮತ್ತು ನಾಮಿನಿಯಾಗಿ ನೇಮಕ ಮಾಡಲಾಗಿದ್ದು, 3 ಆಗಸ್ಟ್ 2019 ರಂದ ಡಾ. ಇ.ವಿ.ರಮಣ ರೆಡ್ಡಿ ಅವರ ಸ್ಥಾನದಲ್ಲಿ ಜಾರಿಗೆ ಬರಲಿದೆ.
- ಡಾ.ಇ.ವಿ.ರಮಣ ರೆಡ್ಡಿ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಪಾರ ಮುಖ್ಯ ಕಾರ್ಯದರ್ಶಿಯಾಗಿ ಅವರನ್ನು ಶ್ರೀ ಬಿ.ಎಚ್ ಅನಿಲ್ ಕುಮಾರ್ ಅವರ ಸ್ಥಾನದಲ್ಲಿ 16 ಸೆಪ್ಟೆಂಬರ್ 2019 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರದ ನಿರ್ದೇಶಕರಾಗಿ ಮತ್ತು ನಾಮನಿರ್ದೇಶನ ಮಾಡಲಾಗಿದೆ.

ಮಂಡಳಿಯಲ್ಲಿ ಹೊಸ ನಿರ್ದೇಶಕರನ್ನು ಮಂಡಳಿ ಸ್ವಾಗತಿ ಸುತ್ತದೆ ಮತ್ತು ಕಂಪನಿಯ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾದ ಶ್ರೀ ವಿಜಯ್ ಕುಮಾರ್ ಧೀರ್, ಮಾಜಿ ನಿರ್ದೇಶಕರು (ಯೋಜನೆಗಳು ಮತ್ತು ಪ್ಲಾನಿಂಗ್), ನಿರ್ದೇಶಕರಾದ ಶ್ರೀ ಬಿ.ಹೆಚ್ ಅನಿಲ್ ಕುಮಾರ್ ಮತ್ತು ನಿರ್ದೇಶಕರಾದ ಶ್ರೀ ಮಹೇಂದ್ರ ಜೈನ್ ಅವರು ನೀಡಿದ ಕೊಡುಗೆ ಮತ್ತು ಮಾರ್ಗದರ್ಶನವನ್ನು ಅಂಗೀಕರಿಸಿದ್ದಾರೆ.

ಕಂಪೆನಿ ಕಾಯ್ದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಪ್ರತಿವರ್ಷ ಕನಿಷ್ಠ ನಾಲ್ಕು (4) ಮಂಡಳಿ ಸಭೆಗಳನ್ನು ನಡೆಸಬೇಕಾಗುತ್ತದೆ. ಪರಿಶೀಲನೆಯ ವರ್ಷದಲ್ಲಿ, ಯೋಜನೆಯ ಅನುಷ್ಠಾನಕ್ಕಾಗಿ ನಿರ್ಧಾರಗಳನ್ನು ತ್ವರಿರಗೊಳಿಸಲು ಮತ್ತು ಯೋಜನೆಯ ಕಾರ್ಯಕ್ಷಮತೆಯನ್ನು ಪರಿಶೀಲಿಸಲು ಮತ್ತು ಕಾರ್ಯಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯಕ್ಷಮತೆಯನ್ನು ಇತರ ವಿಷಯಗಳ ನಡುವೆ ಮಂಡಳಿಯು ಐದು (5) ಬಾರಿ ಭೇಟಿ ಮಾಡಿದೆ. ಕಂಪೆನಿ ಕಾಯ್ದೆ, 2013 ರ ಸೆಕ್ಷನ್ 149 (1) ರ ಅವಶ್ಯಕತೆಗಳನ್ನುಅನುಸರಿಸಿ ಕಂಪನಿಯು ಪ್ರಸ್ತುತ ಮಂಡಳಿಯಲ್ಲಿ ಒಬ್ಬ ಮಹಿಳಾ ನಿರ್ದೇಶಕರನ್ನುಹೊಂದಿದೆ. ಕಂಪನಿಗಳ ಸೆಕ್ಷನ್ 149 (6) ರ ಪ್ರಕಾರ ಸ್ವತಂತ್ರ ನಿರ್ದೇಶಕರ ನೇಮಕಕ್ಕೆ ಸಂಬಂಧಿಸಿದಂತೆ, 2013 ಓದಿ ಕಂಪೆನಿಗಳ ನಿಯಮ 4 (ನಿರ್ದೇಶಕರ ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014 ರ ಪ್ರಕಾರ, ಈಅವಶ್ಯಕತೆಗಳನ್ನು ಇನ್ನು ಮುಂದೆ ಬಿಎಂಆರ್ಸಿಎಲ್ ನಂತಹ ಜಂಟಿ ಉದ್ಯಮಕಂಪನಿಗಳಿಗೆ ಅನ್ವಯಿಸುವುದಿಲ್ಲ, ಈ ಕಂಪೆನಿಗಳ (ನಿರ್ದೇಶಕ ನೇಮಕಾತಿ ಮತ್ತು ಅರ್ಹತೆ) ನಿಯಮಗಳ 4ನೇ ತಿದ್ದುಪಡಿಯ ಪ್ರಕಾರ, 2014. ಇದರ ಪರಿಣಾಮವಾಗಿ, ಮತ್ತು ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸಲಹೆಯಂತೆ, ನಿಮ್ಮ ಕಂಪನಿ ತನ್ನ ಮಂಡಳಿಯಲ್ಲಿ, 'ಸ್ವತಂತ್ರ ನಿರ್ದೇಶಕರನ್ನು' ನೇಮಿಸಿಲ್ಲ.

ಆರ್ಥಿಕ ವರ್ಷದ ಅವಧಿಯಲ್ಲಿ ನಡೆಸಿದ ಮಂಡಳಿ ಸಭೆಗಳ ಸಂಖ್ಯೆ

ಆರ್ಥಿಕ ವರ್ಷದ ಅವಧಿಯಲ್ಲಿ ನಿರ್ದೇಶಕರುಗಳ ಮಂಡಳಿಯು ದಿನಾಂಕ: 1ನೇ ಏಪ್ರಿಲ್ 2018ರಿಂದ 31ನೇ ಮಾರ್ಚ್ 2019ರವರೆಗೆ ಐದು (5) ಬಾರಿ ಸಭೆ ಸೇರಿತ್ತು. ಈ ಸಭೆಗಳು 6ನೇ ಜೂನ್ 2018, 20ನೇ ಆಗಸ್ಟ್ 2018, 28ನೇ ಸೆಪ್ಟೆಂಬರ್ 2018, 7ನೇ ಡಿಸೆಂಬರ್ 2018 ಮತ್ತು 27ನೇ ಫೆಬ್ರುವರಿ 2019ರಂದು ನಡೆದಿವೆ.

ಸಹಾಯಕ ಮತ್ತು ಸಹವರ್ತಿ ಕಂಪನಿಗಳು

ನಿಮ್ಮ ಕಂಪನಿಯು ಪರಾಮರ್ಶನೆಯಲ್ಲಿರುವ ಆರ್ಥಿಕ ವರ್ಷದ ಕೊನೆಯಲ್ಲಿ ಹಾಗೂ ಈ ವರದಿ ದಿನಾಂಕದಂದು ಇದ್ದಂತೆ ಯಾವುದೇ ಸಹಾಯಕ ಅಥವಾ ಸಹವರ್ತಿ ಕಂಪನಿಗಳನ್ನು ಹೊಂದಿರುವುದಿಲ್ಲ.

ಉನ್ನತಾಧಿಕಾರ ಸಮಿತಿ ಸಭೆಗಳು (ಎಚ್‌ಪಿಸಿ)

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯನ್ನು (ಎಚ್‌ಪಿಸಿ) ಕರ್ನಾಟಕ ಸರ್ಕಾರದ ಜಿ.ಒ.ನಂ. ಯುಡಿಡಿ 83 ಪಿಆರ್‌ಜೆ 2019 (ಪಿ1) ಬೆಂಗಳೂರು, ದಿನಾಂಕ: 25.05.2019ರ ಅನ್ವಯ ಇತ್ತೀಚೆಗೆ ಪುನರ್‌ರಚಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳಿಂದ ಮೆಟ್ರೋ ಯೋಜನೆಗ ಸರ್ಕಾರದ ಜಮೀನುಗಳನ್ನು ವರ್ಗಾವಣೆ ಮಾಡುವ ಅಧಿಕಾರಗಳೂ ಸೇರಿದಂತೆ ಅದರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ. ಎಚ್‌ಪಿಸಿ ನಿಯತಕಾಲಿಕ ಅಂತರಗಳಲ್ಲಿ ಸಭೆ ಸೇರಿ ವಿವಿಧ ನಿರ್ಧಾರಗಳು/ ನಿರ್ದೇಶನಗಳನ್ನು ನೀಡುವುದು. ಇದರಿಂದ ಬೆಂಗಳೂರು ಮೆಟ್ರೋ ರೈಲು ಯೋಜನೆ ಅನುಷ್ಠಾನ ಕಾರ್ಯ ಸರಾಗ ಮತ್ತು ಶೀಘ್ರವಾಗಿ ನೆರವೇರಿದೆ. ವಿವಿಧ ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ವಿಚಾರಗಳು, ಜಮೀನಿನ ಸ್ವಾಧೀನ, ಉಪಯುಕ್ತತೆಗಳ ಸ್ಥಳಾಂತರ ಇತ್ಯಾದಿ ಬಗ್ಗೆ ಚರ್ಚೆ ನಡೆಸಲು ಮತ್ತು ತೀರ್ಮಾನ ಕೈಗೊಳ್ಳಲು ಎಚ್‌ಪಿಸಿಯ 35ನೇ ಸಭೆ 21ನೇ ಜೂನ್ 2019ರಂದು ನಡೆದಿತ್ತು.



ವಂಚನೆ ಬಗ್ಗೆ ವರದಿ ಮಾಡುವಿಕೆ ಮತ್ತು ಜಾಗೃತಿ ವ್ಯವಸ್ಥೆ

ಪರಾಮರ್ಶನೆಯಲ್ಲಿರುವ ಸದರಿ ವರ್ಷಾವಧಿಯಲ್ಲಿ ಯಾವುದೇ ವಂಚನೆ ಘಟನೆಗಳು ವರದಿಯಾಗಿರುವುದಿಲ್ಲ. ನಿಮ್ಮ ಕಂಪನಿಯು ವಿಷಯ ಬ್ಲೋಯರ್ ಪಾಲಿಸಿಯೊಡನೆ ಜಾಗೃತಿ ವ್ಯವಸ್ಥೆಯನ್ನು ಒಳಗೊಂಡಿದೆ. ಈ ನೀತಿಯಲ್ಲಿ ಪ್ರತಿಪಾದಿಸಿರುವ ಕ್ರಮಾವಳಿಗಳ ಅನ್ವಯ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ದೂರುಗಳನ್ನು ಸಲ್ಲಿಸಲು ಅವಕಾಶವಿದೆ. ವಿಷಲ್ ಬ್ಲೋಯರ್ ನೀತಿಯನ್ನು ಕಂಪನಿಯ ವೆಬ್‌ಸೈಟ್ www.bmrc.co.in ನಲ್ಲಿ ಹಾಕಲಾಗಿದೆ.

ಸಂಬಂಧಿಸಿದ ವ್ಯಕ್ತಿಯೊಡನಿನ ವ್ಯವಹಾರ

ಪರಾಮರ್ಶನೆಯಲ್ಲಿರುವ ಸದರಿ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013 (ತಿದ್ದುಪಡಿಯಾದಂತೆ) ಮತ್ತು ಇದರಡಿ ರೂಪಿಸಿರುವ ನಿಯಮಗಳ ಅನ್ವಯ ತಿಳಿಸಿರುವಂತೆ ಯಾವುದೇ ಸಂಬಂಧಪಟ್ಟ ವ್ಯಕ್ತಿಯೊಡನೆ ಯಾವುದೇ ವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಬಿಎಂಆರ್‌ಸಿ ವಾರ್ತಾ ಪತ್ರ

ಕಂಪನಿಯು ಮಾಹಿತಿಯನ್ನು ಪ್ರಚುರಪಡಿಸುವ ತನ್ನ ಪರಿಶ್ರಮದ ಅಂಗವಾಗಿ "ಬಿಎಂಆರ್‌ಸಿ ವಾರ್ತಾ ಪತ್ರ" ಎಂಬ ಹೆಸರಿನಲ್ಲಿ ಪ್ರತಿ ತಿಂಗಳೂ ವಾರ್ತಾ ಪತ್ರವನ್ನು ಪ್ರಕಟಿಸುತ್ತಿದೆ. ಇದನ್ನು ಕಂಪನಿಯ ವೆಬ್‌ಸೈಟ್ www.bmrc.co.in ನಲ್ಲಿ ಪ್ರಕಟಪಡಿಸಲಾಗುತ್ತಿದೆ.

ಶಾಸನಬದ್ಧ ಅನುಸರಣೆಗಳು

ಮಾಹಿತಿ ಹಕ್ಕು ಕಾಯ್ದೆಯಡಿ ಅನುಸರಣೆಗಳು

ಕಂಪನಿಯು ಮಾಹಿತಿ ಹಕ್ಕು ಕಾಯ್ದೆ, 2005ರ ಅನ್ವಯ ಅನುಸರಣೆಗಳನ್ನು ಅದರ ನೈಜ ಸ್ಫೂರ್ತಿ ಮತ್ತು ಅರ್ಥದಲ್ಲಿ ಪರಿಪಾಲಿಸುತ್ತಿದೆ. ಪರಾಮರ್ಶನೆಯಲ್ಲಿರುವ ಸದರಿ ವರ್ಷದ ಅವಧಿಯಲ್ಲಿ 342 ಅರ್ಜಿಗಳು ಕಂಪನಿಗೆ ಬಂದಿದ್ದು, ಈ ಎಲ್ಲಾ ಅರ್ಜಿಗಳಿಗೆ ಸಕಾಲಿಕವಾಗಿ ಮಾಹಿತಿಯನ್ನು ಒದಗಿಸಲಾಗಿದೆ. 40 ಮೇಲ್ಮನವಿಗಳು ಬಂದಿದ್ದು, ಇವುಗಳನ್ನು ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ವಹಿಸಲಾಗಿದ್ದು, ಇವುಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸಕಾಲಿಕವಾಗಿ ವಿಲೇವಾರಿ ಮಾಡಲಾಗಿದೆ. ನಿಮ್ಮ ಕಂಪನಿಯು, ಕಂಪನಿಗೆ ಅನ್ವಯವಾಗುವ ವಿವಿಧ ಶಾಸನಬದ್ಧ ಕಾಯ್ದೆಗಳ ಅನ್ವಯ ಅನುಸರಣೆಯನ್ನು ಗಮನಿಸಲು ಸಾಕಷ್ಟು ಮುತುವರ್ಜಿ ವಹಿಸಿದೆ. ಸಾಧ್ಯವಾದ ಮಟ್ಟಿಗೆ ಅನ್ವಯವಾಗುವ ನಿಬಂಧನೆಗಳನ್ನು ಅತ್ಯಂತ ಪಾರದರ್ಶಕವಾಗಿ ಕಟ್ಟುನಿಟ್ಟಾಗಿ ಜಾರಿಗೆ ತರಲು ಶ್ರಮಿಸುತ್ತಿರುವುದು.

ಸಾರ್ವಜನಿಕ ಠೇವಣಿಗಳು

ಪರಾಮರ್ಶನೆಯಲ್ಲಿರುವ ಸದರಿ ವರ್ಷದ ಅವಧಿಯಲ್ಲಿ ಈ ಸಂಬಂಧ ಅನ್ವಯವಾಗುವ ನಿಯಮಗಳನ್ನು ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ವಿಧಿ 73ರ ಅರ್ಥದ ಪರಿಧಿಯೊಳಗೆ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ.

ವಿದೇಶಿ ವಿನಿಮಯ ವ್ಯವಹಾರ

ಪರಾಮರ್ಶನೆಯಲ್ಲಿರುವ ಸದರಿ ವರ್ಷದ ಅವಧಿಯಲ್ಲಿ ವರದಿ ಮಾಡಬಹುದಾದ ಯಾವುದೇ ವಿದೇಶಿ ವಿನಿಮಯ ಗಳಿಕೆ ಇರುವುದಿಲ್ಲ (ಹಿಂದಿನ ವರ್ಷವೂ ಶೂನ್ಯ). 2018–19ರ ವರ್ಷದ ಅವಧಿಯಲ್ಲಿನ ವಿದೇಶಿ ವಿನಿಮಯ ಹೊರಹರಿವು ರೂ.332.63 ಕೋಟಿಗಳು (ಹಿಂದಿನ ವರ್ಷ: ರೂ.86.89 ಕೋಟಿ).



ಲೆಕ್ಕಪರಿಶೋಧಕರು

ಶಾಸನಬದ್ಧ ಲೆಕ್ಕಪರಿಶೋಧಕರು

ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ, ಇವರು ಮೆ॥ ಬದರಿ ಮಧುಸೂದನ್ ಅಂಡ್ ಶ್ರೀನಿವಾಸನ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2018–19ನೇ ಸಾಲಿಗೆ ಕಂಪನಿಯ ಶಾಸನಬದ್ಧ ಸ್ವತಂತ್ರ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದೆ. ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿತ ಹಣಕಾಸಿನ ವಿವರಗಳ ಮೇಲಿನ ಟಿಪ್ಪಣಿಗಳು ಸ್ವಯಂವೇದ್ಯವಾಗಿರುವುದರಿಂದ ಅವುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಟೀಕೆ ಟಿಪ್ಪಣಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಶ್ಯಕತೆ ಇರುವುದಿಲ್ಲ. ಲೆಕ್ಕಪರಿಶೋಧಕರ ವರದಿಯು ಯಾವುದೇ ಆಕ್ಷೇಪಣೆ, ಅಭಿಪ್ರಾಯ, ವ್ಯತಿರಿಕ್ತ ಟೀಕೆ ಅಥವಾ ಹಕ್ಕು ನಿರಾಕರಣೆ ಅಂಶಗಳನ್ನು ಒಳಗೊಂಡಿರುವುದಿಲ್ಲ. 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪತ್ರದ ಬಗ್ಗೆ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ಮಾಡಿರುವ ಟೀಕೆ ಟಿಪ್ಪಣಿಗಳನ್ನು ಸದಸ್ಯರುಗಳ ಪರಿಶೀಲನೆಗಾಗಿ ಸದರಿ ವರದಿಯ ಜೊತೆಗೆ ಪ್ರತ್ಯೇಕವಾಗಿ ನೀಡಲಾಗಿದೆ.

ಸೆಕ್ರೆಟೆರಿಯಲ್ ಲೆಕ್ಕಪರಿಶೋಧಕರು

ನಿಮ್ಮ ಕಂಪನಿಯ ನಿರ್ದೇಶಕರ ಮಂಡಲಿಯು ಮೆ॥ ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್, ವೃತ್ತಿನಿರತ ಕಂಪನಿ ಕಾರ್ಯದರ್ಶಿ, ಬೆಂಗಳೂರು (ಸಿ.ಪಿ. ನಂ.4422) ಇವರನ್ನು ಹಣಕಾಸಿನ ವರ್ಷ 2018–19ರ ಸಾಲಿಗೆ ಕಂಪನಿಯ ಸೆಕ್ರೆಟೆರಿಯಲ್ ಲೆಕ್ಕಪರಿಶೋಧನೆ ಕಾರ್ಯ ಕೈಗೊಳ್ಳಲು ನೇಮಕ ಮಾಡಿದೆ. ಸೆಕ್ರೆಟೆರಿಯಲ್ ಲೆಕ್ಕಪರಿಶೋಧಕರು 2018–19ನೇ ಸಾಲಿಗೆ ನೀಡಿರುವ ಸೆಕ್ರೆಟೆರಿಯಲ್ ಲೆಕ್ಕಪರಿಶೋಧನಾ ವರದಿಯನ್ನು ಸದರಿ ವರದಿಯ **ಅನುಬಂಧ–1**ರಲ್ಲಿ ಸೇರಿಸಿದೆ. ಸೆಕ್ರೆಟೆರಿಯಲ್ ಲೆಕ್ಕಪರಿಶೋಧನೆ ವರದಿಯಲ್ಲಿನ ಅಭಿಪ್ರಾಯಗಳು/ಆಕ್ಷೇಪಣೆಗಳಿಗೆ ಉತ್ತರೆಗಳನ್ನು ಈ ಕೆಳಗೆ ಕೊಟ್ಟಿದೆ.

i) ಸೆಬಿ (ಎಲ್‌ಒಆರ್‌ಡಿ) ನಿಬಂಧನೆಗಳು 2014ರ ನಿಬಂಧನೆ 52(1) ಮತ್ತು 52(2)ರ ಅನ್ವಯ 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷದ ಮತ್ತು 30ನೇ ಸೆಪ್ಟೆಂಬರ್ 2019ಕ್ಕೆ ಕೊನೆಗೊಂಡ ಅರ್ಧ ವರ್ಷದ ಪರಿಶೋಧಿಸದಿರುವ/ಪರಿಶೋಧಿಸಿದ ಹಣಕಾಸಿನ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಮಂಡಳಿಯ ಸಭೆ ನಡೆಸುವುದರಲ್ಲಿ ಉಂಟಾದ ವಿಳಂಬದ ಪ್ರಯುಕ್ತ ಅದನ್ನು ಸಲ್ಲಿಸಲು ವಿಳಂಬ ಉಂಟಾಗಿದೆ.

   ಮಂಡಳಿಯ ಸಭೆಯನ್ನು ನಡೆಸುವುದರಲ್ಲಿ ಉಂಟಾದ ವಿಳಂಬದ ಪ್ರಯುಕ್ತ ಲೆಕ್ಕಪರಿಶೋಧನೆ ಮಾಡಿರದ/ಲೆಕ್ಕಪರಿಶೋಧನೆ ಮಾಡಿದ ಹಣಕಾಸಿನ ಫಲಿತಾಂಶಗಳನ್ನು ನಿಗದಿತ ದಿನಾಂಕದಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವುದಿಲ್ಲ.

ii) ಎಸ್‌ಎಸ್–1 ಅನ್ವಯ ಮಂಡಳಿಯ ಸಭೆಯ ಕರಡು ಟಿಪ್ಪಣಿಗಳನ್ನು ಮಂಡಳಿಯ ಸಭೆ ದಿನಾಂಕದ 15 ದಿನಗಳ ಒಳಗೆ ನಿರ್ದೇಶಕರ ಮಂಡಳಿಗೆ ವಿತರಣೆ ಮಾಡಿರುವುದಿಲ್ಲ.

   ಸಂಬಂಧಪಟ್ಟ ಮಂಡಳಿ ಸಭೆಗಳ ಟಿಪ್ಪಣಿಗಳನ್ನು ಅಧ್ಯಕ್ಷರು ಅನುಮೋದಿಸಿದ ನಂತರ, ಅವುಗಳ ಬಗ್ಗೆ ತಮ್ಮ ಟೀಕೆ ಟಿಪ್ಪಣಿ/ಅಭಿಪ್ರಾಯಗಳನ್ನು ತಿಳಿಸಲು ಅದೇ ದಿನ ನಿರ್ದೇಶಕರುಗಳಿಗೆ ತಲುಪಿಸಲಾಗಿದೆ. ಈ ಬಗ್ಗೆ ನಿರ್ದೇಶಕರುಗಳು ಯಾವುದೇ ಟೀಕೆ ಟಿಪ್ಪಣಿ/ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಲ್ಲಿ ಮತ್ತು ಮಾಡಿದ್ದಲ್ಲಿ, ಅವುಗಳನ್ನು ಸ್ಥಿರೀಕರಿಸುವ ಮುನ್ನ ಪರಿಗಣನೆಗಾಗಿ ನಂತರದ ಸಭೆಯಲ್ಲಿ ಮಂಡಳಿಯ ಮುಂದಿಡಲಾಗುವುದು.

ಆಂತರಿಕ ಲೆಕ್ಕಪರಿಶೋಧಕರು

ಮೆ॥ ಫಿಲಿಪ್ಪೋಸ್ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಕಂಪನಿಯ ಆಂತರಿಕ ಲೆಕ್ಕಪರಿಶೋಧನೆ ಕಾರ್ಯ ನಡೆಸಲು ದಿನಾಂಕ: 01.10.2018ರಿಂದ ಒಂದು ವರ್ಷದ ಅವಧಿಯವರೆಗೆ ಕಂಪನಿಯ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಮರು ನೇಮಕ ಮಾಡಲಾಗಿದೆ. ಆದರೆ ಸದರಿ ಸಂಸ್ಥೆಯ ಕೋರಿಕೆ ಮೇರೆಗೆ ಆಂತರಿಕ ಲೆಕ್ಕಪರಿಶೋಧಕರಾಗಿ ನೇಮಕಗೊಂಡಿದ್ದ ಅವರ ನೇಮಕಾತಿಯನ್ನು ಜುಲೈ 2019ರ ಕೊನೆಯ ವೇಳೆಗೆ ಅವಧಿ ಮುಗಿಯುವ ಮೊದಲೇ ಸಮಾಪ್ತಿಗೊಳಿಸಿದ್ದು, ಇವರ ಸ್ಥಾನಕ್ಕೆ

ಮೆ॥ ಚಂದ್ರಶೇಖರ್ ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರನ್ನು 1ನೇ ಆಗಸ್ಟ್ 2019ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಕವಾಗಿರುವುದನ್ನು ನಿಮ್ಮ ಕಂಪನಿಯ ನಿರ್ದೇಶಕರ ಮಂಡಳಿಯು ಅನುಮೋದಿಸಿರುವುದು. ಕಂಪನಿಯ ಆಂತರಿಕ ಲೆಕ್ಕಪರಿಶೋಧಕರ ಕಾರ್ಯನಿರ್ವಹಣೆ ಮತ್ತು ಅವರ ವರದಿಗಳನ್ನು ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿಯು ಕಾಲಕಾಲಕ್ಕೆ ಪರಾಮರ್ಶೆ ಮಾಡುವುದು.

ಖರ್ಚು ವೆಚ್ಚದ ಲೆಕ್ಕಪರಿಶೋಧಕರು

ಪ್ರಸ್ತುತದಲ್ಲಿ ಖರ್ಚು ವೆಚ್ಚದ ದಾಖಲೆಗಳನ್ನು ನಿರ್ವಹಣೆ ಮಾಡುವುದು ಮತ್ತು ಈ ಸಂಬಂಧದಲ್ಲಿ ಅನ್ವಯವಾಗುವ ನಿಯಮಗಳನ್ನು ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ವಿಧಿ 148ರಲ್ಲಿ ನಿಗದಿಪಡಿಸಿರುವಂತೆ ಖರ್ಚು ವೆಚ್ಚಗಳನ್ನು ಪರಿಶೋಧನೆ ಮಾಡಿಸುವ ಅಗತ್ಯತೆ ಕಡ್ಡಾಯವಾಗಿರುವುದಿಲ್ಲ.

ವಾರ್ಷಿಕ ರಿಟರ್ನ್‌ನ ಉದ್ಧೃತ

ನಮೂನೆ ಎಂಜಿಟಿ–9ರಲ್ಲಿನ ವಾರ್ಷಿಕ ರಿಟರ್ನ್‌ನ ಉದ್ಧೃತದ ಭಾಗವಾಗಿರುವ ವಿವರಗಳನ್ನು ಈ ವರದಿಯ **ಅನುಬಂಧ–2**ರಲ್ಲಿ ನೀಡಲಾಗಿದೆ.

ಅಪಾಯ ನಿರ್ವಹಣೆ / ವಂಚನೆ ತಡೆ ನೀತಿ / ವಿಷಲ್ ಬ್ಲೋಯರ್ ನೀತಿ

ನಿಮ್ಮ ಕಂಪನಿಯು, ಯೋಜನೆಯ ಹಂತ–1ರ ಪೂರ್ಣಜಾಲದ ಕಾರ್ಯಾಚರಣೆ ಪ್ರಾರಂಭಿಸಿದ ಮೇಲೆ ತಲೆದೋರುವ ವಿವಿಧ ಕಾರ್ಯಾಚರಣೆಗೆ ಸಂಬಂಧಿಸಿದ ಅಪಾಯಗಳ ಆಧಾರದ ಮೇಲೆ ಅಪಾಯ ನಿರ್ವಹಣೆ ನೀತಿಯನ್ನು ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಆಸ್ತಿಗಳು ಮತ್ತು ಕೆಲವು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ತಲೆದೋರುವ ಅಪಾಯಗಳನ್ನು ಐಆರ್‌ಡಿಎ ಪರವಾನಗಿ ಹೊಂದಿರುವ ಸಾರ್ವಜನಿಕ ವಲಯದ ವಿಮಾ ಕಂಪನಿಯಿಂದ ಸಾಕಷ್ಟು ಮೌಲ್ಯಕ್ಕೆ ವಿಮಾ ರಕ್ಷಣೆ ಪಡೆಯುವ ಮೂಲಕ, ನಿವಾರಿಸಲಾಗಿದೆ. ಹಣಕಾಸಿನ ಅಪಾಯಗಳಿಗೆ ಸಂಬಂಧಿಸಿದಂತೆ, ಶಾಸನಬದ್ಧ ಲೆಕ್ಕಪರಿಶೋಧಕರಿಂದ ಹಾಗೂ ಸಿ ಅಂಡ್ ಎಜಿ ಆಫ್ ಇಂಡಿಯಾ ಇವರಿಂದ ವಿವಿಧ ಹಂತಗಳಲ್ಲಿ ನಿಯಮಿತವಾಗಿ ಲೆಕ್ಕಪರಿಶೋಧನೆ ಮಾಡಿಸುವುದರ ಜೊತೆಗೆ ಸಮಕಾಲದಲ್ಲಿ ಸಮ್ಮತಿ ಮೇಲೆ ಚಾರ್ಟರ್ಡ್ ಅಕೌಂಟೆಂಟ್‌ಗಳ ಬಾಹ್ಯ ಸಂಸ್ಥೆಯನ್ನು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನಿಯೋಜಿಸಿಕೊಳ್ಳುವ ಮೂಲಕ ಸಾಕಷ್ಟು ಆಂತರಿಕ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ನಿಮ್ಮ ನಿರ್ದೇಶಕರು ಬಿಎಂಆರ್‌ಸಿಎಲ್‌ನ ವಂಚನೆ ತಡೆ ನೀತಿ ಮತ್ತು ಬಿಎಂಆರ್‌ಸಿಎಲ್‌ನ ವಿಷಲ್ ಬ್ಲೋಯರ್ ನೀತಿಗಳಿಗೆ ಅನುಮೋದನೆ ನೀಡಿರುವರು. ಈ ನೀತಿಗಳು ಕಂಪನಿಯ ಅಧಿಕೃತ ವೆಬ್‌ಸೈಟ್ www.bmrc.co.in ಇಲ್ಲಿ ಲಭ್ಯವಿರುವುದು. ಕಂಪನಿಯು ಕರೆನ್ಸಿ ಏರಿಳಿತಗಳಿಗೆ ಎದುರಾಗಿ ರಕ್ಷಣೆ ಪಡೆಯಲು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಅಪಾಯಗಳನ್ನು ನಿರ್ಧರಿಸುವುದಕ್ಕೆ ಒಂದು ಅನುಮೋದಿತ ವಿದೇಶಿ ವಿನಿಮಯ ಅಪಾಯ ನಿರ್ವಹಣೆ ನೀತಿಯನ್ನು ಹೊಂದಿದೆ. ಆದಾಗ್ಯೂ, ಬಿಎಂಆರ್‌ಸಿಎಲ್ ಯೋಜನೆಗಾಗಿ ಭಾರತ ಸರ್ಕಾರ ಪಡೆದ ಸಾವರಿನ್ ಸಾಲಗಳ ಮರುಪಾವತಿಯ ಸಮಯದಲ್ಲಿ ಸಂಭವಿಸುವ ವಿದೇಶಿ ವಿನಿಮಯ ಅಪಾಯಗಳಿಗೆ ರಕ್ಷಣಾತ್ಮಕವಾಗಿ ವಿದೇಶಿ ವಿನಿಮಯ ಏರಿಳಿತಗಳ ಹಂಚಿಕೆಗೆ ಸಂಬಂಧಿಸಿದ ವಿಷಯವನ್ನು ಈ ಹಂತದಲ್ಲಿ ಪರಿಗಣಿಸುವುದು ಅಷ್ಟೇನು ಸೂಕ್ತವಾಗಿರದ ಪ್ರಯುಕ್ತ ಕಂಪನಿಯು ತನ್ನ ಆಮದುಗಳಿಗೆ ವಿದೇಶಿ ವಿನಿಮಯದಲ್ಲಿ ಮರುಪಾವತಿ ಮಾಡಬೇಕಾದ ಸಮಯದಲ್ಲಿ ಮುಂಗಡ ರಕ್ಷಣಾ ಕ್ರಮವನ್ನು ಕೈಗೊಳ್ಳುತ್ತಿದೆ.

ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿ

ಕಂಪನಿಗಳ ಕಾಯ್ದೆ, 2013ರ ವಿಧಿ 177ರ ಉಪಬಂಧಗಳ ಅನುಸಾರ ಮಂಡಳಿಯು ಐದು (5) ಸದಸ್ಯರುಗಳನ್ನು ಒಳಗೊಂಡ ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಿದೆ. ಹಣಕಾಸಿನ ವರ್ಷ 2018–19ರ ಅವಧಿಯಲ್ಲಿ ಲೆಕ್ಕಪರಿಶೋಧನಾ ಸಮಿತಿಯು 8ನೇ ಆಗಸ್ಟ್ 2018ರಂದು ಒಮ್ಮೆ ಸಭೆ ಸೇರಿದೆ. ಇದಾದ ನಂತರ ಈ ಸಮಿತಿಯನ್ನು ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿ ಎಂಬುದಾಗಿ ಪುನರ್‌ರಚನೆ ಮಾಡಲಾಗಿದೆ. ಈ ಸಮಿತಿ 17ನೇ ನವೆಂಬರ್ 2018ರಂದು ಸಭೆ ನಡೆಸಿದೆ. ಸದರಿ ಹಣಕಾಸು ಮತ್ತು ಲೆಕ್ಕಪರಿಶೋಧನಾ ಸಮಿತಿ ಮಾಡಿದ ಎಲ್ಲಾ ಶಿಫಾರಸ್ಸುಗಳನ್ನು ಮಂಡಳಿ ಅಂಗೀಕರಿಸಿದೆ. ಸಂಯೋಜನೆ ಮತ್ತು ಸದರಿ ವರ್ಷದಲ್ಲಿ ನಡೆದ ಸಭೆಗಳ ವಿವರಗಳನ್ನು ಸದರಿ ವರದಿ ಜೊತೆ ಕಾರ್ಪೊರೇಟ್ ಆಡಳಿತ ವರದಿಯಲ್ಲಿ ನೀಡಿದೆ.



ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ

ನಿಮ್ಮ ಕಂಪನಿಯು ಕಂಪನಿಗಳ (ಮಂಡಳಿ ಸಭೆಗಳು ಮತ್ತು ಇದರ ಅಧಿಕಾರಗಳು) ನಿಯಮಗಳು, 2014ರ ನಿಯಮ 6 ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ವಿಧಿ 178ರ ಅನುಸಾರ ಪೂರ್ಣಾವಧಿಯವರಲ್ಲದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿದೆ. ಹಣಕಾಸಿನ ವರ್ಷ 2018–19ರ ಅವಧಿಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು 20ನೇ ಆಗಸ್ಟ್ 2018 ಮತ್ತು 7ನೇ ಫೆಬ್ರುವರಿ 2018ರಂದು ಎರಡು ಬಾರಿ ಸಭೆ ಸೇರಿದೆ. ಸಂಯೋಜನೆ ಮತ್ತು ಸದರಿ ವರ್ಷದಲ್ಲಿ ನಡೆದ ಸಭೆಗಳ ವಿವರಗಳನ್ನು ಸದರಿ ವರದಿಗೆ ಲಗತ್ತಿಸಿರುವ ಕಾರ್ಪೊರೇಟ್ ಆಡಳಿತ ವರದಿಯಲ್ಲಿ ನೀಡಿದೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ

ನಿಮ್ಮ ಕಂಪನಿಯು ಹೊಣೆಗಾರಿಕೆ ಮತ್ತು ಬಾಧ್ಯತೆ ಹೊಂದಿರುವ ಕಾರ್ಪೊರೇಟ್ ನಾಗರಿಕ ಸಂಸ್ಥೆಯಾಗಿ ತನ್ನ ಉತ್ತರದಾಯಿಗಳಾದ ಷೇರುದಾರರು, ನೌಕರರು, ಆಡಳಿತ ವರ್ಗ, ಸರಬರಾಜುದಾರರು, ಗ್ರಾಹಕರು ಮತ್ತು ಸಮಸ್ತ ಸಮುದಾಯದ ಸೇವೆಗೆ ಕಟಿಬದ್ಧವಾಗಿದೆ. ನಮ್ಮ ಮೆಟ್ರೋ ಬೆಂಗಳೂರು ನಗರಕ್ಕೆ ಪರಿಸರ ಸ್ನೇಹಿ ಪರ್ಯಾಯ ಸಾರಿಗೆ ಸೇವೆಯಾಗಿ ಹೊರ ಹೊಮ್ಮುತ್ತಿದೆ ಮತ್ತು ಸಮಾಜದ ಬಗ್ಗೆ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ. ಈ ದಿಸೆಯಲ್ಲಿ ನಿಮ್ಮ ಕಂಪನಿಯು ಬೆಂಗಳೂರು ನಗರದಲ್ಲಿ ನಾಗರಿಕರ ಜೀವನ ಮಟ್ಟವನ್ನು ಸುಧಾರಿಸಲು ಸ್ವಯಂ ಪ್ರೇರಣೆಯಿಂದ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಕಂಪನಿಯು ಲಾಭ ಗಳಿಸುತ್ತಿಲ್ಲವಾದ್ದರಿಂದ, ಕಂಪನಿಗಳ ಕಾಯ್ದೆ, 2013ರ ವಿಧಿ 135 ಮತ್ತು ಇದರಡಿಯಲ್ಲಿನ ಅನ್ವಯವಾಗುವ ನಿಯಮಗಳ/ಪರಿಶಿಷ್ಟಗಳ ಅನ್ವಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ನಿಗದಿಪಡಿಸಿದ ಕ್ಷೇತ್ರಗಳಡಿಯಲ್ಲಿ ಬರುವ ನಿರ್ದಿಷ್ಟ ಯೋಜನೆಗಳಿಗೆ ಯಾವುದೇ ಪ್ರಮಾಣದ ಹಣವನ್ನು ವಿನಿಯೋಗಿಸಬೇಕೆಂಬ ಕಡ್ಡಾಯವಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅಡಿಯಲ್ಲಿ ಈ ವರ್ಷದಲ್ಲಿ ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ. ಆದಾಗ್ಯೂ ನಿಮ್ಮ ಕಂಪನಿಯು ಈ ವಿಚಾರವಾಗಿ ಅನುಸರಿಸಬೇಕಾದ ಅಗತ್ಯತೆಯಂತೆ ಆರು (6) ನಿರ್ದೇಶಕರುಗಳನ್ನು ಒಳಗೊಂಡ ಸಿಎಸ್ಆರ್ ಸಮಿತಿ ಒಂದನ್ನು ರಚನೆ ಮಾಡಿದೆ. ಮಂಡಳಿಯ ಸಿಎಸ್ಆರ್ ಸಮಿತಿಯ ಸಂಯೋಜನೆಯ ವಿವರಗಳನ್ನು ಸದರಿ ವರದಿ ಜೊತೆ ಲಗತ್ತಿಸಿರುವ ಕಾರ್ಪೊರೇಟ್ ಆಡಳಿತ ವರದಿಯಲ್ಲಿ ತಿಳಿಸಲಾಗಿದೆ.

ಅನುಸರಣೆ ವರದಿ

ನಿಮ್ಮ ಕಂಪನಿಯು ಸಾಮಾನ್ಯವಾಗಿ ಅನ್ವಯವಾಗುವ ವಿವಿಧ ಕಾರ್ಪೊರೇಟ್ ಮತ್ತು ಇತರೆ ಕಾನೂನುಗಳ ಅಗತ್ಯತೆಗಳನ್ನು ಅನುಸರಿಸಿದೆ. ಕಾನೂನುಗಳ ಪರಿಪಾಲನೆಯ ವ್ಯಾಪ್ತಿಯನ್ನು ಮಂಡಳಿಯು ನಿಯತಕಾಲಿಕವಾಗಿ ಪರಿಶೀಲನೆ ಮಾಡುತ್ತಿರುವುದು. ನಿಮ್ಮ ಕಂಪನಿಯು ಹೆಸರು ಸೇರ್ಪಡೆಯಾಗಿರದ ಸಾರ್ವಜನಿಕ ನಿಯಮಿತ ಕಂಪನಿಯಾಗಿರುವುದು. ಆದರೂ, ಉತ್ತಮ ಪದ್ಧತಿಯ ಕ್ರಮವಾಗಿ ಸದರಿ ವರದಿಗೆ ಲಗತ್ತಿಸಿರುವ ಕಾರ್ಪೊರೇಟ್ ಆಡಳಿತ ವಿಭಾಗದಲ್ಲಿ ವಿವರಿಸಿರುವಂತೆ "ಕಾರ್ಪೊರೇಟ್ ಆಡಳಿತ ವರದಿ" ಒಂದನ್ನು ಮಂಡಿಸಲು ನಿಮ್ಮ ನಿರ್ದೇಶಕರು ಹರ್ಷಪಡುವರು.

ಇಂಧನ ಸಂರಕ್ಷಣೆ ಮಾಹಿತಿ

ಇಂಧನವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ಕಂಪನಿಗೆ ಅನ್ವಯವಾಗುವಂತೆ ವಿವಿಧ ಸಿಸ್ಟಮ್‌ಗಳಿಗೆ ಸೂಕ್ತವಾದ ತಂತ್ರಜ್ಞಾನ ಆಯ್ಕೆ ಮಾಡುವುದರ ಜೊತೆಗೆ ವಿನ್ಯಾಸದ ಹಂತದಲ್ಲಿಯೇ ವಿವಿಧ ಇಂಧನ ಸಂರಕ್ಷಣೆ ಕ್ರಮಗಳನ್ನು ನಿಮ್ಮ ಕಂಪನಿ ಅಳವಡಿಸಿಕೊಂಡಿದೆ. ಕಾರ್ಯಾಚರಣೆಗೊಳಿಸಲಾದ ಕಾರಿಡಾರ್‌ಗಳಿಂದ ಪಡೆದ ಅನುಭವದ ಆಧಾರದ ಮೇಲೆ ಬೆಳಗಿನ ಸಮಯದಲ್ಲಿ ಒಳ್ಳೆಯ ನೈಸರ್ಗಿಕ ಬೆಳಕು ಬರುವ ಹಾಗೆ ನಿಲ್ದಾಣಗಳ ವಿನ್ಯಾಸ ಮಾಡಲಾಗಿದೆ. ಇದೆಲ್ಲದರ ಜೊತೆಗೆ ಈ ಕೆಳಕಂಡ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳಲಾಗಿದೆ:



- ಸರ್ಕ್ಯೂಟ್‌ಗಳನ್ನು ತುರ್ತು (ಯುಪಿಎಸ್)/ಅತ್ಯಗತ್ಯ (ಡಿಜಿ)/ಸಾಮಾನ್ಯ (ಮುಖ್ಯ ಪೂರೈಕೆಯಿಂದ) ಎಂಬುದಾಗಿ ವಿಂಗಡಣೆ ಮಾಡಲಾಗಿದೆ.
- ರೆವಿನ್ಯೂ ಸೇವೆ ಮುಗಿದ ತರುವಾಯ ನಿಲ್ದಾಣಗಳಲ್ಲಿನ ಶೇ.80ರಷ್ಟು ದೀಪಗಳನ್ನು ಬಂದ್ ಮಾಡುವ ಮೂಲಕ ಎಂಸಿಬಿ ನಿಯಂತ್ರಣದೊಂದಿಗಿನ ಲೈಟ್ ಸರ್ಕ್ಯೂಟ್‌ಗಳನ್ನು ಬೇರ್ಪಡಿಸಲಾಗುವುದು.
- ಹವಾ ನಿಯಂತ್ರಣಗಳ ವ್ಯವಸ್ಥೆಗಳನ್ನು ಪುನರ್‌ಪರಿಶೀಲಿಸಲಾಗಿದೆ ಮತ್ತು ವಿಶೇಷವಾಗಿ ಡಿಪೋಗಳಲ್ಲಿ ವಿಆರ್‌ವಿ ತಂತ್ರಜ್ಞಾನದ ಹವಾನಿಯಂತ್ರಣಗಳನ್ನು ಅಳವಡಿಸಿದೆ.
- ಹಂತ–1ರ ಶೇ.80ರಷ್ಟು ನಿಲ್ದಾಣಗಳಲ್ಲಿ ಎಲ್‌ಇಡಿ ದೀಪಗಳನ್ನು ಹಾಕುವ ಮೂಲಕ ಸಾಂಪ್ರದಾಯಿಕ ದೀಪಗಳನ್ನು ಬದಲಾಯಿಸುವ ಕಾರ್ಯ ಈಗಾಗಲೇ ಪೂರ್ಣಗೊಂಡಿದೆ. ರಸ್ತೆ ಮಟ್ಟಕ್ಕೂ ಸಹ ಎಲ್‌ಇಡಿ ದೀಪಗಳನ್ನು ಹಾಕಲಾಗಿದೆ. ಈ ಕ್ರಮದಿಂದ ವಾರ್ಷಿಕ ರೂ.3.63 ಕೋಟಿ ಉಳಿತಾಯವಾಗಿದೆ ಎಂದು ಅಂದಾಜು ಮಾಡಲಾಗಿದೆ.
- ಲಿಫ್ಟ್‌ಗಳು ಮತ್ತು ಎಸ್ಕಲೇಟರುಗಳನ್ನು ಅವುಗಳ ಉಪಯೋಗಿಸದ ಸಮಯದಲ್ಲಿ ತಟಸ್ಥವಾಗಿರುವ ಮತ್ತು ಐಡ್ಲಿಂಗ್‌ನಲ್ಲಿರುವಂತೆ ವಿನ್ಯಾಸಗೊಳಿಸಿದೆ. ಎಸ್ಕಲೇಟರುಗಳನ್ನು ಸಹ ಸೆಕೆಂಡ್‌ಗೆ 0.5 ಎಂ ಅಥವಾ ಸೆಕೆಂಡ್‌ಗೆ 0.65 ಎಂ ಕಾರ್ಯಾಚರಣೆಯ ಸಾಧಾರಣ ವೇಗದಲ್ಲಿನ ಬದಲಾಗಿ ಸೆಕೆಂಡ್‌ಗೆ 0.2 ಎಂ ಐಡ್ಲಿಂಗ್ ವೇಗವನ್ನು ಹೊಂದಿರುವಂತೆ ರೂಪಿಸಲಾಗಿದೆ.
- ಎಸ್ಕಲೇಟರುಗಳು ಮತ್ತು ಲಿಫ್ಟ್‌ಗಳು ವಿವಿವಿಎಫ್ ಡ್ರೈವ್‌ಗಳಿಂದ ಕಾರ್ಯಾಚರಣೆಯಾಗುತ್ತವೆ.
- ವಿದ್ಯುತ್ ಒತ್ತಡವನ್ನು ಕಡಿಮೆ ಮಾಡಲು ಸ್ಕೈಲೈಟ್/ಪ್ರಕೃತಿದತ್ತ ಬೆಳಕನ್ನು ಉಪಯೋಗಿಸಲಾಗುತ್ತಿದೆ.
- ಯುಜಿ ನಿಲ್ದಾಣಗಳ ಹವಾನಿಯಂತ್ರಣ ಉಷ್ಣಾಂಶವನ್ನು ಪ್ರಯಾಣಿಕರ ಅಗತ್ಯತೆಯಂತೆ ಗರಿಷ್ಠ ಪ್ರಮಾಣಕ್ಕೆ ವ್ಯವಸ್ಥೆ ಮಾಡಿದೆ.
- ಉಷ್ಣಚಲನ ಶಾಸ್ತ್ರದ ಆಧಾರದ ಮೇಲೆ ಹವಾನಿಯಂತ್ರಣ ವ್ಯವಸ್ಥೆ ಸ್ವಯಂಚಾಲಿತವಾಗಿ ಮುಕ್ತ ಮೋಡ್‌ನಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಸಂದರ್ಭದಲ್ಲಿ ನೀರನ್ನು ಶೀತಲೀಕರಣಗೊಳಿಸುವ ಚಿಲ್ಲರ್‌ಗಳು ಬಂದ್ ಆಗಿರುತ್ತವೆ. ಮತ್ತು ತಾಜಾ ಗಾಳಿ ಮಾತ್ರ ಸಂಚರಿಸುತ್ತದೆ.
- ನಾನ್ ರೆವಿನ್ಯೂ ಸಮಯದಲ್ಲಿ ನೀರನ್ನು ಶೀತಲೀಕರಿಸುವ ಚಿಲ್ಲರ್‌ಗಳನ್ನು ಬಂದ್ ಮಾಡಲಾಗಿರುತ್ತದೆ. ಕ್ರಿಟಿಕಲ್ ಕೊಠಡಿಗಳಿಗೆ ಗಾಳಿಯನ್ನು ತಂಪು ಮಾಡುವ ಚಿಲ್ಲರ್‌ಗಳ ಮೂಲಕ ಹವಾನಿಯಂತ್ರಣ ಮಾಡಲಾಗಿದೆ. ಇವು ಕಡಿಮೆ ಸಾಮರ್ಥ್ಯದವುಗಳಾಗಿದ್ದು, ಈ ಮೂಲಕ ವಿದ್ಯುತ್ ಉಳಿತಾಯ ಮಾಡಲಾಗುತ್ತದೆ.
- ಎಲ್‌ಇಡಿ ದೀಪಗಳನ್ನು ಹಾಕುವ ಮೂಲಕ ಎಚ್‌ವಿಎಸ್‌ಪಿ ದೀಪಗಳನ್ನು ಬದಲಾಯಿಸಲಾಗಿದೆ.
- ಸ್ಪ್ಲಿಟ್ ಎಸಿಗಳು ಸಂದರ್ಭಾನುಸಾರವಾಗಿ ಕಾರ್ಯನಿರ್ವಹಿಸುತ್ತವೆ.
- ಪಂಪ್‌ಗಳ ಆಟೋಮೇಷನ್.

ತಂತ್ರಜ್ಞಾನ ಅಳವಡಿಕೆ

ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳದೆ, ಭಾರತದಲ್ಲಿ ತಯಾರಾದ ಸಾಧನ ಸಲಕರಣೆ ಸಬ್ ಅಸೆಂಬ್ಲಿಗಳನ್ನು ಮತ್ತು ಉಪಕರಣಗಳನ್ನು ಬಳಕೆ ಮಾಡಲು ಉತ್ತೇಜನ ನೀಡಲಾಗಿದೆ. ಅಂತರರಾಷ್ಟ್ರೀಯ ಗುಣಮಟ್ಟ ಒಳಗೊಂಡ ಇಂಧನ ಕ್ಷಮತೆಯ ಪಂಪ್‌ಗಳು, ಮೋಟಾರುಗಳು, ದೀಪಗಳು, ಅಗ್ನಿನಿರೋಧಕ ಕಡಿಮೆ ಪ್ರಮಾಣದ ಹೊಗೆ ಸೂಸುವ ಶೂನ್ಯ ಹಾಲೋಜಿನ್ (FRLSIH) ಕೇಬಲ್‌ಗಳು, ಅಗ್ನಿ ನಿರೋಧಕ ಬಾಗಿಲುಗಳನ್ನು ಕಂಪನಿಯ ಆಣತಿಯಂತೆ ಭಾರತೀಯ ಕೈಗಾರಿಕೆಗಳು ತಯಾರಿಸಿದ್ದು, ಇವುಗಳನ್ನೇ ಬಳಸಲಾಗಿದೆ. CO2 ಫೈರ್ ಪ್ರೊಟೆಕ್ಷನ್ ಫ್ಲಡಿಂಕ್ ಸಿಸ್ಟಮ್‌ಗೆ ಬದಲಾಗಿ FM200 ಫ್ಲಡಿಂಗ್ ಸಿಸ್ಟಮ್ ಅನ್ನು ನೆಲಮಾಳಿಗೆ ನಿಲ್ದಾಣಗಳಲ್ಲಿ ಉಳಿಸಲಾಗಿದೆ. ನೆಲಮಾಳಿಗೆ ನಿಲ್ದಾಣಗಳಲ್ಲಿನ ಎಎಸ್‌ಎಸ್ ಮತ್ತು ಟಿಎಸ್‌ಎಸ್ ಕೊಠಡಿಗಳಲ್ಲಿ ಇಂಟರ್‌ಜೆನ್ ಗ್ಯಾಪ್ ಫೈರ್ ಪ್ರೊಟೆಕ್ಷನ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಅನ್ನು ಅನುಷ್ಠಾನಗೊಳಿಸಲಾಗಿದೆ.



ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ವೆರಿಯಬಲ್ ಫ್ರೀಕ್ವೆನ್ಸಿ ಡ್ರೈವ್ಸ್

ಕನ್‌ಕೋರ್ಸ್ ಮತ್ತು ಪ್ಲಾಟ್‌ಫಾರಂನ ಉಷ್ಣಾಂಶದ ಆಧಾರದ ಮೇಲೆ ಅಗತ್ಯವಾದ ವಾಯು ಸಂಚಲನ ನಿಯಂತ್ರಣಕ್ಕಾಗಿ ಮೋಟಾರುಗಳ ಫ್ರೀಕ್ವೆನ್ಸಿ ಸೆಟ್ಟಿಂಗ್‌ಗಾಗಿ ಇನ್‌ಬಿಲ್ಟ್ ನಿಯಂತ್ರಕಗಳೊಡನೆ ವೆರಿಯೆಬಲ್ ಫ್ರೀಕ್ವೆನ್ಸಿ ಡ್ರೈವ್ ಅನ್ನು ಎಲ್ಲಾ ನೆಲಮಾಳಿಗೆ ನಿಲ್ದಾಣಗಳಲ್ಲಿನ ಹಂತ–1 ಎಚ್‌ವಿಎಸಿ ಸಿಸ್ಟಮ್‌ಗಳಲ್ಲಿ ಅಳವಡಿಸಲಾಗುತ್ತಿದೆ. ಎಚ್‌ವಿಎಸಿ ಸಿಸ್ಟಮ್‌ನಲ್ಲಿ ವಿಎಫ್‌ಡಿ ಅಳವಡಿಸುವ ಮೂಲಕ ವಾರ್ಷಿಕ ರೂ.2.54 ಕೋಟಿ ಉಳಿತಾಯ ಮಾಡಲಾಗುವುದು ಮತ್ತು ಅಳವಡಿಕೆಯ ವೆಚ್ಚವನ್ನು 2 ವರ್ಷಗಳಲ್ಲಿ ಮರಳಿ ಪಡೆಯಲಾಗುವುದು. ಹಂತ–2ರಲ್ಲಿ ಪ್ಲಾಟ್‌ಫಾರಂ ಸ್ಕ್ರೀನ್ ಬಾಗಿಲುಗಳ ಅಳವಡಿಕೆ ಮತ್ತುತ ಎಚ್‌ವಿಎಸಿ ಸಿಸ್ಟಮ್‌ನಲ್ಲಿ ತಂತ್ರಜ್ಞಾನ ಮೇಲ್ದರ್ಜೆಗೇರಿಸುವಿಕೆಗೆ ಯೋಜಿಸಲಾಗಿದೆ. ಇದರಿಂದ 30 ವರ್ಷಗಳಲ್ಲಿ ರೂ.607.27 ಕೋಟಿ ಒಟ್ಟು ನಿವ್ವಳ ಉಳಿತಾಯವಾಗುವುದೆಂದು ಅಂದಾಜು ಮಾಡಲಾಗಿದೆ.

ಬ್ರೇಕಿಂಗ್ ಅವಧಿಯಲ್ಲಿ ಉಂಟಾಗುವ ಗರಿಷ್ಠ ಪ್ರಮಾಣದ ಮರು ಉತ್ಪಾದನೆ ಇಂಧನವನ್ನು ಸಂಗ್ರಹಿಸಲು ರೋಲಿಂಗ್ ಸ್ಟಾಕ್‌ನ ವಿನ್ಯಾಸವನ್ನು ಮೇಲ್ದರ್ಜೆಕೇರಿಸುವ ಮೂಲಕ ಇಂಧನ ಬಳಕೆಯ ಉಳಿತಾಯ

ಕಂಪನಿಯು ಶೇ.22ಕ್ಕೂ ಹೆಚ್ಚಿನ ಪುನರ್ ಉತ್ಪಾದನಾ ಇಂಧನ ನೀಡುವ ಶೇ.66ರಷ್ಟು ಮೋಟಾರೀಕೃತ ರೈಲಿನ ವಿನ್ಯಾಸವನ್ನು ಶೇ.50ರಷ್ಟು ಮೋಟಾರೈಜೇಶನ್ ಒಳಗೊಂಡ ರೈಲಿನ ವಿನ್ಯಾಸಕ್ಕೆ ಬದಲಾಗಿ ಅಳವಡಿಸಿಕೊಂಡಿದೆ. ಎಚ್‌ವಿಎಸಿಯಲ್ಲಿನ ಇಂಧನ ಬಳಕೆಯನ್ನು ಕನಿಷ್ಠಗೊಳಿಸಲು, ಇಂಟರ್‌ಮೀಡಿಯೇಟ್ ಕಾರ್‌ಗಳಲ್ಲಿ ಇಂಧನ ಕ್ಷಮತೆಯ ಸ್ಕ್ರಾಲ್ ಕಂಪ್ರೆಸರ್‌ಗಳನ್ನು ಬಳಸಲಾಗಿದೆ. ಇದರಿಂದ ಮೂಲ 3–ಕಾರ್ ಸೆಟ್‌ಗೆ ಹೋಲಿಸಿದರೆ ಶೇ.25ರಷ್ಟು ಇಂಧನ ಉಳಿತಾಯವಾಗುವುದು. ಕಂಪನಿಯು ತೈಲರಹಿತ ಬ್ರೇಕ್ ಕಂಪ್ರೆಸಾರ್ ಅನ್ನು ಮೆಟ್ರೋ ಕಾರ್‌ಗಳಲ್ಲಿ ಅನುಷ್ಠಾನಗೊಳಿಸಿದೆ. ಇದು ಪರಿಸರ ಸ್ನೇಹಿಯಾಗಿರುವುದಲ್ಲದೆ ವೆಚ್ಚವನ್ನು ಉಳಿತಾಯ ಮಾಡುವುದು.

ನಿರ್ದೇಶಕರ ಹೊಣೆಗಾರಿಕೆ ಹೇಳಿಕೆ

ಕಂಪನಿಗಳ ಕಾಯ್ದೆ 2013ರ ವಿಧಿ 134ರ ಉಪ–ವಿಧಿ (5)ರ ಅನುಸಾರ ನಿಮ್ಮ ನಿರ್ದೇಶಕರು ತಿಳಿಸುವುದೇನೆಂದರೆ:

(a) 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಲ್ಲಿ, ಯಾವುದೇ ಇದ್ದಲ್ಲಿ ಅಂತಹ ವಾಸ್ತವಿಕ ಮಾರ್ಗಾನುಸರಣೆಗೆ ಸಂಬಂಧಿಸಿದಂತೆ ಸೂಕ್ತವಾದ ವಿವರಣೆಗಳೊಡನೆ ಅನ್ವಯವಾಗುವ ಲೆಕ್ಕಪತ್ರಗಳ ಮಾನದಂಡಗಳನ್ನು ಅನುಸರಿಸಲಾಗಿದೆ.

(b) ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ನಮೂದಿಸಲಾಗಿರುವಂತಹ ಲೆಕ್ಕ ನಿರ್ವಹಣಾ ನೀತಿಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಸುಸ್ಥಿರವಾಗಿ ಅನ್ವಯ ಮಾಡಲಾಗಿದೆ ಮತ್ತು 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿ ಮತ್ತು ಇದೇ ದಿನಾಂಕದಂದು ಮುಕ್ತಾಯಗೊಂಡ ವರ್ಷದ ಕಂಪನಿಯ ಲಾಭ ಅಥವಾ ನಷ್ಟದ ಬಗ್ಗೆ ನೈಜವಾದ ಮತ್ತು ನ್ಯಾಯಸಮ್ಮತವಾದ ಚಿತ್ರಣವನ್ನು ನೀಡುವ ನ್ಯಾಯೋಚಿತ ಮತ್ತು ವಿವೇಕಪೂರ್ಣವಾದ ತೀರ್ಮಾನ ಮತ್ತು ಅಂದಾಜುಗಳನ್ನು ಮಾಡಲಾಗಿದೆ.

(c) ಕಂಪನಿಯ ಆಸ್ತಿಗಳ ಸುರಕ್ಷತೆಗಾಗಿ ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ತಿದ್ದುಪಡಿಯಾದಂತೆ, ಕಂಪನಿಗಳ ಕಾಯ್ದೆ 2013ರ ಉಪಬಂಧಗಳ ಅನುಸಾರ ಸಾಕಷ್ಟು ಮಟ್ಟದಲ್ಲಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಣೆ ಮಾಡಲು ಸೂಕ್ತವಾದ ಮತ್ತು ಸಾಕಷ್ಟು ಪ್ರಮಾಣದ ಎಚ್ಚರಿಕೆ ವಹಿಸಲಾಗಿದೆ.

(d) ವಾರ್ಷಿಕ ಹಣಕಾಸಿನ ಹೇಳಿಕೆಗಳನ್ನು ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.

(e) ಸೂಕ್ತವಾದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಅಳವಡಿಸಿಕೊಂಡಿದೆ. ಸದರಿ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಅವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

(f) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಸರಿಸುವುದನ್ನು ಖಾತರಿ ಪಡಿಸುವ ವ್ಯವಸ್ಥೆ ಜಾರಿಯಲ್ಲಿದ್ದು, ಅದು ಸಾಕಷ್ಟು ಪ್ರಮಾಣದಲ್ಲಿರುವುದು ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು.



ಕೃತಜ್ಞತೆಗಳು

ಭಾರತ ಸರ್ಕಾರದ ವಿವಿಧ ಸಚಿವಾಲಯಗಳು ಅದರಲ್ಲೂ ವಿಶೇಷವಾಗಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ, ನಗರಾಭಿವೃದ್ಧಿ ಇಲಾಖೆ, ಆರ್ಥಿಕ ಇಲಾಖೆ ಇತ್ಯಾದಿ ಸೇರಿದಂತೆ ಕರ್ನಾಟಕ ಸರ್ಕಾರದ ವಿವಿಧ ಸಚಿವಾಲಯಗಳು/ಇಲಾಖೆಗಳಿಂದ, ಬಹುಪಕ್ಷೀಯ ಸಾಲ ನೀಡಿಕೆ ಏಜೆನ್ಸಿಗಳಾದ ಜೆಐಸಿಎ, ಎಎಫ್‌ಡಿ, ಇಐಬಿ, ಎಐಐಬಿ ಮತ್ತು ಇತರೆ ಹಣಕಾಸು ಸಂಸ್ಥೆಗಳಾದ ಹುಡ್ಕೋ, ವಾಣಿಜ್ಯ ಬ್ಯಾಂಕ್‌ಗಳು, ಡೆಟ್ ಸೆಕ್ಯೂರಿಟಿಯಲ್ಲಿನ (ಬಾಂಡ್‌ಗಳು) ಹೂಡಿಕೆದಾರರು, ವಿಸ್ತ್ರಾ, ಐಟಿಸಿಎಲ್ (ಇಂಡಿಯಾ) ಲಿಮಿಟೆಡ್ (ಡಿಬೆಂಚರ್ ಟ್ರಸ್ಟೀ), ಆರ್ಥಿಕ ಸಲಹೆಗಾರರು, ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು, ಬಿಬಿಎಂಪಿ, ಬಿಡಿಎ, ಕೆಐಎಡಿಬಿ, ಬೆಸ್ಕಾಂ, ಬಿಎಂಟಿಸಿ, ಕೆಪಿಟಿಸಿಎಲ್ ಹಾಗೂ ಬೆಂಗಳೂರು ಸಂಚಾರ ಪೊಲೀಸ್ (ಬಿಟಿಪಿ) ಇವರುಗಳಿಂದ ದೊರೆತ ಅತ್ಯಮೂಲ್ಯ ಸಲಹೆ, ಸಹಕಾರ ಮತ್ತು ಬೆಂಬಲಕ್ಕಾಗಿ ನಿಮ್ಮ ನಿರ್ದೇಶಕರು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುವರು.

ಪ್ರಸಕ್ತ ವರ್ಷದಲ್ಲಿ ಕಾಲಕಾಲಕ್ಕೆ ಮುಕ್ತಮನಸ್ಸಿನಿಂದ ಮತ್ತು ನಿರಂತರವಾದ ಬೆಂಬಲ, ಮಾರ್ಗದರ್ಶನ, ಸಲಹೆ, ನೆರವು ಮತ್ತು ಸಹಕಾರ ನೀಡಿದ್ದಕ್ಕಾಗಿ ಸರ್ಕಾರದ ಎಲ್ಲಾ ಏಜೆನ್ಸಿಗಳು, ಇಲಾಖೆಗಳು, ಬ್ಯಾಂಕರುಗಳು, ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ, ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಪ್ರತಿಯೊಬ್ಬ ಉತ್ತರದಾಯಿಗಳು ಇವರುಗಳಿಗೆ ಮನಃಪೂರ್ವಕವಾಗಿ ಮೆಚ್ಚುಗೆ ಹಾಗೂ ಹೃತ್ಪೂರ್ವಕ ಧನ್ಯವಾದಗಳನ್ನು ನಿಮ್ಮ ನಿರ್ದೇಶಕರು ಸಮರ್ಪಿಸುವರು ಮತ್ತು ಮುಂದೆಯೂ ಕೂಡ ಇದೇ ರೀತಿಯ ಸಹಕಾರ ಪಡೆಯುವ ಭರವಸೆ ಹೊಂದಿರುವರು.

ಅನುಪಮ ಕೊಡುಗೆ ಸಲ್ಲಿಸಿರುವ ಕಂಪನಿಯ ಎಲ್ಲಾ ಗುತ್ತಿಗೆದಾರರು ಹಾಗೂ ಸದರಿ ಪ್ರಮುಖ ಯೋಜನೆ ಅನುಷ್ಠಾನಕ್ಕೆ ಭಾಗಸ್ಥರಾಗಿರುವ ಇತರೆ ಎಲ್ಲರೂ ಮಾಡಿದ ಪ್ರಾಮಾಣಿಕ ಪರಿಶ್ರಮಕ್ಕಾಗಿ ನಿಮ್ಮ ನಿರ್ದೇಶಕರು ವಂದನೆ ಸಲ್ಲಿಸುವರು. ಯೋಜನೆಯ ಕಾರ್ಯನಿರ್ವಹಣೆ ಸಮಯದಲ್ಲಿ ಮೆಟ್ರೋ ಮಾರ್ಗದಿಂದ ತೊಂದರೆಗೆ ಒಳಗಾದ ಪ್ರದೇಶದಲ್ಲಿ ಅನಾನುಕೂಲ ಉಂಟಾಗಿದ್ದರೂ ಕೂಡ ತಮ್ಮ ಬೆಂಬಲವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವುದಕ್ಕಾಗಿ ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ನಿಮ್ಮ ನಿರ್ದೇಶಕರು ಧನ್ಯವಾದ ಸಲ್ಲಿಸುವರು. ನಿಮ್ಮ ಸಹಕಾರ ಮತ್ತು ಬೆಂಬಲವಿಲ್ಲದಿದ್ದರೆ ಬೆಂಗಳೂರು ನಗರದಲ್ಲಿ ಈ ಪ್ರತಿಷ್ಠಿತ ಯೋಜನೆ ಅನುಷ್ಠಾನ ಸಾಧ್ಯವಾಗುತ್ತಿರಲಿಲ್ಲ.

ಪ್ರಸ್ತುತ ವರ್ಷದಲ್ಲಿ ಯೋಜನೆಯ ಪ್ರಗತಿಗೆ ಮತ್ತು ಯೋಜನೆಯ ಕಾರ್ಯಾಚರಣೆಗೆ ಹಾಗೂ ಕಂಪನಿಯು ಕಾರ್ಯಾಚರಣೆಯನ್ನು ಸರಾಗವಾಗಿ ನಡೆಸಲು ಕಂಪನಿಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ನೀಡಿದ ಸಹಕಾರಕ್ಕಾಗಿ ನಿಮ್ಮ ನಿರ್ದೇಶಕರು ಮೆಚ್ಚುಗೆ ಮತ್ತು ಕೃತಜ್ಞತೆ ಸಲ್ಲಿಸುವರು.

ನಿರ್ದೇಶಕರ ಮಂಡಳಿಯ ಪರವಾಗಿ ಮತ್ತು ಅವರ ಹೆಸರಿನಲ್ಲಿ

ಸಹಿ/–
(ದುರ್ಗಾಶಂಕರ್ ಮಿಶ್ರಾ)
ಅಧ್ಯಕ್ಷರು

ದಿನಾಂಕ : 25.09.2019
ಸ್ಥಳ : ನವ ದೆಹಲಿ



2018–19ನೇ ಸಾಲಿನ ಕಾರ್ಪೊರೇಟ್ ಆಡಳಿತ ವರದಿ:

ನಿಮ್ಮ ಸಂಸ್ಥೆ (ಕಂಪನಿ)ಯು ಅತ್ಯುತ್ತಮ ಕಾರ್ಪೊರೇಟ್ ಆಡಳಿತ ವಿಧಾನಗಳನ್ನು ಅಳವಡಿಸಿಕೊಳ್ಳುವುದಕ್ಕೆ ಬದ್ಧವಾಗಿದೆ ಮತ್ತು ಅದರ ಸಮಗ್ರತೆ, ಆಡಳಿತ ಮತ್ತು ಒಳ್ಳೆಯ ವ್ಯಾವಹಾರಿಕ ವಿಧಾನಗಳು ತುಂಬಾ ಉಚ್ಚ ಮಟ್ಟದ್ದಾಗಿವೆ. ಕಂಪನಿಯು ಅತ್ಯುತ್ತಮ ಆಡಳಿತ ಮತ್ತು ಬಹಿರಂಗಗೊಳಿಸುವಿಕೆ (ಮುಕ್ತವಿಧಾನ) ವಿಧಾನಗಳನ್ನು ಅಳವಡಿಸುವ ಮೂಲಕ ಶ್ರೇಷ್ಠವಾದುದನ್ನೇ ಸಾಧಿಸಲು ನಿರಂತರ ಶ್ರಮಿಸುತ್ತದೆ. ಅಂತೆಯೇ ತನ್ನ ಎಲ್ಲ ಹಿತಾಸಕ್ತಕ (ಸದಸ್ಯರುಗಳ) ಹಿತಾಸಕ್ತಿಯನ್ನು ಖಂಡಿತವಾಗಿ ಎತ್ತಿ ಹಿಡಿಯುತ್ತದೆ. ಆದ್ದರಿಂದ ಮಂಡಳಿಯು ನಿರಂತರವಾಗಿ ಅತ್ಯುತ್ತಮ ಆಡಳಿತ ಅಂಶಗಳನ್ನು ಕಂಪನಿಯಿಂದ ಪಾಲಿಸುವಂತಾಗಲಿ, ಅವುಗಳ ಅನ್ವೇಷಣೆ, ಗುರುತಿಸುವಿಕೆ ಮತ್ತು ಕ್ರಮಾಗತಗೊಳಿಸುವುದನ್ನು ಮುಂದುವರಿಸಿದೆ. ಕಾರಣ ಇದೇ ರೀತಿಯಲ್ಲಿ ಇತರ ಮೆಟ್ರೋ ನಿಗಮಗಳು ವಿಶೇಷ ದೆಹಲಿ ಮೆಟ್ರೋ ನಿಗಮವು ಅನುಸರಿಸುತ್ತಿರುವುದನ್ನೇ ಗಮನದಲ್ಲಿಟ್ಟುಕೊಂಡಿದೆ.

ಈ ವರದಿಯು ಕಂಪನಿಯು ಅಳವಡಿಸಿಕೊಂಡಿರುವ ಕಾರ್ಪೊರೇಟ್ ಆಡಳಿತ ವಿಧಾನಗಳನ್ನು ವಿವರಿಸುತ್ತದೆ, ಅದರಲ್ಲಿ ವಿಶೇಷವಾಗಿ ಅದು ಯಾವ ರೀತಿಯಾಗಿ ಒಳ್ಳೆಯ ಕಾರ್ಪೊರೇಟ್ ಆಡಳಿತದ ತತ್ವಗಳು ಮತ್ತು ವಿಧಾನಗಳನ್ನು ಅನ್ವಯಿಸಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಬೆಂಗಳೂರು ಮೆಟ್ರೋ ಸಾರ್ವಜನಿಕ ಕಂಪನಿಗಳ ಪಟ್ಟಿಯಲ್ಲಿಲ್ಲದ ಕಂಪನಿಯಾಗಿದ್ದರೂ ರೂಢಿಯಲ್ಲಿರುವ ಕಾರ್ಪೊರೇಟ್ ಆಡಳಿತ ತತ್ವಗಳು ಅಂದರೆ ಮೌಲ್ಯ, ನೈತಿಕತೆ ಮತ್ತು ಅತ್ಯುತ್ತಮವಾದ ಅಂಶಗಳನ್ನೇ ಅಳವಡಿಸಿಕೊಳ್ಳಬೇಕೆನ್ನುವ ಬದ್ಧತೆ ಗಮನದಲ್ಲಿಟ್ಟುಕೊಂಡು ನಿಮ್ಮ ನಿರ್ದೇಶಕರು, ಕೆಳಕಂಡ ಕಾರ್ಪೊರೇಟ್ ಆಡಳಿತ ವರದಿಯನ್ನು ಕಂಪನಿಯ ಸದಸ್ಯರುಗಳ ಮುಂದೆ ಮಂಡಿಸುತ್ತದೆ.

ಬಿಎಂಆರ್‌ಸಿಎಲ್ ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ತನಗೆ ಅನ್ವಯಿಸಬಹುದಾದ ವಿವಿಧ ಶಾಸನಬದ್ಧ ಕಾಯ್ದೆಗಳ ಮೂಲಕ ನಿರ್ದೇಶಿಸಲ್ಪಡುತ್ತದೆ. ಕೆಟಿಪಿಪಿ ಕಾಯ್ದೆ 1999, ಸಿವಿಸಿ ಮಾರ್ಗಸೂಚಿಗಳು, ಕಂಪನಿ ಕಾಯ್ದೆ 2013, ಕಂಪನಿಯ ಸಾಂಘಿಕ ಉಪಬಂಧಗಳು, ಅನ್ವಯಿಸಬಹುದಾದ ಲೆಕ್ಕಪತ್ರ ಮತ್ತು ಸಚಿವಾಲಯ ಮಾನದಂಡಗಳು, ಕಂಟ್ರೋಲರ್ ಮತ್ತು ಅಕೌಂಟೆಂಟ್ ಜನರಲ್ ರಂತಹ ಶಾಸನಾತ್ಮಕ ಪ್ರಾಧಿಕಾರಗಳು ಗೊತ್ತುಪಡಿಸಿರುವ ನಿಯಮಾವಳಿಗಳು, ಹೊರಡಿಸಿರುವ ಸೂಚನೆಗಳು, ಮಾಹಿತಿ ಹಕ್ಕು ಕಾಯ್ದೆ 2005ರ ಉಪ ನಿಯಮಗಳು ಮತ್ತು ಅದರಡಿ ರಚಿಸಲಾಗಿರುವ ನಿಯಮಗಳು ಇತ್ಯಾದಿ ಹೆಸರಿಸಬಹುದಾದ ಕೆಲವು ಪ್ರಮುಖ ಕಾಯ್ದೆಗಳು ಮತ್ತು ನಿಯಮಾವಳಿಗಳಾಗಿವೆ. ಇದರೊಂದಿಗೆ ಸಂಸ್ಥೆಯ ಕರ್ತವ್ಯ ನಿರ್ವಹಣೆಯಲ್ಲಿ ಸುರಕ್ಷತೆ, ಆರೋಗ್ಯ, ಪರಿಸರ, ಸಿಬ್ಬಂದಿಯವರ ಮತ್ತು ಗುತ್ತಿಗೆಯ ಮೇಲೆ ನೇಮಕಗೊಂಡವರ ಕಲ್ಯಾಣ ಮತ್ತು ಯೋಜನೆಯಿಂದ ಬಾಧಿತರಾದ ವ್ಯಕ್ತಿಗಳಿಗೆ ಸೂಕ್ತ ಪರಿಹಾರದ ನಿಯಮಗಳು, ಪುನರ್ವಸತಿ ಮತ್ತು ಪುನರ್‌ಸ್ಥಾಪನೆಗೆ ಸಂಬಂಧಿಸಿದ ನಿಯಮಗಳನ್ನು ಪಾಲಿಸಲಾಗುತ್ತಿದೆ.

ನಿರ್ದೇಶಕರ ಮಂಡಳಿ:

ಕಂಪನಿಯ ಸಂಘದ ನಿಯಮಗಳನುಸಾರ ಮಂಡಳಿಯ ಸಂಖ್ಯಾ ಸಾಮರ್ಥ್ಯವು 3 ಜನ ನಿರ್ದೇಶಕರುಗಳಿಗಿಂತಲೂ ಕಡಿಮೆ ಇರದಂತೆ ಮತ್ತು 15 ಜನ ನಿರ್ದೇಶಕರು ಮೀರದಂತೆ ಇರಬೇಕು. ಇದು ಪರ್ಯಾಯ ನಿರ್ದೇಶಕರು ಮತ್ತು ಸಾರ್ವಜನಿಕ ಹಣಕಾಸು ಸಂಸ್ಥೆಗಳು ಅಥವಾ ಇತರ ಸಾಲ ನೀಡುವ ಸಂಸ್ಥೆಗಳು ನೇಮಿಸುವ ನಿರ್ದೇಶಕರನ್ನು ಹೊರತುಪಡಿಸಿರುತ್ತದೆ. ಈ ನಿರ್ದೇಶಕರುಗಳು ಪೂರ್ಣಾವಧಿ ಕಾರ್ಯನಿರ್ವಹಣಾ ನಿರ್ದೇಶಕರು ಅಥವಾ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಅರೆಕಾಲಿಕ ನಿರ್ದೇಶಕರಾಗಿರಬಹುದು.

ಮಂಡಳಿಯ ರಚನೆ:

ನಿಮ್ಮ ಕಂಪನಿಯು ಕಂಪನಿಗಳ ಕಾಯ್ದೆ 2013 (ಕಾಯ್ದೆ)ರ ಸೆಕ್ಷನ್ 2(45)ರ ಅರ್ಥ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಕಂಪನಿಯಾಗಿದೆ ಮತ್ತು ಪ್ರಸ್ತುತ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ಜಂಟಿ ಉದ್ಯಮವಾಗಿದೆ. ಕಂಪನಿಯ ಒಟ್ಟು ಚಂದಾವಂತಿಗೆ ಮತ್ತು ಪಾವತಿಯಾಗಿರುವ ಷೇರು ಬಂಡವಾಳವು ಸಮಾನುಪಾತದಲ್ಲಿ (50:50) ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಹೊಂದಿವೆ. ಎರಡೂ ಸರ್ಕಾರಗಳಿಗೂ ನಿರ್ದೇಶಕರ ಮಂಡಳಿಗೆ ತಲಾ ಐವರು (5) ನಿರ್ದೇಶಕರನ್ನು ನಾಮ ನಿರ್ದೇಶನ ಮಾಡುವ ಹಕ್ಕಿದೆ. ಭಾರತ ಸರ್ಕಾರಕ್ಕೆ ಅರೆಕಾಲಿಕ ಕಾರ್ಯಕಾರೇತರ ಅಧ್ಯಕ್ಷರನ್ನು ನೇಮಕ ಮಾಡುವ ಹಕ್ಕು ಮತ್ತು ಕರ್ನಾಟಕ ಸರ್ಕಾರಕ್ಕೆ ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಕಾತಿ ಮಾಡುವ ಹಕ್ಕೂ ಇದೆ.



ಮಂಡಳಿಯ ಸಂರಚನೆ

2018–19ನೇ ಆರ್ಥಿಕ ವರ್ಷದ ಅಂತ್ಯದಲ್ಲಿದ್ದಂತೆ ಮಂಡಳಿಯು ಕೆಳಕಂಡ ನಿರ್ದೇಶಕರನ್ನು ಒಳಗೊಂಡಿತ್ತು.

ಕ್ರ.ಸಂ.	ಮಂಡಳಿಯ ಸಂರಚನೆ	
1.	ಶ್ರೀ ದುರ್ಗಾಶಂಕರ್ ಮಿಶ್ರಾ	ಅಧ್ಯಕ್ಷರು
2.	ಶ್ರೀ ಅಜಯ್ ಸೇಠ್	ವ್ಯವಸ್ಥಾಪಕ ನಿರ್ದೇಶಕರು
3.	ಶ್ರೀ ಎಂ.ಕೆ. ಸಿನ್ಹಾ	ನಿರ್ದೇಶಕರು
4.	ಶ್ರೀ ಪ್ರದೀಪ್ ಎಂ. ಸಿಕ್ದರ್	ನಿರ್ದೇಶಕರು
5.	ಶ್ರೀ ಕೆ.ಕೆ. ಸಬರವಾಲ್	ನಿರ್ದೇಶಕರು
6.	ಡಾ॥ ಎಂ. ರವಿಕಾಂತ್	ನಿರ್ದೇಶಕರು
7.	ಶ್ರೀ ಮಹೇಂದ್ರ ಜೈನ್	ನಿರ್ದೇಶಕರು
8.	ಶ್ರೀ ಐ.ಎಸ್.ಎನ್. ಪ್ರಸಾದ್	ನಿರ್ದೇಶಕರು
9.	ಶ್ರೀಮತಿ ವಂದಿತಾ ಶರ್ಮಾ	ನಿರ್ದೇಶಕರು
10.	ಡಾ॥ ಇ.ವಿ. ರಮಣರೆಡ್ಡಿ	ನಿರ್ದೇಶಕರು
11.	ಶ್ರೀ ವಿಜಯಕುಮಾರ್ ಧಿರ್	ನಿರ್ದೇಶಕರು (ಯೋಜನೆಗಳು ಮತ್ತು ಪ್ಲಾನಿಂಗ್)
12.	ಶ್ರೀ ಎನ್.ಎಮ್. ಧೋಕೆ	ನಿರ್ದೇಶಕರು (ರೋಲಿಂಗ್ ಸ್ಟಾಕ್, ವಿದ್ಯುತ್, ಸೂಚಕಗಳು ಮತ್ತು ದೂರಸಂಪರ್ಕ)

ಜವಾಬ್ದಾರಿಗಳು:

ಸರ್ಕಾರದಿಂದ ಕಂಪನಿಗೆ ವಹಿಸಿರುವ ಗುರಿ ಅಥವಾ ಉದ್ದೇಶವನ್ನು ಪೂರ್ಣಪ್ರಮಾಣದಲ್ಲಿ ಈಡೇರಿಸುವ ಪ್ರೇರಕ ಮತ್ತು ಮಾರ್ಗದರ್ಶನ ಶಕ್ತಿಯಾಗಿರುವುದರ ಜೊತೆಜೊತೆಗೆ ಷೇರುದಾರರ ಷೇರು ಮೌಲ್ಯವನ್ನು ಕಾಪಾಡುವುದು ಮತ್ತು ವೃದ್ಧಿಸುವುದೇ ಮಂಡಳಿಯ ಪ್ರಾಥಮಿಕ ಹೊಣೆಯಾಗಿದೆ. ಕಂಪನಿಯು ತನ್ನ ಧ್ಯೇಯೋದ್ದೇಶಗಳ ಸಾಧನೆಗೆ ಅಗತ್ಯ ಗುರಿ ಮತ್ತು ನೀತಿಗಳನ್ನು ಹೊಂದಿರುವುದನ್ನು ಮಂಡಳಿಯು ನೋಡಿಕೊಳ್ಳುತ್ತದೆ. ಅದು ಕಂಪನಿಯ ಯೋಜನಾ ಮಾರ್ಗದ ಉಸ್ತುವಾರಿ ವಹಿಸುತ್ತದೆ. ಕಾರ್ಪೊರೇಟ್ ಕಾರ್ಯನಿರ್ವಹಣೆಯನ್ನು ಪರಾಮರ್ಶಿಸುತ್ತದೆ. ಯೋಜನಾ ನಿರ್ಣಯ ಕೈಗೊಳ್ಳಲು ಅಧಿಕಾರ ನೀಡುತ್ತದೆ ಮತ್ತು ಮೇಲುಸ್ತುವಾರಿ ಮಾಡುತ್ತದೆ. ನಿಯಮಾವಳಿಗಳ ಪಾಲನೆ ಮತ್ತು ಕಂಪನಿಯ ವಿವಿಧ ಹಕ್ಕು ಬಾಧ್ಯಸ್ಥರ ಹಿತಾಸಕ್ತಿ ರಕ್ಷಣೆಯನ್ನು ದೃಢೀಕರಿಸುತ್ತದೆ. ಇದಲ್ಲದೆ ಕಂಪನಿಯು ವೃತ್ತಿಪರತೆಯೊಂದಿಗೆ ನಿರ್ವಹಿಸುತ್ತಿರುವುದರ ಮೂಲಕ ಅದರ ಹಕ್ಕು ಬಾಧ್ಯಸ್ಥರ ಆಶೋತ್ತರಗಳನ್ನು ಮತ್ತು ಸಾಮಾಜಿಕ ನಿರೀಕ್ಷೆಗಳನ್ನು ಈಡೇರಿಸುವುದನ್ನು ಮಂಡಳಿಯು ನೋಡಿಕೊಳ್ಳುತ್ತದೆ. ಮಂಡಳಿಯ ಸದಸ್ಯರು ಹೊಂದಿರುವ ಜವಾಬ್ದಾರಿಗಳು ಅವರು ಕಂಪನಿಯ ನಿರ್ದೇಶಕರಾಗಿ ನಿರ್ವಹಿಸಬೇಕಾಗಿರುವ ಜವಾಬ್ದಾರಿಗಳ ಮೇಲೆ ಯಾವುದೇ ರೀತಿಯ ಪ್ರತಿಕೂಲತೆ ಉಂಟಾಗದಂತೆಯೂ ಸಹ ಜಾಗರೂಕತೆ ವಹಿಸುತ್ತದೆ.

ಮಂಡಳಿ / ಸಮಿತಿ ಸಭೆ ಮತ್ತು ವಿಧಾನ

a) **ಮಂಡಳಿ / ಸಮಿತಿ ಸಭೆಗಾಗಿ ವೇಳಾಪಟ್ಟಿ ಮತ್ತು ವಿಷಯವಾರು ಆಯ್ಕೆ**

- ಮಂಡಳಿಯ/ಸಮಿತಿ ಸಭೆಗಳನ್ನು ನಡೆಸುವ ಬಗ್ಗೆ ಮಂಡಳಿಯ/ಸಮಿತಿಯ ಅಧ್ಯಕ್ಷರ ಅನುಮೋದನೆ ಪಡೆದುಕೊಂಡ ನಂತರ ಸೂಕ್ತ ಸೂಚನೆ ನೀಡುವ ಮೂಲಕ ಸಭೆ ಕರೆಯಬೇಕು. ಎಲ್ಲ ಪ್ರಮುಖ ವಿಷಯಗಳ ಕುರಿತು ವಿವರವಾದ ವಿಷಯ ಟಿಪ್ಪಣಿ, ವ್ಯವಸ್ಥಾಪನಾ ಮಾಹಿತಿ ವರದಿಗಳು ಮತ್ತು ಇತರ ವಿವರಣಾತ್ಮಕ ಹೇಳಿಕೆಗಳನ್ನು ಪೂರ್ವಭಾವಿಯಾಗಿ ಸದಸ್ಯರುಗಳಿಗೆ ವಿತರಣೆ ಮಾಡಿರಬೇಕು. ಈ ರೀತಿ ಮಾಡುವುದರಿಂದ ಸಭೆಯಲ್ಲಿ ಅರ್ಥಪೂರ್ಣ, ಮಾಹಿತಿಯುಕ್ತ ಮತ್ತು ಒತ್ತುಪೂರ್ಣ ಚರ್ಚೆ ಮತ್ತು ನಿರ್ಣಯಗಳಿಗೆ ಅವಕಾಶವಾಗುತ್ತದೆ.



- ವಿಶೇಷ ಅಥವಾ ತುರ್ತು ಅಗತ್ಯತೆಗಳನ್ನು ಪೂರೈಸಲು ಅಲ್ಪಾವಧಿ ಸೂಚನೆಯ ಮೂಲಕವೂ ಸಭೆಗಳನ್ನು ಕರೆಯಬಹುದು ಮತ್ತು ಸದಸ್ಯರು ಕೋರಿದಲ್ಲಿ ತುಂಬಾ ದೂರದ ಸ್ಥಳಗಳಿಂದ ಅವರು ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿಡಿಯೋ ಸಮ್ಮೇಳನ ಸೌಲಭ್ಯವನ್ನು ಕಲ್ಪಿಸಬೇಕು. ಈ ದಿಶೆಯಲ್ಲಿ ಕಾಯ್ದೆಯಲ್ಲಿ ಗೊತ್ತುಪಡಿಸಿರುವ ವಿಧಿವಿಧಾನ ಮತ್ತು ನಿಯಮಾವಳಿಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಬೇಕು. ಮಂಡಳಿಯು ನಿರ್ಣಯಗಳನ್ನು ಕೈಗೊಂಡು ವಿತರಿಸುತ್ತದೆ. ಆದರೆ ಹೀಗೆ ಮಾಡಲು ಅಂತಹ ತುರ್ತು ವಿಷಯಗಳ ಕುರಿತು ಕಾಯ್ದೆ ಮತ್ತು ನಿಯಮಗಳಲ್ಲಿ ಅವಕಾಶವಿರಬೇಕು.
- ಚರ್ಚಾ ವಿಷಯ ಹಾಳೆಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸಿದ್ಧಪಡಿಸಿ ಅವುಗಳನ್ನು ಸಂಬಂಧಪಟ್ಟ ಕರ್ತವ್ಯನಿರತ/ ಕಾರ್ಯಕಾರಿ ನಿರ್ದೇಶಕರಿಗೆ ಅನುಮೋದನೆಗಾಗಿ ಸಲ್ಲಿಸಬೇಕು. ಆನಂತರ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಮತ್ತು ನಿರ್ದೇಶಕರುಗಳಲ್ಲಿ ವಿತರಿಸುವುದಕ್ಕಾಗಿ ಸಲ್ಲಿಸಬೇಕು. ತದನಂತರ ಕ್ರಮಬದ್ಧವಾಗಿ ಅನುಮೋದನೆಗೊಂಡ ಚರ್ಚಾ ವಿಷಯದ ಹಾಳೆಗಳನ್ನು ಮಂಡಳಿಯ ಕಾರ್ಯದರ್ಶಿಯಾಗಿರುವ ಕಂಪನಿಯ ಕಾರ್ಯದರ್ಶಿಯು ಮಂಡಳಿಯ ಸದಸ್ಯರಿಗೆ ವಿತರಿಸುವರು.
- ಎಲ್ಲಿ ದಾಖಲೆಗಳನ್ನು ಲಗತ್ತಿಸುವುದು ಅಪೇಕ್ಷಣೀಯವಲ್ಲವೋ ಅಥವಾ ಚರ್ಚಾ ವಿಷಯವು ಸೂಕ್ಷ್ಮವಾಗಿದ್ದ ಪ್ರಕರಣಗಳಲ್ಲಿ ಅವುಗಳನ್ನು ಸಭಾ ಮೇಜಿಗೆ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧ್ಯಕ್ಷರ ಅನುಮೋದನೆಯೊಂದಿಗೆ ಮಂಡಿಸಬೇಕು. ವಿಶೇಷ ಮತ್ತು ಅಸಾಧಾರಣ ಸನ್ನಿವೇಶಗಳಲ್ಲಿ ಚರ್ಚಾ ವಿಷಯದ ಮೇಲಿನ ಪೂರಕ ವಿಷಯಗಳನ್ನು ಮಂಡಳಿಯ ಅಧ್ಯಕ್ಷರ ಅನುಮೋದನೆಯೊಂದಿಗೆ ಚರ್ಚೆಗಾಗಿ ಎತ್ತಿಕೊಳ್ಳಲಾಗುವುದು.
- ಸಭೆಗಳನ್ನು ಬೆಂಗಳೂರು ಅಥವಾ ನವದೆಹಲಿಯಲ್ಲಿ ಅಥವಾ ಅಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ಅನುಕೂಲಕರವಾದ ಇತರ ಯಾವುದೇ ಸ್ಥಳದಲ್ಲಿ ನಡೆಸಬಹುದು. 2018–19ನೇ ಸಾಲಿನಲ್ಲಿ 5 ಸಭೆಗಳನ್ನು ನಡೆಸಲಾಗಿದ್ದು ಅವುಗಳ ಪೈಕಿ (3) ಸಭೆಗಳನ್ನು ನವದೆಹಲಿಯಲ್ಲಿ (1) ಸಭೆ ಚೆನ್ನೈನಲ್ಲಿ ಮತ್ತು ಇನ್ನೊಂದು ಸಭೆಯನ್ನು ನವದೆಹಲಿ ಮತ್ತು ಬೆಂಗಳೂರಿನಿಂದ ವೀಡಿಯೋ ಸಮ್ಮೇಳನದ ಮುಖಾಂತರ ನಡೆಸಲಾಗಿದೆ.
- ಮಂಡಳಿಯ ಪ್ರತಿ ಸಭೆಯಲ್ಲಿ ಮಂಡಳಿಯ ನಿರ್ಣಯಗಳ ಕುರಿತು ಕ್ರಮ ಜರುಗಿಸಿದ ವರದಿ, ಭೌತಿಕ ಮತ್ತು ಆರ್ಥಿಕ ಪ್ರಗತಿ, ರೈಲುಗಳ ಕಾರ್ಯಾಚರಣೆ ವಿವರಗಳು, ಸಮಿತಿ ಸಭೆಯ ನಡುವಳಿಗಳು ಮತ್ತಿತರ ರೂಢಾನುಗತ ವಿಷಯಗಳನ್ನು ಪ್ರತಿ ಸಭೆಯಲ್ಲಿ ಸಾಮಾನ್ಯವಾಗಿ ಚರ್ಚೆಗೆ ತರಲಾಗುವ ವಿಷಯಗಳು.
- ಮಂಡಳಿಯ ಸದಸ್ಯರಿಗೆ ಕಂಪನಿಯ ಕಾರ್ಯನಿರ್ವಹಣೆ ಮತ್ತು ಆಯಾಮಗಳ ಕುರಿತು ಎಲ್ಲ ರೀತಿಯ ಮಾಹಿತಿ ಪಡೆದುಕೊಳ್ಳುವ ಅವಕಾಶವಿದೆ.
- ಮಂಡಳಿಯ ಸಭೆಗಳನ್ನು ಸಾಮಾನ್ಯವಾಗಿ ಅನ್ವಯವಾಗುವ ಸಚಿವಾಲಯದ ದರ್ಜೆಯನುಸಾರ ನಡೆಸಲಾಗುವುದು.

b) ವ್ಯವಸ್ಥಾಪಕ ನಿರ್ದೇಶಕರಿಂದ ಸಂಕ್ಷಿಪ್ತ ಮಾಹಿತಿ

ಮಂಡಳಿಯ ಪ್ರತಿ ಸಭೆಯ ಆರಂಭದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಯೋಜನೆಯ ಈಗಿನ ಹಂತ ಮತ್ತು ಕಂಪನಿಯ ವಿವಿಧ ಕ್ಷೇತ್ರಗಳಲ್ಲಿ ಉಂಟಾದ ಇತರ ಪ್ರಮುಖ ಸಾಧನೆಗಳು/ಅಭಿವೃದ್ಧಿಗಳು ಕುರಿತಂತೆ ಮಂಡಳಿಯ ಸದಸ್ಯರುಗಳಿಗೆ ಸಂಕ್ಷಿಪ್ತ ಮಾಹಿತಿ ಒದಗಿಸುವರು.

c) ಮಂಡಳಿಯ ಸಭೆಯಲ್ಲಿ ನಡಾವಳಿಗಳ ಅಂಶಗಳ ದಾಖಲೀಕರಣ

ಸಭೆಯ ಚರ್ಚಾ ಅಂಶಫಲನ್ನು ಕಂಪನಿ ಕಾಯ್ದೆ 2013ರ ಉಪನಿಯಮಗಳನುಸಾರ ಮತ್ತು ಅನ್ವಯಿಕ ಸಚಿವಾಲಯದ ದರ್ಜೆಯನುಸಾರ ಪ್ರಸರಣಗೊಳಿಸಲಾಗುವುದು. ಪ್ರತಿ ಸಭೆಯ ನಡಾವಳಿಗಳ ಚರ್ಚಾ ಅಂಶಗಳನ್ನು ದಾಖಲಿಸಲಾಗುವುದು ಮತ್ತು ಅದನ್ನು ಕಂಪನಿಯಲ್ಲಿ ನಿರ್ವಹಿಸಲಾದ ಮಿನಿಟ್ಸ್ ಪುಸ್ತಕದಲ್ಲಿ ಅಧ್ಯಕ್ಷರ ಸಹಿಯೊಂದಿಗೆ ಸೇರಿಸಲಾಗುವುದ. ಪ್ರತಿ ಸಭೆಯ ಚರ್ಚಾ ಅಂಶಗಳನ್ನು ಮುಂದಿನ ಸಭೆಯಲ್ಲಿ ದೃಢೀಕರಣಕ್ಕಾಗಿ ಸಲ್ಲಿಸಲಾಗುವುದು. ಅದೇ ರೀತಿಯಲ್ಲಿ ಮಂಡಳಿ/ಸಮಿತಿ ಸಭೆಯ ಚರ್ಚಾ ಅಂಶಗಳನ್ನು ದಾಖಲಿಸಲಾಗುವುದು ಮತ್ತು ಅಧ್ಯಕ್ಷರ ಅನುಮೋದನೆ ಮತ್ತು ಸಹಿಯ ನಂತರ ಸಮಿತಿಯ ಸದಸ್ಯರುಗಳಲ್ಲಿ ವಿತರಿಸಲಾಗುವುದು.

d) ನಿರೀಕ್ಷೆಗಳ ಈಡೇರಿಕೆ

ಪ್ರತಿಯೊಂದು ಇಲಾಖೆಯ ಮುಖ್ಯಸ್ಥರು ಮತ್ತು ಕಾರ್ಯನಿರತ ನಿರ್ದೇಶಕರು, ಕಾರ್ಯಕಾರಿ ನಿರ್ದೇಶಕರು ಸಭೆಯ ಚರ್ಚಾ ವಿಷಯದ ಟಿಪ್ಪಣಿಗಳನ್ನು ತಯಾರಿಸುವ ಸಂದರ್ಭದಲ್ಲಿ ಸಂಬಂಧಿತ ಕಾನೂನಿನ ಉಪನಿಯಮಗಳು, ನಿಯಮಗಳು, ಮಾರ್ಗಸೂಚಿಗಳು ಇತ್ಯಾದಿ

ಅನ್ವಯವಾಗುವ ನಿಬಂಧನೆಗಳನ್ನು ಅನುಸರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಚರ್ಚಾ ವಿಷಯದ ಟಿಪ್ಪಣಿಗಳಲ್ಲಿ ಎಲ್ಲೆಲ್ಲಿ ಹಣಕಾಸಿನ ಅಂಶಗಳು ಒಳಗೊಂಡಿವೆಯೋ ಅಂತಹ ಪ್ರಕರಣಗಳಲ್ಲಿ ಅಗತ್ಯವಿರುವೆಡೆಯಲ್ಲಿ ಕಂಪನಿಯ ಆರ್ಥಿಕ ವಿಭಾಗದ ಅಭಿಪ್ರಾಯವನ್ನು ಸೇರಿಸಿರಬೇಕು. ಕಂಪನಿ ಕಾರ್ಯದರ್ಶಿಯು ಈ ದಿಶೆಯಲ್ಲಿ ಕಂಪನಿ ಕಾಯ್ದೆ 2013ರ ಎಲ್ಲ ಅನ್ವಯಿಕ ಉಪನಿಯಮಗಳನ್ನು ಅನ್ವಯವಾಗುವ ನಿಯಮಗಳು ಮತ್ತು ಮಾನದಂಡಗಳೊಂದಿಗೆ ಅನುಸರಿಸಿರುವುದನ್ನು ದೃಢೀಕರಿಸಿಕೊಂಡಿರುತ್ತಾರೆ.

2018–19ನೇ ಆರ್ಥಿಕ ಸಾಲಿನ ಅವಧಿಯಲ್ಲಿ 5 (ಐದೂ) ಮಂಡಳಿ ಸಭೆಗಳನ್ನು ನಡೆಸಲಾಗಿದ್ದು ಅವುಗಳು 06.06.2019, 20.08.2018, 28.09.2018, 07.12.2018 ಮತ್ತು 27.02.2019 ಗಳಂದು ಕರೆಯಲಾಗಿತ್ತು. ಕೆಳಕಂಡ ಕೋಷ್ಟಕದ ಪಟ್ಟಿಯಲ್ಲಿ ಹುದ್ದೆಗಳ ವಿವರ, ನಿರ್ದೇಶಕರ ಪ್ರವರ್ಗ, ನಿರ್ದೇಶಕರ ಗುರುತಿನ ಚೀಟಿ, ಆಯಾ ನಿರ್ದೇಶಕರ ಅವಧಿಯಲ್ಲಿ ನಡೆಸಲಾದ ಸಭೆಗಳು, ಹಾಜರಾದ ಮಂಡಳಿಯ ಸಭೆಗಳ ಸಂಖ್ಯೆ ಮತ್ತು 2018–19ನೇ ಸಾಲಿನ ಕೊನೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರ ಹಾಜರಾತಿ ವಿವರಗಳನ್ನು ನೀಡಲಾಗಿದೆ.

ಕ್ರ. ಸಂ.	ನಿರ್ದೇಶಕರು	ಪ್ರವರ್ಗ	ನಿರ್ದೇಶಕರ ಗುರುತಿನ ಸಂಖ್ಯೆ (DIN)	ಸದರಿ ನಿರ್ದೇಶಕರ ಅಧಿಕಾರಾವಧಿಯಲ್ಲಿ ನಡೆದ ಸಭೆಗಳು	ಹಾಜರಾದ ಮಂಡಳಿಯ ಸಭೆಗಳ ಸಂಖ್ಯೆ	28.09.2018ರಂದು ನಡೆದ ಕೊನೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾತಿ
(1)	(2)	(3)	(4)	(5)	(6)	(7)
1	ಶ್ರೀ ದುರ್ಗಾಶಂಕರ್ ಮಿಶ್ರಾ, ಕಾರ್ಯದರ್ಶಿ (ನಗರಾಭಿವೃದ್ಧಿ) ವಸತಿ ನಗರ ಪ್ರದೇಶಗಳ ಸಚಿವಾಲಯ ಮತ್ತು ಅಧ್ಯಕ್ಷರು, ಬಿಎಂಆರ್‌ಸಿಎಲ್	ಭಾರತ ಸರ್ಕಾರದ ನಾಮ ನಿರ್ದೇಶಿತರು	02944212	5	5	ಹೌದು
2	ಶ್ರೀ ಅಜಯ್ ಸೇಠ್ ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ (03.07.2018ರಿಂದ)	ವ್ಯವಸ್ಥಾಪಕ ನಿರ್ದೇಶಕರು	02294494	4	4	ಹೌದು
3	ಶ್ರೀ ಎಂ.ಕೆ. ಸಿನ್ಹಾ ವಿಶೇಷ ಕರ್ತವ್ಯ ಅಧಿಕಾರಿ (ಕೇಂದ್ರ) ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ವಸತಿ ಮತ್ತು ನಗರ ಪ್ರದೇಶಗಳ ಸಚಿವಾಲಯ ಹಾಗೂ ನಿರ್ದೇಶಕರು, ಬಿಎಂಆರ್‌ಸಿಎಲ್	ಭಾರತ ಸರ್ಕಾರದ ನಾಮ ನಿರ್ದೇಶಿತರು	06774923	5	5	ಇಲ್ಲ
4	ಶ್ರೀ ಕೆ.ಕೆ. ಸಬರವಾಲ್ ನಿರ್ದೇಶಕರು (ಹಣಕಾಸು), ಬಿಎಂಆರ್‌ಸಿಎಲ್ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್	ಭಾರತ ಸರ್ಕಾರದ ನಾಮ ನಿರ್ದೇಶಿತರು	03428873	5	5	ಹೌದು
5	ಶ್ರೀ ಪ್ರದೀಪ ಎಂ. ಸಿಕ್ದರ್ ಕಾರ್ಯಕಾರಿ ನಿರ್ದೇಶಕರು–ಸೂಚನ (ಅಭಿವೃದ್ಧಿ) ರೈಲ್ವೆ ಮಂಡಳಿ, ರೈಲ್ವೆ ಸಚಿವಾಲಯ, ಭಾರತ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ (21.06.2018 ರಿಂದ)	ಭಾರತ ಸರ್ಕಾರದ ನಾಮ ನಿರ್ದೇಶಿತರು	08178025	4	2	ಹೌದು



ಕ್ರ ಸಂ.	ನಿರ್ದೇಶಕರು	ಪ್ರವರ್ಗ	ನಿರ್ದೇಶಕರ ಗುರುತಿನ ಸಂಖ್ಯೆ (DIN)	ಸದರಿ ನಿರ್ದೇಶಕರ ಅಧಿಕಾರಾವಧಿಯಲ್ಲಿ ನಡೆದ ಸಭೆಗಳು	ಹಾಜರಾದ ಮಂಡಳಿಯ ಸಭೆಗಳ ಸಂಖ್ಯೆ	28.09.2018ರಂದು ನಡೆದ ಕೊನೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾತಿ
(1)	(2)	(3)	(4)	(5)	(6)	(7)
6	ಡಾ॥ ಎಂ. ರವಿಕಾಂತ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಹುಡ್ಕೋ ಹಾಗೂ ನಿರ್ದೇಶಕರು, ಬಿಎಂಆರ್‌ಸಿಎಲ್	ಭಾರತ ಸರ್ಕಾರದ ನಾಮ ನಿರ್ದೇಶಿತರು	01612905	5	4	ಹೌದು
7	ಶ್ರೀ ಮಹೇಂದ್ರ ಜೈನ್ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್	ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು	01660388	5	4	ಹೌದು
8	ಶ್ರೀ ಐ.ಎಸ್.ಎನ್. ಪ್ರಸಾದ್, ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್	ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು	01469651	5	3	ಇಲ್ಲ
9	ಶ್ರೀಮತಿ ವಂದಿತ ಶರ್ಮಾ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್	ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು	02854972	5	2	ಇಲ್ಲ
10	ಡಾ॥ ಇ.ವಿ. ರಮಣರೆಡ್ಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ (05.07.2018ರಿಂದ)	ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು	02935216	4	2	ಇಲ್ಲ
11	ಶ್ರೀ ವಿಜಯಕುಮಾರ್ ಧಿರ್ ಮಾಜಿ ನಿರ್ದೇಶಕರು (ಯೋಜನೆಗಳು ಮತ್ತು ಯೋಜನಾ), ಬಿಎಂಆರ್‌ಸಿಎಲ್	ಪೂರ್ಣಕಾಲಿಕ ನಿರ್ದೇಶಕರು	06891176	5	5	ಹೌದು
12	ಶ್ರೀ ಎನ್.ಎಮ್ ಧೋಕೆ ನಿರ್ದೇಶಕರು (ಆರ್‌ಎಸ್‌ಇ), ಬಿಎಂಆರ್‌ಸಿಎಲ್	ಪೂರ್ಣಕಾಲಿಕ ನಿರ್ದೇಶಕರು	06900265	5	4	ಹೌದು



ಮಂಡಳಿಯ ನಿರ್ದೇಶಕರ ಮುಂದೆ ಮಂಡಿಸಲಾದ ಮಾಹಿತಿ ಅರ್ಥಾತ್ ಅದು ಒಳಗೊಂಡಿರುತ್ತದೆ:

ಮಂಡಳಿಯಿಂದ ವ್ಯವಸ್ಥಾಪಕ ನಿರ್ದೇಶಕರಿಗೆ ವಹಿಸಿರುವ ವಿಷಯಗಳನ್ನು ಹೊರತುಪಡಿಸಿ ಉಳಿದೆಲ್ಲ ಮಾಹಿತಿಯನ್ನು ಮಂಡಳಿಯ ಮುಂದೆ ಮಂಡಿಸಲಾಗಿದೆ. ಅರ್ಥಾತ್ ಅದು ಕೆಳಕಂಡಂತೆ ಒಳಗೊಂಡಿದೆ.

- ಆಯ–ವ್ಯಯ ಅಂದಾಜುಗಳು ಮತ್ತು ನಗದು ಚಲಾವಣೆ ಹೇಳಿಕೆಗಳು
- ವಾರ್ಷಿಕ ಆರ್ಥಿಕ ಹೇಳಿಕೆಗಳು ಮತ್ತು ಮಂಡಳಿಯ ವರದಿ
- ಮಂಡಳಿಯ ಆರ್ಥಿಕ ಸಮಿತಿ ಮತ್ತು ಲೆಕ್ಕಪರಿಶೋಧನ ಸಮಿತಿ ಹಾಗೂ ಇತರ ಸಮಿತಿಗಳ ಸಭಾ ನಿರ್ಣಯಗಳು ಮತ್ತು ಚರ್ಚಾ ಅಂಶಗಳು
- ಮೆಟ್ರೋ ರೈಲು ಜಾಲ ಹಂತ–2ರಂತೆ ಅಂದರೆ ಹಂತ–2ಎ ಮತ್ತು ಹಂತ–2ಬಿ ಗಳ ಕಾರ್ಯಾಚರಣೆ ಒಳಗೊಂಡ ಹೊಸ ಪ್ರಸ್ತಾವನೆಗಳು
- ವಿವರವಾದ ಯೋಜನಾ ವರದಿಯಲ್ಲಿ ಚಿಂತನೆಯಾದ ಅಂಶಗಳನ್ನು ಹೊರತುಪಡಿಸಿ ತಂತ್ರಜ್ಞಾನ/ತಂತ್ರಜ್ಞಾನದ ಆಯಾಮಗಳಲ್ಲಿನ ಬದಲಾವಣೆ ಒಳಗೊಂಡ ಎಲ್ಲ ಪ್ರಸ್ತಾವನೆಗಳು
- ಮಾನವ ಸಂಪನ್ಮೂಲ/ಔದ್ಯೋಗಿಕ ಸಂಪರ್ಕ ಮುನ್ನೆಲೆಯಲ್ಲಿನ ಯಾವುದೇ ಮಹತ್ತರ ಅಭಿವೃದ್ಧಿ
- ಗಮನಾರ್ಹ ಆಸ್ತಿ ಅಭಿವೃದ್ಧಿ ವಿಷಯಗಳು
- ಶಾಸನಬದ್ಧ ನಿಯಮಗಳನ್ನು ಪೂರೈಸಿರುವ ದೃಢೀಕರಣ ಪತ್ರ
- ವ್ಯವಸ್ಥಾಪಕ ನಿರ್ದೇಶಕರಿಗೆ ಅನ್ಯಥಾ ವಹಿಸಿಲ್ಲದಿರುವ ಹೆಚ್ಚುವರಿ ನಿಧಿಯ ಅಲ್ಪಾವಧಿ ಹೂಡಿಕೆ
- ಆಂತರಿಕ ಮತ್ತು ಸಚಿವಾಲಯ ಲೆಕ್ಕಪರಿಶೋಧಕರ ನೇಮಕಾತಿ
- ಪ್ರಮುಖ ಕಾನೂನು ವಿವಾದಗಳಿಗೆ ಸಂಬಂಧಿಸಿದ ಮಾಹಿತಿ
- ಭೌತಿಕವಾಗಿ ಮಹತ್ವದ ಇತರ ಮಾಹಿತಿ
- ಮಂಡಳಿಯು ಕಾಲಕಾಲಕ್ಕೆ ನಿರ್ದೇಶಿಸಿದ/ಮಾರ್ಗದರ್ಶಿಸಿದ ಇತರ ವಿಷಯಗಳು

ಮಂಡಳಿ ನಿರ್ದೇಶಕರುಗಳ ಸಮಿತಿಗಳು

ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಯ ಸ್ವಭಾವಕ್ಕನುಗುಣವಾಗಿ ಮಂಡಳಿಯು 8 (ಎಂಟು) ಉಪಸಮಿತಿಗಳನ್ನು ರಚಿಸಿದೆ. ನಿರ್ದಿಷ್ಟ ಸಮಿತಿಗಳನ್ನು ಕೆಲ ನೀತಿ ಮತ್ತು ಕಂಪನಿಗೆ ಮಹತ್ವವೆನಿಸುವ ಇತರ ಪ್ರಮುಖ ವಿಷಯಗಳನ್ನು ಪರಿಶೀಲಿಸಲು, ಪರೀಕ್ಷಿಸಲು ಮತ್ತು ಮಂಡಳಿಗೆ ಶಿಫಾರಸು ಮಾಡಲು ಪುನರ್ ರಚಿಸಲಾಗಿದೆ. ಅದು ಇರಬಹುದಾದಂತೆ, ಕೆಲವು ಶಾಸನಬದ್ಧವಲ್ಲದ ಸಮಿತಿಗಳ ಪರಿಶೀಲನಾ ವಿಷಯಗಳನ್ನು ಮರುಪರಿಶೀಲಿಸಲಾಗಿತ್ತು ಮತ್ತು ಕೆಲವು ಸಮಿತಿಗಳ ಪರಿಶೀಲನಾ ವಿಷಯಗಳು ಪುನರಾವರ್ತನೆಯಾಗಿದೆ ಎಂದೆನಿಸಿದೆ ಮತ್ತು ಅದಕ್ಕನುಗುಣವಾಗಿ ಈ ಸಮಿತಿಗಳನ್ನು ಸೂಕ್ತ/ಸರಿಯಾದ ಪರಿಶೀಲನಾ ವಿಷಯಗಳೊಂದಿಗೆ ವಿಲೀನಗೊಳಿಸಿರುವ ಮೂಲಕ ಸೀಮಿತ ಸಂಖ್ಯೆಯ ಮಂಳಿ ಸಮಿತಿಗಳು ಅಸ್ತಿತ್ವದಲ್ಲಿರುವಂತೆ ನೋಡಿಕೊಳ್ಳಲಾಗಿದೆ. ಅದರಂತೆ ಕೆಳಕಂಡ ಮಂಡಳಿ ಸಮಿತಿಗಳನ್ನು ವಿಲೀನಗೊಳಿಸಲಾಗಿದೆ.

a. ಸಂಗ್ರಹಣಾ ಸಮಿತಿಯನ್ನು ಯೋಜನಾ ನಿರ್ವಹಣಾ ಸಮಿತಿಯೊಂದಿಗೆ ವಿಲೀನಗೊಳಿಸಬೇಕು.

b. ಆಸ್ತಿ ಅಭಿವೃದ್ಧಿ ಸಮಿತಿಯನ್ನು ಓ ಮತ್ತು ಎಮ್ (ಕಾರ್ಯಾಚರಣೆ ಮತ್ತು ನಿರ್ವಹಣಾ) ಸಮಿತಿಯೊಂದಿಗೆ ವಿಲೀನಗೊಳಿಸಬೇಕು.

c. ಹೂಡಿಕೆ ಮತ್ತು ಸಂಪನ್ಮೂಲ ಸಮಿತಿಯನ್ನು ಲೆಕ್ಕಪರಿಶೋಧನಾ ಸಮಿತಿಯೊಂದಿಗೆ ವಿಲೀನಗೊಳಿಸಬೇಕು ಮತ್ತು ಅದನ್ನು "ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿ" ಎಂದು ಮರು ನಾಮಕರಣ ಮಾಡುವುದು.

ಮಂಡಳಿಯ ಸಮಿತಿಗಳನ್ನು ಕೆಳಕಂಡಂತೆ ಪುನರ್‌ರಚಿಸಲಾಗಿದೆ:

i. ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿ

ii. ನಾಮನಿರ್ದೇಶನ ಮತ್ತು ಸಂಭಾವನಾ ಸಮಿತಿ

iii. ಕಾರ್ಪೊರೇಟ್ ಮತ್ತು ಸಾಮಾಜಿಕ ಹೊಣೆಗಾರಿಕಾ ಸಮಿತಿ



ಮೇಲ್ಕಂಡ ಸಮಿತಿಗಳೊಂದಿಗೆ ಹೆಚ್ಚುವರಿಯಾಗಿ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಮಂಡಳಿಯಿಂದ ರಚಿಸಲಾಗಿದೆ. ಅವುಗಳು:

i. ಯೋಜನಾ ನಿರ್ವಹಣಾ ಸಮಿತಿ

ii. ಕಾರ್ಯಾಚರಣೆ ಮತ್ತು ನಿರ್ವಹಣಾ ಸಮಿತಿ

ಕಂಪನಿ ಕಾರ್ಯದರ್ಶಿಯು ಮಂಡಳಿಯ ಸಮಿತಿಗಳಿಗೂ ಕಾರ್ಯದರ್ಶಿಯಾಗಿರುತ್ತಾರೆ.

1. ಆರ್ಥಿಕ ಮತ್ತು ಲೆಕ್ಕ ಪರಿಶೋಧನಾ ಸಮಿತಿ

ಆರ್ಥಿಕ ಮತ್ತು ಲೆಕ್ಕ ಪರಿಶೋಧನಾ ಸಮಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿ ಇತ್ಯಾದಿಗಳು ಕಂಪನಿಯ ಕಾಯ್ದೆ–2013ರ ನಿಯಮಾವಳಿಗನುಸಾರ ಇರುವವು. ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿಯ ಎಲ್ಲ ಸದಸ್ಯರುಗಳು, ಅರ್ಹರಾಗಿದ್ದು ಮತ್ತು ಆರ್ಥಿಕ ಹೇಳಿಕೆಗಳನ್ನು ಅರ್ಥೈಸುವ ಮತ್ತು ಅರಿತುಕೊಳ್ಳುವ ಸೂಕ್ಷ್ಮಮತಿ ಹೊಂದಿರುವರು.

ಸಂರಚನೆ

2018–19ನೇ ಸಾಲಿನಲ್ಲಿ ಆರ್ಥಿಕ ಮತ್ತು ಲೆಕ್ಕ ಪರಿಶೋಧನಾ ಸಮಿತಿಯು ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿತ್ತು:

i. ಶ್ರೀ ಐ.ಎಸ್.ಎನ್. ಪ್ರಸಾದ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಆರ್ಥಿಕ ಇಲಾಖೆ), ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

ii. ಶ್ರೀ ಎಂ.ಕೆ. ಸಿನ್ಹಾ, ವಿಶೇಷ ಕರ್ತವ್ಯ ಅಧಿಕಾರಿಗಳು (ಕೇಂದ್ರಾಡಳಿತ ಪ್ರದೇಶ) ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಸಚಿವಾಲಯ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿ ಸದಸ್ಯರು

iii. ಶ್ರೀ ಕೆ.ಕೆ. ಸಬರವಾಲ್, ನಿರ್ದೇಶಕರು (ಹಣಕಾಸು), ದೆಹಲಿ ಮೆಟ್ರೋ ರೈಲು ನಿಗಮ ನಿಯಮಿತ (ಡಿಎಂಆರ್‌ಸಿ) ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್, ಸಮಿತಿ ಸದಸ್ಯರು

iv. ಶ್ರೀ ಮಹೇಂದ್ರ ಜೈನ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್, ಸಮಿತಿ ಸದಸ್ಯರು

v. ಡಾ॥ ಇ.ವಿ. ರಮಣರೆಡ್ಡಿ, ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್, ಸಮಿತಿ ಸದಸ್ಯರು.

ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಾರ್ಯಕಾರಿ ನಿರ್ದೇಶಕರು (ಹಣಕಾಸು), ಸಿಎಫ್‌ಓ (ಮುಖ್ಯ ಆರ್ಥಿಕ ಅಧಿಕಾರಿ) ಜಿಎಂ (ಎಫ್ ಅಂಡ್ ಎ), ಬಿಎಂಆರ್‌ಸಿಎಲ್‌ನ ಇತರ ಹಿರಿಯ ಅಧಿಕಾರಿಗಳು, ಆಂತರಿಕ ಲೆಕ್ಕಪರಿಶೋಧಕರು, ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಸಹ ಲೆಕ್ಕ ಪರಿಶೋಧನಾ ಸಮಿತಿ ಸಭೆಗೆ ಆಹ್ವಾನಿಸಲಾಗಿದೆ. ಆದರೆ ಅವರಿಗೆ ಯಾವುದೇ ಮತದಾನದ ಹಕ್ಕು ಇರುವುದಿಲ್ಲ.

ಸಭೆ ಮತ್ತು ಹಾಜರಾತಿ:

2018–19ನೇ ಆರ್ಥಿಕ ಸಾಲಿನಲ್ಲಿ ಲೆಕ್ಕ ಪರಿಶೋಧನಾ ಸಮಿತಿ ಒಂದು (1) ಬಾರಿ ಹಾಗೂ ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿ ಒಂದು (1) ಬಾರಿ ಸಭೆಯನ್ನು ಕ್ರಮವಾಗಿ ದಿನಾಂಕ: 06.06.2018 ಮತ್ತು 17.11.2018ರಂದು ನಡೆಸಿವೆ. ಸದಸ್ಯರುಗಳು ಹಾಜರಾದ ಲೆಕ್ಕಪರಿಶೋಧನಾ ಸಮಿತಿ ಹಾಗೂ ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿಗಳ ಸಭೆಗಳ ವಿವರಗಳು ಕೆಳಕಂಡಂತಿವೆ.

ಆರ್ಥಿಕ ಮತ್ತು ಲೆಕ್ಕಪರಿಶೋಧನಾ ಸಮಿತಿಯ ಸದಸ್ಯರು	ಆಯಾ ನಿರ್ದೇಶಕರ ಅಧಿಕಾರಾವಧಿಯಲ್ಲಿ ನಡೆದ ಸಭೆಗಳು	ಹಾಜರಾದ ಸಭೆಗಳ ಸಂಖ್ಯೆ
ಶ್ರೀ ಐ.ಎಸ್.ಎನ್. ಪ್ರಸಾದ್	2	2
ಶ್ರೀ ಎಂ.ಕೆ. ಸಿನ್ಹಾ	2	1
ಶ್ರೀ ಕೆ.ಕೆ. ಸಬರವಾಲ್	1	1
ಶ್ರೀ ಮಹೇಂದ್ರ ಜೈನ್	1	1
ಡಾ॥ ಇ.ವಿ. ರಮಣ ರೆಡ್ಡಿ	1	ಎಲ್ಒಎ

ಎಲ್ಒಎ –(ಗೈರು ಹಾಜರಾತಿ ರಜೆ)

2. ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 178ರ ಪ್ರಕಾರ ಕಂಪನಿಗಳ (ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು 2014ರ ನಿಯಮ 6ರೊಂದಿಗೆ ಓದಿಕೊಳ್ಳುವ ಮೂಲಕ ಮಂಡಳಿಯು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿದೆ.

ಸಂರಚನೆ

ವರ್ಷದ ಕೊನೆಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿತ್ತು.

i. ಶ್ರೀ ಮಹೇಂದ್ರ ಜೈನ್, ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

ii. ಶ್ರೀ ಐ.ಎಸ್.ಎನ್. ಪ್ರಸಾದ್, ಅಪರ ಮುಖ್ಯ ಕಾರ್ಯದರ್ಶಿ, (ಆರ್ಥಿಕ ಇಲಾಖೆ), ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

iii. ಶ್ರೀ ಎಂ.ಕೆ. ಸಿನ್ಹಾ, ವಿಶೇಷ ಕರ್ತವ್ಯ ಅಧಿಕಾರಿ (ಕೇಂ.ಪ್ರ) ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಸಚಿವಾಲಯ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

iv. ಶ್ರೀಮತಿ ವಂದಿತಾ ಶರ್ಮಾ, ಅಪರ ಮುಖ್ಯ ಕಾರ್ಯದರ್ಶಿ, ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

v. ಶ್ರೀ ಅಜಯ್ ಸೇಠ್, ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.

ಸಭೆ ಮತ್ತು ಹಾಜರಾತಿ

2018–19ನೇ ಆರ್ಥಿಕ ಸಾಲಿನಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ 2 (ಎರಡು) ಸಭೆಗಳು ದಿನಾಂಕ: 20.08.2018 ಮತ್ತು 07.02.2019ರಂದು ಜರುಗಿವೆ. ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಸಭೆಯ ವಿವರಗಳು ಕೆಳಗಿನಂತಿವೆ:

ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಸದಸ್ಯರು	ಆಯಾ ನಿರ್ದೇಶಕರ ಅಧಿಕಾರಾವಧಿಯಲ್ಲಿ ನಡೆದ ಸಭೆಗಳು	ಹಾಜರಾದ ಸಭೆಗಳ ಸಂಖ್ಯೆ
ಶ್ರೀ ಮಹೇಂದ್ರ ಜೈನ್	2	1
ಶ್ರೀ ಐ.ಎಸ್.ಎನ್. ಪ್ರಸಾದ್	2	2
ಶ್ರೀ ಎಂ.ಕೆ. ಸಿನ್ಹಾ	2	1
ಶ್ರೀಮತಿ ವಂದಿತಾ ಶರ್ಮಾ	1	ಎಲ್ಒಎ
ಶ್ರೀ ಅಜಯ್ ಸೇಠ್	1	1

ಎಲ್ಒಎ –(ಗೈರು ಹಾಜರಾತಿ ರಜೆ)



3. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ (CSR Committee)

ಕಂಪನಿಗೆ "ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ" ಕುರಿತು ಕಂಪನಿ ಕಾಯ್ದೆ 2013ರ ನಿಯಮಾವಳಿಗಳು ಆಕರ್ಷಕವಾಗಿಲ್ಲದಿದ್ದರೂ, ಕಂಪನಿಯು ವರ್ಷಗಳಿಂದಲೂ, ಕಂಪನಿಯು ತನ್ನ ಕಾರ್ಪೊರೇಟ್ ನೀತಿಯ ಭಾಗವಾಗಿ ಸ್ವಯಂ ಪ್ರೇರಣೆಯಿಂದ ಅಲಿಖಿತ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯನ್ನು ಅನುಸರಿಸುತ್ತಿದೆ. ಅದು ಕೇವಲ ತೋರಿಕೆಯ ಔದಾರ್ಯವಾಗಿದೆ. ಸಮುದಾಯದ ಹಿತಾಸಕ್ತಿ, ಕ್ಷೇಮ ಮತ್ತು ಆಶಯಗಳನ್ನು ಸಹಭಾಗಿತ್ವದ ವಾತಾವರಣದಲ್ಲಿ ಎಲ್ಲರನ್ನೊಳಗೊಂಡಿ ಅಭಿವೃದ್ಧಿಗಾಗಿ ಕಂಪನಿಯು ತನ್ನ ಆಶಯಗಳೊಂದಿಗೆ ಸಮೀಕರಣಗೊಳಿಸುತ್ತದೆ. ಕಂಪನಿಯು ಮಂಡಳಿಯ "ಕಾರ್ಪೊರೇಟ್ ಹೊಣೆಗಾರಿಕೆ ಸಮಿತಿ"ಯನ್ನು ಸೂಕ್ತ ರೀತಿಯ ಸಿಎಸ್ಆರ್ ನೀತಿ ರೂಪಿಸಲು ರಚಿಸಿದೆ.

ಸಮಿತಿ ಸಂರಚನೆ

ಈ ಆರ್ಥಿಕ ಸಾಲಿನಲ್ಲಿ ಮಂಡಳಿಯು ಕಂಪನಿ ಕಾಯ್ದೆ 2013ರಲ್ಲಿ ಗೊತ್ತುಪಡಿಸಿರುವಿಕೆ ಕೆಳಕಂಡ ಸದಸ್ಯರುಗಳೊಂದಿಗೆ "ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ"ಯನ್ನು ಪುನರ್ರಚಿಸಿದೆ.

i. ಶ್ರೀ ಮಹೇಂದ್ರ ಜೈನ್, ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ – ಅಧ್ಯಕ್ಷರು
ii. ಶ್ರೀ ಐ.ಎಸ್.ಎನ್. ಪ್ರಸಾದ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ – ಸಮಿತಿ ಸದಸ್ಯರು
iii. ಶ್ರೀಮತಿ ವಂದಿತ ಶರ್ಮಾ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ – ಸಮಿತಿ ಸದಸ್ಯರು
iv. ಶ್ರೀ ಕೆ.ಕೆ. ಸಬರವಾಲ್, ನಿರ್ದೇಶಕರು (ಹಣಕಾಸು), ದೆಹಲಿ ಮೆಟ್ರೋ ರೈಲ್ ನಿಗಮ ನಿಯಮಿತ ಮತ್ತು ನಿರ್ದೇಶಕರು, ಬಿಎಂಆರ್‌ಸಿಎಲ್ – ಸಮಿತಿ ಸದಸ್ಯರು
v. ಶ್ರೀ ಅಜಯ್ ಸೇಠ್, ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ ಸಮಿತಿಯ ಅಧ್ಯಕ್ಷರು.
vi. ನಿರ್ದೇಶಕರು (ಆರ್ಥಿಕ), ಬಿಎಂಆರ್‌ಸಿಎಲ್ – ಸಮಿತಿ ಸದಸ್ಯರು

4. ಪಾರ್ಟಿಗಳಿಗೆ (ವ್ಯವಹಾರಿಕ ಸಂಸ್ಥೆಗಳು) ಸಂಬಂಧಿಸಿದ ಬಿಡುಗಡೆ ಹೇಳಿಕೆಗಳು:

ಸಂಬಂಧಿತ ಸಂಸ್ಥೆಗಳೊಂದಿಗೆ ನಡೆಸಲಾಗುವ ಎಲ್ಲ ವಹಿವಾಟುಗಳು ಸಾಮಾನ್ಯ ವ್ಯಾಪಾರ ವಿಧಾನದಲ್ಲೇ ಇರುತ್ತದೆ ಮತ್ತು ಕೈ ಅಳತೆಯ ಆಧಾರದಲ್ಲಿರುತ್ತದೆ. ಕಂಪನಿಯಿಂದ ತನ್ನ ಪ್ರವರ್ತಕರು, ನಿರ್ದೇಶಕರು ಅಥವಾ ವ್ಯವಸ್ಥಾಪನಾ ಸಂಸ್ಥೆ, ಅವರ ಅಧೀನ ಸಂಸ್ಥೆ ಅಥವಾ ಸಂಬಂಧಿಕರು ಇತ್ಯಾದಿ ಒಟ್ಟಾರೆ ಕಂಪನಿಯ ಹಿತಾಸಕ್ತಿಯೊಂದಿಕ ಸಂಘರ್ಷವುಂಟಾಗಬಹುದಾದ ಯಾವುದೇ ರೀತಿಯ ಸಂಬಂಧಿತ ಸಂಸ್ಥೆಗಳ ವಹಿವಾಟನ್ನು ಇಟ್ಟುಕೊಂಡಿರುವುದಿಲ್ಲ. ಸಂಬಂಧಿತ ಸಂಸ್ಥೆಗಳೊಂದಿಗೆ ನಡೆಸಲಾದ ವಹಿವಾಟುಗಳನ್ನು ವಾರ್ಷಿಕ ವರದಿಯ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳಲ್ಲಿ ಬಹಿರಂಗಪಡಿಸಲಾಗಿದೆ.



5. **ವಾರ್ಷಿಕ ಸಾಮಾನ್ಯ ಸಭೆ:**

ವಾಸಾಸ	10ನೇ ವಾಸಾಸ	11ನೇ ವಾಸಾಸ	12ನೇ ವಾಸಾಸ
ದಿನಾಂಕ ಮತ್ತು ಸಮಯ	28.09.2016 ಮಧ್ಯಾಹ್ನ 12.00 ಗಂಟೆಗೆ	28.09.2017 ಮಧ್ಯಾಹ್ನ 12.00 ಗಂಟೆಗೆ	28.09.2018 ಸಂಜೆ 5.45 ಗಂಟೆಗೆ
ಸ್ಥಳ	3ನೇ ಮಹಡಿ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು–560 027.	ನಗರಾಭಿವೃದ್ಧಿ ಸಚಿವಾಲಯ ನಿರ್ಮಾಣ ಭವನ, ಡಾ॥ ಮೌಲಾನಾ ಆಜಾದ್ ರಸ್ತೆ, ನವದೆಹಲಿ–110 011	ನಗರಾಭಿವೃದ್ಧಿ ಸಚಿವಾಲಯ ನಿರ್ಮಾಣ ಭವನ, ಡಾ॥ ಮೌಲಾನಾ ಆಜಾದ್ ರಸ್ತೆ, ನವದೆಹಲಿ–110 011
ವಿಶೇಷ ಗೊತ್ತುವಳಿ ಯಾವುದಾದರೂ ಇದ್ದರೆ	ಇಲ್ಲ	ಕಂಪನಿಯ ಸಾಲ ತರುವ ಮಿತಿ ರೂ.13,200/– ಕೋಟಿಯಿಂದ ರೂ.22,000 ಕೋಟಿಗೆ ಹೆಚ್ಚಿಸುವುದು	ಇಲ್ಲ

6. **ಕಂಪನಿಯ ಜಾಲತಾಣ**

ಕಂಪನಿಯ ಅಧಿಕೃತ ಜಾಲತಾಣದಲ್ಲಿ ಕಂಪನಿಗೆ ಸಂಬಂಧಪಟ್ಟಂತೆ ಹೊಸ ಯೋಜನೆಗಳು, ಹಾಲಿ ಯೋಜನೆಗಳ ಪ್ರಸಕ್ತ ಸ್ಥಿತಿಗತಿ, ಗುತ್ತಿಗೆಗಳು, ಉದ್ಯೋಗಗಳು, ನೇಮಕಾತಿ ವಿಧಾನ ಮತ್ತು ಫಲಿತಾಂಶ ಇತ್ಯಾದಿ ಪ್ರಮುಖ ವಿಷಯಗಳ ಕುರಿತು ಮಾಹಿತಿ ಲಭ್ಯಗೊಳಿಸಿದೆ. ಬಿಎಂಆರ್‌ಸಿಎಲ್ ಮಾಹಿತಿ ಹಕ್ಕು ಕಾಯ್ದೆ 2005ರಡಿ ಒಬ್ಬರು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಒಬ್ಬರು ಮೇಲ್ಮನವಿ ಪ್ರಾಧಿಕಾರವನ್ನು ನೇಮಕ ಮಾಡಿದೆ. ಈ ಕುರಿತು ವಿವರಗಳು, ಕಂಪನಿಯ ಅಧಿಕೃತ ಜಾಲತಾಣದಲ್ಲಿ ಲಭ್ಯವಿರುವವು. ಇದಲ್ಲದೆ ಕೆಟಿಪಿಪಿ ಕಾಯ್ದೆ 1999ರಡಿ ಕಡ್ಡಾಯಗೊಳಿಸಿರುವಂತೆ ಕಂಪನಿಯು ತನ್ನ ಎಲ್ಲ ಟೆಂಡರ್ ಪ್ರಕಟಣೆಗಳನ್ನು ಈ ಜಾಲತಾಣದಲ್ಲಿ ಅಳವಡಿಸುವ ಮೂಲಕ ಸಾಮಗ್ರಿಗಳ ಸಂಗ್ರಹ ಮತ್ತು ಸೇವೆಯನ್ನು ಸಕಾಲದಲ್ಲಿ ಪಡೆಯುವಂತಾಗಲು ಆ ಕುರಿತು ಮಾಹಿತಿಯನ್ನು ಪ್ರಸಾರಗೊಳಿಸುತ್ತದೆ. ಜಾಲತಾಣವು ನಿಗಮದ ಪ್ರಮುಖ ಘಟನೆಗಳು, ಕಾರ್ಯಚಟುವಟಿಕೆಗಳು, ಮೆಟ್ರೋ ರೈಲು ಯೋಜನೆಯ ಕಾರ್ಯ ಪ್ರಗತಿ ಮತ್ತು ಇತರ ಮಹತ್ತರ ಅಭಿವೃದ್ಧಿ ಅಂಶಗಳನ್ನು ಸಹ ಜಾಲತಾಣದಲ್ಲಿ ಪ್ರಕಟಿಸಲಾಗುತ್ತಿದೆ. ಮೆಟ್ರೋ ರೈಲು ಕಾರ್ಯಾಚರಣೆಗೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕರ ಮತ್ತು ಬಳಕೆದಾರರ ಅನುಕೂಲಕ್ಕಾಗಿ ಜಾಲತಾಣವನ್ನು ನಿರಂತರವಾಗಿ ಇತ್ತೀಚಿನ ಮಾಹಿತಿಗಳನ್ನು ಸೇರಿಸುವ ಮೂಲಕ ಜಾಲತಾಣವನ್ನು ಚಾಲ್ತಿಗೊಳಿಸಲಾಗುತ್ತದೆ.

ನೋಂದಾಯಿತ ಕಚೇರಿ ವಿಳಾಸ	**ಕಂಪನಿ ಕಾರ್ಯದರ್ಶಿ ಮತ್ತು ಅನುಪೋಷಿತ ಅಧಿಕಾರಿ**
ಸಿಐಎನ್: ಯು16286ಕೆಎ1994ಜಿಒಐ016286 ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, 3ನೇ ಮಹಡಿ, ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027. ದೂರವಾಣಿ: 080–22969300/01 ಫ್ಯಾಕ್ಸ್: 080 – 22969222 ವೆಬ್‌ಸೈಟ್: www.bmrc.co.in	ಶ್ರೀ ಯು. ಜಗದೀಶ್ ನಾಯಕ್ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, 3ನೇ ಮಹಡಿ, ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027. ದೂರವಾಣಿ: 080–22969251 ಇ–ಮೇಲ್: cs@bmrc.co.in
ಡಿಪೋಗಳು	
ಬೈಯಪ್ಪನಹಳ್ಳಿ ಸ್ವಾಮಿ ವಿವೇಕಾನಂದ ರಸ್ತೆ, ಎನ್‌ಜಿಇಎಫ್ ಹತ್ತಿರ, (ಹಳೇ ಮದ್ರಾಸು ರಸ್ತೆ), ಬೆಂಗಳೂರು–560 038	**ಪೀಣ್ಯ** ಮೆಟ್ರೋ ರೈಲು ಡಿಪೋ ಮತ್ತು ಕಾರ್ಯಾಗಾರ, ಪೀಣ್ಯ ಕೈಗಾರಿಕಾ ಪ್ರದೇಶ, 1ನೇ ಹಂತ, ಪೀಣ್ಯ, ಬೆಂಗಳೂರು–560 058.

****



ಅನುಬಂಧ–I

ನಮೂನೆ ಸಂ. ಎಂಆರ್–3

ಸೆಕ್ರೆಟೆರಿಯಲ್ ಲೆಕ್ಕಪರಿಶೋಧನಾ ವರದಿ

(31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ)

(ಕಂಪನಿಗಳ ಅಧಿನಿಯಮ, 2013ರ 204(1)ನೇ ಕಲಂ ಮತ್ತು ಕಂಪನಿಗಳ ಆಡಳಿತ (ಸಿಬ್ಬಂದಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 9ರ ಅನ್ವಯ)

ಇವರಿಗೆ,
ಸದಸ್ಯರು,
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
ಬೆಂಗಳೂರು–560 027.

ನಾವು, 3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರ–560 027 ಇಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ **ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತವು CIN: U16286KA1994GOI016286** (ಇಲ್ಲಿ ಇನ್ನು ಮುಂದೆ "ಕಂಪನಿ" ಎಂದು ಕರೆಯಲಾಗುವುದು) ಅನ್ವಯವಾಗುವ ಶಾಸನಬದ್ಧ ಉಪಬಂಧಗಳ ಪರಿಪಾಲನೆ ಮತ್ತು ಉತ್ತಮ ಕಾರ್ಪೊರೇಟ್ ಪದ್ಧತಿ ಅನುಸರಣೆಯ ಸೆಕ್ರೆಟೆರಿಯಲ್ ಲೆಕ್ಕ ಪರಿಶೋಧನೆ ನಡೆಸಿದ್ದೇವೆ. ಕಾರ್ಪೊರೇಟ್ ನಡಾವಳಿಗಳು, ಶಾಸನಬದ್ಧ ಅನುಸರಣೆ ಮೌಲ್ಯಮಾಪನ ಮತ್ತು ಈ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸುವಿಕೆಗೆ ಸೂಕ್ತವಾದ ಆಧಾರ ಒದಗಿಸುವ ರೀತಿಯಲ್ಲಿ ಸೆಕ್ರೆಟೆರಿಯಲ್ ಲೆಕ್ಕಪರಿಶೋಧನೆ ನಡೆಸಿದ್ದೇವೆ.

ಸೆಕ್ರೆಟೆರಿಯಲ್ ಲೆಕ್ಕಪರಿಶೋಧನೆ ನಡೆಸಿದ ಸಮಯದಲ್ಲಿ ಕಂಪನಿ ಪುಸ್ತಕಗಳು, ಕಾಗದ ಪತ್ರಗಳು, ಟಿಪ್ಪಣಿ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿರುವ ರಿಟರ್ನ್‌ಗಳು ಮತ್ತು ಕಂಪನಿ ನಿರ್ವಹಿಸಿರುವ ಇನ್ನಿತರೆ ದಾಖಲೆಗಳು ಹಾಗೂ ಕಂಪನಿಯಿಂದ, ಇದರ ಅಧಿಕಾರಿಗಳಿಂದ, ಏಜೆಂಟರಿಂದ ಮತ್ತು ಅಧಿಕೃತ ಪ್ರತಿನಿಧಿಗಳಿಂದ ಒದಗಿಸಿದ ಮಾಹಿತಿಯನ್ನು ನಾವು ಪರಿಶೀಲಿಸಿದ ಆಧಾರದ ಮೇಲೆ ನಾವು ಈ ಮೂಲಕ ವರದಿ ಮಾಡುವುದೇನೆಂದರೆ, ಕಂಪನಿಯು **31ನೇ ಮಾರ್ಚ್ 2019ಕ್ಕೆ** ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಒಳಪಟ್ಟ ಲೆಕ್ಕಪರಿಶೋಧನಾ ಅವಧಿಯಲ್ಲಿ ಈ ಕೆಳಗೆ ಪಟ್ಟಿ ಮಾಡಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತು ಈ ಕೆಳಗೆ ವರದಿ ಮಾಡಿರುವ ರೀತಿಯಲ್ಲಿ ಮತ್ತು ವಿಚಾರದಲ್ಲಿ ಕಂಪನಿಯು ಸೂಕ್ತವಾದ ಮಂಡಳಿ ಕಾರ್ಯವಿಧಾನವನ್ನು ಮತ್ತು ಅನುಸರಣೆ ವ್ಯವಸ್ಥೆಯನ್ನು ಹೊಂದಿದೆ.

ನಾವು ಈ ಕೆಳಕಂಡ ಕಾಯ್ದೆಗಳ ಉಪಬಂಧಗಳ ಅನುಸಾರ, 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಕಂಪನಿಯ ಪುಸ್ತಕಗಳು, ಕಾಗದ ಪತ್ರಗಳು, ಟಿಪ್ಪಣಿ ಪುಸ್ತಕಗಳು, ನಮೂನೆಗಳು ಹಾಗೂ ಸಲ್ಲಿಸಿರುವ ರಿಟರ್ನ್‌ಗಳು ಮತ್ತು ಕಂಪನಿ ನಿರ್ವಹಣೆ ಮಾಡಿರುವ ಇತರೆ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇವೆ.

1. ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳು;
2. ಸೆಕ್ಯುರಿಟೀಸ್ ಕಾಂಟಾಕ್ಟ್ಸ್ (ರೆಗ್ಯುಲೇಷನ್) ಆ್ಯಕ್ಟ್, 1956 ('ಎಸ್‌ಸಿಆರ್‌ಎ') ಮತ್ತು ಅದರಡಿ ರೂಪಿಸಿರುವ ನಿಯಮಗಳು;
3. ಡಿಪಾಸಿಟರೀಸ್ ಆ್ಯಕ್ಟ್, 1996ರ ಉಪಬಂಧಗಳು ಮತ್ತು ಇದರಡಿಯಲ್ಲಿ ರೂಪಿಸಿರುವ ನಿಬಂಧನೆಗಳು ಮತ್ತು ಬೈಲಾಗಳ ಅನ್ವಯ ಅನುಪಾಲನೆ ಮಾಡಬೇಕಾದ ಸಂದರ್ಭಗಳಿರುವುದಿಲ್ಲ. ಆದರೂ, ಆರ್ಥಿಕ ವರ್ಷದ ಅವಧಿಯಲ್ಲಿ ತನ್ನ ಷೇರುಗಳ ಅಭೌತೀಕರಣಗೊಳಿಸುವ ಪ್ರಕ್ರಿಯೆಯಲ್ಲಿದೆ;
4. ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿ ಅಧಿನಿಯಮ, 1992 ('ಸೆಬಿ ಕಾಯ್ದೆ')ರ ಮೇರೆಗೆ ನಿಗದಿಪಡಿಸಿದ ಈ ಮುಂದಿನ ವಿನಿಯಮನಗಳು ಮತ್ತು ಮಾರ್ಗದರ್ಶಿ ಸೂತ್ರಗಳು;



i. ಸೆಕ್ಯುರಿಟಿಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸಮಗ್ರವಾದ ಸ್ವಾಧೀನ ಮತ್ತು ವಶಪಡಿಸಿಕೊಳ್ಳುವಿಕೆ) ನಿಬಂಧನೆಗಳು, 2011ರ ಅನ್ವಯ ಅನುಪಾಲನೆ ಮಾಡಬೇಕಾದ ಯಾವುದೇ ಸಂದರ್ಭಗಳಿಲ್ಲದಿರುವುದರಿಂದ, ಇದು ಅನ್ವಯವಾಗದು.

ii. ಕಂಪನಿಯ ವೆಬ್‌ಸೈಟ್‌ನಲ್ಲಿ ಮತ್ತು ಇನ್ನಿತರೆ ಅಗತ್ಯ ಪ್ರಕಟಣೆಗಳಲ್ಲಿ ಅಗತ್ಯ ಮಾಹಿತಿ ಒದಗಿಸಬೇಕಾದ ಅಗತ್ಯತೆಗೆ ಸಂಬಂಧಿಸಿದಂತೆ ಸೆಬಿ (ಇನ್‌ಸೈಡರ್ ಟ್ರೇಡಿಂಗ್ ನಿಷೇಧ) ನಿಬಂಧನೆಗಳು, 1992 ಮತ್ತು ಸೆಬಿ (ಇನ್‌ಸೈಡರ್ ಟ್ರೇಡಿಂಗ್ ನಿಷೇಧ) ನಿಬಂಧನೆಗಳು, 2015ರ ಅನ್ವಯ ಅನುಸರಣೆ ಮಾಡಬೇಕಾದ ಯಾವುದೇ ಸಂದರ್ಭಗಳಿರುವುದಿಲ್ಲ.

iii. ಸೆಕ್ಯುರಿಟಿಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಬಂಡವಾಳ ಮತ್ತು ಪ್ರಕಟಣೆ ಅಗತ್ಯತೆಗಳ ನೀಡಿಕೆ) ನಿಬಂಧನೆಗಳು, 2009ರ ಉಪಬಂಧಗಳ ಅನುಪಾಲನ ಅಗತ್ಯತೆ ಕಂಪನಿಗೆ ಅನ್ವಯವಾಗುವುದಿಲ್ಲ.

iv. ಕಂಪನಿಯು ಸೆಬಿ (ಎಂಪ್ಲಾಯೀ ಸ್ಟಾಕ್ ಆಪ್ಷನ್ ಸ್ಕೀಮ್ ಅಂಡ್ ಎಂಪ್ಲಾಯೀ ಸ್ಟಾಕ್ ಪರ್ಚೇಸ್ ಸ್ಕೀಮ್) ಗೈಡ್‌ಲೈನ್ಸ್, 1999ರ ಮೇರೆಗೆ ಇಎಸ್‌ಓಪಿ/ಇಎಸ್‌ಪಿಎಸ್ ಯೋಜನೆಗಳ ಅನ್ವಯ ಯಾವುದೆ ಸೆಕ್ಯೂರಿಟಿಗಳನ್ನು ನೀಡಿರುವುದಿಲ್ಲ.

v. ಕಂಪನಿಯು ಹಣಕಾಸಿನ ವರ್ಷದ ಅವಧಿಯಲ್ಲಿ ಯಾವುದೇ ಡೆಟ್ ಸೆಕ್ಯುರಿಟಿಯನ್ನು ನೀಡಿರುವುದಿಲ್ಲ. ಆದ್ದರಿಂದ ಸೆಬಿ (ಡೆಟ್ ಸೆಕ್ಯುರಿಟಿಗಳ ನೀಡಿಕೆ ಮತ್ತು ಪಟ್ಟಿಯಲ್ಲಿ ಹೆಸರು ಸೇರ್ಪಡೆ) ನಿಬಂಧನೆಗಳು, 2008ರ ಉಪಬಂಧಗಳನ್ನು ಪಾಲಿಸಬೇಕಾದ ಅಗತ್ಯವಿಲ್ಲ.

vi. ಕಂಪನಿಗಳ ಕಾಯ್ದೆ ಸಂಬಂಧ ಮತ್ತು ಗ್ರಾಹಕರ ಜೊತೆ ವ್ಯವಹರಿಸುವುದಕ್ಕೆ ಸಂಬಂಧಿಸಿದಂತೆ ಸೆಬಿ (ನೀಡಿಕೆಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು) ನಿಬಂಧನೆಗಳು, 1993 ರ ಅಗತ್ಯತೆ ಪರಿಪಾಲಿಸಬೇಕಾದ ಯಾವುದೇ ಸಂದರ್ಭಗಳಿರುವುದಿಲ್ಲ. ಆದರೆ ಕಂಪನಿಯ ಷೇರುಗಳು ಅಭೌತಿಕರಣ ಪ್ರಕ್ರಿಯೆಯಲ್ಲಿದೆ.

vii. ಕಂಪನಿಯು ಯಾವುದೇ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಈಕ್ವಿಟಿ ಷೇರುಗಳ ಪಟ್ಟಿಯನ್ನು ತೆಗೆದುಹಾಕುವಂತೆ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದಾಗಿ ಸೆಬಿ (ಈಕ್ವಿಟಿ ಷೇರುಗಳ ಪಟ್ಟಿಯಿಂದ ಹೆಸರು ತೆಗೆದುಹಾಕುವಿಕೆ) ನಿಬಂಧನೆಗಳು, 2009ರ ಅನ್ವಯ ಅನುಪಾಲನೆಯು ಕಡ್ಡಾಯವಾಗಿರುವುದಿಲ್ಲ.

viii. ಕಂಪನಿಯು ಸೆಬಿ (ಸೆಕ್ಯುರಿಟಿಗಳ ಮರುಖರೀದಿ) ನಿಬಂಧನೆಗಳು, 1998ರ ಉಪಬಂಧಗಳಿಗೆ ಒಳಪಡುವ ಯಾವುದೇ ಸೆಕ್ಯುರಿಟಿಯನ್ನು ಮರುಖರೀದಿ ಮಾಡಿರುವುದಿಲ್ಲ.

ix. ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಅನುಪಾಲನೆ ಮಾಡಬೇಕಾದ ಯಾವುದೇ ಸಂದರ್ಭಗಳಿರುವುದಿಲ್ಲ.

ನಾವು ಮುಂದುವರೆದು ವರದಿ ಮಾಡುವುದೇನೆಂದರೆ, ಕಂಪನಿಗೆ ಅನ್ವಯವಾಗುವಂತೆ ಉದ್ದಿಮೆಯ ನಿರ್ದಿಷ್ಟ ಕಾನೂನುಗಳನ್ನು ಅನ್ವಯಿಸುವಿಕೆ ಬಗ್ಗೆ ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ (ಐಸಿಎಸ್‌ಐ) ನೀಡಿರುವ ಮಾರ್ಗದರ್ಶನಗಳ ಅನ್ವಯ ಮತ್ತು ಪಡೆದ ಮಾಹಿತಿ ಮತ್ತು ನಿರ್ವಹಿಸಿರುವ ದಾಖಲೆಗಳ ಪರಿಶೀಲನೆ ಆಧಾರದ ಮೇಲೆ ಕಂಪನಿಯು ನಮ್ಮ ಅಭಿಪ್ರಾಯದಂತೆ ಸಾಮಾನ್ಯವಾಗಿ ಅದಕ್ಕೆ ಅನ್ವಯವಾಗುವ ಕೆಳಕಂಡ ಕೈಗಾರಿಕೆಯ ನಿರ್ದಿಷ್ಟ ಕಾನೂನುಗಳ ಉಪಬಂಧಗಳನ್ನು ಪರಿಪಾಲನೆ ಮಾಡಿದೆ.

- ರೈಲ್ವೆ ಕಾಯ್ದೆ, 1989
- ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002
- ಮೆಟ್ರೋ ರೈಲ್ವೆ ಸಾಮಾನ್ಯ ನಿಯಮಗಳು, 2013
- ಮೆಟ್ರೋ ರೈಲ್ವೆಯು ಪ್ರಯಾಣಿಕರ ಸಾರ್ವಜನಿಕ ಸಂಚಾರಕ್ಕೆ ಮುಕ್ತವಾದ ನಿಯಮಗಳು, 2013
- ಮೆಟ್ರೋ ರೈಲ್ವೆ (ಅಪಘಾತಗಳು ಮತ್ತು ಅವುಗಳ ಬಗ್ಗೆ ವಿಚಾರಣೆ ಸೂಚನೆಗಳು) ನಿಯಮಗಳು, 2014
- ಮೆಟ್ರೋ ರೈಲ್ವೆ (ಕ್ಯಾರಿಯೇಜ್ ಮತ್ತು ಟಿಕೆಟ್) ನಿಯಮಗಳು, 2014
- ಮೆಟ್ರೋ ರೈಲ್ವೇಸ್ (ನಿರ್ಮಾಣ ಕಾಮಗಾರಿ) ಕಾಯ್ದೆ, 1978.



ನಾವು ಈ ಕೆಳಕಂಡ ಅನ್ವಯವಾಗುವ ಕಲಂಗಳ ಪಾಲನೆ ಮಾಡಿರುವುದನ್ನೂ ಸಹ ಪರಿಶೀಲಿಸಿದ್ದೇವೆ.

ಎ) ಕಂಪನಿಗೆ ಅನ್ವಯವಾಗುವಂತೆ ಎನ್‌ಎಸ್‌ಇ (ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್) ಜೊತೆ ಕಂಪನಿ ಮಾಡಿಕೊಂಡಿರುವ ಸಾಲದ ಪಟ್ಟಿ ಸೇರ್ಪಡೆ ಒಪ್ಪಂದ ಭಾಗ–ಬಿ ಅನ್ನು ಪರಿಶೀಲಿಸಿದ್ದು, ಕಂಪನಿಯು ಅವಶ್ಯವಾದ ಅಗತ್ಯತೆಗಳನ್ನು ಪಾಲಿಸಿದೆ ಎಂದು ವರದಿ ಮಾಡಿದ್ದೇವೆ.

ಆದರೂ, ನಾವು ಗಮನಿಸಿರುವುದೇನೆಂದರೆ:

i) ಅರೆವಾರ್ಷಿಕ ಬಡ್ಡಿ ಪಾವತಿಗೆ ದಾಖಲೆ ದಿನಾಂಕ ನಿಗದಿಪಡಿಸುವ ಬಗ್ಗೆ ಕಂಪನಿಯು ಸೆಬಿ (ಎಲ್‌ಒಡಿಆರ್) 2015ರ ನಿಬಂಧನೆ 60ರ ಅನ್ವಯ ಪಾವತಿ ದಿನಾಂಕಕ್ಕೆ ಸುಮಾರು 25 ದಿನಗಳ ಮುಂಚಿತವಾಗಿ, ಸ್ಟಾಕ್ ಎಕ್ಸ್‌ಚೇಂಜ್‌ಗೆ ನೋಟೀಸ್ ಕಳುಹಿಸಿದೆ. ಇದು ಸೆಬಿ ಎಲ್‌ಒಡಿಆರ್ 2015ರ ನಿಬಂಧನೆ 50(1)ರ ಪರಿಪಾಲನೆಯಾಗಿ ಸಾಕಷ್ಟು ಮುಂಚಿತವಾಗಿ ನೋಟೀಸ್ ನೀಡಿರುವುದಾಗಿರುವುದು.

ii) ಸೆಬಿ (ಎಲ್‌ಒಡಿಆರ್) ನಿಬಂಧನೆಗಳು 2015ರ ನಿಬಂಧನೆಗಳು 52 (4) ಮತ್ತು (5)ರ ಅನ್ವಯ ಮತ್ತು ಸೆಬಿ (ಎಲ್‌ಒಡಿಆರ್) ನಿಬಂಧನೆಗಳು 2015ರ ನಿಬಂಧನೆ 58(1)(ಡಿ) ಅನ್ವಯ ಕಂಪನಿ ಡಿಬೆಂಚರ್ ಟ್ರಸ್ಟೀಗೆ ಅರ್ಧ ವಾರ್ಷಿಕ ಮಾಹಿತಿಯನ್ನು ಕಳುಹಿಸುತ್ತಿದೆ. ಕಂಪನಿ ಸದರಿ ಮಾಹಿತಿಯನ್ನು ಸಲ್ಲಿಸಿದ್ದರೂ ಕೂಡ, ಡಿಬೆಂಚರ್‌ದಾರರಿಗೆ ಮಾಹಿತಿ ತಿಳಿಸಲು ಸಂಬಂಧಪಟ್ಟ ದಾಖಲೆಗಳು ಲಭ್ಯವಿರುವುದಿಲ್ಲ.

ಬಿ) ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ ಎಸ್‌ಎಸ್–1 ಮತ್ತು ಎಸ್‌ಎಸ್–2 ಅನ್ವಯವಾಗುವ ಮಟ್ಟದವರೆಗೆ ಪರಿಶೀಲಿಸಿದ್ದೇವೆ.

ಮುಂದುವರೆದು, ನಾವು ವರದಿ ಮಾಡುವುದೇನೆಂದರೆ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ, ಈ ಕೆಳಗೆ ತಿಳಿಸಿರುವುದನ್ನು ಹೊರತುಪಡಿಸಿ, ಕಾಯ್ದೆ ನಿಯಮಗಳು, ನಿಬಂಧನೆಗಳ ಉಪಬಂಧಗಳು, ಮಾರ್ಗದರ್ಶನಗಳು ಮತ್ತು ಗುಣಮಟ್ಟಗಳನ್ನು ಕಂಪನಿಯು ಪಾಲಿಸಿದೆ:

i) ಸೆಬಿ (ಎಲ್‌ಒಡಿಆರ್) ನಿಬಂಧನೆಗಳು 2015ರ ನಿಬಂಧನೆ 52(10 ಮತ್ತು 52(2)ರ ಅನ್ವಯ, 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಮತ್ತು 30ನೇ ಸೆಪ್ಟೆಂಬರ್ 2019ಕ್ಕೆ ಕೊನೆಗೊಂಡ ಅರ್ಧ ವರ್ಷದ ಲೆಕ್ಕ ಪರಿಶೋಧನೆ ಮಾಡಿರದ/ಲೆಕ್ಕ ಪರಿಶೋಧನೆ ಮಾಡಿರುವ ಆರ್ಥಿಕ ಫಲಿತಾಂಶಗಳನ್ನು ಸಲ್ಲಿಸುವ ವಿಚಾರವಾಗಿ, ಮಂಡಳಿ ಸಭೆ ನಡೆಸುವುದರಲ್ಲಿ ಆದ ವಿಳಂಬದ ಪ್ರಯುಕ್ತ, ಅದನ್ನು ಸಲ್ಲಿಸಲು ವಿಳಂಬವಾಗಿದೆ.

ii) ಎಸ್‌ಎಸ್–1ರ ಅನ್ವಯ, ಮಂಡಳಿಯ ಸಭೆಯ ಕರಡು ಟಿಪ್ಪಣಿಗಳನ್ನು ಮಂಡಳಿಯ ಸಭೆ ನಡೆಸಲು ನಿಗದಿಪಡಿಸಿರುವ ದಿನಾಂಕಕ್ಕೆ ಮುನ್ನ 15 ದಿನಗಳ ಒಳಗೆ ನಿರ್ದೇಶಕರುಗಳ ಮಂಡಳಿಗೆ ತಲುಪಿಸಿರುವುದಿಲ್ಲ.

ಮತ್ತೆ ನಾವು ವರದಿ ಮಾಡುವುದೇನೆಂದರೆ,

ಕಂಪನಿಯ ನಿರ್ದೇಶಕರ ಮಂಡಳಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕೇತರ ನಿರ್ದೇಶಕರುಗಳ ಸೂಕ್ತ ಸಮತೋಲನೆಯೊಂದಿಗೆ ರಚನೆ ಮಾಡಿದೆ. ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ನಿರ್ದೇಶಕರುಗಳ ಮಂಡಳಿಯ ರಚನೆಯಲ್ಲಿ ಮಾಡಲಾದ ಬದಲಾವಣೆಯನ್ನು ಕಾಯ್ದೆಯ ಉಪಬಂಧಗಳ ಅನುಸರಣೆ ಅನ್ವಯ ಮಾಡಲಾಗಿದೆ.

ವರದಿ ಮಾಡಿರುವ ವರ್ಷದ ಅವಧಿಯಲ್ಲಿ ಎರಡು ಲೆಕ್ಕಪರಿಶೋಧನಾ ಸಮಿತಿ ಸಮಿತಿಗಳು, ಎರಡು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ಸಭೆಗಳು ಮತ್ತು ಐದು ಮಂಡಳಿ ಸಭೆಗಳು ನಡೆದಿವೆ.

ಬಹುಪಾಲು ತೀರ್ಮಾನವನ್ನು ಬಹುಮತದ ಮೂಲಕವೇ ತೆಗೆದುಕೊಳ್ಳಲಾಗಿದೆ. ಅಸಮ್ಮತಿ ಸೂಚಿಸುವ ಸದಸ್ಯರ ಅಭಿಪ್ರಾಯಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ದಾಖಲಿಸುವದಕ್ಕೆ ಸಂಬಂಧಿಸಿದ ಸಭೆಯ ನಡವಳಿಗಳು ಸ್ವಯಂ ವಿವರಣಾತ್ಮಕವಾಗಿರುವುವು.

ನಾವು ಮುಂದುವರೆದು ವರದಿ ಮಾಡುವುದೇನೆಂದರೆ, ಕಂಪನಿಯು ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಿರುವುದನ್ನು ಖಚಿತಪಡಿಸಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆ ವಿಧಾನಕ್ಕೆ



ಅನುಗುಣವಾಗಿ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಕ್ರಮಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಅನುಷ್ಠಾನಗೊಳಿಸಿದೆ. ಕಂಪನಿಯ ಅಸ್ತಿತ್ವಕ್ಕೆ ಧಕ್ಕೆಯಾಗುವಂಥ ಅಪಾಯವನ್ನು ಕಡಿಮೆ ಮಾಡುವಲ್ಲಿ ನೆರವಾಗುವ ಪ್ರಕ್ರಿಯೆ ಮತ್ತು ಕಾರ್ಯವಿಧಾನವನ್ನು ಕಂಪನಿ ಅಳವಡಿಸಿಕೊಂಡಿದೆ.

ನಾವು ಮತ್ತೆ ವರದಿ ಮಾಡುವುದೇನೆಂದರೆ, ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ಮೇಲೆ ತಿಳಿಸಲಾಗಿರುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಇತ್ಯಾದಿಗಳ ಅನುಸಾರ ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದ ಈ ಕೆಳಕಂಡ ಘಟನೆಗಳು ನಡೆದಿವೆ.

1. ಕಂಪನಿಯು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ರೂ.460.80 ಕೋಟಿಗಳ (ನಾಲ್ಕು ನೂರ ಅರವತ್ತು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಬಜೆಟರಿ ಹಣ ಪಡೆದಿದೆ. ಇದಕ್ಕೆ ಎದುರಾಗಿ ಕಂಪನಿಯ ಹಾಲಿಯಿರುವ ಈಕ್ವಿಟಿ ಷೇರುದಾರರುಗಳಾದ ಸಂಬಂಧಪಟ್ಟ ಸರ್ಕಾರಗಳಿಗೆ ತಲಾ ರೂ.10/–ರ 46.08 ಕೋಟಿ ಈಕ್ವಿಟಿ ಷೇರುಗಳನ್ನು ಕಂಪನಿಯು ನೀಡಿದೆ ಮತ್ತು ಹಂಚಿಕೆ ಮಾಡಿದೆ.
2. ಈ ವರ್ಷದ ಅವಧಿಯಲ್ಲಿ, ಹಂತ–1ರ ಸಂಪರ್ಕ ಜಾಲದ ನೇರಳೆ ಮಾರ್ಗ ಹಾಗೂ ಹಸಿರು ಮಾರ್ಗದಲ್ಲಿ ಹಾಲಿಯಿರುವ ಹತ್ತು (10) ಮೂರು ಬೋಗಿಗಳ ರೈಲುಗಳನ್ನು ಆರು ಬೋಗಿಗಳ ರೈಲುಗಳನ್ನಾಗಿ ಕಂಪನಿಯು ಪರಿವರ್ತನೆ ಮಾಡಿದೆ. ಇದರಿಂದ ಹೆಚ್ಚಿನ ಪ್ರಯಾಣಿಕರು ಪ್ರಯಾಣಿಸಲು ಸಾಧ್ಯವಾಗಿದೆ ಹಾಗೂ ಕಂಪನಿಯ ಆದಾಯವೂ ಹೆಚ್ಚಾಗಿದೆ.

ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳ ಪರವಾಗಿ

ಸಹಿ/–
ಎಸ್. ಕೇದಾರ್‌ನಾಥ್
ಕಂಪನಿ ಕಾರ್ಯದರ್ಶಿ
ಸಿ.ಪಿ. ನಂ.4422

ದಿನಾಂಕ: 09.08.2019
ಸ್ಥಳ: ಬೆಂಗಳೂರು

ಸೂಚನೆ: ಅನುಬಂಧ–ಎ ಆಗಿ ಲಗತ್ತಿಸಿರುವ ಮತ್ತು ಸದರಿ ವರದಿಯ ಸಮಗ್ರ ಭಾಗವಾಗಿರುವ ಸಮ ದಿನಾಂಕದ ನಮ್ಮ ಪತ್ರದ ಜೊತೆಗೆ ಸದರಿ ವರದಿಯನ್ನು ಓದಿಕೊಳ್ಳುವುದು.



'ಅನುಬಂಧ ಎ'

ಇವರಿಗೆ,
ಸದಸ್ಯರು,
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ,
ಬೆಂಗಳೂರು–560 027.

ಸಮದಿನಾಂಕದ ನಮ್ಮ ವರದಿಯನ್ನು ಈ ಪತ್ರದ ಜೊತೆಗೆ ಓದಿಕೊಳ್ಳುವುದು.

1. ಸೆಕ್ರೆಟೇರಿಯಲ್ ದಾಖಲೆ ನಿರ್ವಹಣೆ ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಈ ಸೆಕ್ರೆಟೇರಿಯಲ್ ದಾಖಲೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು.
2. ಸೆಕ್ರೆಟೇರಿಯಲ್ ದಾಖಲೆಗಳಲ್ಲಿನ ಒಕ್ಕಣೆಗಳು ಸರಿಯಾಗಿರುವಿಕೆ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಯುಕ್ತವಾದ ಲೆಕ್ಕಪರಿಶೋಧನಾ ವಿಧಾನಗಳನ್ನು ಮತ್ತು ಕ್ರಮಗಳನ್ನು ನಾವು ಅನುಸರಿಸಿದ್ದೇವೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಸರಿಯಾದ ಅಂಶಗಳು ಗೋಚರಿಸಿರುವವೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಪರೀಕ್ಷೆ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ನಾವು ಅನುಸರಿಸಿರುವ ವಿಧಾನಗಳು ಮತ್ತು ಕ್ರಮಗಳು, ನಮ್ಮ ಅಭಿಪ್ರಾಯಕ್ಕೆ ಸೂಕ್ತವಾದ ಆಧಾರ ಒದಗಿಸಿವೆ ಎಂಬುದಾಗಿ ನಾವು ನಂಬಿದ್ದೇವೆ.
3. ಸರಕುಗಳು ಮತ್ತು ಸೇವಾ ತೆರಿಗೆಗಳು, ಆದಾಯ ತೆರಿಗೆ ಕಾಯ್ದೆ, ಸೀಮಾ ಸುಂಕ ಮತ್ತು ಕಂಪನಿಗೆ ಅನ್ವಯವಾಗುವ ಇನ್ನಿತರೆ ಸಂಬಂಧಪಟ್ಟ ಕಾಯ್ದೆಗಳಿಗೆ ಸಂಬಂಧಿಸಿದ ದಾಖಲೆಗಳು ಸೇರಿದಂತೆ, ಕಂಪನಿಯ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕದ ಪುಸ್ತಕಗಳು ಸರಿಯಾಗಿರುವಿಕೆ ಮತ್ತು ಸೂಕ್ಷ್ಮತೆಯನ್ನು ನಾವು ಪರಿಶೀಲಿಸಿರುವುದಿಲ್ಲ.
4. ಅಗತ್ಯವಾದೆಡೆಗಳಲ್ಲಿ ಕಂಪನಿಯು ಕಾಲಕಾಲಕ್ಕೆ ಅನ್ವಯವಾದಂತೆ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳು ಹಾಗೂ ಘಟನಾವಳಿಗಳು ಇತ್ಯಾದಿಯ್ನು ಅನುಸರಣೆ ಮಾಡಿರುವ ಬಗ್ಗೆ ಹೇಳಿಕೆ ನೀಡಿದೆ. ಕಂಪನಿಯ ಕಾರ್ಯಾಚರಣೆಗಳು ವಿವಿಧ ಸ್ಥಳಗಳಲ್ಲಿ ಹರಡಿಕೊಂಡಿರುವವು. ಆದ್ದರಿಂದ ಆಯ್ಕೆಯ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ಅಧಿಕಾರಿಗಳು ನೀಡಿದ ವಿವರಣೆಗಳ ಮೇಲೆ ಭರವಸೆ ತಳೆಯಲಾಗಿದೆ.
5. ಕಾರ್ಪೊರೇಟ್ ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಗುಣಮಟ್ಟಗಳ ಉಪಬಂಧಗಳನ್ನು ಪರಿಪಾಲಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಆಯ್ಕೆ ಆಧಾರದ ಮೇಲೆ ಕ್ರಮಾವಳಿಗಳನ್ನು ಪರಿಶೀಲಿಸುವುದಕ್ಕೆ ಮಾತ್ರ ನಮ್ಮ ಪರೀಕ್ಷೆ ಸೀಮಿತವಾಗಿರುವುದು.
6. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿಯು ಕಂಪನಿಯ ಭವಿಷ್ಯದ ಅಸ್ತಿತ್ವದ ಬಗ್ಗೆಯಾಗಲಿ ಇಲ್ಲವೆ ಕಂಪನಿಯ ವ್ಯವಹಾರಗಳನ್ನು ಆಡಳಿತ ವರ್ಗ ನಡೆಸಿರುವ ನಿಖರತೆ ಬಗ್ಗೆಯಾಗಲಿ ಅಥವಾ ಸಾಮರ್ಥ್ಯದ ಬಗ್ಗೆಯಾಗಲಿ ಭರವಸೆ ನೀಡುವುದಾಗಿರುವುದಿಲ್ಲ.

ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳ ಪರವಾಗಿ

ಸಹಿ/–
ಎಸ್. ಕೇದಾರ್‌ನಾಥ್
ಕಂಪನಿ ಕಾರ್ಯದರ್ಶಿ
ಸಿ.ಪಿ. ನಂ.4422

ದಿನಾಂಕ: 09.08.2019
ಸ್ಥಳ: ಬೆಂಗಳೂರು



ಅನುಬಂಧ–II

ವಾರ್ಷಿಕ ರಿಟರ್ನ್‌ನ ಉದ್ಧೃತ ಭಾಗ

31ನೇ ಮಾರ್ಚ್ 2019ರಂದು ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿರುವಂತೆ

(ಕಂಪನಿಗಳ ಅಧಿನಿಯಮ, 2013ರ ಕಲಂ 92(3) ಮತ್ತು ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ಕ್ಕೆ ಅನುಸಾರವಾಗಿ)

ನಮೂನೆ ಸಂಖ್ಯೆ ಎಂಜಿಟಿ–9

I. ನೋಂದಣಿ ಮತ್ತು ಇತರ ವಿವರಗಳು:

ಕಾರ್ಪೊರೇಟ್ ಗುರುತಿನ ಸಂಖ್ಯೆ	**U16286KA1994GOI016286**
ನೋಂದಣಿ ದಿನಾಂಕ	**21/09/1994**
ಕಂಪನಿಯ ಹೆಸರು	**ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ**
ಕಂಪನಿಯ ಪ್ರವರ್ಗ	**ಸಾರ್ವಜನಿಕ ಕಂಪನಿ**
ಕಂಪನಿಯ ಉಪಪ್ರವರ್ಗ	**ಸರ್ಕಾರಿ ಕಂಪನಿ/ಷೇರುಗಳಿಂದ ನಿಯಮಿತಗೊಂಡಿರುವುದು**
ನೋಂದಾಯಿತ ಕಚೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	**3ನೇ ಮಹಡಿ, ಬಿಎಂಟಿಸಿ ಸಂಕೀರ್ಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027. ದೂರವಾಣಿ: 080–22969300, ಫ್ಯಾಕ್ಸ್: 080–22969222**
ಪಟ್ಟಿಯಲ್ಲಿ ಸೇರಿದ (ಲಿಸ್ಟೆಡ್) ಕಂಪನಿಯೇ	ಇಲ್ಲ
ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು	**ಮೆ॥ ಬಿಜಿಎಸ್‌ಇ ಫೈನಾನ್ಷಿಯಲ್ ಲಿಮಿಟೆಡ್, ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, 51, 1ನೇ ಅಡ್ಡರಸ್ತೆ, ಜೆ.ಸಿ. ರಸ್ತೆ, ಬೆಂಗಳೂರು–560 027. ದೂರವಾಣಿ: 080–41575234, ಫ್ಯಾಕ್ಸ್: 080–41575229**

II. ಕಂಪನಿಯ ಪ್ರಧಾನ ವ್ಯವಹಾರ ಕಾರ್ಯಚಟುವಟಿಕೆಗಳು:

ಕಂಪನಿಯ ಒಟ್ಟು ವಹಿವಾಟಿನ ಪೈಕಿ ಶೇಕಡ 10 ಅಥವಾ ಅದಕ್ಕಿಂತ ಹೆಚ್ಚು ಪ್ರಮಾಣದ ವಹಿವಾಟಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರ ಚಟುವಟಿಕೆಗಳನ್ನು ತಿಳಿಸತಕ್ಕದ್ದು.

ಕ್ರ.ಸಂ.	ಪ್ರಮುಖ ಉತ್ಪನ್ನಗಳು / ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನ / ಸೇವೆಯ ಎನ್‌ಐಸಿ ಸಂಕೇತ	ಕಂಪನಿಯ ಒಟ್ಟು ವಹಿವಾಟಿನ ಶೇಕಡಾವಾರು ಪ್ರಮಾಣ
1.	ಸುರಂಗ ರೈಲ್ವೆ ಮತ್ತು ಎಲಿವೇಟೆಡ್ ರೈಲ್ವೆಗಳೂ ಸೇರಿದಂತೆ ನಗರ ಮತ್ತು ಉಪನಗರ ಸಾರಿಗೆ	**99532124**	**84.70**
2.	ಶುಲ್ಕ ಅಥವಾ ಗುತ್ತಿಗೆ ಆಧಾರದ ಮೇಲಿನ ರಿಯಲ್ ಎಸ್ಟೇಟ್ ಚಟುವಟಿಕೆಗಳು	**99722120**	**11.30**

III. ಧಾರಕ, ಸಹಾಯಕ ಮತ್ತು ಸಹವರ್ತಿ ಕಂಪನಿಗಳ ವಿವರಗಳು:

ಕ್ರ.ಸಂ.	ಕಂಪನಿಯ ಹೆಸರು ಮತ್ತು ವಿಳಾಸ	ಸಿಐಎನ್ / ಜಿಎಲ್‌ಎನ್	ಧಾರಕ / ಸಹಾಯಕ / ಸಹವರ್ತಿ ಕಂಪನಿ
ಇಲ್ಲ			



IV ಷೇರುದಾರಿಕೆಯ ಮಾದರಿ (ಒಟ್ಟು ಈಕ್ವಿಟಿಗೆ ಶೇಕಡಾವಾರಿನಂತೆ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

i) ಪ್ರವರ್ಗವಾರು ಷೇರುದಾರಿಕೆ

ಷೇರುದಾರರ ಪ್ರವರ್ಗ	ವರ್ಷದ ಆರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ				ವರ್ಷದ ಕೊನೆಯಲ್ಲಿ ಹೊಂದಿರುವ ಷೇರುಗಳ ಸಂಖ್ಯೆ				ವರ್ಷದ ಅವಧಿಯಲ್ಲಿನ ಶೇಕಡವಾರು ಬದಲಾವಣೆ
	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ ಶೇಕಡವಾರು ಪ್ರಮಾಣ	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ ಶೇಕಡವಾರು ಪ್ರಮಾಣ	
ಎ. ಪ್ರವರ್ತಕರು									
1. ಕೇಂದ್ರ ಸರ್ಕಾರ (ಭಾ.ಸ)	–	2,68,14,90,000	2,68,14,90,000	50	–	2,91,18,90,000	2,91,18,90,000	50	8.59
2. ರಾಜ್ಯ ಸರ್ಕಾರ (ಕ.ಸ)	–	2,68,14,90,000	2,68,14,90,000	50	2,91,18,90,000	–	2,91,18,90,000	50	8.59
ಉಪ ಮೊತ್ತ	–	–	–	–	–	–	–	–	–
ಪ್ರವರ್ತಕರು ಹೊಂದಿರುವ ಒಟ್ಟು ಷೇರುಗಳು	–	**5,36,29,80,000**	**5,36,29,80,000**	**100**	**2,91,18,90,000**	**2,91,18,90,000**	**5,82,37,80,000**	**100**	**8.59**
ಬಿ. ಸಾರ್ವಜನಿಕರು ಹೊಂದಿರುವ ಷೇರುಗಳು									
ಉಪ ಮೊತ್ತ	–	–	–	–	–	–	–	–	–
ಸಾರ್ವಜನಿಕರು ಹೊಂದಿರುವ ಒಟ್ಟು ಷೇರುಗಳು	–	–	–	–	–	–	–	–	–
ಸಿ. ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಕಸ್ಟೋಡಿಯನ್ ಹೊಂದಿರುವ ಷೇರುಗಳು	–	–	–	–	–	–	–	–	
ಒಟ್ಟು ಮೊತ್ತ (ಎ+ಬಿ+ಸಿ)	–	**5,36,29,80,000**	**5,36,29,80,000**	**100**	**2,91,18,90,000**	**2,91,18,90,000**	**5,82,37,80,000**	**100**	**8.59**

ಪ್ರಸ್ತುತ ಒಟ್ಟು ಪಾವತಿಯಾದ ಷೇರು ಬಂಡವಾಳದ ಶೇ.100ರಷ್ಟನ್ನು ಭಾರತ ಸರ್ಕಾರ (ಭಾ.ಸ) ಮತ್ತು ಕರ್ನಾಟಕ ಸರ್ಕಾರ (ಕ.ಸ) 50:50 ಅನುಪಾತದಲ್ಲಿ ಹೊಂದಿರುವವು.

ii) **ಪ್ರವರ್ತಕರ ಷೇರುದಾರಿಕೆ**

ಕ್ರ. ಸಂ.	ಷೇರುದಾರರ ಹೆಸರು	ವರ್ಷದ ಆರಂಭದಲ್ಲಿನ ಷೇರುದಾರಿಕೆ			ವರ್ಷದ ಮುಕ್ತಾಯದಲ್ಲಿನ ಷೇರುದಾರಿಕೆ			ವರ್ಷದ ಅವಧಿಯಲ್ಲಿ ಷೇರುದಾರಿಕೆಯಲ್ಲಿನ ಶೇಕಡಾವಾರು ಬದಲಾವಣೆ
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು ಪ್ರಮಾಣ	ಒಟ್ಟು ಷೇರುಗಳಿಗೆ ಅಡಮಾನ ಮಾಡಿದ/ ಋಣಭಾರ ಹೊರಿಸಿದ ಷೇರುಗಳ ಶೇಕಡವಾರು ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು ಪ್ರಮಾಣ	ಒಟ್ಟು ಷೇರುಗಳಿಗೆ ಅಡಮಾನ ಮಾಡಿದ/ ಋಣಭಾರ ಹೊರಿಸಿದ ಷೇರುಗಳ ಶೇಕಡವಾರು ಪ್ರಮಾಣ	
1.	ಭಾರತದ ರಾಷ್ಟ್ರಪತಿ	2,68,14,90,000	50	-	2,91,18,90,000	50	-	8.59
2.	ಕರ್ನಾಟಕ ರಾಜ್ಯಪಾಲರು	2,68,14,90,000	50	-	2,91,18,90,000	50	-	8.59
	ಒಟ್ಟು	**5,36,29,80,000**	**100**	**-**	**5,82,37,80,000**	**100**	**-**	**8.59**

iv) **ಪ್ರವರ್ತಕರ ಷೇರುದಾರಿಕೆಯಲ್ಲಿನ ಬದಲಾವಣೆ (ಯಾವುದೇ ಬದಲಾವಣೆಗಳಿದ್ದಲ್ಲಿ, ದಯವಿಟ್ಟು ಸ್ಪಷ್ಟವಾಗಿ ನಮೂದಿಸಿ)**

ಕ್ರ. ಸಂ.		ವರ್ಷದ ಆರಂಭದಲ್ಲಿ ಷೇರುದಾರಿಕೆ		ವರ್ಷಾವಧಿಯಲ್ಲಿನ ಸಂಚಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು ಪ್ರಮಾಣ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು ಪ್ರಮಾಣ
1.	**ವರ್ಷದ ಆರಂಭದಲ್ಲಿ**				
	ಭಾರತದ ರಾಷ್ಟ್ರಪತಿ	2,68,14,90,000	50	–	–
	ಕರ್ನಾಟಕ ರಾಜ್ಯಪಾಲರು	2,68,14,90,000	50	–	–
	ಒಟ್ಟು	**5,36,29,80,000**	**100**	–	–
2.	**ಷೇರುದಾರಿಕೆಯಲ್ಲಿನ ಬದಲಾವಣೆ**				
	ಭಾರತದ ರಾಷ್ಟ್ರಪತಿ (ಈ ವರ್ಷದ ಅವಧಿಯಲ್ಲಿ ಬದಲಾಗಿದೆ)	**23,04,00,000**	**8.59**		
	ಕರ್ನಾಟಕ ರಾಜ್ಯಪಾಲರು (ಈ ವರ್ಷದ ಅವಧಿಯಲ್ಲಿ ಬದಲಾಗಿದೆ)	**23,04,00,000**	**8.59**		
3.	**ವರ್ಷದ ಮುಕ್ತಾಯದಲ್ಲಿ**				
	ಭಾರತದ ರಾಷ್ಟ್ರಪತಿ	2,91,18,90,000	50	2,91,18,90,000	50
	ಕರ್ನಾಟಕ ರಾಜ್ಯಪಾಲರು	2,91,18,90,000	50	2,91,18,90,000	50
	ಒಟ್ಟು	**5,82,37,80,000**	**100**	**5,82,37,80,000**	**100**

v) **ಅಗ್ರ ಕ್ರಮಾಂಕದ ಹತ್ತು (ಟಾಪ್ ಟೆನ್) ಷೇರುದಾರರ ಷೇರುದಾರಿಕೆಯ ಮಾದರಿ: (ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್ ಮತ್ತು ಎಡಿಆರ್‌ಗಳ ಧಾರಕರುಗಳನ್ನು ಹೊರತುಪಡಿಸಿ).**

ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಷೇರುಗಳನ್ನು ಸಮ ಪ್ರಮಾಣದಲ್ಲಿ ಹೊಂದಿರುವುದರಿಂದ ಇದು ಅನ್ವಯವಾಗುವುದಿಲ್ಲ.



v) ನಿರ್ದೇಶಕರ ಷೇರುದಾರಿಕೆ

ಕ್ರ. ಸಂ.	ಪ್ರತಿಯೊಬ್ಬ ನಿರ್ದೇಶಕರ ಮತ್ತು ಪ್ರತಿಯೊಬ್ಬ ಮುಖ್ಯ ವ್ಯವಸ್ಥಾಪನಾ ಸಿಬ್ಬಂದಿಯ ಷೇರುದಾರಿಕೆ	ವರ್ಷದ ಆರಂಭದಲ್ಲಿನ ಷೇರುದಾರಿಕೆ		ದಿನಾಂಕ	ಷೇರುದಾರಿಕೆಯಲ್ಲಿನ ಹೆಚ್ಚಳ / ಇಳಿಕೆ	ಕಾರಣ	ವರ್ಷಾವಧಿಯಲ್ಲಿನ (01.04.2018ರಿಂದ 31.03.2019 ರವರೆಗೆ) ಸಂಚಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪೈಕಿ ಶೇಕಡಾವಾರು ಪ್ರಮಾಣ				ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪೈಕಿ ಶೇಕಡಾವಾರು ಪ್ರಮಾಣ
1.	ಶ್ರೀ ದುರ್ಗಾಶಂಕರ್ ಮಿಶ್ರಾ	10	–	01/04/2018	0	ಬದಲಾವಣೆಯಿಲ್ಲ	10	–
		10	–	31/03/2019				
2.	ಶ್ರೀ ಎಂ.ಕೆ. ಸಿನ್ಹಾ	10	–	01/04/2018	0	ಬದಲಾವಣೆಯಿಲ್ಲ	10	–
		10	–	31/03/2019				
3.	ಶ್ರೀ ಐ.ಎಸ್.ಎನ್. ಪ್ರಸಾದ್	10	–	01/04/2018	0	ಬದಲಾವಣೆಯಿಲ್ಲ	10	–
		10	–	31/03/2019				
4.	ಶ್ರೀ ಅಜಯ್ ಸೇಠ್	0	–	01/04/2018	10	ವರ್ಗಾವಣೆ	10	–
		10	–	31/03/2019				
5.	ಶ್ರೀ ಕೆ.ಕೆ. ಅಗರವಾಲ್	10	–	01/04/2018	0	ವರ್ಗಾವಣೆ	0	–
		0	–	31/03/2019				
6.	ಶ್ರೀ ಪ್ರದೀಪ್ ಎಂ. ಸಿಕ್ದರ್	0	–	01/04/2018	10	ವರ್ಗಾವಣೆ	10	–
		10	–	31/03/2019				
7.	ಶ್ರೀ ಎಲ್.ಕೆ. ಅತೀಕ್	10	–	01/04/2018	0	ವರ್ಗಾವಣೆ	0	–
		0	–	31/03/2019				
8.	ಶ್ರೀ ಮಹೇಂದ್ರ ಜೈನ್	20	–	01/04/2018	10	ವರ್ಗಾವಣೆ	10	–
		10	–	31/03/2019				
9.	ಶ್ರೀ ಇ.ವಿ. ರಮಣ ರೆಡ್ಡಿ	0	–	01/04/2018	10	ವರ್ಗಾವಣೆ	10	–
		10	–	31/03/2019				
10.	ಶ್ರೀ ಕೆ.ಕೆ. ಸಬರ್‌ವಾಲ್	0	–	01/04/2018	10	ವರ್ಗಾವಣೆ	10	–
		10	–	31/03/2019				

ಸೂಚನೆ: ನಿರ್ದೇಶಕರು ಆಯಾ ಸರ್ಕಾರಗಳ ನಾಮ ನಿರ್ದೇಶಿತರಾಗಿ ಷೇರುಗಳನ್ನು ಹೊಂದಿರುತ್ತಾರೆ.

V. ಪಾವತಿಸಬೇಕಾದ ಸಾಲ

ಬಾಕಿಯಿರುವ/ಪ್ರಾಪ್ತವಾದ ಆದರೆ ಸಂದಾಯಕ್ಕೆ ಬಾಕಿಯಿರದ ಬಡ್ಡಿಯೂ ಸೇರಿದಂತೆ ಕಂಪನಿಯ ಸಾಲದ ಮೊತ್ತ (ರೂ.ಲಕ್ಷಗಳಲ್ಲಿ)

ವಿವರಗಳು	ಠೇವಣಿಗಳನ್ನು ಹೊರತುಪಡಿಸಿ ಭದ್ರತೆಯುಳ್ಳ ಸಾಲಗಳು	ಭದ್ರತೆಯಿಲ್ಲದ ಸಾಲಗಳು	ಠೇವಣಿಗಳು	ಒಟ್ಟು ಸಾಲದ ಮೊತ್ತ
ಆರ್ಥಿಕ ವರ್ಷದ ಪ್ರಾರಂಭದಲ್ಲಿನ ಸಾಲದ ಮೊತ್ತ				
i) ಅಸಲು ಮೊತ್ತ	74,658.54	13,20,148.61	–	13,94,807.15
ii) ಬಾಕಿ ಇರುವ ಆದರೆ ಸಂದಾಯವಾಗಿರದ ಬಡ್ಡಿ	–	1188.74	–	1188.74
iii) ಪ್ರಾಪ್ತವಾದ ಆದರೆ ಬಾಕಿಯಿರದ ಬಡ್ಡಿ	1080.82	–	–	1080.82
ಒಟ್ಟು (i+ii+iii)	**75,739.36**	**13,21,337.35**	–	**13,97,076.71**
ಆರ್ಥಿಕ ವರ್ಷದಲ್ಲಿ ಸಾಲದ ಮೊತ್ತದಲ್ಲಿನ ಬದಲಾವಣೆ				
*** ಸೇರಿಕೆ**	–	–	–	
i) ಅಸಲು ಮೊತ್ತ	–	2,70,695.88	–	2,70,695.88
ii) ಬಾಕಿ ಇರುವ ಆದರೆ ಸಂದಾಯವಾಗಿರದ ಬಡ್ಡಿ	–	92.45	–	92.45
iii) ಪ್ರಾಪ್ತವಾದ ಆದರೆ ಬಾಕಿಯಿರದ ಬಡ್ಡಿ	–	–	–	–
*** ಇಳಿಕೆ**				
i) ಅಸಲು ಮೊತ್ತ	(5805.86)	(16,841.07)	–	(22,646.93)
ii) ಬಾಕಿ ಇರುವ ಆದರೆ ಸಂದಾಯವಾಗಿರದ ಬಡ್ಡಿ	–	(683.01)	–	(683.01)
iii) ಪ್ರಾಪ್ತವಾದ ಆದರೆ ಬಾಕಿಯಿರದ ಬಡ್ಡಿ	(60.97)	–	–	(60.97)
ನಿವ್ವಳ ಬದಲಾವಣೆ	**(5866.83)**	**2,53,264.24**	–	**2,47,397.41**
ಆರ್ಥಿಕ ವರ್ಷದಲ್ಲಿ ಕೊನೆಯಲ್ಲಿನ ಸಾಲದ ಮೊತ್ತ				
i) ಅಸಲು ಮೊತ್ತ	68,852.68	15,74,003.41	–	16,42,856.09
ii) ಬಾಕಿ ಇರುವ ಆದರೆ ಸಂದಾಯವಾಗಿರದ ಬಡ್ಡಿ	–	598.18	–	598.18
iii) ಪ್ರಾಪ್ತವಾದ ಆದರೆ ಬಾಕಿಯಿರದ ಬಡ್ಡಿ	1019.85	–	–	1019.85
ಒಟ್ಟು (i+ii+iii)	**69,872.52**	**15,74,601.59**	–	**16,44,474.11**



VI. ನಿರ್ದೇಶಕರು ಮತ್ತು ಮುಖ್ಯ ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಕಾಲಿಕ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರಿಗೆ ಸಂಭಾವನೆ:

(ರೂ.ಗಳಲ್ಲಿ)

ಕ್ರ. ಸಂ.	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕ / ಪೂರ್ಣಕಾಲಿಕ ನಿರ್ದೇಶಕರ ಹೆಸರು			ಒಟ್ಟು ಮೊತ್ತ
		ಅಜಯ್ ಸೇಠ್	ವಿಜಯ್‌ಕುಮಾರ್ ಧೀರ್	ಎನ್.ಎಂ. ಧೋಕೆ	
		ವ್ಯವಸ್ಥಾಪಕ ನಿರ್ದೇಶಕರು (03.07.2018ರಿಂದ)	ನಿರ್ದೇಶಕರು (ಪಿ ಅಂಡ್ ಪಿ)	ನಿರ್ದೇಶಕರು (ಆರ್.ಎಸ್.ಇ)	
1	ಒಟ್ಟು ವೇತನ				
	(ಎ) ಆದಾಯ ತೆರಿಗೆ ಅಧಿನಿಯಮ 1961ರ ಕಲಂ 17(1)ರಲ್ಲಿ ಒಳಗೊಂಡ ಉಪಬಂಧಗಳಿಗನುಸಾರ ವೇತನ	27,91,726	35,37,000	38,37,000	**1,01,65,726**
	(ಬಿ) ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 17(2)ರ ಮೇರೆಗೆ ಒದಗಿಸುವ ವಿಶೇಷ ಸವಲತ್ತುಗಳ ಮೌಲ್ಯ	–	25,000	–	**25,000**
	(ಸಿ) ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 17(3)ರ ಮೇರೆಗೆ ವೇತನಕ್ಕೆ ಬದಲಾಗಿ ಪಡೆಯುವ ಲಾಭಗಳು	–	–	–	–
2	ಸ್ವಾಕ್ ಆಯ್ಕೆ	–	–	–	–
3	ಸ್ವೆಟ್ ಈಕ್ವಿಟಿ	–	–	–	–
4	ಕಮಿಷನ್ – ಲಾಭದ ಶೇಕಡಾವಾರು ಆಗಿ – ಇತರೆ, ತಿಳಿಸಿ	–	–	–	–
5	ಇತರೆ, ದಯವಿಟ್ಟು ಸ್ಪಷ್ಟವಾಗಿ ನಮೂದಿಸುವುದು	–	–	–	–
	ಒಟ್ಟು (ಎ)	**27,91,726**	**35,62,000**	**38,37,000**	**1,01,90,726**

(ರೂ.ಗಳಲ್ಲಿ)

ಬಿ. ಇತರೆ ನಿರ್ದೇಶಕರಿಗೆ ಸಂಭಾವನೆ – ಇಲ್ಲ				
ಸಿ. ವ್ಯವಸ್ಥಾಪಕ ನಿರ್ದೇಶಕರು / ವ್ಯವಸ್ಥಾಪಕರು / ಪೂರ್ಣಾವಧಿ ನಿರ್ದೇಶಕರುಗಳನ್ನು ಹೊರತುಪಡಿಸಿ ಇತರೆ ಮುಖ್ಯ ವ್ಯವಸ್ಥಾಪನಾ ಸಿಬ್ಬಂದಿಗೆ ಸಂಭಾವನೆ:				
ಕ್ರ. ಸಂ.	ಸಂಭಾವನೆಯ ವಿವರಗಳು	ಮುಖ್ಯ ವ್ಯವಸ್ಥಾಪನಾ ಸಿಬ್ಬಂದಿ		ಒಟ್ಟು
		ಯು. ಜಗದೀಶ್ ನಾಯಕ್	ಎಸ್. ವಾಸುದೇವನ್	
		ಕಂಪನಿ ಕಾರ್ಯದರ್ಶಿ	ಮುಖ್ಯ ಹಣಕಾಸು ಅಧಿಕಾರಿ	
1	ಒಟ್ಟು ವೇತನ			
	(ಎ) ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 17(1)ರಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿ ವೇತನ	21,64,800	19,58,760	**41,23,560**
	(ಬಿ) ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 17(2)ರ ಮೇರೆಗೆ ಒದಗಿಸುವ ವಿಶೇಷ ಸವಲತ್ತುಗಳ ಮೌಲ್ಯ	–	2,06,040	**2,06,040**
	(ಸಿ) ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 17(3)ರ ಮೇರೆಗೆ ವೇತನಕ್ಕೆ ಬದಲಾಗಿ ಪಡೆಯುವ ಲಾಭಗಳು	–	–	–
2	ಸ್ವಾಕ್ ಆಯ್ಕೆ	–	–	–
3	ಸ್ವೆಟ್ ಈಕ್ವಿಟಿ	–	–	–
4	ಕಮಿಷನ್	–	–	–
	– ಲಾಭದ ಶೇಕಡಾವಾರಿನಂತೆ	–	–	–
5	ಇತರೆ, ದಯವಿಟ್ಟು ಸ್ಪಷ್ಟವಾಗಿ ನಮೂದಿಸುವುದು	–	–	–
	ಒಟ್ಟು	**21,64,800**	**21,64,800**	**43,29,600**



VII. ಅಪರಾಧಕ್ಕಾಗಿ ದಂಡಗಳು / ಶಿಕ್ಷೆ / ಇವೆರಡೂ ಸೇರಿ

ವಿಧ	ಕಂಪನಿಗಳ ಕಾಯ್ದೆಯ ಕಲಂ	ಸಂಕ್ಷಿಪ್ತ ವಿವರಣೆ	ವಿಧಿಸಿರುವ ದಂಡ / ಶಿಕ್ಷೆ / ಇವೆರಡೂ ಸೇರಿದ ಶುಲ್ಕಗಳು	ಪ್ರಾಧಿಕಾರಿ (ಆರ್‌ಡಿ/ ಎನ್‌ಸಿಎಲ್‌ಟಿ/ ನ್ಯಾಯಾಲಯ)	ಯಾವುದೇ ಮೇಲ್ಮನವಿ ಸಲ್ಲಿಸಲಾಗಿದೆಯೇ (ವಿವರ ನೀಡಿ)
ಎ. ಕಂಪನಿ					
ದಂಡ	ಇಲ್ಲ				
ಶಿಕ್ಷೆ					
ಎರಡೂ ಸೇರಿ					
ಬಿ. ನಿರ್ದೇಶಕರು					
ದಂಡ	ಇಲ್ಲ				
ಶಿಕ್ಷೆ					
ಎರಡೂ ಸೇರಿ					
ಸಿ. ತಪ್ಪಿತಸ್ಥರಾಗಿರುವ ಇತರೆ ಅಧಿಕಾರಿಗಳು					
ದಂಡ	ಇಲ್ಲ				
ಶಿಕ್ಷೆ					
ಎರಡೂ ಸೇರಿ					

****

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಸದಸ್ಯರುಗಳಿಗೆ

ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಗಳ (ಐಎನ್‌ಡಿ ಎಎಸ್) ಅನ್ವಯದ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆ ವರದಿ

ಅಭಿಪ್ರಾಯ

ನಾವು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ("ಕಂಪನಿ"), 31ನೇ ಮಾರ್ಚ್ 2019ರಂದು ಇದ್ದಂತಹ ಸ್ಥಿತಿ ವಿವರಣಾ ಪಟ್ಟಿ, ಇತರೆ ಸಮಗ್ರ ಆದಾಯದ ವಿವರಗಳು ಒಳಗೊಂಡ ಲಾಭ ಮತ್ತು ನಷ್ಟದ ವಿವರಗಳು, ಈಕ್ವಿಟಿ ಬದಲಾವಣೆ ವಿವರಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡ ಭಾರತೀಯ ಲೆಕ್ಕನಿರ್ವಹಣಾ ಗುಣಮಟ್ಟದನ್ವಯ ಹಣಕಾಸಿನ ಹೇಳಿಕೆಗಳನ್ನು (ಇಲ್ಲಿ ಇದನ್ನು ಇನ್ನು ಮುಂದೆ "ಹಣಕಾಸಿನ ಹೇಳಿಕೆಗಳು" ಎಂದು ಪ್ರಸ್ತಾಪಿಸಲಾಗುವುದು) ಲೆಕ್ಕಪರಿಶೋಧನೆ ಮಾಡಿದ್ದೇವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಹಾಗೂ ನಮಗೆ ನೀಡಿರುವ ವಿವರಣೆಗಳಂತೆ ಮೇಲೆ ತಿಳಿಸಿರುವ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಮತ್ತು ಅಗತ್ವಾದ ರೀತಿಯಲ್ಲಿ ಮಾಹಿತಿಯನ್ನು ನೀಡುವವು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕಾರವಾಗಿರುವಂತೆ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ 31ನೇ ಮಾರ್ಚ್ 2019ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿ ಬಗ್ಗೆ ಮತ್ತು ಅದರ ನಷ್ಟ, ಇತರೆ ಸಮಗ್ರ ಆದಾಯ, ಆ ದಿನಾಂಕದಂದು ಕೊನೆಗೊಂಡ ವರ್ಷದ ಈಕ್ವಿಟಿ ಮತ್ತು ನಗದು ಹರಿವಿನಲ್ಲಿನ ಬದಲಾವಣೆ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣವನ್ನು ನೀಡುವುದು.

ಅಭಿಪ್ರಾಯಕ್ಕೆ ಆಧಾರ

ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(1)ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕಪರಿಶೋಧನೆಯ ಮಾನದಂಡಗಳ (ಎಸ್‌ಎಗಳು) ಅನುಸಾರ ನಾವು ನಮ್ಮ ಲೆಕ್ಕಪರಿಶೋಧನೆ ನಡೆಸಿದ್ದೇವೆ. ಸದರಿ ಮಾನದಂಡಗಳ ಅನ್ವಯ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಬಗ್ಗೆಗಿನ ಲೆಕ್ಕಪರಿಶೋಧಕರ ಜವಾಬ್ದಾರಿಗಳ ಭಾಗದಲ್ಲಿ ವಿವರಿಸಲಾಗಿದೆ. ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ನೀತಿ ಸಂಹಿತೆ ಅನುಸಾರ ಮತ್ತು ಕಂಪನಿಗಳ ಕಾಯ್ದೆ, 2013ರ ಉಪಬಂಧಗಳು ಮತ್ತು ಇದರಡಿಯಲ್ಲಿನ ನಿಯಮಗಳ ಅನ್ವಯ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅಗತ್ಯತೆಗಳ ಅನ್ವಯ ನಾವು ಸ್ವತಂತ್ರ ಕಂಪನಿಯಾಗಿದ್ದೇವೆ. ನಾವು ಈ ಅಗತ್ಯತೆಗಳು ಮತ್ತು ನೀತಿ ಸಂಹಿತೆಗಳ ಅನುಸಾರ ನಮ್ಮ ಇನ್ನಿತರೆ ನೈತಿಕ ಹೊಣೆಗಾರಿಕೆಗಳನ್ನು ಈಡೇರಿಸಿದ್ದೇವೆ. ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯು ನಮ್ಮ ಅಭಿಪ್ರಾಯಕ್ಕೆ ಆಧಾರಗಳನ್ನು ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

ಮಹತ್ವದ ವಿಷಯಗಳು

ಭಾರತೀಯ ಲೆಕ್ಕ ನಿರ್ವಹಣಾ ಮಾನದಂಡದನ್ವಯದ ಹಣಕಾಸು ಹೇಳಿಕೆಗಳ ಕೆಳಕಂಡ ಟಿಪ್ಪಣಿಗಳ ಬಗ್ಗೆ ನಾವು ಗಮನ ಸೆಳೆಯುವೆವು.

ಎ) ಭೂಸ್ವಾಧೀನ ಕ್ರಮಾವಳಿ ವಿಧಾನದಲ್ಲಿ ಕೆಐಎಡಿಬಿ ಮೂಲಕ ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿಂದ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಅವುಗಳ ಸ್ವಾಧೀನ/ಒಪ್ಪಿಗೆ ನೀಡಿಕೆಗಳು/ಪುನರ್ವಸತಿ ವೆಚ್ಚಗಳು, ಬಡ್ಡಿ ಇತ್ಯಾದಿಯನ್ನು ಅಂತಿಮಗೊಳಿಸುವಿಕೆ ಮತ್ತು ಚಾಲನೆ ನೀಡಿಕೆಯನ್ನು ಕಾಯ್ದಿರಿಸಿ, ಅಧಿಸೂಚನೆ ಮತ್ತು ಭೌತಿಕ ಸ್ವಾಧೀನದ ಅನ್ವಯ ತಾತ್ಕಾಲಿಕ ಬೆಲೆಯ ಆಧಾರದ ಮೇಲೆ ಬಂಡವಾಳೀಕರಿಸಿದೆ. ಇದರ ಪರಿಣಾಮವು ಪ್ರಸ್ತುತದಲ್ಲಿ ಗೋಚರವಾಗದು. ಒಟ್ಟು 3847 ಸ್ವತ್ತುಗಳ ಪೈಕಿ 911 ಸ್ವತ್ತುಗಳ ಹಕ್ಕುಪತ್ರಗಳನ್ನು ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿದೆ. ಟಿಪ್ಪಣಿ ಸಂಖ್ಯೆ 2.1 ಮತ್ತು 2.42 ಅನ್ವಯ ಹಕ್ಕುಪತ್ರಗಳ ಬಾಕಿ ವರ್ಗಾವಣೆ ಮತ್ತು ಅವುಗಳ ಹೊಂದಾಣಿಕೆ ಕಾರ್ಯ ನಡೆಯುತ್ತಿದೆ.



ಬಿ) ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮತ್ತು ಕಂಪನಿ ನಡುವೆ ಮಾಡಿಕೊಂಡಿರುವ ತ್ರಿಪಕ್ಷೀಯ ಒಪ್ಪಂದದ ಅನ್ವಯ ಮೆಟ್ರೋ ರೈಲು ಯೋಜನೆಗೆ ಭಾರತ ಸರ್ಕಾರದಿಂದ ಪಾಸ್ ಥ್ರೂ ಅಸಿಸ್ಟೆನ್ಸ್ (ಪಿಟಿಎ) ಆಗಿ ಬಾಹ್ಯ ಹಣಕಾಸು ಪೂರೈಕೆ ಏಜೆನ್ಸಿಯಿಂದ ಪಡೆದಿರುವ ಸಾವರಿನ್ ಸಾಲಗಳಿಗೆ ಸಂಬಂಧಿಸಿದಂತೆ ವಿನಿಮಯ ಏರಿಳಿತದ ನಷ್ಟ/ಲಾಭಗಳ ಹೊಣೆಗಾರಿಕೆ/ ಅರ್ಹತೆ ವಿಚಾರವಾಗಿ ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಲೆಕ್ಕನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ನಿಯಂತ್ರಕರಿಂದ ಸ್ಪಷ್ಟನೆ ಪಡೆಯುವುದು ಬಾಕಿಯಿದೆ. ಭಾರತ ಸರ್ಕಾರಕ್ಕೆ ಬಡ್ಡಿ ಮತ್ತು ಸಾಲದ ಅಸಲನ್ನು ರೂಪಾಯಿಗಳ ಮಾನಕದಲ್ಲಿ ಒದಗಿಸುತ್ತಿರುವುದರಿಂದ, ವರ್ಷಾಂತ್ಯದಲ್ಲಿ ಬಾಕಿಯಿರುವ ಸಾಲದ ವಿದೇಶಿ ಕರೆನ್ಸಿಗೆ ಸಮಾನವಾಗಿ ಭಾರತೀಯ ಲೆಕ್ಕನಿರ್ವಹಣೆ ಮಾನದಂಡ 21ರ ಅನ್ವಯ ಮರುನಮೂದು ಮಾಡಿರುವುದಿಲ್ಲ. ವಿದೇಶಿ ವಿನಿಮಯ ದರಗಳಲ್ಲಿನ ಬದಲಾವಣೆ ಪರಿಣಾಮಗಳನ್ನು ಮತ್ತು ಭಾರತೀಯ ಲೆಕ್ಕನಿರ್ವಹಣೆ ಮಾನದಂಡ 109 ಹಣಕಾಸಿನ ಸಾಧನ ಹಾಗೂ ಒದಗಿಸುತ್ತಿರುವ ಬಡ್ಡಿ ಮತ್ತು ಸಾಲದ ವಿನಿಮಯ ಏರಿಳಿತಗಳು ಮತ್ತು ಸಾಲದ ಬಾಕಿಯನ್ನು ಲೆಕ್ಕಾಚಾರ ಮಾಡಿರುವುದಿಲ್ಲ ಮತ್ತು ಟಿಪ್ಪಣಿ ಸಂ. 2–15 (ಬಿ ಮತ್ತು ಸಿ) ಅನ್ವಯ ಲೆಕ್ಕಕ್ಕೆ ಸೇರಿಸಿರುವುದಿಲ್ಲ.

ಸಿ) ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದಿಂದ ದಿನಾಂಕ: 31.03.2019ರಂದು ಪಡೆದಿರುವ ಅನುಕ್ರಮವಾಗಿ ರೂ.215311.00 ಲಕ್ಷ ಮತ್ತು 915338.00 ಲಕ್ಷ ದಿಂದ ಬಡ್ಡಿ ರಹಿತ ಅಧೀನ ಸಾಲದ ಮರುಪಾವತಿ ಅವಧಿಯಲ್ಲಿ ಅನಿಶ್ಚಿತತೆಯ ಕಾರಣದಿಂದಾಗಿ ಮತ್ತು ಚಾಲ್ತಿಯೇತರ ಹಣಕಾಸಿನ ಹೊಣೆಗಾರಿಕೆಯ ಭಾಗವಾಗಿರುವುದರಿಂದ ಭಾರತದ ಲೆಕ್ಕನಿರ್ವಹಣೆ ಮಾನದಂಡ 109ರ ಅನ್ವಯ ನ್ಯಾಯೋಚಿತ ಮೌಲ್ಯನಿರ್ಣಯವನ್ನು ಮಾಡಬೇಕಾಗಿದೆ. ಹಣಕಾಸಿನ ಪ್ರಪತ್ರವನ್ನು ಸಾಧ್ಯತಾ ಪರಿಭಾವನೆಯಲ್ಲಿ ಪರಿಗಣಿಸಿರುವುದಿಲ್ಲ. ಮತ್ತು/ಅಥವಾ ವಾಸ್ತವ ಪರಿಸ್ಥಿತಿ ಗೋಚರವಾಗಿರುವುದಿಲ್ಲ ಮತ್ತು ಟಿಪ್ಪಣಿ ಸಂಖ್ಯೆ 2.15ರ ಅನ್ವಯ ಐತಿಹಾಸಿಕ ಮೌಲ್ಯ ಪ್ರತಿಪಾದನೆ ಮುಂದುವರೆದಿದೆ.

ಡಿ) ಟಿಪ್ಪಣಿ ಸಂಖ್ಯೆ 2.41 ರ ಅನ್ವಯ ಅಸ್ತಿ, ಸ್ಥಾವರ ಮತ್ತು ಉಪಕರಣವನ್ನು ಐತಿಹಾಸಿಕ ಮೌಲ್ಯದಲ್ಲಿ ಪ್ರಕಟಿಸಲಾಗಿದೆ ಮತ್ತು ಸ್ಥಾಪನೆಯ ಅವಧಿಯಿಂದ ಸಂಚಯನವಾಗಿರುವ ಸವಕಳಿಯನ್ನು ಭಾರತೀಯ ಜಿಎಎಪಿ ಯಿಂದ ಭಾರತೀಯ ಲೆಕ್ಕನಿರ್ವಹಣೆ ಮಾನದಂಡಕ್ಕೆ ಪರಿವರ್ತನೆಯಾದ ದಿನಾಂಕ: 01.04.2015ರಂದು ಇದ್ದ ಪರಿಭಾವಿತ ಮೌಲ್ಯದಂತೆ ವಾಹಕ ಮೌಲ್ಯವನ್ನು ಪರಿಗಣಿಸುವ ಅಗತ್ಯತೆಯಂತೆ ದಾಖಲಿಸಿದೆ.

ಇ) ಅಂತಿಮ ಬಿಲ್ ಸ್ವೀಕಾರ ಮತ್ತು ಮಧ್ಯಸ್ಥಿಕೆಯ ಕಲಾಪಗಳ ಫಲಿತಾಂಶವು ಬರದೆ ಹಾಗೆಯೇ ಉಳಿದಿರುವುದರಿಂದ, ಜೆವಿ ಕಂಟ್ರಾಕ್ಟರ್‌ನ ಹೆಸರಿನಲ್ಲಿನ ರೂ.6122.02 ಲಕ್ಷಗಳ ಮೊತ್ತದ ಬಾಕಿಯಿರುವ ವಿಶೇಷ ಮುಂಗಡದ ಪೈಕಿ ವಸೂಲಾಗದ ಯಾವುದೇ ಭಾಗ ಇದ್ದಲ್ಲಿ, ಟಿಪ್ಪಣಿ ನಂ. 2.57ರ ಅನ್ವಯ ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್‌ನ ಕೋಲ್ಕತ ಪೀಠದಿಂದ ಪರಿಸಮಾಪ್ತಿಗೊಳಿಸಲು ಆದೇಶದ ಮೇರೆಗೆ ಜೆವಿ ಪಾಲುದಾರರೊಬ್ಬರ ಸಂಬಂಧ ಸಾಂಸ್ಥಿಕ ದಿವಾಳಿ ನಿರ್ಣಯ ಪ್ರಕ್ರಿಯೆಯನ್ನು ಕೈಗೊಂಡಿದ್ದರೂ ಸಹ, ವ್ಯವಸ್ಥೆ ಮಾಡುವುದು ಸೇರಿದಂತೆ ಇದರ ಬಗ್ಗೆ ಅಗತ್ಯ ಲೆಕ್ಕನಿರ್ವಹಣೆ ಹೊಂದಾಣಿಕೆ ಮಾಡಿರುವುದು ತಿಳಿದು ಬಂದಿರುವುದಿಲ್ಲ.

ಮೇಲೆ ತಿಳಿಸಲಾಗಿರುವ ವಿಚಾರಗಳ ಸಂಬಂಧದಲ್ಲಿ ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ.

ಪ್ರಮುಖ ಲೆಕ್ಕಪರಿಶೋಧನಾ ವಿಚಾರಗಳು

ಚಾಲ್ತಿ ಅವಧಿಯ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಅತ್ಯಂತ ಗಮನಾರ್ಹವಾದ ನಮ್ಮ ವೃತ್ತಿಪರ ಹೊಂದಾಣಿಕೆ ವಿಚಾರಗಳು ಪ್ರಮುಖ ಲೆಕ್ಕಪರಿಶೋಧನಾ ವಿಚಾರಗಳಾಗಿರುವವು. ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ ಇದನ್ನು ಪೂರ್ಣವಾಗಿ ಪ್ರಯೋಗಿಸಲಾಗಿದೆ. ಈ ವಿಚಾರಗಳ ಬಗ್ಗೆ ನಾವು ಪ್ರತ್ಯೇಕ ಅಭಿಪ್ರಾಯ ನೀಡುವುದಿಲ್ಲ. ಕೆಳಗೆ ವಿವರಿಸಿರುವ ವಿಚಾರಗಳನ್ನು ನಮ್ಮ ವರದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾಗಿರುವ ಪ್ರಮುಖ ಲೆಕ್ಕಪರಿಶೋಧನಾ ವಿಚಾರವನ್ನಾಗಿ ನಾವು ಪರಿಗಣಿಸಿದ್ದೇವೆ:

ಕ್ರ.ಸಂ.	ಪ್ರಮುಖ ಲೆಕ್ಕಪರಿಶೋಧನಾ ವಿಚಾರ	ಪ್ರಮುಖ ಲೆಕ್ಕಪರಿಶೋಧನೆ ವಿಚಾರಗಳಿಗೆ ಲೆಕ್ಕಪರಿಶೋಧಕರ ಪ್ರತಿಕ್ರಿಯೆ
1	**ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ** ಅನುಷ್ಠಾನದಲ್ಲಿರುವ ಮೆಟ್ರೋ ರೈಲು ಯೋಜನೆಯ ಸಂಬಂಧದಲ್ಲಿ ವಿವಿಧ ರೀಚ್‌ಗಳು ಮತ್ತು ಹಾಲಿಯಿರುವ ರೀಚ್‌ಗಳ ವಿಸ್ತರಣೆಯಲ್ಲಿ ಸಿವಿಲ್ ಕಾಮಗಾರಿಗಳನ್ನು (ವಯಾಡಕ್ಟ್‌ಗಳು ಮತ್ತು ನಿಲ್ದಾಣಗಳು) ಏಕಕಾಲದಲ್ಲಿ ಕಂಪನಿಯು ಕಾರ್ಯಗತಗೊಳಿಸುತ್ತಿದೆ. ಇನ್ನಿತರೆ ಸಂಬಂಧಿಸಿದ ಕಾಮಗಾರಿಗಳು, ರೋಲ್‌ಸ್ಟಾಕ್‌ನ ಸಂಗ್ರಹಣೆ, ಇವುಗಳ ಪರೀಕ್ಷೆ ಮಾಡುವುದು ಮತ್ತು ಪ್ರಮಾಣ ಪತ್ರ ಸಿದ್ಧಪಡಿಸುವ ಕಾರ್ಯವನ್ನೂ ಸಹ ಮಾಡುತ್ತಿದೆ. ಇವುಗಳು ಉದ್ದೇಶಿತ ಬಳಕೆಗೆ ಸಿದ್ಧವಾಗಲು ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ, ವಿವಿಧ ಮಟ್ಟಗಳಲ್ಲಿ ಸಮನ್ವಯ ಮತ್ತು ಪ್ರಮುಖ ಆಡಳಿತದ ತೀರ್ಪುಗಳು ಮತ್ತು ತಾಂತ್ರಿಕ ವಿವರಣೆಗಳು/ಮಾನದಂಡಗಳು, ಗುತ್ತಿಗೆ ಪ್ರಕ್ರಿಯೆಗಳು ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವ ವಿಚಾರವು ಪ್ರಗತಿಯಲ್ಲಿದೆ.	ಇತರೆಯವುಗಳೂ ಸೇರಿದಂತೆ ನಮ್ಮ ಲೆಕ್ಕಪರಿಶೋಧನೆ ಕ್ರಮಾವಳಿಯಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯದ ಬಗ್ಗೆ ಆಂತರಿಕ ನಿಯಂತ್ರಣಗಳ ವ್ಯವಸ್ಥೆಗಳನ್ನು ತಿಳಿದುಕೊಳ್ಳುವುದು ಮತ್ತು ಅವುಗಳ ಮೌಲ್ಯಮಾಪನ ಮಾಡುವುದು, ಪ್ರಮುಖ ನಿಯಂತ್ರಣಗಳನ್ನು ಗುರುತಿಸುವುದು ಮತ್ತು ಪರೀಕ್ಷಿಸುವುದು; ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಕ್ಕೆ ಸಂಬಂಧಿಸಿದಂತೆ ಲೆಕ್ಕನಿರ್ವಹಣೆ ನೀತಿಗಳ ಪರಿಶೀಲನೆ, ಸಾಲ ಪಡೆದ ಹಣಗಳ ಮೇಲಿನ ಬಡ್ಡಿ ಮತ್ತು ಸಂಬಂಧಪಟ್ಟ ಖರ್ಚುಗಳ ಬಂಡವಾಳೀಕರಣ, ಸಿವಿಲ್ ಮತ್ತು ಇತರೆ ಸಂಬಂಧಪಟ್ಟ ಕಾಮಗಾರಿಗಳ ಪ್ರಗತಿಯನ್ನು ನಿರ್ಧರಣೆ ಮಾಡುವುದು ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಸ್ವತ್ತುಗಳಿಗೆ ಅವುಗಳ ಸಂಭವನೀಯ ಪರಿವರ್ತನೆ ಮುನ್ನಡೆಸುವ ಆಡಳಿತ ವರ್ಗದ ಉದ್ದೇಶ, ಅದರ ಉದ್ದೇಶಿತ ಬಳಕೆಗೆ ಸಿದ್ಧಗೊಳಿಸುವಿಕೆ ಮತ್ತು ಆಡಳಿತ ವರ್ಗದ ತೀರ್ಮಾನಗಳು ಮತ್ತು ಗುತ್ತಿಗೆ ಪ್ರಕ್ರಿಯೆಗಳು ಮತ್ತು ನಿರ್ವಹಣೆಯ ತಾಂತ್ರಿಕ ಮತ್ತು ವಾಣಿಜ್ಯ ವಿಚಾರಗಳಿಗೆ ಸಂಬಂಧಿಸಿದಂತೆ ಆಡಳಿತ ವರ್ಗದ ತೀರ್ಮಾನಗಳು ಮತ್ತು ನಿರ್ಧರಣೆ ಮಾಡುವ ಬಗ್ಗೆ ಅವಲಂಬನೆಯಾಗಿರುವುದು.
2	**ಸ್ವತ್ತು, ಸ್ಥಾವರ ಮತ್ತು ಉಪಕರಣ (ಪಿಪಿಇ)** ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಿಳಿಸಿರುವ ಗಾತ್ರದ ನಿಟ್ಟಿನಲ್ಲಿ ಪಿಪಿಇ ಭಾಗಗಳ ಭೌತಿಕತೆ, ಖರ್ಚುಗಳು, ಸಾಲಗಳ ವೆಚ್ಚಗಳ ಬಂಡವಾಳೀಕರಣದ ಜೊತೆಗೆ ಸ್ವತ್ತುಗಳ ಬಂಡವಾಳೀಕರಣ, ಸ್ವತ್ತಿನ ಜೀವಿತಾವಧಿ ನಿರ್ಧರಣೆ ಮತ್ತು ಸ್ವತ್ತಿನ ದುರ್ಬಲತೆ ಜೊತೆಗೆ ಪಿಪಿಇನ ವಾಹಕ ಮೌಲ್ಯದ ಮೇಲೆ ಉಂಟಾಗುವ ಗಮನಾರ್ಹ ಪರಿಣಾಮ ಮತ್ತು ಇವುಗಳಲ್ಲಿನ ಸವಕಳಿ, ಸಂಕೀರ್ಣ ಸ್ವರೂಪದ ಮತ್ತು ಅತ್ಯುನ್ನತ ತಾಂತ್ರಿಕ ನಿರ್ವಹಣೆ ಕಲ್ಪನೆಗಳು, ಅಂದಾಜುಗಳ ಅಗತ್ಯ ಬಳಕೆ ಮತ್ತು ತೀರ್ಮಾನ ಮಾಡುವಿಕೆ.	ನಾವು, ಆಡಳಿತ ಮಂಡಳಿ ಮಾಡಿದ ತೀರ್ಪುಗಳನ್ನು ಪರಿಶೀಲಿಸಿದ್ದೇವೆ ಮತ್ತು ನಿರ್ಧರಣೆ ಮಾಡಿದ್ದೇವೆ. ಮತ್ತು ಅಳವಡಿಸಿಕೊಂಡಿರುವ ನಿಯಂತ್ರಣಗಳ ಬಗ್ಗೆ, ಬಂಡವಾಳೀಕರಣ ಪ್ರಕ್ರಿಯೆಯ ಸೂಕ್ತಾಸೂಕ್ತತೆಯನ್ನು ಮೌಲ್ಯಮಾಪನ ಮಾಡಿದ್ದೇವೆ, ವೆಚ್ಚಗಳ ಬಂಡವಾಳೀಕರಣ, ಸ್ವತ್ತುಗಳ ಬಂಡವಾಳೀಕರಣದ ಸಮಯದ ವಿವರಗಳ ಬಗ್ಗೆ ಪರಿಶೀಲನೆ ಮಾಡಿದ್ದೇವೆ. ಅಮಾನ್ಯತೆಗೊಳಿಸಲು ಅಳವಡಿಸಿಕೊಂಡಿರುವ ಮಾನದಂಡ, ವೆಚ್ಚಗಳ ಬಂಡವಾಳೀಕರಣಗೊಳಿಸುವ ಆಧಾರದ ಸ್ವರೂಪ, ಇತರೆ ಮೆಟ್ರೋಗಳು ಅನುಸರಿಸಿರುವ ದರಗಳ ಆಧಾರದ ಮೇಲೆ ತೆಗೆದುಕೊಂಡಿರುವ ಆಡಳಿತ ಮಂಡಳಿ ತೀರ್ಮಾನದ ಅನುಸಾರ ಕೆಲವು ಸ್ವತ್ತುಗಳ ಉಪಯುಕ್ತತೆ ಅವಧಿಯ ಸೂಕ್ತತೆ, ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ ॥ರಲ್ಲಿ ನಿಗದಿಪಡಿಸಿರುವ ಸ್ವತ್ತುಗಳ ಉಪಯುಕ್ತ ಅವಧಿಯನ್ನು ಅನ್ವಯಿಸದಿರುವ ಬಗ್ಗೆ ಮತ್ತು ಸವಕಳಿ ವಿಚಾರದ ಮೇಲೆ ಇದರಿಂದ ಉಂಟಾಗುವ ಪರಿಣಾಮದ ಬಗ್ಗೆ ಪರಿಶೀಲನೆ ಮಾಡಿದ್ದೇವೆ ಮತ್ತು ಆಡಳಿತ ಮಂಡಳಿಯ ಅಂದಾಜುಗಳ ಮೇಲೆ ಮತ್ತು ಈ ವಿಚಾರದಲ್ಲಿ ಪಡೆದಿರುವ ಪರಿಣತರ ಅಭಿಪ್ರಾಯದ ಮೇಲೆ ಅವಲಂಬನೆಯಾಗಿರುವೆವು.



ಕ್ರ.ಸಂ.	ಪ್ರಮುಖ ಲೆಕ್ಕಪರಿಶೋಧನಾ ವಿಚಾರ	ಪ್ರಮುಖ ಲೆಕ್ಕಪರಿಶೋಧನೆ ವಿಚಾರಗಳಿಗೆ ಲೆಕ್ಕಪರಿಶೋಧಕರ ಪ್ರತಿಕ್ರಿಯೆ
3	**ವ್ಯವಸ್ಥೆಗಳು ಮತ್ತು ಸಂಭವನೀಯ ಹೊಣೆಗಾರಿಕೆಗಳು** ಕಂಪನಿಯು ಹಲವು ಕಾನೂನು/ಮಧ್ಯಸ್ಥಿಕೆ ಮತ್ತು ತೆರಿಗೆ ವಿವಾದಗಳು/ಹಕ್ಕು ಹೇಳಿಕೆಗಳು/ಪ್ರಕರಣಗಳು, ಇವುಗಳ ಫಲಿತಾಂಶ ಜೊತೆಗೆ ಇವುಗಳಿಂದ ಹಣಕಾಸುಗಳು ಮತ್ತು ಕಂಪನಿಯ ಕಾರ್ಯಾಚರಣೆ ಮೇಲೆ ಉಂಟು ಮಾಡಬಹುದಾದ ಪರಿಣಾಮದ ಬಗ್ಗೆ ಸೂಕ್ತವಾದ ಖಚಿತತೆ ಪ್ರಮಾಣದ ಮಾಪನ ಮಾಡುವ ಅವಶ್ಯಕತೆಯಿಲ್ಲದಾಗಿದ್ದು, ಇದು ಅಪಾಯದ ಕಲ್ಪನೆ ಮತ್ತು ನಿರ್ಧರಣೆಯ ಸಂಕೀರ್ಣ ಸ್ವರೂಪದ ಊಹೆಗಳು ಮತ್ತು ಆಡಳಿತ ಮಂಡಳಿ ತೀರ್ಪಿನ ಮೇಲೆ ಆಧಾರಿತವಾಗಿರುವುದು ಮತ್ತು ವ್ಯವಸ್ಥೆ ಮಾಡದಿರುವ ಸಂಭವನೀಯ ಹೊಣೆಗಾರಿಕೆಗಳ ಬಗ್ಗೆಗಿನ ಆಡಳಿತ ಮಂಡಳಿಯ ಹೇಳಿಕೆಯನ್ನು ಹಣಕಾಸಿನ ಹೇಳಿಕೆಗಳ ಟಿಪ್ಪಣಿ ನಂ. 2.31 (ಎ) ರಲ್ಲಿ ನಿರೂಪಿಸಿದೆ.	ಕಂಪನಿಯು ಒದಗಿಸಿರುವ ಕಾನೂನು/ ಮಧ್ಯಸ್ಥಿಕೆ ಮತ್ತು ತೆರಿಗೆ ವಿವಾದಗಳು/ ಹಕ್ಕುಗಳು/ ಪ್ರಕರಣಗಳ ಸಾರಾಂಶವನ್ನು ನಾವು ಪರಿಶೀಲಿಸಿದ್ದೇವೆ ಮತ್ತು ವಿವಾದಗಳು/ ಹಕ್ಕುಗಳು/ ಪ್ರಕರಣಗಳಲ್ಲಿ ಕಂಪನಿಯನ್ನು ಗುರುತಿಸಲು ಮತ್ತು ಕಂಪನಿಯ ರಕ್ಷಣೆಗಾಗಿ, ಸಂಭವನೀಯ ಹೊಣೆಗಾರಿಕೆಗಳ ಅಡಿಯಲ್ಲಿನ ಟಿಪ್ಪಣಿಯಲ್ಲಿ ಸೇರ್ಪಡೆಯಾಗಿರುವ ವಿವಾದಗಳು/ ಹಕ್ಕುಗಳು/ ಪ್ರಕರಣಗಳ ಸ್ಥಿತಿಗತಿ, ವಿವಾದಗಳು /ಹಕ್ಕುಗಳು/ ಪ್ರಕರಣಗಳಲ್ಲಿ ಉದ್ಭವಿಸಬಹುದಾದ ಹೊಣೆಗಾರಿಕೆಯ ನಿರ್ಧರಣೆ ಮತ್ತು ಆಡಳಿತ ಮಂಡಳಿಯ ತೀರ್ಪು ಮತ್ತು ಈ ಸಂಬಂಧ ದಾಖಲಿಸಿರುವ ವ್ಯವಸ್ಥೆಯ ಮೊತ್ತದ ಬಗ್ಗೆ ಅನುಷ್ಠಾನಗೊಳಿಸಿದ /ಹಾಲಿಯಿರುವ ಪ್ರಕ್ರಿಯೆಗಳ ಸಂಬಂಧಪಟ್ಟ ಕಂಪನಿ ಆಡಳಿತ ಮಂಡಳಿ ತಂಡದೊಡನೆ ಚರ್ಚಿಸಿದ್ದೇವೆ ಮತ್ತು ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ವಿಷಯಗಳ ಪರಿಪೂರ್ಣತೆಯನ್ನು ನಿರ್ಧರಣೆ ಮಾಡಲು ನಮಗೆ ಒದಗಿಸಿರುವ ದಾಖಲೆಗಳು ಮತ್ತು ಮಾಹಿತಿ ಮತ್ತು ಆ ದಿನಾಂಕದವರೆಗೆ ಆಗಿರುವ ಬೆಳವಣಿಗೆ ಆಧಾರದ ಮೇಲೆ ನಮ್ಮ ವೃತ್ತಿದಾಯಕ ತೀರ್ಮಾನವನ್ನು ಚಲಾಯಿಸಿದ್ದೇವೆ.

ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಕಂಪನಿಯ ನಿರ್ದೇಶಕರುಗಳ ಮಂಡಳಿಯು ಇತರೆ ಮಾಹಿತಿಗೆ ಜವಾಬ್ದಾರಿಯಾಗಿರುವುದು. ಇತರೆ ಮಾಹಿತಿಯಲ್ಲಿ ವಾರ್ಷಿಕ ವರದಿಯಲ್ಲಿ ಸೇರ್ಪಡೆಯಾಗಿರುವ ಮಾಹಿತಿಯೂ ಒಳಗೊಂಡಿರುವುದು. ಆದರೆ ಇದರಲ್ಲಿ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಸೇರಿರುವುದಿಲ್ಲ.

ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ವ್ಯಕ್ತಪಡಿಸಿರುವ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಲಪಡಿಸಿಕೊಂಡಿರುವುದಿಲ್ಲ ಮತ್ತು ಈ ಬಗ್ಗೆ ನಾವು ಯಾವುದೇ ರೀತಿಯ ಭರವಸೆಯ ನಿರ್ಣಯ ವ್ಯಕ್ತಪಡಿಸುವುದಿಲ್ಲ.

ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ ನಾವು ನಿರ್ವಹಿಸಬೇಕಾದ ಜವಾಬ್ದಾರಿ ಇತರೆ ಮಾಹಿತಿಯನ್ನು ಓದುವುದಾಗಿರುವುದು, ಹೀಗೆ ಮಾಡುವಾಗ ಇತರೆ ಮಾಹಿತಿಯು ಹಣಕಾಸಿನ ಹೇಳಿಕೆಗಳಿಗೆ ಭೌತಿಕವಾಗಿ ಅನುರೂಪವಾಗಿರುವುದೇ ಅಥವಾ ಲೆಕ್ಕಪರಿಶೋಧನೆಯಲ್ಲಿ ಪಡೆದ ನಮ್ಮ ತಿಳುವಳಿಕೆಗೆ ಅನುಗುಣವಾಗಿರುವುದೆ ಅಥವಾ ವಾಸ್ತವಿಕವಾಗಿ ತಪ್ಪು ಹೇಳಿಕೆ ಮಾಡಿರುವುದು ಕಂಡು ಬರುವುದೇ ಎಂಬುದನ್ನು ಪರಿಗಣಿಸಲಾಗುವುದು. ನಾವು ನಿರ್ವಹಿಸಿದ ಕಾರ್ಯದ ಆಧಾರದ ಮೇಲೆ ಸದರಿ ಇತರೆ ಮಾಹಿತಿಯು ವಾಸ್ತವವಾಗಿ ತಪ್ಪು ಹೇಳಿಕೆಯಿಂದ ಕೂಡಿದೆ ಎಂದು ನಾವು ತೀರ್ಮಾನಿಸಿದ್ದೇ ಆದರೆ, ನಾವು ಆ ಅಂಶವನ್ನು ನಾವು ವರದಿ ಮಾಡಬೇಕಾಗುತ್ತದೆ. ಈ ವಿಚಾರವಾಗಿ ನಾವು ವರದಿ ಮಾಡುವ ಯಾವುದೇ ಅಂಶಗಳಿರುವುದಿಲ್ಲ.

ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿ ಜವಾಬ್ದಾರಿಗಳು ಮತ್ತು ಆಡಳಿತದಿಂದ ವಿಧಿಸಿರುವ ಜವಾಬ್ದಾರಿಗಳು

ಕಾಯ್ದೆಯ ಪ್ರಕರಣ 133ರ ಅಡಿಯಲ್ಲಿ ತಿಳಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳೂ ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿ, ಹಣಕಾಸಿನ ಸಾಮರ್ಥ್ಯ, ಈಕ್ವಿಟಿಯಲ್ಲಿನ



ಬದಲಾವಣೆ ಮತ್ತು ನಗದು ಹರಿವು ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಈ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಸಂಬಂಧ ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಪ್ರಕರಣ 134(5)ರಲ್ಲಿ ತಿಳಿಸಿರುವ ವಿಚಾರಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿ ಜವಾಬ್ದಾರಿಯಾಗಿರುವುದು. ಈ ಜವಾಬ್ದಾರಿಯಲ್ಲಿ ಕಂಪನಿಯ ಸ್ವತ್ತುಗಳ ಸುರಕ್ಷತೆಗಾಗಿ ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು; ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳ ಆಯ್ಕೆ ಮತ್ತು ಬಳಕೆ; ಸೂಕ್ತವಾಗಿ ಮತ್ತು ಜಾಗರೂಕತೆಯಿಂದ ತೀರ್ಪುಗಳು ಮತ್ತು ಅಂದಾಜುಗಳನ್ನು ರೂಪಿಸುವುದು; ಲೆಕ್ಕ ನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ಅನುಷ್ಠಾನ ಮತ್ತು ನಿರ್ವಹಣೆ, ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ, ವಂಚನೆ ಅಥವಾ ತಪ್ಪುಗಳ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆ ಮತ್ತು ಪ್ರಸ್ತುತಪಡಿಸುವಿಕೆಗೆ ಸಂಬಂಧಿಸಿದ ವಿಚಾರಗಳು ಸಹ ಸದರಿ ಹೊಣೆಗಾರಿಕೆಯಲ್ಲಿ ಸೇರಿರುವುದು.

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ಚಲನೆಯಲ್ಲಿನ ಸಂಸ್ಥೆಯಾಗಿ ಮುಂದುವರಿಯುವ ಕಂಪನಿಯ ಸಾಮರ್ಥ್ಯ ನಿರ್ಧರಣೆ, ಚಲನೆಯಲ್ಲಿರುವ ಸಂಸ್ಥೆಗೆ ಸಂಬಂಧಿಸಿದಂತೆ ಅನ್ವಯವಾಗುವ ವಿಚಾರಗಳನ್ನು ತಿಳಿಸುವುದು ಮತ್ತು ಕಂಪನಿಯನ್ನು ಪರಿಸಮಾಪ್ತಿಗೊಳಿಸಲು ಅಥವಾ ಕಾರ್ಯಾಚರಣೆಗಳನ್ನು ತಟಸ್ಥಗೊಳಿಸಲು, ಅತವಾ ಆ ರೀತಿ ಮಾಡದೆ ಬೇರೆ ನೈಜ ಪರ್ಯಾಯವಿಲ್ಲದ ಉದ್ದೇಶವನ್ನು ನಿರ್ದೇಶಕರ ಮಂಡಳಿ ಹೊಂದಿರದ ಹೊರತು ಚಲನೆಯಲ್ಲಿರುವ ಸಂಸ್ಥೆಯ ಲೆಕ್ಕನಿರ್ವಹಣೆ ಆಧಾರವನ್ನು ಬಳಸುವುದು ನಿರ್ದೇಶಕರ ಮಂಡಳಿ ಜವಾಬ್ದಾರಿಯಾಗಿರುವುದು.

ಕಂಪನಿಯ ಹಣಕಾಸಿನ ವರದಿಗಾರಿಕೆ ಪ್ರಕ್ರಿಯೆಗಳನ್ನು ಅವಲೋಕಿಸುವುದು ಸಹ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುವುದು.

ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆ ಬಗ್ಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳು

ನಮ್ಮ ಧ್ಯೇಯವು ಹಣಕಾಸಿನ ಹೇಳಿಕೆಗಳು ಸಂಪೂರ್ಣವಾಗಿ ವಂಚನೆ ಅಥವಾ ತಪ್ಪುಗಳಿಂದ ವಾಸ್ತವಿಕ ತಪ್ಪು ಹೇಳಿಕೆಯಿಲ್ಲದೆ ಮುಕ್ತವಾಗಿರುವುದೇ ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯುವುದು ಮತ್ತು ನಮ್ಮ ಅಭಿಪ್ರಾಯ ಒಳಗೊಂಡ ಲೆಕ್ಕಪರಿಶೋಧಕರ ವರದಿ ನೀಡುವುದು ಆಗಿರುವುದು. ಸೂಕ್ತವಾದ ಆಶ್ವಾಸನೆಯು ಅತ್ಯುನ್ನತ ಮಟ್ಟದ ಆಶ್ವಾಸನೆಯಾಗಿರುವುದು, ಆದರೆ ಎಸ್ಎಗಳ ಅನುಸಾರ ನಡೆಸಿದ ಲೆಕ್ಕಪರಿಶೋಧನೆಯು ಯಾವುದಾದರು ಇದ್ದಲ್ಲಿ ಅಂತಹ ವಾಸ್ತವಿಕ ತಪ್ಪು ಹೇಳಿಕೆಯನ್ನು ಯಾವಾಗಲೂ ಪತ್ತೆ ಹಚ್ಚುವುದು ಎಂಬುದರ ಬಗ್ಗೆ ಅದು ಖಾತರಿ ನೀಡುವುದಾಗಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು.

ಸದರಿ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ಕೈಗೊಂಡ ಆರ್ಥಿಕ ತೀರ್ಮಾಗಳ ಮೇಲೆ ಅವು ಪ್ರಭಾವ ಬೀರಬಹುದೆಂದು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಸೂಕ್ತವಾಗಿ ನಿರೀಕ್ಷಿಸಿದ್ದೇ ಆದರೆ ಅವುಗಳನ್ನು ವಾಸ್ತವಿಕ ಎಂದು ಪರಿಗಣಿಸಲಾಗುವುದು.

ಎಸ್ಎಗಳ ಅನುಸಾರ ನಡೆಸುವ ಲೆಕ್ಕಪರಿಶೋಧನೆ ಭಾಗವಾಗಿ ನಾವು ಲೆಕ್ಕಪರಿಶೋಧನೆ ಉದ್ದಕ್ಕೂ ವೃತ್ತಿಪರ ತೀರ್ಮಾಗಳನ್ನು ಚಲಾಯಿಸುತ್ತೇವೆ ಮತ್ತು ವೃತ್ತಿಪರ ಸಂದೇಹವನ್ನು ಅನುಸರಿಸುತ್ತೇವೆ. ಇದಲ್ಲದೆ ನಾವು:

- ವಂಚನೆ ಅತವಾ ತಪ್ಪಿನ ಕಾರಣ ಹಣಕಾಸಿನ ಹೇಳಿಕೆಗಳಲ್ಲಿನ ವಾಸ್ತವಿಕ ತಪ್ಪು ಹೇಳಿಕೆಗಳನ್ನು ಕಂಡು ಹಿಡಿಯುವೆವು ಮತ್ತು ಅವುಗಳಿಂದಾಗುವ ಅಪಾಯಗಳನ್ನು ಗಣನೆ ಮಾಡುವೆವು, ಸದರಿ ಅಪಾಯಗಳಿಗೆ ತಕ್ಕನಾಗಿ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ವಿನ್ಯಾಸಗೊಳಿಸುವೆವು ಮತ್ತು ಲೆಕ್ಕಪರಿಶೋಧನೆ ನಡೆಸುವೆವು, ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟು ಪ್ರಮಾಣದ ಮತ್ತು ಸೂಕ್ತವಾಗಿ ಲೆಕ್ಕಪರಿಶೋಧನಾ ಪುರಾವೆ ಪಡೆಯುವೆವು. ವಂಚನೆಯಿಂದ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆ ಹಚ್ಚದಿರುವ ಅಪಾಯವು ತಪ್ಪಿನಿಂದ ಉಂಟಾಗುವ ಹೇಳಿಕೆಗಿಂತ ಹೆಚ್ಚು ಅಪಾಯಕಾರಿ, ವಂಚನೆಯಲ್ಲಿ ಒಳಸಂಚು, ನಕಲಿ, ಉದ್ದೇಶಪೂರ್ವಕವಾಗಿ ಬಿಟ್ಟಿರುವುದು, ತಪ್ಪಾಗಿ ಪ್ರಾತಿನಿಧ್ಯಗಳನ್ನು ನೀಡಿರುವ ವಿಚಾರಗಳು ಒಳಗೊಂಡಿರಬಹುದು ಅತವಾ ಆಂತರಿಕ ನಿಯಂತ್ರಣವನ್ನೂ ಮರೆಮಾಚಿಸಿರಬಹುದು.
- ಪರಿಸ್ಥಿತಿಗಳಿಗೆ ಸೂಕ್ತವಾದ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಹೊಂದಿಕೆಯಾಗುವ ಆಂತರಿಕ ನಿಯಂತ್ರಣದ ಅರ್ಥವಂತಿಕೆ ಒಂದನ್ನು ಪಡೆಯುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(3)(i)ರ



ಅನ್ವಯ, ಕಂಪನಿಯು ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದೇ ಮತ್ತು ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವೆ ಎಂಬುವ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸುವುದೂ ಸಹ ನಮ್ಮ ಜವಾಬ್ದಾರಿಯಾಗಿರುವುದು.

- ಅಳವಡಿಸಿಕೊಂಡಿರುವ ಲೆಕ್ಕನಿರ್ವಹಣೆ ನೀತಿಗಳ ಸೂಕ್ತತೆ ಮತ್ತು ಆಡಳಿತ ಮಂಡಳಿ ಮಾಡಿರುವ ಲೆಕ್ಕಗಾರಿಕೆ ಅಂದಾಜುಗಳು ಮತ್ತು ಸಂಬಂಧಪಟ್ಟ ಪ್ರಕಟಣೆಗಳ ಮೌಲ್ಯಮಾಪನ ಮಾಡುವುದು.
- ಆಡಳಿತ ಮಂಡಲಿಯು ಚಲನೆಯಲ್ಲಿರುವ ಸಂಸ್ಥೆ ಆಧಾರದ ಲೆಕ್ಕನಿರ್ವಹಣೆ ವ್ಯವಸ್ಥೆ ಅನುಸರಿಸುವುದರ ಸೂಕ್ತತೆ ಬಗ್ಗೆ ಮತ್ತು, ಚಲನೆಯ ಸಂಸ್ಥೆಯಾಗಿ ಮುಂದುವರಿಯುವ ಕಂಪನಿಯ ಸಾಮರ್ಥ್ಯದ ಬಗ್ಗೆ ಗಣನೀಯ ಸಂದೇಹ ಉಂಟು ಮಾಡುವ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚತತೆ ಉಂಟಾಗಿರುವುದೇ ಎಂಬುದರ ಬಗ್ಗೆ ಪಡೆದುಕೊಂಡ ಲೆಕ್ಕಪರಿಶೋಧನಾ ಪುರಾವೆ ಆಧಾರದ ಮೇಲೆ ತೀರ್ಮಾನಕ್ಕೆ ಬರಲಾಗುವುದು. ವಾಸ್ತವಿಕ ಅನಿಶ್ಚಿತತೆ ಇರುವುದಾಗಿ ನಾವು ತೀರ್ಮಾನಿಸಿದ್ದೇ ಆದರೆ, ಹಣಕಾಸಿನ ಹೇಳಿಕೆಗಳಲ್ಲಿನ ಸಂಬಂಧಪಟ್ಟ ವಿವರಣೆಗಳಿಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಗಮನ ಸೆಳೆಯಬೇಕಾಗುತ್ತದೆ ಅಥವಾ, ಒಂದು ವೇಳೆ ಅಂತಹ ವಿವರಣೆಗಳು ಸಾಕಷ್ಟು ಪ್ರಮಾಣದಲ್ಲಿಲ್ಲದಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡ ಲೆಕ್ಕಪರಿಶೋಧನಾ ಪುರಾವೆ ಆಧಾರದ ಮೇಲೆ ನಮ್ಮ ತೀರ್ಮಾನ ಅವಲಂಬನೆಯಾಗಿರುತ್ತದೆ. ಆದರೂ, ಮುಂದಿನ ದಿನಗಳಲ್ಲಿ ಉಂಟಾಗುವ ಘಟನೆಗಳು ಮತ್ತು ಪರಿಸ್ಥಿತಿಗಳು ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರೆಯದಂತೆ ಮಾಡಬಹುದಾಗಿರುತ್ತವೆ.
- ಪ್ರಕಟಣೆಗಳೂ ಸೇರಿದಂತೆ, ಹಣಕಾಸು ಹೇಳಿಕೆಗಳ ಒಟ್ಟಾರೆ ನಿರೂಪಣೆ, ಸ್ವರೂಪ ಮತ್ತು ವಿಷಯದ ಬಗ್ಗೆ, ಮತ್ತು ನ್ಯಾಯೋಚಿತ ನಿರೂಪಣೆ ಸಾಧಿಸುವ ರೀತಿಯಲ್ಲಿ ತಿಳಿಸಲ್ಪಟ್ಟ ವ್ಯವಹಾರಗಳು ಮತ್ತು ಕಾರ್ಯಗಳನ್ನು ಹಣಕಾಸಿನ ಹೇಳಿಕೆಗಳು ಪ್ರತಿನಿಧಿಸುವವೇ ಎಂಬುದರ ಮೌಲ್ಯಮಾಪನ ಮಾಡುವುದು.

ನಮ್ಮ ಲೆಕ್ಕಪರಿಶೋಧನೆ ಅವಧಿಯಲ್ಲಿ ನಾವು ಗುರುತಿಸಿದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗುರುತರವಾದ ಕೊರತೆಗಳೂ ಸೇರಿದಂತೆ, ಇತರೆ ವಿಷಯಗಳ ಜೊತೆಗೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಹಾಗೂ ಗಮನಾರ್ಹ ಲೆಕ್ಕಪರಿಶೋಧನೆಯಲ್ಲಿ ಕಂಡು ಹಿಡಿದ ವಿಚಾರಗಳ ಬಗ್ಗೆ ಆಡಳಿತದ ಅಧಿಕಾರದ ಬಗ್ಗೆ ನಾವು ತಿಳಿಸಬೇಕಾಗುವುದು.

ಸ್ವತಂತ್ರದ ವಿಚಾರವಾಗಿ ಅನುಸರಿಸಬೇಕಾದ ಸಂಬಂಧಿಸಿದ ನೈತಿಕ ಅಗತ್ಯತೆಗಳನ್ನು ನಾವು ಪಾಲಿಸಿರುವ ಹೇಳಿಕೆ ಜೊತೆಗೆ ನಮಗೆ ಇರುವ ಅಧಿಕಾರದ ಬಗ್ಗೆ ಮತ್ತು ನಮ್ಮ ಸ್ವತಂತ್ರದ ಸಂಬಂಧ ಹೊಂದಿರಬಹುದಾದ ಸೂಕ್ತವಾದ ಎಲ್ಲಾ ಸಂಬಂಧಗಳು ಮತ್ತು ಇತರೆ ವಿಷಯಗಳ ಬಗ್ಗೆ ಮತ್ತು ಅವುಗಳು ಅನ್ವಯವಾಗುವ ಬಗ್ಗೆ, ಸಂಬಂಧಿಸಿದ ಸುರಕ್ಷತೆ ಬಗ್ಗೆ ನಾವು ತಿಳಿಸಬೇಕಾಗುವುದು.

ಹೊಂದಿರುವ ಅಧಿಕಾರಗಳಲ್ಲಿ ತಿಳಿಸಿರುವ ವಿಷಯಗಳ ಪೈಕಿ ಪ್ರಸ್ತುತ ಅವಧಿಯ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿನ ಅತ್ಯಂತ ಗಮನಾರ್ಹವಾದ ವಿಷಯಗಳನ್ನು ನಾವು ನಿರ್ಧರಿಸಬೇಕು. ಹಾಗಾಗಿ ಅವು ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳಾಗಿರುತ್ತವೆ. ಸದರಿ ವಿಷಯಗಳನ್ನು ಬಹಿರಂಗಪಡಿಸದಂತೆ ಕಾನೂನು ಅಥವಾ ನಿರ್ಬಂಧಗಳಿಲ್ಲದಿದ್ದರೆ ಅವುಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ನಾವು ವಿವರಿಸುತ್ತೇವೆ ಅಥವಾ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ಆ ವಿಷಯಗಳನ್ನು ತಿಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಉಚಿತವಲ್ಲ ಎಂಬುದಾಗಿ ಸಕಾರಣವಾಗಿ ಭಾವಿಸಿದಲ್ಲಿ, ಆ ವಿಚಾರಗಳ ಪ್ರಕಟಣೆಯಿಂದ ವ್ಯತಿರಿಕ್ತ ಪರಿಣಾಮ ಉಂಟಾಗುವ ಕಾರಣ ಅಂತಹ ವಿಷಯಗಳನ್ನು ನಮ್ಮ ವರದಿಯಲ್ಲಿ ತಿಳಿಸಬಾರದೆಂದು ನಾವು ನಿರ್ಧರಿಸುತ್ತೇವೆ.



ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ

1. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143ರ ಉಪ ಪ್ರಕರಣ (11)ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016 ("ಆದೇಶ")ರ ಅನ್ವಯ ಅಗತ್ಯವಾದಂತೆ ಆದೇಶದ ಕಂಡಿಕೆ 3 ಮತ್ತು 4ರಲ್ಲಿ ಸೂಚಿಸಿರುವ ವಿಷಯಗಳ ಬಗ್ಗೆ ಅನ್ವಯವಾಗುವ ಪ್ರಮಾಣದ ವರೆಗೆ ವಿವರಗಳನ್ನು **"ಅನುಬಂಧ–ಎ"**ರಲ್ಲಿ ನೀಡಿದ್ದೇವೆ.

2. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಾವು ವರದಿ ಮಾಡುವುದೇನೆಂದರೆ:

   (ಎ) ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅಗತ್ಯವೆಂದ ನಾವು ನಂಬಿರುವ ಮತ್ತು ನಮ್ಮ ನಮಗೆ ತಿಳಿದಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿ ಪಡೆದಿದ್ದೇವೆ.

   (ಬಿ) ನಮ್ಮ ಅಭಿಪ್ರಾಯದಂತೆ, ಕಾನೂನಿನ ಅನ್ವಯ ಅಗತ್ಯವಾದಂತೆ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಕಂಪನಿಯು ಇಟ್ಟಿದೆ. ಸದರಿ ಪುಸ್ತಕಗಳನ್ನು ನಾವು ಪರಿಶೀಲನೆ ಮಾಡಿದಾಗ ಈ ಅಭಿಪ್ರಾಯ ನಮಗೆ ಉಂಟಾಗಿದೆ.

   (ಸಿ) ಬ್ಯಾಲೆನ್ಸ್‌ಶೀಟ್, ಲಾಭ ಮತ್ತು ನಷ್ಟದ ಹೇಳಿಕೆ, ಈಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ ಮತ್ತು ಈ ವರದಿಯಿಂದ ವ್ಯವಹರಿಸಲಾದ ಹಣದ ಹರಿವಿನ ಹೇಳಿಕೆಗಳು ಖಾತಾ ಪುಸ್ತಕಗಳೊಂದಿಗೆ ಒಪ್ಪಂದಕ್ಕೆ ಒಳಪಟ್ಟಿರುತ್ತವೆ.

   (ಡಿ) ನಮ್ಮ ಅಭಿಪ್ರಾಯದಲ್ಲಿ (1) ಟಿಪ್ಪಣಿ ಸಂಖ್ಯೆ 2.15(ಎ) ಅನ್ವಯ ಮರುಪಾವತಿಯ ಅನಿಶ್ಚಿತತೆಯ ದಿಸೆಯಿಂದಾಗಿ ಸರ್ಕಾರಗಳಿಂದ ಪಡೆದ ಅಧೀನ ಸಾಲಗಳ ನ್ಯಾಯೋಚಿತ ಮೌಲ್ಯಮಾಪನ ಮಾಡುವುದು ಅಗತ್ಯವೆಂದು ಪರಿಗಣಿಸದಿರುವುದು; (2) ಭಾರತ ಸರ್ಕಾರದಿಂದ ಪಾಸ್ ಥ್ರೂ ನೆರವು ಆಗಿ ಪಡೆದಿರುವ ಮತ್ತು ಟಿಪ್ಪಣಿ ಸಂಖ್ಯೆ 2.15 (ಬಿ ಮತ್ತು ಸಿ) ಅನ್ವಯ ಭಾರತ ಸರ್ಕಾರದ ಪರಿಶೀಲನೆಯಲ್ಲಿರುವ ವಿಚಾರದ ಸಾವರಿನ್ ಯೋಜನೆ ನೆರವಿನ ಸಂಬಂಧದಲ್ಲಿನ ವಿನಿಮಯ ಏರಿಳಿತವನ್ನು ಸೇರ್ಪಡೆ ಮಾಡದಿರುವುದು; (3) ಭಾರತೀಯ ಲೆಕ್ಕ ನಿರ್ವಹಣೆ ಮಾನದಂಡಕ್ಕೆ ಪರಿವರ್ತನೆಯಾದ ದಿನಾಂಕದಂದು ಅಂದರೆ 1.4.2015ರಂದು ಇದ್ದಂತೆ ಹಿಂದಿನ ಜಿಎಎಪಿ ಅನ್ವಯ ಭಾರತೀಯ ಲೆಕ್ಕನಿರ್ವಹಣೆ ಮಾನದಂಡಕ್ಕೆ ಪರಿವರ್ತನೆಯಾದಾಗ ಟಿಪ್ಪಣಿ ಸಂಖ್ಯೆ 2.41ರ ಅನ್ವಯ ಪರಿಭಾವಿತ ವೆಚ್ಚವೆಂದು ಗಣನೆ ಮಾಡಿರುವಂತೆ ಪಿಪಿಇಯ ವಾಹಕ ಮೌಲ್ಯ; ಮತ್ತು (4) ಟಿಪ್ಪಣಿ ಸಂಖ್ಯೆ 2.57ರ ಅನ್ವಯದ ವ್ಯವಸ್ಥೆ ಮಾಡಿರುವುದು ಸೇರಿದಂತೆ ಅಗತ್ಯ ಲೆಕ್ಕ ನಿರ್ವಹಣೆ ಹೊಂದಾಣಿಕೆಗೆ ತಿಳಿದು ಬಂದಿರದ ಜೆವಿ ಗುತ್ತಿಗೆದಾರರ ಹೆಸರಿನಲ್ಲಿ ಬಾಕಿಯಿರುವ ವಿಶೇಷ ಮುಂಗಡದ ಪೈಕಿ ಯಾವುದೇ ವಸೂಲಿ ಮಾಡಲಾಗದ ಭಾಗ, ಇವುಗಳ ಹೊರತಾಗಿ, ಮೇಲೆ ತಿಳಿಸಿರುವ ಹಣಕಾಸಿನ ಹೇಳಿಕೆಗಳು ಕಂಪನಿಗಳ (ಲೆಕ್ಕ) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ, ಕಾಯ್ದೆಯ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ಪರಿಪಾಲಿಸಿವೆ;

   (ಇ) ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂಖ್ಯೆ : ಜಿಎಸ್‌ಆರ್ 463(ಇ) ದಿನಾಂಕ: 5ನೇ ಜೂನ್ 2015ರ ಅನ್ವಯ ಕಂಪನಿಗಳ ಕಾಯ್ದೆ, 2013ರ ಪ್ರಕರಣ 164(2)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ;

   (ಎಫ್) ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿರುವ ವಿಚಾರ ಮತ್ತು ಅಂತಹ ನಿಯಂತ್ರಣ ಕಾರ್ಯಾಚರಣೆ ಪರಿಣಾಮದ ಬಗ್ಗೆ ತಿಳಿಯಲು **"ಅನುಬಂಧ–ಬಿ"** ರಲ್ಲಿನ ನಮ್ಮ ಪ್ರತ್ಯೇಕ ವರದಿ ನೋಡಿ.



(ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ಅನುಸಾರದ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರ್ಪಡೆ ಮಾಡಬೇಕಾಗಿರುವ ಇತರೆ ವಿಷಯಗಳ ಸಂಬಂಧದಲ್ಲಿ, ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ:

i. ಕಂಪನಿಯು ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳಿಂದ ಅದರ ಹಣಕಾಸಿನ ಸ್ಥಾನಮಾನದ ಮೇಲೆ ಉಂಟು ಮಾಡಿರುವ ಪರಿಣಾಮವನ್ನು ಅದರ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿದೆ – ಹಣಕಾಸಿನ ಹೇಳಿಕೆಗಳ ಟಿಪ್ಪಣಿ 2.31 ಎ ನೋಡಿ;

ii. ಯಾವುದೇ ಭೌತಿಕವಾಗಿ ಗೋಚರವಾಗಬಹುದಾದ ನಷ್ಟಗಳು ಸಂಭವಿಸಬಹುದಾದ ಇತರೆ ಮೂಲದಿಂದ ಬಂದ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಕಂಪನಿ ಹೊಂದಿರುವುದಿಲ್ಲ.

iii. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಕಂಪನಿಯಿದ ವರ್ಗಾವಣೆ ಮಾಡಬೇಕಾಗಿದ್ದ ಹಣಗಳ ವರ್ಗಾವಣೆಯಲ್ಲಿ ಯಾವುದೇ ವಿಳಂಬ ಆಗಿರುವುದಿಲ್ಲ.

3. ಕಂಪನಿಗೆ ಅನ್ವಯವಾಗುವ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(5)ರ ಅನ್ವಯ ಅಗತ್ಯವಾದಂತೆ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ನೀಡಿರುವ ನಿರ್ದೇಶನಗಳ ಬಗ್ಗೆಗಿನ ಫಲಿತಾಂಶಗಳನ್ನು **"ಅನುಬಂಧ–ಸಿ"** ಆಗಿ ಸೇರಿಸಲಾಗಿದೆ.

ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
(ಸಂಸ್ಥೆಯ ನೋಂದಣಿ ಸಂ.: 005389ಎಸ್)

ಸಹಿ/–
(ಎಸ್. ರಾಜೇಂದಿರನ್)
(ಪಾಲುದಾರರು)
(ಸದಸ್ಯತ್ವ ಸಂ.: 021883)
ಯುಡಿಐಎನ್: 19021883ಎಎಎಬಿಎ5388

ಸ್ಥಳ: ಬೆಂಗಳೂರು
ದಿನಾಂಕ: 14.09.2019

ಅನುಬಂಧ–ಎ

ಬೆಂಗಳೂರು ಮೆಟ್ರೋ ನಿಗಮ ನಿಯಮಿತದ ಸದಸ್ಯರುಗಳಿಗೆ ಸಲ್ಲಿಸಿರುವ ಸಮ ದಿನಾಂಕದ ನಮ್ಮ ವರದಿಯ "ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆಗಿನ ವರದಿಯ" ಭಾಗದ ಕಂಡಿಕೆ–1ರ ಸಂಬಂಧದಲ್ಲಿ ತಿಳಿಸುವುದೇನೆಂದರೆ,

(I) (ಎ) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಅನ್ವಯ, ಸ್ಥಿರಾಸ್ತಿಗಳ ಗುಣಾತ್ಮಕ ವಿವರ ಮತ್ತು ಸ್ಥಿತಿಗತಿ ಹೊರತಾಗಿ ಸ್ಥಿರಾಸ್ತಿಗಳ ವಿವರಗಳನ್ನು ಮನಗಾಣಿಸುವ ಸೂಕ್ತವಾದ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಿದೆ.

(ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಗಳ ಅನುಸಾರ, ಕಂಪನಿಯು ಮೂರು ವರ್ಷಗಳ ಅವಧಿಯಲ್ಲಿ, ಹಂತಹಂತವಾಗಿ ತನ್ನ ಆಸ್ತಿಗಳ ಭೌತಿಕ ಪರಿಶೀಲನೆಯ ಕಾರ್ಯಕ್ರಮ ಹೊಂದಿದೆ. ಈ ಕಾರ್ಯಕ್ರಮವು ನಮ್ಮ ಅಭಿಪ್ರಾಯದ ಪ್ರಕಾರ ಕಂಪನಿಯ ಗಾತ್ರ ಮತ್ತು ಅದರ ಆಸ್ತಿಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಸೂಕ್ತ ಮತ್ತು ಸಮರ್ಪಕವಾಗಿರುವುದು. ಆದಾಗ್ಯೂ, ವರದಿಯ ಸದರಿ ವರ್ಷದಲ್ಲಿ ಆಡಳಿತ ಮಂಡಳಿಯು ಭೌತಿಕ ಪರಿಶೀಲನೆಯ ಹಂತಹಂತದ ಕಾರ್ಯಕ್ರಮದ ಅಡಿಯಲ್ಲಿ ಯಾವುದೇ ಸ್ಥಿರಾಸ್ತಿಗಳು ಒಳಗೊಂಡಿರುವುದಿಲ್ಲ.

(ಸಿ) ಆಡಳಿತ ಮಂಡಳಿ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂಖ್ಯೆ 2.1ರಲ್ಲಿ ತಿಳಿಸಿರುವಂತೆ ಪ್ರಕರಣಗಳ ಹೊರತಾಗಿ ಉಳಿದ ಸ್ಥಿರಾಸ್ತಿಗಳ ಕ್ರಯ ಪತ್ರಗಳು ಕಂಪನಿಯ ಹೆಸರಿನಲ್ಲಿರುವವು.

ಮುಂದುವರಿದು, ನಮಗೆ ವಿವರಿಸಿರುವಂತೆ:

(II) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಪ್ರಯಾಣಿಕರಿಗೆ ನೀಡಲು ಹೊಂದಿರುವ ಮುದ್ರಿತ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್‌ಗಳ ದಾಸ್ತಾನು ಸೇರಿದಂತೆ ಸರಕು ತಪಶೀಲನ್ನು ಸದರಿ ವರ್ಷದಲ್ಲಿ ಆಡಳಿತ ಮಂಡಳಿ ಭೌತಿಕವಾಗಿ ಪರಿಶೀಲಿಸಿದೆ. ಸರಕುಗಳ ಸ್ವೀಕಾರ ಮತ್ತು ನೀಡಿಕೆ ಬಗ್ಗೆ ಸೂಕ್ತ ದಾಖಲೆಗಳನ್ನು ನಿರ್ವಹಣೆ ಮಾಡಲಾಗಿದೆ. ಸರಿಯಾದ ಸರಕು ತಪಶೀಲಿನ ವ್ಯವಸ್ಥೆ ಅನುಸರಿಸಲಾಗಿದೆ. ಮುಂದುವರಿದು, ಭೌತಿಕ ಸರಕು ತಪಶೀಲು ಮತ್ತು ಪುಸ್ತಕದಲ್ಲಿ ದಾಖಲಾಗಿರುವ ಸರಕಿನ ತಪಶೀಲಿನ ನಡುವೆ ವ್ಯತ್ಯಾಸವಿರುವುದು ಪರಿಶೀಲನೆ ಸಮಯದಲ್ಲಿ ಕಂಡು ಬಂದಿರುವುದು ವಾಸ್ತವವಲ್ಲ, ಅದನ್ನು ಲೆಕ್ಕದ ಪುಸ್ತಕಗಳಲ್ಲಿ ಸರಿಯಾಗಿ ನಮೂದಿಸಲಾಗುವುದು ಎಂದು ತಿಳಿಸಲಾಗಿದೆ.

(III) ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.: ಜಿಎಸ್‌ಆರ್ 463 (ಇ) ದಿನಾಂಕ: 5ನೇ ಜೂನ್ 2015ರ ಅನ್ವಯ, ಸರ್ಕಾರಿ ಕಂಪನಿಗಳ ನಡುವೆ ಮಾಡಿಕೊಂಡಿರುವ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ಸಂಬಂಧದಲ್ಲಿ ಕಾಯ್ದೆಯ ವಿಧಿ 188ರ ಉಪಬಂಧಗಳ ಅನುಸರಣೆಯಿಂದ ಸರ್ಕಾರದ ಕಂಪನಿಗಳಿಗೆ ವಿನಾಯ್ತಿ ನೀಡಿದೆ. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಕಂಪನಿಯು ಕಂಪನಿಗಳು, ಸಂಸ್ಥೆಗಳು, ಕಂಪನಿಗಳ ಕಾಯ್ದೆ, 2013ರ ವಿಧಿ 189ರ ಅಡಿ ನಿರ್ವಹಣೆ ಮಾಡಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇತರೆ ವ್ಯಕ್ತಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆ ಇಲ್ಲದ ಯಾವುದೇ ಸಾಲಗಳನ್ನು ಕಂಪನಿ ನೀಡಿರುವುದಿಲ್ಲ. ಅದರನುಸಾರ, ಆದೇಶದ ಕಲಂ 3 (iii) (ಎ), (ಬಿ) ಮತ್ತು (ಸಿ) ನ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(IV) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಗಳ ಕಾಯ್ದೆ 2013ರ ವಿಧಿ 185 ಮತ್ತು 186ರ ಉಪಬಂಧಗಳು ಅನ್ವಯವಾಗುವ ಸಂಬಂಧ ಕಂಪನಿ ಯಾವುದೇ ಸಾಲಗಳು, ಹೂಡಿಕೆಗಳು, ಜಾಮೀನುಗಳನ್ನು ಮತ್ತು ಸೆಕ್ಯೂರಿಟಿಗಳನ್ನು ನೀಡಿರುವುದಿಲ್ಲ ಮತ್ತು ಆದೇಶದ ಕಲಂ 3 (iii) (ಎ), (ಬಿ) ಮತ್ತು (ಸಿ)ನ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(V) ನಮಗೆ ಒದಗಿಸಿರುವ ಮಾಹಿತಿಗಳು ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಆದ್ದರಿಂದಾಗಿ, ಸಾರ್ವಜನಿಕರಿಂದ ಠೇವಣಿಗಳ ಅಂಗೀಕಾರದ ಬಗ್ಗೆ ಕಾಯ್ದೆಯ 2015 ವಿಧಿ 73ರಿಂದ 76ರವರೆಗಿನ ಉಪಬಂಧಗಳು ಅಥವಾ ಯಾವುದೇ ಇತರೆ ಸಂಬಂಧಪಟ್ಟ ಉಪಬಂಧಗಳ ಅನ್ವಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ನಿರ್ದೇಶನಗಳು ಅನ್ವಯವಾಗುವುದಿಲ್ಲ. ಈ ಸಂಬಂಧದಲ್ಲಿ ಕಂಪನಿ ಲಾ ಬೋರ್ಡ್ ಅಥವಾ



ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಯಾವುದೇ ನ್ಯಾಯಾಲಯ ಅಥವಾ ಯಾವುದೇ ಇತರೆ ಟ್ರಿಬ್ಯುನಲ್ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ ಎಂಬುದಾಗಿ ಆಡಳಿತ ಮಂಡಳಿಯು ನಮಗೆ ತಿಳಿಸಿದೆ.

(VI) ಕಂಪನಿಯು ನಡೆಸುತ್ತಿರುವ ಕಾರ್ಯಾಚರಣೆ ಸ್ವರೂಪದ ಬಗ್ಗೆ ಕಾಯ್ದೆಯ ವಿಧಿ 148(1)ರ ಅನ್ವಯ ಕಾಸ್ಟ್ ರೆಕಾರ್ಡ್‌ಗಳ ನಿರ್ವಹಣೆ ಮಾಡುವಂತೆ ಕೇಂದ್ರ ಸರ್ಕಾರ ನಿಗದಿಪಡಿಸಿರುವುದಿಲ್ಲ.

(VII) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ, ಆದಾಯ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೀಮಾಸುಂಕ, ಸರಕುಗಳು ಮತ್ತು ಸೇವಾ ತೆರಿಗೆ ಸೇರಿದಂತೆ ವಿವಾದ ರಹಿತ ಶಾಸನಬದ್ಧ ಬಾಕಿಗಳನ್ನು ಸಕ್ಷಮ ಪ್ರಾಧಿಕಾರಿಯವರಿಗೆ ಸಾಮಾನ್ಯವಾಗಿ ನಿಯಮಿತವಾಗಿ ಸಂದಾಯ ಮಾಡಿದೆ.

(ಬಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ, ವೃತ್ತಿ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಸೀಮಾಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ ಸೇರಿದಂತೆ ಶಾಸನಬದ್ಧ ಬಾಕಿಗಳ ಸಂಬಂಧ ಪಾವತಿ ಮಾಡಬೇಕಿರುವ ಯಾವುದೇ ವಿವಾದ ರಹಿತ ಮೊತ್ತಗಳು ಅವುಗಳು ಪಾವತಿಯಾಗಬೇಕಾಗಿರುವ ದಿನಾಂಕದಿಂದ ಆರು ತಿಂಗಳುಗಳಿಗಿಂತ ಹೆಚ್ಚು ಅವಧಿವರೆಗೆ, ವರ್ಷಾಂತ್ಯದಲ್ಲಿ ಬಾಕಿಯಿರುವುದಿಲ್ಲ.

(ಸಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನ್ವಯ, ವಿವಾದಿತ ಶಾಸನಬದ್ಧ ಬಾಕಿಗಳು ಮತ್ತು ಅವುಗಳನ್ನು ಯಾವ ಫೋರಂ ಮುಂದೆ ಪ್ರಶ್ನಿಸಲಾಗಿದೆ ಎಂಬುದು ಈ ಕೆಳಕಂಡಂತಿರುವುದು.

ಕಾಯ್ದೆ ಹೆಸರು	ಬಾಕಿಯ ಸ್ವರೂಪ	ವಿವಾದ ನಡೆಯುತ್ತಿರುವ ಫೋರಂ	ಯಾವ ಅವಧಿಗೆ ಮೊತ್ತ ಪಾವತಿಯಾಗಿರುವುದಿಲ್ಲ.	ಸಂಬಂಧಿಸಿದ ತೆರಿಗೆ ತಗಾದ	ಪಾವತಿಸಿರುವ ತೆರಿಗೆಗಳು (ಬಡ್ಡಿ ಸೇರಿ)
ಆದಾಯ ತೆರಿಗೆ ಕಾಯ್ದೆ 1961	ಗಳಿಸಿದ ಬಡ್ಡಿ ಆದಾಯದ ಮೇಲಿನ ತೆರಿಗೆ	ಉಚ್ಚ ನ್ಯಾಯಾಲಯ	ಆರ್ಥಿಕ ವರ್ಷ 2007–08 ಮತ್ತು 2008–09	1457.39	1768.26
	ಗಳಿಸಿದ ಬಡ್ಡಿ ಆದಾಯದ ಮೇಲಿನ ತೆರಿಗೆ	ಐಟಿಎಟಿ	ಆರ್ಥಿಕ ವರ್ಷ 2009–10	1090.49	1254.11
	ಗಳಿಸಿದ ಬಡ್ಡಿ ಆದಾಯದ ಮೇಲಿನ ತೆರಿಗೆ	ಐಟಿಎಟಿ	ಆರ್ಥಿಕ ವರ್ಷ 2010–11	1222.12	1262.83
	ಟಿಡಿಎಸ್ ಮುರಿದುಕೊಳ್ಳುವಲ್ಲಿ ತಪ್ಪಿತಸ್ಥರಾಗಿರುವುದು	ಸಿಐಟಿ (ಮೇಲ್ಮನವಿ)	ಆರ್ಥಿಕ ವರ್ಷ 2010–11	2148.80	–
	ಟಿಡಿಎಸ್ ವಸೂಲಿ ಮಾಡದಿರುವುದು	ಐಟಿಎಟಿ	ಆರ್ಥಿಕ ವರ್ಷ 2011–12	2293.97	123.00
	ಹೂಡಿಕೆದಾರರಿಂದ ಬಂದ ಬಡ್ಡಿ ಆದಾಯ ಎಂಬುದಾಗಿ ತಪ್ಪಾಗಿ ಪರಿಗಣಿಸಿರುವ ರಾಜ್ಯ ತೆರಿಗೆಗಳ ಮರುಪಾವತಿ	ಐಟಿಎಟಿ	ಆರ್ಥಿಕ ವರ್ಷ 2011–12	3441.14	–



(VIII) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ವರದಿಗಾರಿಕೆಯ ವರ್ಷದಲ್ಲಿ ಭಾರತ ಸರ್ಕಾರ ಅಥವಾ ವರದಿಗಾರಿಕೆಯ ವರ್ಷದಲ್ಲಿ ಭಾರತ ಸರ್ಕಾರ ಅಥವಾ ಹಣಕಾಸಿನ ಸಂಸ್ಥೆಗಳು ಅಥವಾ ಸರ್ಕಾರ ಅಥವಾ ಡಿಬೆಂಚರ್‌ದಾರರುಗಳ ಮೂಲಕ ಹೊರಗಿನ ಹಣಕಾಸು ಪೂರೈಕೆ ಏಜೆನ್ಸಿಗಳಿಂದ ಪಡೆದ ಸಾಲಗಳು ಅಥವಾ ಕಡಗಳ ಮರು ಪಾವತಿಯಲ್ಲಿ ಕಂಪನಿ ತಪ್ಪಿತಸ್ಥವಾಗಿರುವುದಿಲ್ಲ.

(IX) ನಮಗೆ ಒದಗಿಸಿರುವ ವಿವರಣೆಗಳ ಅನ್ವಯ, ಹಾಲಿಯಿರುವ ಷೇರುದಾರರುಗಳಿಗೆ ಮತ್ತೆ ಷೇರುಗಳ ನೀಡಿಕೆ ರೂಪದಲ್ಲಿ ಮತ್ತು ಭಾರತ ಸರ್ಕಾರ ಅಥವಾ ಹಣಕಾಸಿನ ಸಂಸ್ಥೆಗಳು ಅಥವಾ ಸರ್ಕಾರ ಅಥವಾ ಡಿಬೆಂಚರ್‌ದಾರರುಗಳ ಮೂಲಕ ಹೊರಗಿನ ಹಣಕಾಸಿನ ನೀಡಿಕೆ ಏಜೆನ್ಸಿಗಳಿಂದ ಅವಧಿ ಸಾಲಗಳಾಗಿ ಸಂಗ್ರಹಿಸಿದ ಹಣವನ್ನು ಯಾವ ಉದ್ದೇಶಕ್ಕಾಗಿ ಸಂಗ್ರಹಿಸಲಾಗಿದೆಯೋ ಅದಕ್ಕೆ ಬಳಸಲಾಗಿದೆ/ಬಳಸುವ ಪ್ರಕ್ರಿಯೆಯಲ್ಲಿ ತೊಡಗಿದೆ.

(X) ಹಣಕಾಸಿನ ಹೇಳಿಕೆಯ ಬಗ್ಗೆ ನೈಜ ಮತ್ತು ನ್ಯಾಯೋಚಿತ ನಿಲುವನ್ನು ವರದಿ ಮಾಡುವ ಉದ್ದೇಶಕ್ಕಾಗಿ ನಾವು ನಡೆಸಿರುವ ಲೆಕ್ಕಪರಿಶೋಧನಾ ಕ್ರಮಾವಳಿಗಳ ಆಧಾರದ ಮೇಲೆ ಮತ್ತು ಆಡಳಿತ ಮಂಡಳಿ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ನಾವು ವರದಿ ಮಾಡಿರುವುದೇನೆಂದರೆ, ಸದರಿ ವರ್ಷದ ಅವಧಿಯಲ್ಲಿ ಕಂಪನಿಯು ವಂಚನೆ ಮಾಡಿರುವುದಿಲ್ಲ ಅಥವಾ ಕಂಪನಿಯ ಅಧಿಕಾರಿಗಳು ಮತ್ತು ನೌಕರರುಗಳಿಂದ ಕಂಪನಿಗೆ ಯಾವುದೇ ವಾಸ್ತವಿಕ ವಂಚನೆ ಮಾಡಿರುವುದು ಗಮನಕ್ಕೆ ಬಂದಿಲ್ಲ ಅಥವಾ ವರದಿಯಾಗಿಲ್ಲ.

(XI) ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.: ಜಿಎಸ್‌ಆರ್ 463(ಇ) ದಿನಾಂಕ: 5ನೇ ಜೂನ್, 2015ರ ಅನ್ವಯ ಸರ್ಕಾರದ ಕಂಪನಿಗಳಿಗೆ ಕಾಯ್ದೆಯ ವಿಧಿ 197ರ ಉಪಬಂಧಗಳ ಅನುಸರಣೆಯ ವಿನಾಯಿತಿ ಇದೆ. ಅದರಂತೆ, ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ ಗಿ ಓದಿಕೊಂಡಂತೆ ಕಾಯ್ದೆಯ ವಿಧಿ 197ರ ಉಪಬಂಧಗಳಿಂದ ಕಡ್ಡಾಯಗೊಳಿಸಿದ ಅಗತ್ಯ ಅನುಮೋದನೆಗಳ ಅನುಸಾರ ಕಂಪನಿಯು ವ್ಯವಸ್ಥಾಪನಾ ಸಂಭಾವನೆ ಪಾವತಿ ಇರುವುದೇ ಎಂಬುವ ಬಗ್ಗೆ ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(XII) ನಮ್ಮ ಅಭಿಪ್ರಾಯದಂತೆ, ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಕಂಪನಿಯು ಕಾಯ್ದೆಯ ಅನುಸಾರ ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3(xii) ರ ಉಪಬಂಧಗಳು ಅನ್ವಯವಾಗುವುದಿಲ್ಲ.

(XIII) ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ. ಜಿಎಸ್‌ಆರ್ 463(ಇ) ದಿನಾಂಕ: 5ನೇ ಜೂನ್ 2015ರ ಅನ್ವಯ ಸರ್ಕಾರಿ ಕಂಪನಿಗಳ ನಡುವೆ ಮಾಡಿಕೊಂಡಿರುವ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ಸಂಬಂಧದಲ್ಲಿ ಕಾಯ್ದೆಯ ವಿಧಿ 188ರ ಉಪಬಂಧಗಳಿಂದ ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ಇರುವುದು. ಹಣಕಾಸಿನ ಹೇಳಿಕೆಗಳ ನೈಜ ಮತ್ತು ನ್ಯಾಯೋಚಿತ ನಿಲುವನ್ನು ವರದಿ ಮಾಡುವ ಉದ್ದೇಶಕ್ಕಾಗಿ ನಡೆಸಿರುವ ನಮ್ಮ ಲೆಕ್ಕ ಪರಿಶೋಧನೆ ಕ್ರಮಾವಳಿಗಳ ಆಧಾರದ ಮೇಲೆ ಮತ್ತು ಆಡಳಿತ ಮಂಡಳಿ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರಗಳು ಅನ್ವಯವಾಗುವ ಪ್ರಮಾಣದವರೆಗೆ ಕಂಪನಿಗಳ ಕಾಯ್ದೆ 2013ರ ವಿಧಿ 177 ಮತ್ತು 188ರ ಅನುಸರಣೆಯನ್ವಯ ಇರುವುದು ಮತ್ತು ವಿವರಗಳನ್ನು ಅನ್ವಯವಾಗುವ ಲೆಕ್ಕನಿರ್ವಹಣೆ ಗುಣಮಟ್ಟಗಳ ಅನ್ವಯ ಅಗತ್ಯವಾದಂತೆ ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ತಿಳಿಸಲಾಗಿದೆ.

(XIV) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ಷೇರುಗಳನ್ನು ಅಥವಾ ಪೂರ್ಣ ಅಥವಾ ಭಾಗಶಃ ಪರಿವರ್ತನೀಯ ಡಿಬೆಂಚರುಗಳನ್ನು ಆದ್ಯತಾ ಹಂಚಿಕೆ ಅಥವಾ ಖಾಸಗಿ ನೀಡಿಕೆ ಮಾಡಿರುವುದಿಲ್ಲ. ಹಾಗಾಗಿ, ಕಲಂ 3(xiv) ಅನ್ವಯ ವರದಿ ಮಾಡುವಿಕೆ ಅಗತ್ಯತೆಗಳು ಅನ್ವಯವಾಗುವುದಿಲ್ಲ.



(XV) ಆಡಳಿತ ಮಂಡಳಿ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ 2013ರ ವಿಧಿ 192ರಲ್ಲಿ ಪ್ರಸ್ತಾಪಿಸಿರುವಂತೆ ನಿರ್ದೇಶಕರು ಅಥವಾ ಇವರಿಗೆ ಸಂಬಂಧಿಸಿದ ವ್ಯಕ್ತಿಗಳ ಜೊತೆ ಕಂಪನಿಯು ಯಾವುದೇ ನಗದೇತರ ವ್ಯವಹಾರ ಮಾಡಿಕೊಂಡಿರುವುದಿಲ್ಲ, ಮತ್ತು

(XVI) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ವಿಧಿ–45–1ಎ ರ ಉಪಬಂಧಗಳ ಅನ್ವಯ ಕಂಪನಿಯು ನೋಂದಣಿ ಮಾಡಿಸಬೇಕಾದ ಅಗತ್ಯವಿರುವುದಿಲ್ಲ.

ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
(ಸಂಸ್ಥೆಯ ನೋಂದಣಿ ಸಂ.: 005389ಎಸ್)

ಸಹಿ/–
(ಎಸ್. ರಾಜೇಂದಿರನ್)
(ಪಾಲುದಾರರು)
(ಸದಸ್ಯತ್ವ ಸಂ.: 021883)
ಯುಡಿಐಎನ್: 19021883ಎಎಎಬಿಎ5388

ಸ್ಥಳ: ಬೆಂಗಳೂರು
ದಿನಾಂಕ: 14.09.2019

ಅನುಬಂಧ–ಬಿ

ಸಮ ದಿನಾಂಕದ ನಮ್ಮ ವರದಿಯ "ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿಯ" ಭಾಗದ ಕಂಡಿಕೆ 2 (ಎಫ್) ಸಂಬಂಧದಲ್ಲಿ

ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ವಿಧಿ 143ರ ಉಪನಿಧಿ 3ರ ಕಲಂ (i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆಗಿನ ವರದಿ

ಬೆಂಗಳೂರು ಮೆಟ್ರೋ ನಿಗಮ ನಿಯಮಿತದ ಸದಸ್ಯರುಗಳಿಗೆ

ನಾವು ಆ ದಿನಾಂಕದಂದು ಕೊನೆಗೊಂಡ ವರ್ಷದ ಕಂಪನಿಯ ಭಾರತೀಯ ಲೆಕ್ಕನಿರ್ವಹಣೆ ಮಾನದಂಡದನ್ವಯದ ಹಣಕಾಸಿನ ಹೇಳಿಕೆಯ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಜೊತೆಯಲ್ಲಿ 31ನೇ ಮಾರ್ಚ್, 2019ರಂದು ಇದ್ದಂತೆ ಬೆಂಗಳೂರು ಮೆಟ್ರೋ ನಿಗಮ ನಿಯಮಿತದ ("ಕಂಪನಿ") ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಮಾಡಿದ್ದೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳಲ್ಲಿ, ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ, ಕಂಪನಿಗಳ ನೀತಿಗಳನ್ನು ಅನುಸರಿಸುವುದು, ತನ್ನ ಆಸ್ತಿಗಳನ್ನು ರಕ್ಷಿಸುವುದು, ವಂಚನೆ ಮತ್ತು ತಪ್ಪುಗಳನ್ನು ತಡೆಯುವುದು ಮತ್ತು ಪತ್ತೆ ಹಚ್ಚುವುದು, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ವಿಶ್ವಾಸನೀಯ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವುದು ಸೇರಿದಂತೆ ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥಶಾಲಿಯಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯೂ ಒಳಗೊಂಡಿರುವುದು.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ, ಕಂಪನಿಗಳ ಕಾಯ್ದೆ, 2013ರ ವಿಧಿ 143(10) ಅನ್ವಯ ನಿರ್ದಿಷ್ಟಪಡಿಸಿರುವಂತೆ ಲೆಕ್ಕಪರಿಶೋಧನೆ ಬಗ್ಗೆಗಿನ ಹಣಕಾಸಿನ ವರದಿಗಾರಿಕೆಯ ("ಮಾರ್ಗದರ್ಶಿ ಟಿಪ್ಪಣಿ") ಮತ್ತು ಮಾನದಂಡಗಳ ಮೇಲಿನ ಅಂತರಾಷ್ಟ್ರೀಯ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ಅನ್ವಯ ನಾವು ನಮ್ಮ ಲೆಕ್ಕಪರಿಶೋಧನೆ ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವ ಬಗ್ಗೆ ಮತ್ತು ನಿರ್ವಹಣೆ ಮಾಡಿರುವ ಬಗ್ಗೆ ಮತ್ತು ಆ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಯನ್ನು ಅನುಸರಿಸಬೇಕಾಗಿರುವುದು ಮತ್ತು ಯೋಜನೆಯಡಿ ಲೆಕ್ಕಪರಿಶೋಧನೆ ನಡೆಸಬೇಕಾಗುವುದು.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿ ಇರುವ ಬಗ್ಗೆ ಮತ್ತು ಅವು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಆಗುತ್ತಿರುವ ಬಗ್ಗೆ ಲೆಕ್ಕಪರಿಶೋಧನೆ ಪುರಾವೆ ಪಡೆಯಲು ಕ್ರಮಾವಳಿಗಳನ್ನು



ಅನುಸರಿಸುವುದು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ವಾಸ್ತವವಾಗಿ ಇರುವ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮಕಾರಿಯ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯವು ಒಳಗೊಂಡಿರುವುದು. ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳ ವಾಸ್ತವಿಕ ಅಕ್ರಮಗಳ ಅಪಾಯ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರ ತೀರ್ಪಿನ ಮೇಲೆ ಅವಲಂಬಿತವಾಗಿ ಕ್ರಮಾವಳಿಗಲನ್ನು ಆಯ್ಕೆ ಮಾಡಲಾಗಿದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯು ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

ಹಣಕಾಸು ಹೇಳಿಕೆಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣದ ಅರ್ಥ

ಹಣಕಾಸು ವರದಿ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಾಸಾರ್ಹತೆಗೆ ಹಾಗೂ ಸಾಮಾನ್ಯವಾಗಿ ಒಪ್ಪಿತವಾದ ಲೆಕ್ಕನಿರ್ವಹಣಾ ತತ್ವಗಳಿಗೆ ಅನುಸಾರವಾಗಿ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತಃಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ಯುಕ್ತವಾದ ಭರವಸೆಯನ್ನು ನೀಡುವ ಹಾಗೆ ವಿನ್ಯಾಸಗೊಳಿಸಲಾದ ಒಂದು ಪ್ರಕ್ರಿಯೆ, ಹಣಕಾಸು ವರದಿ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣವು, (1) ಸಮಂಜಸವಾದ ವಿವರಗಳೊಂದಿಗೆ ಕಂಪನಿಯ ಆಸ್ತಿಗಳ ವಹಿವಾಟು ಮತ್ತು ಹತೋಟಿಗಳನ್ನು ಖಚಿತವಾಗಿ ಮತ್ತು ನ್ಯಾಯಸಮ್ಮತವಾಗಿ ಪ್ರತಿಬಿಂಬಿಸುವ ದಾಖಲೆಗಳ ನಿರ್ವಹಣೆಯನ್ನು ಒಳಗೊಂಡಿರುವಂಥ (2) ಸಾಮಾನ್ಯವಾಗಿ ಒಪ್ಪಿತವಾದ ಲೆಕ್ಕನಿರ್ವಹಣಾ ತತ್ವಗಳಿಗೆ ಅನುಸಾರವಾಗಿ ಅಗತ್ಯವಾದಂತೆ ಹಣಕಾಸು ತಃಖ್ತೆಗಳ ತಯಾರಿಕೆಗೆ ಅನುಮತಿ ನೀಡುವ ವ್ಯವಹರಣೆಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಜಮೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರ ಅನುಜ್ಞೆಗಳಿಗನುಸಾರವಾಗಿ ಮಾತ್ರ ಮಾಡಲಾಗುತ್ತಿದೆ ಎಂಬ ಬಗ್ಗೆ ಯುಕ್ತವಾದ ಭರವಸೆಯನ್ನು ನೀಡುವಂಥ ಮತ್ತು (3) ಹಣಕಾಸು ತಃಖ್ತೆಗಳ ಮೇಲೆ ಗಣನೀಯವಾದ ಪರಿಣಾಮ ಬೀರಬಹುದಾದ ಕಂಪನಿಯ ಆಸ್ತಿಗಳ ಅನಧಿಕೃತ ಅರ್ಜನೆ, ಬಳಕೆ ಅಥವಾ ಹತೋಟಿಯನ್ನು ತಡೆಗಟ್ಟುವ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವ ಬಗ್ಗೆ ಯುಕ್ತವಾದ ಭರವಸೆಯನ್ನು ನೀಡುವಂಥ ನೀತಿಗಳು ಮತ್ತು ಕಾರ್ಯವಿಧಾನವನ್ನು ಒಳಗೊಂಡಿರುತ್ತದೆ.

ಹಣಕಾಸು ಹೇಳಿಕೆಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ನಿಹಿತ ಮಿತಿಗಳು

ಹಣಕಾಸು ಹೇಳಿಕೆ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ನಿಹಿತ ಮಿತಿಗಳ ಕಾರಣದಿಂದ, ಷಾಮೀಲು ಅಥವಾ ಅಸಮರ್ಪಕ ನಿರ್ವಹಣೆ ಸಾಧ್ಯತೆ, ನಿಯಂತ್ರಣಗಳ ರದ್ದಿಯಾತಿ ಸೇರಿದಂತೆ ದೋಷ ಅಥವಾ ವಂಚನೆಯ ಕಾರಣದಿಂದ ಹಣಕಾಸು ತಃಖ್ತೆಗಳ ಪ್ರಮುಖ ತಪ್ಪು ನಿರೂಪಣೆಗಳು ಆಗಬಹುದು ಮತ್ತು ಅವುಗಳನ್ನು ಪತ್ತೆ ಹಚ್ಚಲಿಕ್ಕಾಗದಿರಬಹುದು. ಅಲ್ಲದೇ, ಭವಿಷ್ಯದ ಅವಧಿಗೆ ಹಣಕಾಸು ವರದಿ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಕುರಿತ ಯಾವುದೇ ಮೌಲ್ಯಮಾಪನದ ಮುನ್ನಂದಾಜುಗಳು ಹಣಕಾಸು ವರದಿ ಮೇಲಿನ ಆಂತರಿಕ ಹಣಕಾಸು ನಿಯಂತ್ರಣವು ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಕಾರಣದಿಂದಾಗಿ ಅಪರ್ಯಾಪ್ತವಾಗಬಹುದೆಂಬ ಅಥವಾ ನೀತಿಗಳ ಅಥವಾ ತತ್ವಗಳ ಅನುಪಾಲನೆಯ ಪ್ರಮಾಣವು ಕ್ಷೀಣಿಸಬಹುದೆಂಬ ಅಪಾಯಕ್ಕೆ ಒಳಪಟ್ಟಿರುತ್ತವೆ.

ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು, ಎಲ್ಲಾ ಪ್ರಮುಖ ವಿಷಯಗಳಲ್ಲೂ, ಹಣಕಾಸು ವರದಿ ಮೇಲಿನ ಪರ್ಯಾಪ್ತ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ ಮತ್ತು ಹಣಕಾಸು ವರದಿ ಮೇಲಿನ ಅಂತ ಆಂತರಿಕ ಹಣಕಾಸು ನಿಯಂತ್ರಣಗಳನ್ನು "ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ಹೊರಡಿಸಿದ ಹಣಕಾಸು ವರದಿ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆ ಕುರಿತು ಮಾರ್ಗದರ್ಶಿ ಟಿಪ್ಪಣಿಯಲ್ಲಿ ಹೇಳಲಾದ ಆಂತರಿಕ ನಿಯಂತ್ರಣದ ಅವಶ್ಯಕ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕಂಪನಿಯು ಸ್ಥಾಪಿಸಿದ ಹಣಕಾಸು ವರದಿ ಮಾನದಂಡಗಳ ಮೇಲಿನ ಆಂತರಿಕ ನಿಯಂತ್ರಣ"ದ ಆಧಾರದ ಮೇಲೆ ಮಾರ್ಚ್, 31 2019ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತಂದಿರುತ್ತದೆ.



ಇತರೆ ವಿಷಯದ ಕಂಡಿಕೆ

ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ ಮತ್ತು ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ, 31ನೇ ಮಾರ್ಚ್ 2018ರಂದು ಇದ್ದಂತೆ ಪರಿಶೀಲನೆ ಅಡಿಯಲ್ಲಿ ಒಳಪಡಿಸುವ ಎಲ್ಲಾ ಸ್ಥಿರಾಸ್ತಿಗಳ ಬಗ್ಗೆ ಮೂರು ವರ್ಷಗಳಲ್ಲಿ ಪರಿಶೀಲನೆಯ ಹಂತಹಂತದ ಕಾರ್ಯಕ್ರಮದ ಭಾಗವಾಗಿ ವರದಿಯ ವರ್ಷದಲ್ಲಿ ಸ್ಥಿರಾಸ್ತಿ ಭಾಗದ ಪರಿಶೀಲನೆ ಮಾಡದಿರುವುದು ನ್ಯೂನತೆಯ ಒಂದು ಕ್ಷೇತ್ರ ಎಂಬುದಾಗಿ ಗುರುತಿಸಲಾಗಿದೆ.

ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
(ಸಂಸ್ಥೆಯ ನೋಂದಣಿ ಸಂ.: 005389ಎಸ್)

ಸಹಿ/–
(ಎಸ್. ರಾಜೇಂದಿರನ್)
(ಪಾಲುದಾರರು)
(ಸದಸ್ಯತ್ವ ಸಂ.: 021883)
ಯುಡಿಐಎನ್: 19021883ಎಎಎಎಬಿಎ5388

ಸ್ಥಳ : ಬೆಂಗಳೂರು
ದಿನಾಂಕ: 14.09.2019



ಅನುಬಂಧ–ಸಿ

ಕಂಪನಿಯ 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ಸಮದಿನಾಂಕದ ನಮ್ಮ ವರದಿಯಲ್ಲಿನ "ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ" ಕುರಿತ ವರದಿಯ ಶೀರ್ಷಿಕೆ ಅಡಿಯಲ್ಲಿನ ಕಂಡಿಕೆ 3ರ ಸಂಬಂಧದಲ್ಲಿ.

ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(5)ರ ಉಪ ಪ್ರಕರಣ 5ರ ಅನ್ವಯ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ನೀಡಿರುವ ನಿರ್ದೇಶನಗಳ ಅನ್ವಯ, ಕಂಪನಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ ಮೇರೆಗೆ ಮತ್ತು ನಮಗೆ ನೀಡಿದ ವಿವರಣೆಗಳು ಮತ್ತು ಒದಗಿಸಿದ ಮಾಹಿತಿ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ:

ಕ್ರ.ಸಂ.	ನಿರ್ದೇಶನಗಳು	ಲೆಕ್ಕಪರಿಶೋಧಕರ ಅಭಿಪ್ರಾಯಗಳು
1	ಐಟಿ ಸಿಸ್ಟಮ್ ಮೂಲಕ ಎಲ್ಲಾ ಲೆಕ್ಕ ನಿರ್ವಹಣೆ ವ್ಯವಹಾರಗಳನ್ನು ನಡೆಸುವ ವ್ಯವಸ್ಥೆಯನ್ನು ಕಂಪನಿ ಹೊಂದಿರುವುದೇ? ಹೌದಾದರೆ, ಐಟಿ ಸಿಸ್ಟಮ್ ಹೊರಗೆ ಲೆಕ್ಕನಿರ್ವಹಣೆ ವ್ಯವಹಾರವನ್ನು ನಡೆಸಿದ್ದರಿಂದ ಲೆಕ್ಕಗಳ ಸಮಗ್ರತೆ ಮೇಲೆ ಉಂಟಾದ ಪರಿಣಾಮಗಳು ಜೊತೆಗೆ ಯಾವುದೇ ಹಣಕಾಸಿನ ಪರಿಣಾಮಗಳು ಉಂಟಾಗಿದ್ದರೆ ಅವುಗಳನ್ನು ತಿಳಿಸುವುದು.	ಕಂಪನಿಯು ತನ್ನ ಲೆಕ್ಕ ನಿರ್ವಹಣೆ ವ್ಯವಹಾರಗಳಿಗೆ ಎಕ್ಸ್‌ಪರ್ಟ್ ಸಾಫ್ಟ್‌ವೇರ್ ಬಳಸುತ್ತಿರುವುದು. ಹಣ ಸಂಗ್ರಹಣೆಗಾಗಿ ಕಂಪನಿಯು "ಕಾಂಟ್ಯಾಕ್ಟ್‌ಲೆಸ್ ಸ್ಮಾರ್ಟ್ ಬೇಸ್ಡ್ ಆಟೋಮ್ಯಾಟಿಕ್ ಫೇರ್ ಕಲೆಕ್ಷನ್" ಸಾಫ್ಟ್‌ವೇರ್ ಬಳಸುತ್ತಿರುವುದು. ದೈನಂದಿನ ಹಣ ಸಂಗ್ರಹಣೆಗಳು ಮತ್ತು ಠೇವಣಿಗಳನ್ನು ಎಕ್ಸ್‌ಪರ್ಟ್ ಸಾಫ್ಟ್‌ವೇರ್ ಮೂಲಕ ದಾಖಲಿಸಲಾಗುವುದು. ಎಎಫ್‌ಸಿ ಸಾಫ್ಟ್‌ವೇರ್‌ನಿಂದ ಉತ್ಪತ್ತಿಯಾಗುವ ಫೇರ್ ಬಾಕ್ಸ್ ಹಣವನ್ನು ಲೆಕ್ಕ–ಕ್ಕೆ ತೆಗೆದುಕೊಳ್ಳಲು ಪ್ರತಿದಿನ ಎಕ್ಸ್‌ಪರ್ಟ್ ಸಾಫ್ಟ್‌ವೇರ್‌ಗೆ ರವಾನಿಸುವ ನಮೂದುಗಳಿಗೆ ನಿಯಂತ್ರಣ ದಾಖಲೆಯಾಗಿ ಇದು ಕಾರ್ಯ ನಿರ್ವಹಿಸುವುದು. ಕಾಂಟ್ಯಾಕ್ಟ್‌ಲೆಸ್ ಸ್ಮಾರ್ಟ್ ಕಾರ್ಡ್ ಅಡಿಯಲ್ಲಿನ ಹಣದ ವರ್ಗಾವಣೆಯಾಗಿರದ ಭಾಗವನ್ನು ಎಎಫ್‌ಸಿ ಸಾಫ್ಟ್‌ವೇರ್‌ನಿಂದ ಪಡೆದು, ಸಂಬಂಧಪಟ್ಟ ನಮೂದುಗಳನ್ನು ಮಾನವ ಕಾರ್ಯದ ಮೂಲಕ ಪ್ರತಿ ತಿಂಗಳು ಎಕ್ಸ್‌ಪರ್ಟ್ ಸಾಫ್ಟ್‌ವೇರ್‌ಗೆ ವರ್ಗಾಯಿಸಲಾಗುವುದು. ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ, ಪರಿಶೀಲನೆ ಆಧಾರದ ಮೇಲೆ ಮತ್ತು ಆಂತರಿಕ ಲೆಕ್ಕಪರಿಶೋಧನೆ ವರದಿಗಳ ಆಧಾರದ ಮೇಲೆ ಲೆಕ್ಕಗಳ ಸಮಗ್ರತೆ ಕಡಿಮೆಯಾಗಿರುವ ಘಟನೆಗಳು ಮತ್ತು ಹಣಕಾಸಿನ ಪರಿಣಾಮಗಳು ಕಂಡು ಬಂದಿರುವುದಿಲ್ಲ/ ವರದಿಯಾಗಿರುವುದಿಲ್ಲ.



ಕ್ರ.ಸಂ.	ನಿರ್ದೇಶನಗಳು	ಲೆಕ್ಕಪರಿಶೋಧಕರ ಅಭಿಪ್ರಾಯಗಳು
2	ಸಾಲ ಮರುಪಾವತಿ ಮಾಡಲು ಕಂಪನಿಯು ಅಶಕ್ತವಾಗಿರುವ ಕಾರಣ ಕಂಪನಿಗೆ ಸಾಲ ನೀಡಿರುವವರು ಹಾಲಿಯಿರುವ ಸಾಲವನ್ನು ಯಾವುದೇ ರೀತಿ ಪುನರ್‌ರೂಪಿಸಿರುವರೆ ಅಥವಾ ಸಾಲಗಳು/ಋಣಗಳು/ಬಡ್ಡಿ ಇತ್ಯಾದಿಯನ್ನು ಮನ್ನಾ ಮಾಡಿರುವ/ವಜಾ ಮಾಡಿರುವ ಯಾವುದೇ ಪ್ರಕರಣಗಳಿರುವವೆ? ಹೌದಾದರೆ, ಹಣಕಾಸಿನ ಪರಿಣಾಮವನ್ನು ತಿಳಿಸತಕ್ಕದ್ದು.	ಪಡೆದಿರುವ ಮಾಹಿತಿ ಮತ್ತು ವಿವರಣೆಗಳ ಅನ್ವಯ, ಸಾಲ ಮರು ಪಾವತಿ ಮಾಡಲು ಕಂಪನಿಯು ಅಶಕ್ತವಾಗಿರುವ ಕಾರಣ, ಕಂಪನಿಗೆ ಸಾಲ ನೀಡಿರುವವರಿಂದ ಹಾಲಿಯಿರುವ ಸಾಲದ ಪುನರ್‌ರಚನೆಯ ಅಥವಾ ಸಾಲಗಳು/ಋಣಗಳು/ ಬಡ್ಡಿ ಇತ್ಯಾದಿಯ ಮನ್ನಾ ಮಾಡಿದ/ವಜಾ ಮಾಡಿದ ಪ್ರಕರಣಗಳು ಯಾವುದೂ ಇರುವುದಿಲ್ಲ.
3	ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಪಡೆದಿರುವ/ಪಡೆಯಲಿರುವ ಹಣವನ್ನು ಸರಿಯಾಗಿ ಲೆಕ್ಕ ಮಾಡಲಾಗಿರುವುದೇ/ಅದನ್ನು ನೀಡಿದ ನಿಯಮ ಮತ್ತು ನಿಬಂಧನಗಳನ್ವಯ ಬಳಸಲಾಗಿರುವುದೇ? ಬೇರೆ ಉದ್ದೇಶಗಳಿಗೆ ಬಳಸಿರುವ ವಿಚಾರಗಳ ಪಟ್ಟಿ ಮಾಡಿ.	ಪಡೆದಿರುವ ಮಾಹಿತಿ ಮತ್ತು ವಿವರಣೆಗಳ ಅನ್ವಯ, ನಮ್ಮ ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ನಾವು ಮಾಡಿದ ತಪಾಸಣೆ ಮತ್ತು ಆಂತರಿಕ ಲೆಕ್ಕಪರಿಶೋಧನೆ ವರದಿಗಳ ಆಧಾರದ ಮೇಲೆ ನಾವು ಅಭಿಪ್ರಾಯ ಪಟ್ಟಿರುವುದೇನೆಂದರೆ ಕೇಂದ್ರ/ರಾಜ್ಯ ಏಜೆನ್ಸಿಗಲಿಂದ ನಿರ್ದಿಷ್ಟ ಯೋಜನೆಗಳಿಗೆ ಪಡೆದಿರುವ ಹಣವನ್ನು ಸರಿಯಾದ ರೀತಿಯಲ್ಲಿ ಲೆಕ್ಕ ಮಾಡಲಾಗಿದೆ/ಅದರ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಬಳಸಲಾಗಿದೆ.

ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
(ಸಂಸ್ಥೆಯ ನೋಂದಣಿ ಸಂ.: 005389ಎಸ್)

ಸಹಿ/–
(ಎಸ್. ರಾಜೇಂದಿರನ್)
(ಪಾಲುದಾರರು)
(ಸದಸ್ಯತ್ವ ಸಂ.: 021883)
ಯುಡಿಐಎನ್: 19021883ಎಎಎಬಿಎ5388

ಸ್ಥಳ: ಬೆಂಗಳೂರು
ದಿನಾಂಕ: 14.09.2019



ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ
ವಾಣಿಜ್ಯ ಲೆಕ್ಕ ಪರಿಶೋಧನೆ ಪ್ರಧಾನ ನಿರ್ದೇಶಕರು
ಹಾಗೂ ಪದನಿಮಿತ್ತ ಸದಸ್ಯರು, ಲೆಕ್ಕಪರಿಶೋಧನಾ ಮಂಡಳಿ
ಇವರ ಕಚೇರಿ, ಹೈದರಾಬಾದ್

ಡಿಜಿಸಿಎ/ಎ/ಸಿ/ಡೆಸ್ಕ್/2018–19/ಬಿಎಂಆರ್‌ಸಿಎಲ್/1.59/205 ದಿನಾಂಕ: 25–09–2019

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
ಬೆಂಗಳೂರು.

ವಿಷಯ: ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು ಇದರ 31ನೇ ಮಾರ್ಚ್ 2019 ರಂದು ಕೊನೆಗೊಂಡ ವರ್ಷದ ಹಣಕಾಸಿನ ಹೇಳಿಕೆಗಳ ಬಗ್ಗೆ ಕಂಪನಿಗಳ ಕಾಯ್ದೆ, 2013ರ ವಿಧಿ 143 (6) (ಬಿ) ಅನ್ವಯ ಸಿ & ಎಜಿ ಆಫ್ ಇಂಡಿಯಾ ಇವರ ಟೀಕೆ ಟಿಪ್ಪಣಿಗಳು.

ಮಾನ್ಯರೆ,

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 31ನೇ ಮಾರ್ಚ್ 2019 ರಂದು ಕೊನೆಗೊಂಡ ವರ್ಷದ ಹಣಕಾಸಿನ ಹೇಳಿಕೆಗಳ ಬಗ್ಗೆ, ಕಂಪನಿಗಳ ಕಾಯ್ದೆ, 2013 ರ ವಿಧಿ 143 (6) (ಬಿ) ಅನ್ವಯ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ನೀಡಿರುವ ಶೂನ್ಯ ಟೀಕೆಟಿಪ್ಪಣಿಗಳ ಪ್ರಮಾಣಪತ್ರವನ್ನು ನಾನು ನಿಮಗೆ ಕಳುಹಿಸುತ್ತಿದ್ದೇನೆ.

2. ಈ ಟೀಕೆಟಿಪ್ಪಣಿಯನ್ನು ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧಕರ ವರದಿ ಜೊತೆಗೆ ಕಂಪನಿಯ ಷೇರುದಾರರುಗಳ ಸಮ್ಮುಖದಲ್ಲಿಡುವ ದಿನಾಂಕವನ್ನು ದಯಮಾಡಿ ತಿಳಿಸಿ ಹಾಗೂ ಸಭೆಯ ನಡೆವಳಿಗಳ ಒಂದು ಪ್ರತಿಯನ್ನು ಸಹ ನಮಗೆ ಕಳುಹಿಸಿಕೊಡಿ.

3. ಸಂಸತ್ತಿನಲ್ಲಿ ಮಂಡಿಸುವುದಕ್ಕಾಗಿ, ಕಂಪನಿಯ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪತ್ರಗಳು ಜೊತೆಗೆ ಲೆಕ್ಕಪರಿಶೋಧಕರ ವರದಿ ಮತ್ತು ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆಟಿಪ್ಪಣಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ದಿನಾಂಕವನ್ನೂ ತಿಳಿಸಿ.

4. ಬಿಎಂಆರ್‌ಸಿಎಲ್‌ನ 2018–19ರ ಸಾಲಿನ ವಾರ್ಷಿಕ ವರದಿಯ ಹತ್ತುದ ಪ್ರತಿಗಳನ್ನು ಮುಂದಿನ ದಿನಗಳಲ್ಲಿ ದಯಮಾಡಿ ನಮಗೆ ಕಳುಹಿಸಿಕೊಡಿ.

ಲಗತ್ತಿಸಿರುವ ವಿಷಯದ ಒಕ್ಕಣೆ ಜೊತೆಗೆ ಸದರಿ ಪತ್ರ ಸ್ವೀಕರದಿಸಿರುವ ಬಗ್ಗೆ ಖಾತರಿ ಪಡಿಸುವುದು.

ತಮ್ಮ ವಿಶ್ವಾಸಿ,

M.S. Subramanyam

(ಎಂ.ಎಸ್. ಸುಬ್ರಮಣ್ಯಂ)
ಮಹಾ ನಿರ್ದೇಶಕರು.

ಲಗತ್ತುಗಳು : ಮೇಲಿನಂತೆ



ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು. ಇದರ 31.03.2019ಕ್ಕೆ ಕೊನೆಗೊಂಡ ವರ್ಷದ ಲೆಕ್ಕಪತ್ರಗಳ ಕುರಿತು ಕಂಪನಿ ಅಧಿನಿಯಮ, 2013ರ ಕಲಂ 143 (6) (ಬಿ) ಅಡಿಯಲ್ಲಿ ಭಾರತದ ನಿಯಂತ್ರಕರು ಹಾಗೂ ಮಹಾ ಲೆಕ್ಕಪರಿಶೋಧಕರು ಮಾಡಿರುವ ಟಿಪ್ಪಣಿಗಳು

ಕಂಪನಿಗಳ ಕಾಯ್ದೆ 2013 (ಕಾಯ್ದೆ) ಯ ಪ್ರಕಾರ ನಿಗದಿಡಿಸಿದ ಹಣಕಾಸು ವರದಿ ಚೌಕಟ್ಟಿನ ಅನುಸಾರವಾಗಿ 31 ಮಾರ್ಚ್ 2019 ರಂದು ಕೊನೆಗೊಂಡ ವರ್ಷಕ್ಕೆ ಬೆಂಗಳೂರು ಮೆಟ್ರೊ ರೈಲ್ ನಿಗಮ ನಿಯಮಿತ ಹಣಕಾಸು ಹೇಳಿಕೆಗಳನ್ನು ಸಿದ್ದಪಡಿಸುವುದು ಕಂಪನಿಯ ನಿರ್ವಹಣೆಯ ಜವಾಬ್ದಾರಿಯಾಗಿದೆ. ಕಲಂ 139(5)ರ ಅಡಿಯಲ್ಲಿ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ನೇಮಕ ಮಾಡಿದ ಶಾಸನಬದ್ದ ಲೆಕ್ಕ ಪರಿಶೋಧಕರು ಈ ಹಣಕಾಸು ಹೇಳಿಕೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಕಲಂ 143(10)ರ ಅಡಿಯಲ್ಲಿ ನಿಗದಿಪಡಿಸಿದ ಲೆಕ್ಕಪರಿಶೋಧನೆಯ ಮಾನದಂಡಗಳೊಂದಿಗೆ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೆಲೇ ಕಾಯಿದೆಯ ಕಲಂ 143ರ ಅಡಿಯಲ್ಲಿ ಇದನ್ನು ಅವರು ಮಾಡಿದ್ದಾರೆಂದು ಹೇಳಲಾಗಿದೆ. 14ನೇ ಸೆಪ್ಟೆಂಬರ್ 2019ರ ಅವರ ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ಅನ್ವಯ ಅವರು ಇದನ್ನು ಮಾಡಿರುವುದಾಗಿ ತಿಳಿಸಲಾಗಿದೆ.

ನಾನು, ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಪರವಾಗಿ, ಕಾಯ್ದೆಯ ವಿಧಿ 143(6) (ಎ) ಅನ್ವಯ, ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ, ಬೆಂಗಳೂರು ಇದರ ದಿನಾಂಕ 31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ಪೂರಕ ಲೆಕ್ಕಪರಿಶೋಧನೆ ನಡೆಸಿದ್ದೇನೆ. ಸದರಿ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಅವಲೋಕಿಸದೆ ಸ್ವತಂತ್ರವಾಗಿ ಮಾಡಲಾಗಿದೆ ಮತ್ತು ಈ ಲೆಕ್ಕಪರಿಶೋಧನೆಯು, ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಕಂಪನಿ ಸಿಬ್ಬಂದಿ ಜೊತೆ ವಿಚಾರಣೆನಡೆಸಿ ಮತ್ತು ಕೆಲವು ಲೆಕ್ಕ ನಿರ್ವಹಣೆಯ ದಾಖಲೆಗಳ ಆಯ್ದ ಪರಿಶೀಲನೆ ಮಾಡಿರುವುದಕ್ಕೆ ಪ್ರಮುಖವಾಗಿ ಸೀಮಿತವಾಗಿರುವುದು.

ಪೂರಕ ಲೆಕ್ಕಪರಿಶೋಧನೆಯ ಅವಧಿಯಲ್ಲಿ ವ್ಯಕ್ತಪಡೊಸಿದ ನನ್ನ ಕೆಲವು ಲೆಕ್ಕಪರಿಶೋಧನಾ ಅಭಿಪ್ರಾಯಗಳಿಗೆ ಸಿರಯಾದ ಮಾರ್ಪಾಡು ಮಾಡುವಿಕೆಗಾಗಿ, ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿ ಪರಿಷ್ಕರಣೆ ಮಾಡಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಅಥವಾ ಕಾಯ್ದೆಯ ವಿಧಿ 143 (6)(ಬಿ) ಅನ್ವಯದ ಪೂರಕವಾದ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ಬಗ್ಗೆ ನಾನು ಯಾವುದೇ ಟೀಕೆಟಿಪ್ಪಿಣಿ ಮಾಡಿರುವುದಿಲ್ಲ.

ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್
ಇಂಡಿಯಾ ಇವರ ಪರವಾಗಿ ಮತ್ತು ಹೆಸರಿನಲ್ಲಿ

(ಎಂ.ಎಸ್. ಸುಬ್ರಮಣ್ಯಂ)
ವಾಣಿಜ್ಯ ಲೆಕ್ಕಪರಿಶೋಧನೆ ಮಹಾನಿರ್ದೇಶಕರು
ಮತ್ತು ಪದನಿಮಿತ್ತ ಸದಸ್ಯರು,
ಲೆಕ್ಕಪರಿಶೋಧನಾ ಮಂಡಳಿ, ಹೈದರಾಬಾದ್.

ಸ್ಥಳ: ಹೈದರಾಬಾದ್
ದಿನಾಂಕ: 25ನೇ ಸೆಪ್ಟೆಂಬರ್ 2019

31.03.2019ರಲ್ಲಿದ್ದಂತೆ ಸ್ಥಿತಿ ವಿವರಣಾ ಪಟ್ಟಿ

ರೂ. ಲಕ್ಷಗಳಲ್ಲಿ

	ವಿವರಗಳು	ಟಿಪ್ಪಣಿ ಸಂಖ್ಯೆ	31.03.2019ರಲ್ಲಿದ್ದಂತೆ	31.03.2018ರಲ್ಲಿದ್ದಂತೆ
I	**ಆಸ್ತಿಗಳು**			
1	**ಚಾಲ್ತಿಯೇತರ ಆಸ್ತಿಗಳು**			
(ಎ)	ಸ್ವತ್ತು, ಸ್ಥಾವರ ಮತ್ತು ಉಪಕರಣಗಳು	2.1	1,683,113.40	1,533,607.22
(ಬಿ)	ಪ್ರಗತಿಯಲ್ಲಿರುವ ಬಂಡವಾಳ ಕೆಲಸ	2.2	278,959.65	93,387.41
(ಸಿ)	ಅಮೂರ್ತ ಆಸ್ತಿಗಳು	2.1	120.97	102.84
(ಡಿ)	ಅಭಿವೃದ್ಧಿಯಲ್ಲಿರುವ ಅಮೂರ್ತ ಆಸ್ತಿಗಳು	2.2	68.94	68.94
(ಇ)	ಹಣಕಾಸು ಆಸ್ತಿಗಳು			
	(i) ಠೇವಣಿ	2.3	277.06	263.45
(ಎಫ್)	ಇತರೆ ಚಾಲ್ತಿಯಲ್ಲಿರುವ ಆಸ್ತಿಗಳು	2.4	53,622.58	54,669.89
	ಒಟ್ಟು ಚಾಲ್ತಿಯೇತರ ಆಸ್ತಿಗಳು (ಎ)		**2,016,162.60**	**1,682,099.75**
2	**ಚಾಲ್ತಿ ಆಸ್ತಿಗಳು**			
(ಎ)	ತಪಶೀಲು ಪಟ್ಟಿ	2.5	401.73	10.21
(ಬಿ)	ಹಣಕಾಸು ಆಸ್ತಿಗಳು			
	(i) ವ್ಯವಹಾರದಿಂದ ಬರಬೇಕಾಗಿದ್ದು	2.6	286.44	656.46
	(ii) ನಗದು ಮತ್ತು ನಗದಿಗೆ ಸಮಾನ	2.7	26,663.55	82,760.94
	(iii) ಮೇಲಿನ ಹೊರತಾದ ಬ್ಯಾಂಕ್ (ii) ಶಿಲ್ಕುಗಳು	2.8	52,660.23	73,153.28
	(iv) ಇತರೆ ಬರಬೇಕಾದವುಗಳು	2.9	5,939.24	4,714.19
(ಸಿ)	ಚಾಲ್ತಿ ತೆರಿಗೆ ಆಸ್ತಿಗಳು	2.10	7,951.27	6,877.19
(ಡಿ)	ಇತರೆ ಚಾಲ್ತಿ ಆಸ್ತಿಗಲು	2.11	84,661.19	46,279.11
	ಒಟ್ಟು ಚಾಲ್ತಿ ಆಸ್ತಿಗಳು (ಬಿ)		**178,563.65**	**214,451.38**
	ಒಟ್ಟು ಆಸ್ತಿಗಳು (ಎ+ಬಿ)		**2,194,726.25**	**1,896,551.13**
II	**ಈಕ್ವಿಟಿ ಮತ್ತು ಹೊಣೆಗಾರಿಕೆಗಳು**			
1)	**ಈಕ್ವಿಟಿ**			
(ಎ)	ಈಕ್ವಿಟಿ ಮತ್ತು ಬಂಡವಾಳ	2.12	582,378.00	536,298.00
(ಬಿ)	ಇತರೆ ಈಕ್ವಿಟಿ	2.13	(131,773.07)	(130,779.86)
	ಒಟ್ಟು ಈಕ್ವಿಟಿ (ಎ)		**450,604.93**	**405,518.14**



	ವಿವರಗಳು	ಟಿಪ್ಪಣಿ ಸಂಖ್ಯೆ	31.03.2019ರಲ್ಲಿದ್ದಂತೆ	31.03.2018ರಲ್ಲಿದ್ದಂತೆ
2)	**ಮುಂದೂಡಿದ ಅನುದಾನಗಳು**			
(ಎ)	ಮುಂದೂಡಿದ ಅನುದಾನ/ಆದಾಯ	2.14	25,322.90	25,647.59
	ಒಟ್ಟು ಮುಂದೂಡಿದ ಅನುದಾನಗಳು (ಬಿ)		**25,322.90**	**25,647.59**
3)	**ಚಾಲ್ತಿಯೇತರ ಹೊಣೆಗಾರಿಕೆಗಳು**			
(ಎ)	ಹಣಕಾಸಿನ ಹೊಣೆಗಾರಿಕೆಗಳು			
	(i) ಸಾಲಗಳು	2.15	1,619,764.99	1,372,119.95
	(ii) ಇತರೆ ಹಣಕಾಸಿನ ಹೊಣೆಗಾರಿಕೆಗಳು	2.16	514.54	4,019.47
(ಬಿ)	ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು	2.17	502.02	502.02
4)	**ಚಾಲ್ತಿ ಹೊಣೆಗಾರಿಕೆಗಳು**			
(ಎ)	**ಹಣಕಾಸಿನ ಹೊಣೆಗಾರಿಕೆಗಳು**			
	(i) ಸಾಲಗಳು	2.15	23,091.10	22,687.20
	(ii) ವ್ಯಾಪಾರ ಮತ್ತು ಇತರೆ ಸಂಬಂಧಿ ಪಾವತಿಸಬೇಕಾದ ಹಣ	2.18	986.25	130.85
	(iii) ಇತರೆ ಹಣಕಾಸಿನ ಹೊಣೆಗಾರಿಕೆಗಳು	2.19	1,623.89	2,269.56
(ಬಿ)	ಹವಣಿಕೆಗಳು	2.20	1,723.43	1,039.83
(ಸಿ)	ಚಾಲ್ತಿ ತೆರಿಗೆ ಹೊಣೆಗಾರಿಕೆಗಳು	2.21	2,187.59	2,187.59
(ಡಿ)	ಇತರೆ ಚಾಲ್ತಿ ಹೊಣೆಗಾರಿಕೆಗಳು	2.22	68,404.61	60,428.93
	ಒಟ್ಟು ಚಾಲ್ತಿಯೇತರ ಮತ್ತು ಚಾಲ್ತಿ ಹೊಣೆಗಾರಿಕೆಗಳು (ಸಿ)		**1,718,798.42**	**1,465,385.40**
	ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು (ಎ+ಬಿ+ಸಿ)		**2,194,726.25**	**1,896,551.13**

ಮಹತ್ವಪೂರ್ಣ ಲೆಕ್ಕನಿರ್ವಹಣೆ ನೀತಿಗಳು – ಟಿಪ್ಪಣಿ ಸಂ.1

ಇದರೊಡನೆ ಲಗತ್ತಿಸಿರುವ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವವು

ಸಹಿ/–
ಅಜಯ್ ಸೇಠ್
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
ಡಿ. ರಾಧಾಕೃಷ್ಣ ರೆಡ್ಡಿ
ನಿರ್ದೇಶಕರು (ಪಿ ಅಂಡ್ ಪಿ)

ಲಗತ್ತಿಸಿರುವ ನಮ್ಮ ವರದಿ ಪ್ರಕಾರ
ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ನಂ.005389ಎಸ್

ಸಹಿ/–
ಯು. ಜಗದೀಶ್ ನಾಯಕ್
ಕಂಪನಿ ಕಾರ್ಯದರ್ಶಿ

ಸಹಿ/–
ಎಸ್. ವಾಸುದೇವನ್
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
(ಎಸ್. ರಾಜೇಂದಿರನ್)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 021883

ಸ್ಥಳ: ಬೆಂಗಳೂರು
ದಿನಾಂಕ: 14.09.2019



31.03.2019ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ

(ರೂ. ಲಕ್ಷಗಳಲ್ಲಿ)

	ವಿವರಗಳು	ಟಿಪ್ಪಣಿ ಸಂ.	31.03.2019ರಂದು ಕೊನೆಗೊಂಡ ವರ್ಷಕ್ಕೆ	31.03.2018ರಂದು ಕೊನೆಗೊಂಡ ವರ್ಷಕ್ಕೆ
I	**ಆದಾಯ**			
	ಕಾರ್ಯಾಚರಣೆಯಿಂದ ಬಂದ ಆದಾಯ	2.23	40,234.58	32,499.96
	ಇತರೆ ಆದಾಯ	2.24	1,712.07	1,221.30
	ಕರ್ನಾಟಕ ಸರ್ಕಾರದಿಂದ ಪಡೆದ ನಗದು ನಷ್ಟದ ಮರುಪಾವತಿ		11,639.00	20,227.00
	ಒಟ್ಟು ಆದಾಯ		**53,585.65**	**53,948.26**
II	**ವೆಚ್ಚ**			
	ಕಾರ್ಯಾಚರಣೆಯ ವೆಚ್ಚ	2.25	22,069.28	17,075.98
	ಸಿಬ್ಬಂದಿ ಸೌಲಭ್ಯ ಖರ್ಚು	2.26	10,007.58	7,966.22
	ಆರ್ಥಿಕ ವೆಚ್ಚಗಳು	2.27	11,249.78	11,184.66
	ಸವಕಳಿ ಮತ್ತು ತೀರುವಳಿ ವೆಚ್ಚ	2.28	58,393.92	51,579.42
	ಇತರೆ ವಚ್ಚಗಳು	2.29	1,519.71	1,252.09
	ಒಟ್ಟು ಖರ್ಚು		**103,240.27**	**89,058.37**
III	**ವಿಶೇಷ ಐಟಂಗಳ ಮುಂಚಿನ ಲಾಭ / (ನಷ್ಟ)**		**(49,654.62)**	**(35,110.11)**
	ವಿಶೇಷ ಬಾಬ್ತುಗಳು		–	–
IV	**ತೆರಿಗೆಗಿಂತ ಮುಂಚಿನ ಲಾಭ / (ನಷ್ಟ)**		**(49,654.62)**	**(35,110.11)**
V	**ತೆರಿಗೆ ವೆಚ್ಚಗಳು**			
	ಚಾಲ್ತಿ ತೆರಿಗೆ		–	–
VI	**ನಿರಂತರ ಕಾರ್ಯಾಚರಣೆಯಿಂದ ಬಂದ ಈ ಅವಧಿಯ ಲಾಭ**		**(49,654.62)**	**(35,110.11)**
	ಇತರೆ ಸಮಗ್ರ ಆದಾಯ:			
	ಲಾಭ ಅಥವಾ ನಷ್ಟದ ತರುವಾಯ ಪುನರ್‌ವರ್ಗೀಕರಣ ಮಾಡಲಾಗದ ಬಾಬ್ತುಗಳು: ನಿವ್ವಳ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ ಮರುಪಾವತಿ		**(186.83)**	**(115.18)**
VII	**ಈ ಅವಧಿಯ ಒಟ್ಟು ಇತರೆ ಸಮಗ್ರ ಆದಾಯ / (ನಷ್ಟ), ತೆರಿಗೆ ನಿವ್ವಳ**		**(186.83)**	**(115.18)**



	ವಿವರಗಳು	ಟಿಪ್ಪಣಿ ಸಂ.	31.03.2019ರಂದು ಕೊನೆಗೊಂಡ ವರ್ಷಕ್ಕೆ	31.03.2018ರಂದು ಕೊನೆಗೊಂಡ ವರ್ಷಕ್ಕೆ
VIII	**ಈ ಅವಧಿಯ ಒಟ್ಟು ಸಮಗ್ರ ಆದಾಯ**		**(49,841.45)**	**(35,225.29)**
IX	**ಷೇರು ಒಂದರ ಗಳಿಕೆ (ರೂ.ಗಳಲ್ಲಿ)**			
	ಮೂಲ		(0.91)	(0.65)
	ದ್ರವೀಕೃತ		(0.91)	(0.65)

ಮಹತ್ವಪೂರ್ಣ ಲೆಕ್ಕನಿರ್ವಹಣೆ ನೀತಿಗಳು – ಟಿಪ್ಪಣಿ ಸಂ.1

ಇದರೊಡನೆ ಲಗತ್ತಿಸಿರುವ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವವು

ಸಹಿ/–
ಅಜಯ್ ಸೇಠ್
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಿ. ರಾಧಾಕೃಷ್ಣ ರೆಡ್ಡಿ
ನಿರ್ದೇಶಕರು (ಪಿ ಅಂಡ್ ಪಿ)

ಲಗತ್ತಿಸಿರವ ನಮ್ಮ ವರದಿ ಪ್ರಕಾರ
ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ನಂ.005389ಎಸ್

ಸಹಿ/–
ಯು. ಜಗದೀಶ್ ನಾಯಕ್
ಕಂಪನಿ ಕಾರ್ಯದರ್ಶಿ

ಸಹಿ/–
ಎಸ್. ವಾಸುದೇವನ್
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
(ಎಸ್. ರಾಜೇಂದಿರನ್)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 021883

ಸ್ಥಳ: ಬೆಂಗಳೂರು
ದಿನಾಂಕ: 14.09.2019



31.03.2019ರಂದು ಕೊನೆಗೊಂಡ ವರ್ಷದ ಈಕ್ವಿಟಿ ಷೇರುಗಳಲ್ಲಿನ ಬದಲಾವಣೆ ತಃಖ್ತೆ

(ರೂ. ಲಕ್ಷಗಳಲ್ಲಿ)

ಎ. ಈಕ್ವಿಟಿ ಷೇರು ಬಂಡವಾಳ	
ವಿವರಗಳು	ಒಟ್ಟು ಮೊತ್ತ
1ನೇ ಏಪ್ರಿಲ್ 2017ರಂದು ಇದ್ದ ಶಿಲ್ಕು	496,298.00
ವರ್ಷದ ಅವಧಿಯಲ್ಲಿ ನೀಡಿದ ಈಕ್ವಿಟಿ ಷೇರು ಬಂಡವಾಳ	40,000.00
31ನೇ ಮಾರ್ಚ್ 2018ರಂದು ಇದ್ದಂತೆ ಶಿಲ್ಕು	536,298.00
ವರ್ಷದ ಅವಧಿಯಲ್ಲಿ ನೀಡಿದ ಈಕ್ವಿಟಿ ಷೇರು ಬಂಡವಾಳ	46,080.00
31.03.2019ರಂದು ಇದ್ದ ಶಿಲ್ಕು	**582,378.00**

ಬಿ. ಇತರೆ ಈಕ್ವಿಟಿ					
	ಉಳಿಸಿಕೊಂಡ ಗಳಿಕೆಗಳು	ಬಂಡವಾಳ ಮೀಸಲು (ಕರ್ನಾಟಕ ಸರ್ಕಾರದ ಅನುದಾನ–ಭೂಮಿ)	ಹಂಚಿಕೆಗೆ ಬಾಕಿಯಿರುವ ಷೇರು ಅರ್ಜಿಯ ಹಣ*	ಇತರೆ ಸಮಗ್ರ ಆದಾಯ	ಒಟ್ಟು
1ನೇ ಏಪ್ರಿಲ್ 2017ರಂದು ಇದ್ದಂತೆ	(123,994.64)	6,329.00	7,040.00	102.91	(110,522.73)
ಹಿಂದಿನ ಅವಧಿಯ ಆದಾಯ/ ಖರ್ಚುಗಳು	(926.66)	–	–	–	(926.66)
ನ್ಯಾಯೋಚಿತ ಮೌಲ್ಯ ಹೊಂದಾಣಿಕೆ	–	–	–	(105.19)	(105.19)
ವರ್ಷದ ಒಟ್ಟು ಸಮಗ್ರ ಆದಾಯ	(35,110.10)	–	–	(115.18)	(35,225.28)
ಪಡೆದಿರುವ ಷೇರು ಅರ್ಜಿ ಹಣ	–	–	56,000.00	–	56,000.00
ನೀಡಿಕೆಯಾದ ಈಕ್ವಿಟಿ ಷೇರು ಬಂಡವಾಳ	–	–	(40,000.00)	–	(40,000.00)
31ನೇ ಮಾರ್ಚ್ 2018ರಂದು ಇದ್ದಂತೆ	**(160,031.40)**	**6,329.00**	**23,040.00**	**(117.46)**	**(130,779.86)**
					–
ಹಿಂದಿನ ಅವಧಿಯ ಆದಾಯ/ ಖರ್ಚುಗಳು	(7,341.19)	–	–	–	(7,341.19)
ನ್ಯಾಯೋಚಿತ ಮೌಲ್ಯ ಹೊಂದಾಣಿಕೆ	–	14,069.43	–	–	14,069.43
ವರ್ಷದ ಒಟ್ಟು ಸಮಗ್ರ ಆದಾಯ	(49,654.62)	–	–	(186.83)	(49,841.45)
ಪಡೆದಿರುವ ಷೇರು ಅರ್ಜಿ ಹಣ	–	–	88,200.00	–	88,200.00
ನೀಡಿಕೆಯಾದ ಈಕ್ವಿಟಿ ಷೇರು ಬಂಡವಾಳ	–	–	(46,080.00)	–	(46,080.00)
31ನೇ ಮಾರ್ಚ್ 2019ರಂದು ಇದ್ದಂತೆ	**(217,027.21)**	**20,398.43**	**65,160.00**	**(304.29)**	**(131,773.07)**

*ಹಂತ–IIಕ್ಕೆ ಭಾರತ ಸರ್ಕಾರದಿಂದ ಪಡೆದಿರುವ ರೂ.58,200.00 ಲಕ್ಷಗಳ ಮೊತ್ತದ ಷೇರು ಅರ್ಜಿ ಹಣವನ್ನು (ಆರ್ಥಿಕ ವರ್ಷ 2017–18ರಲ್ಲಿ ರೂ.230,40.00) ಮತ್ತು ಹಂತ–IIಕ್ಕೆ ಕರ್ನಾಟಕ ಸರ್ಕಾರದಿಂದ ಪಡೆದ ರೂ.69,60.00 ಲಕ್ಷ ಮೊತ್ತವನ್ನು (ಆರ್ಥಿಕ



ವರ್ಷ 2017–18ರಲ್ಲಿ ರೂ. ಇಲ್ಲ) ಕಂಪನಿಯ ಸಹಭಾಗಿತ್ವವ ಸ್ಥಾನಮಾನ ಕಾಪಾಡಲು ಸಂಬಂಧಪಟ್ಟ ಸರ್ಕಾರಗಳಿಂದ ಸಮಾನ ವಂತಿಗೆ ಬರಬೇಕಾಗಿರುವುದರಿಂದ ಷೇರು ಅರ್ಜಿ ಹಣವಾಗಿ ಉಳಿಸಿಕೊಂಡಿದೆ. ಕರ್ನಾಟಕ ಸರ್ಕಾರದಿಂದ ಹೊಂದಿಕೆಯಾಗುವ ವಂತಿಗೆ ಸ್ವೀಕರಿಸಿದ ಮೇಲೆ ಷೇರುಗಳನ್ನು ನೀಡಲಾಗುವುದು. ಷೇರು ಅರ್ಜಿ ಹಣದ ಬಗ್ಗೆ ಗಳಿಸಿದ ಬಡ್ಡಿಯನ್ನು ಯೋಜನಾ ಹಣವೆಂದು ಪರಿಗಣಿಸಲಾಗಿದೆ. ಹಾಗಾಗಿ ಅದನ್ನು ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳಿಗೆ ಹೊಂದಾಣಿಕೆ ಮಾಡಿದೆ.

ಮಹತ್ವಪೂರ್ಣ ಲೆಕ್ಕನಿರ್ವಹಣೆ ನೀತಿಗಳು – ಟಿಪ್ಪಣಿ ಸಂ.1
ಇದರೊಡನೆ ಲಗತ್ತಿಸಿರುವ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವವು

ಸಹಿ/–	**ಸಹಿ/–**	**ಲಗತ್ತಿಸಿರವ ನಮ್ಮ ವರದಿ ಪ್ರಕಾರ**
ಅಜಯ್ ಸೇಠ್	**(ಡಿ. ರಾಧಾಕೃಷ್ಣ ರೆಡ್ಡಿ**	**ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್**
ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು (ಪಿ ಅಂಡ್ ಪಿ)	ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
		ಫರ್ಮ್ ರಿಜಿಸ್ಟ್ರೇಷನ್ ನಂ.005389ಎಸ್
ಸಹಿ/–	**ಸಹಿ/–**	**ಸಹಿ/–**
ಯು. ಜಗದೀಶ್ ನಾಯಕ್	**ಎಸ್. ವಾಸುದೇವನ್**	**(ಎಸ್. ರಾಜೇಂದಿರನ್)**
ಕಂಪನಿ ಕಾರ್ಯದರ್ಶಿ	ಮುಖ್ಯ ಹಣಕಾಸು ಅಧಿಕಾರಿ	ಪಾಲುದಾರರು
		ಸದಸ್ಯತ್ವದ ಸಂಖ್ಯೆ: 021883

ಸ್ಥಳ: ಬೆಂಗಳೂರು
ದಿನಾಂಕ: 14.09.2019



31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಅವಧಿಯ ನಗದು ಹರಿವಿನ ತಃಖ್ತೆ

(ರೂ. ಲಕ್ಷಗಳಲ್ಲಿ)

ವಿವರಗಳು	31ನೇ ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕೆ	31ನೇ ಮಾರ್ಚ್ 2018ರಂದು ಕೊನೆಗೊಂಡ ವರ್ಷಕ್ಕೆ
ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿವು		
ವರ್ಷ ತೆರಿಗೆ ಆದಾಯಕ್ಕಿಂತ ಮೊದಲಿನ ಲಾಭ	(49,654.61)	(35,110.11)
ಕೆಳಕಂಡವುಗಳಿಗೆ ಹೊಂದಾಣಿಕೆ		
ನಿವ್ವಳ ನಗದು ಹರಿವಿಗೆ ತೆರಿಗೆ ಪಾವತಿಗೆ ಮುನ್ನ ಲಾಭ ಸಮನ್ವಯಕ್ಕಾಗಿ ನಗದೇತರ ಹೊಂದಾಣಿಕೆ		
ಹಿಂದಿನ ಅವಧಿಯ ಖರ್ಚುಗಳು	(7,341.19)	(926.66)
ನ್ಯಾಯೋಚಿತ ಮೌಲ್ಯ ಹೊಂದಾಣಿಕೆ – ಉಳಿಸಿಕೊಂಡ ಹಣ	–	(105.19)
ನ್ಯಾಯೋಚಿತ ಮೌಲ್ಯಮಾಪನ ಹೊಂದಾಣಿಕೆ	72.62	63.46
ಅನುದಾನದ ಅಮಾರ್ಟೈಸೇಷನ್	(543.63)	(409.38)
ಇತರೆ ಸಮಗ್ರ ಆದಾಯ/(ಖರ್ಚು)	(186.83)	(115.18)
ಸವಕಳಿ ಮತ್ತು ಅಮಾರ್ಟೈಸೇಷನ್	58,393.92	51,579.42
ಸ್ವತ್ತುಗಳ ಮಾರಾಟದಿಂದ ಬಂದ ಲಾಭ	–	(1.17)
ಬಡ್ಡಿ ಆದಾಯ	(35.61)	(18.36)
ಬಡ್ಡಿ ಖರ್ಚುಗಳು	11,177.17	11,078.53
ದುಡಿಮೆ ಬಂಡವಾಳ ಬದಲಾವಣೆಗೆ ಮುನ್ನ ಕಾರ್ಯಾಚರಣೆಗೆ ಲಾಭ	**11,881.84**	**26,035.36**
ದುಡಿಮೆ ಬಂಡವಾಳದಲ್ಲಿನ ಚಲನೆ :		
ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದರಲ್ಲಿನ ಏರಿಕೆ/(ಇಳಿಕೆ)	855.40	(345.28)
ಇತರೆ ಚಾಲ್ತಿ ಹೊಣೆಗಾರಿಕೆಗಳಲ್ಲಿನ ಏರಿಕೆ/(ಇಳಿಕೆ)	7,975.67	23,337.56
ಇತರೆ ಹಣಕಾಸಿನ ಹೊಣೆಗಾರಿಕೆಗಳಲ್ಲಿನ ಏರಿಕೆ/(ಇಳಿಕೆ)	(4,159.75)	(19,831.26)
ಇತರೆ ಹಣಕಾಸಿನ ಹೊಣೆಗಾರಿಕೆಗಳಲ್ಲಿನ ಏರಿಕೆ/(ಇಳಿಕೆ) (ಸಾಲಗಳು)	403.91	–
ಇತರೆ ಚಾಲ್ತಿ ಆಸ್ತಿಗಳಲ್ಲಿನ ಇಳಿಕೆ/(ಏರಿಕೆ)	(38,382.08)	3,067.11
ಇತರೆ ಹಣಕಾಸಿನ ಚಾಲ್ತಿ ಆಸ್ತಿಗಳಲ್ಲಿನ ಇಳಿಕೆ/(ಏರಿಕೆ)	(1,225.05)	954.69
ಚಾಲ್ತಿ ತೆರಿಗೆ ಆಸ್ತಿಗಳಲ್ಲಿನ ಇಳಿಕೆ/(ಏರಿಕೆ)	(1,074.09)	(614.45)
ವ್ಯಾಪಾರದ ಸಂಬಂಧ ಬರಬೇಕಾಗಿರುವುದರಲ್ಲಿನ ಇಳಿಕೆ/(ಏರಿಕೆ)	370.02	(209.24)
ತಪಶೀಲುಗಳ ಇಳಿಕೆ/(ಏರಿಕೆ)	(391.51)	(10.21)
ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳ (ಎನ್‌ಸಿಎಲ್) ಇಳಿಕೆ/(ಏರಿಕೆ)	–	502.02
ವ್ಯವಸ್ಥೆಗಳಲ್ಲಿನ (ಸಿಎಲ್) ಇಳಿಕೆ/(ಏರಿಕೆ)	683.60	313.45
ಕಾರ್ಯಾಚರಣೆಯಿಂದ ಬಂದ / (ಬಳಸಿದ) ನಗದು	**(23,062.04)**	**33,199.75**
ಪಾವತಿ ಮಾಡಿದ ನೇರ ತೆರಿಗೆ (ಮರುಪಾವತಿಯ ನಿವ್ವಳ)	–	–
ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ / (ಗಳಿಗೆ ಬಳಸಿದ) ನಿವ್ವಳ ನಗದು ಹರಿವು (ಎ)	**(23,062.04)**	**33,199.75**
ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು		
ಸಿಡಬ್ಲ್ಯೂಐಪಿ ಮತ್ತು ಬಂಡವಾಳ ಮುಂಗಡಗಳು (ನಿವ್ವಳ) ಸೇರಿದಂತೆ ಸ್ಥಿರಾಸ್ತಿಗಳ ಖರೀದಿ	(378,450.83)	(279,703.40)
ಬ್ಯಾಂಕಿನಲ್ಲಿರುವ (ಮೂರು ತಿಂಗಳಿಗೂ ಹೆಚ್ಚಿನ ಅವಧಿಯ) ಠೇವಣಿಗಳು	20,493.05	(72,072.73)
ಪಡೆದಿರುವ ಬಡ್ಡಿ	35.61	18.36
ಹೂಡಿಕೆ ಚಟುವಟಿಕೆಗಳಿಂದ ಬಂದಿರುವ/(ಬಳಸಿರುವ) ನಿವ್ವಳ ನಗದು ಹರಿವು (ಬಿ)	**(357,922.17)**	**(351,757.77)**



ವಿವರಗಳು	31ನೇ ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕೆ	31ನೇ ಮಾರ್ಚ್ 2018ರಂದು ಕೊನೆಗೊಂಡ ವರ್ಷಕ್ಕೆ
ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು		
ದೀರ್ಘಾವಧಿ ಸಾಲಗಳಿಂದ ಬಂದ ಗಳಿಕೆ	247,645.03	327,586.98
ಷೇರು ಬಂಡವಾಳ / ಷೇರು ಅರ್ಜಿ ಹಣದಿಂದ ಬಂದ ಗಳಿಕೆ	88,200.00	56,000.00
ಪಾವತಿ ಮಾಡಿದ ಇತರೆ ಸಾಲದ ವೆಚ್ಚಗಳು	(11,177.17)	(11,078.53)
ನಾಗಸಂದ್ರ ಮೆಟ್ರೋ ನಿಲ್ದಾಣದಲ್ಲಿನ ಮರುಪಾವತಿ ಮಾಡಲಾಗದ ಅಭಿವೃದ್ಧಿ ಪ್ರೀಮಿಯಂ – ಐಕೆಇಎ	–	25,101.00
ಸಿಎಸ್ಆರ್ ಚಟುವಟಿಕೆಗೆ ಹುಡ್ಕೋದಿಂದ ಪಡೆದಿರುವ ಅನುದಾನ	–	48.80
ಎಸ್ಯುಟಿಎಫ್ (ಸ್ಟೇಟ್ ಅರ್ಬನ್ ಟ್ರಾನ್ಸ್ಪೋರ್ಟ್ ಫಂಡ್) ನಿಂದ ಪಡೆದಿರುವ ಅನುದಾನ	218.95	200.00
ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ / (ಬಳಕೆಯಾದ) ನಿವ್ವಳ ನಗದು ಹರಿವು (ಸಿ)	**324,886.81**	**397,858.25**
ನಗದು ಮತ್ತು ನಗದು ಸಮಾನಗಳಲ್ಲಿನ ನಿವ್ವಳ ಏರಿಕೆ / (ಇಳಿಕೆ) (ಎ+ಬಿ+ಸಿ)	**(56,097.40)**	**79,300.23**
ವರ್ಷಾರಂಭದಲ್ಲಿದ್ದ ನಗದು ಮತ್ತು ನಗದು ಸಮಾನಗಳು	82,760.96	3,460.73
ವರ್ಷಾಂತ್ಯದಲ್ಲಿದ್ದ ನಗದು ಮತ್ತು ನಗದು ಸಮಾನಗಳು	**26,663.56**	**82,760.96**
ನಗದು ಮತ್ತು ನಗದು ಸಮಾನಗಳು		
ಕೈಯಲ್ಲಿರುವ ನಗದು	91.86	92.61
ರವಾನೆಯಲ್ಲಿರುವ ನಗದು	99.04	–
ಬ್ಯಾಂಕುಗಳಲ್ಲಿ		
– ಚಾಲ್ತಿ ಖಾತೆಯಲ್ಲಿರುವುದು	7,992.37	(3,111.94)
– ಕೈಯಲ್ಲಿರುವ ಖಜಾನ್ ಟೋಕನ್	–	15,795.76
– ಪಕ್ವತೆ ಅವಧಿ ಮೂರು ತಿಂಗಳಿಗಿಂತ ಕಡಿಮೆ ಇರುವ ಠೇವಣಿ ಖಾತೆಯಲ್ಲಿರುವುದು	18,480.29	69,984.53
ಒಟ್ಟು ನಗದು ಮತ್ತು ನಗದು ಸಮಾನಗಳು	**26,663.56**	**82,760.96**

ಮಹತ್ವಪೂರ್ಣ ಲೆಕ್ಕನಿರ್ವಹಣೆ ನೀತಿಗಳು – ಟಿಪ್ಪಣಿ ಸಂ.1

ಇದರೊಡನೆ ಲಗತ್ತಿಸಿರುವ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವವು

ಸಹಿ/–
ಅಜಯ್ ಸೇಠ್
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
(ಡಿ. ರಾಧಾಕೃಷ್ಣ ರೆಡ್ಡಿ
ನಿರ್ದೇಶಕರು (ಪಿ ಅಂಡ್ ಪಿ)

ಲಗತ್ತಿಸಿರುವ ನಮ್ಮ ವರದಿ ಪ್ರಕಾರ
ಬದರಿ, ಮಧುಸೂದನ್ ಅಂಡ್ ಶ್ರೀನಿವಾಸನ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಫರ್ಮ್ ರಿಜಿಸ್ಟ್ರೇಷನ್ ನಂ.005389ಎಸ್

ಸಹಿ/–
ಯು. ಜಗದೀಶ್ ನಾಯಕ್
ಕಂಪನಿ ಕಾರ್ಯದರ್ಶಿ

ಸಹಿ/–
ಎಸ್. ವಾಸುದೇವನ್
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
(ಎಸ್. ರಾಜೇಂದಿರನ್)
ಪಾಲುದಾರರು
ಸದಸ್ಯತ್ವದ ಸಂಖ್ಯೆ: 021883

ಸ್ಥಳ: ಬೆಂಗಳೂರು
ದಿನಾಂಕ: 14.09.2019



31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು

ಕಾರ್ಯಾಚರಣೆಯ ಸ್ವರೂಪ / ಕಾರ್ಪೊರೇಟ್ ಮಾಹಿತಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ('ಬಿಎಂಆರ್‌ಸಿಎಲ್' ಅಥವಾ 'ಕಂಪನಿ') ಇದು ಮೂಲತಃ ಕಂಪನಿಗಳ ಕಾಯ್ದೆ, 1956ರ ಅನ್ವಯ ಸ್ಥಾಪನೆಯಾಗಿದೆ. ಇದು ಕಂಪನಿಗಳ ಕಾಯ್ದೆ, 2013ರ ವಿಧಿ 2(45)ರ (ಮೊದಲು ಕಂಪನಿಗಳ ಕಾಯ್ದೆ, 1956ರ ವಿಧಿ 617) ಅರ್ಥದ ಒಳಗೆ ಸರ್ಕಾರಿ ಕಂಪನಿಯಾಗಿದೆ. ಇದನ್ನು ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಯೋಜನೆ ಅನುಷ್ಠಾನಗೊಳಿಸಲು ಭಾರತ ಸರ್ಕಾರ (ಜಿಒಐ) ಮತ್ತು ಕರ್ನಾಟಕ ಸರ್ಕಾರದ (ಜಿಒಕೆ) ಸಹಭಾಗಿತ್ವ ಕಂಪನಿಯಾಗಿ ಪ್ರವರ್ಧನೆ ಮಾಡಲಾಗಿದೆ.

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಆಧಾರ

ಹಣಕಾಸಿನ ಹೇಳಿಕೆಗಳನ್ನು, ಯಾವುದೇ ತಿಳಿಸಿರುವ ಅಂಶಗಳ ಹೊರತಾಗಿ, ಐತಿಹಾಸಿಕ ವೆಚ್ಚ ಒಪ್ಪಂದದ ಅನ್ವಯದ ಲೆಕ್ಕ ನಿರ್ವಹಣೆಯ ಸಂಚಯನದ ಆಧಾರದ ಮೇಲೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕನಿರ್ವಹಣೆ ಮಾನದಂಡಗಳು) ನಿಯಮಗಳು, 2015ರ ಅನ್ವಯ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಪ್ರಕಟಪಡಿಸಿರುವಂತೆ ಭಾರತೀಯ ಲೆಕ್ಕನಿರ್ವಹಣೆ ಅನುಸಾರ ಮತ್ತು ಇದರ ಬಗ್ಗೆ ತದನಂತರದ ತಿದ್ದುಪಡಿಗಳು ಹಾಗೂ ಕಂಪನಿಗಳ ಕಾಯ್ದೆ, 2013ರಲ್ಲಿ ತಿಳಿಸಿರುವಂತೆ ಹಣಕಾಸಿನ ಹೇಳಿಕೆಗಳಿಗೆ ಅನ್ವಯವಾಗುವ ಹೆಚ್ಚುವರಿ ಅಗತ್ಯತೆಗಳ ಅನುಸಾರ ಸಿದ್ಧಪಡಿಸಲಾಗಿದೆ.

ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಭಾರತೀಯ ರೂಪಾಯಿಗಳಲ್ಲಿ ನಿರೂಪಿಸಿದೆ. ಇದು ತನ್ನ ಕಾರ್ಯಾಚರಣೆಗೆ ಕರೆನ್ಸಿ ಕೂಡ ಆಗಿದೆ. ಸೂಚಿತವಾಗಿರದ ಹೊರತು, ಎಲ್ಲಾ ಮೌಲ್ಯಗಳನ್ನು ಸಮೀಪದ ಲಕ್ಷಕ್ಕೆ ಸಮನಾಗಿಸಿದೆ.

ಹೊಸದಾಗಿ ಹೊರಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳನ್ನು ಪ್ರಾರಂಭಿಕವಾಗಿ ಅಳವಡಿಸಿರುವ ಅಥವಾ ಹಾಲಿಯಿರುವ ಲೆಕ್ಕ ನಿರ್ವಹಣೆ ಮಾನದಂಡಕ್ಕೆ ಇದುವರೆಗೆ ಬಳಕೆಯಲ್ಲಿರುವ ಲೆಕ್ಕ ನಿರ್ವಹಣೆ ನೀತಿಯಲ್ಲಿ ಬದಲಾವಣೆ ಮಾಡಬೇಕಿದ್ದಲ್ಲಿ ಅದಕ್ಕೆ ಪರಿಷ್ಕರಣೆ ಮಾಡಿರುವ ಸಂದರ್ಭಗಳ ಹೊರತಾಗಿ ಲೆಕ್ಕ ನಿರ್ವಹಣಾ ನೀತಿಗಳನ್ನು ಸುಸ್ಥಿರವಾಗಿ ಅನುಸರಿಸಲಾಗಿದೆ.

1. ಮಹತ್ತರವಾದ ಲೆಕ್ಕ ನಿರ್ವಹಣಾ ನೀತಿಗಳು

1.1 ಅಂದಾಜುಗಳು ಮತ್ತು ತೀರ್ಪುಗಳ ಬಳಕೆ

ಭಾರತೀಯ ಲೆಕ್ಕ ನಿರ್ವಹಣಾ ಮಾನದಂಡಗಳಿಗೆ ಅನುಸಾರವಾಗಿ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಾಗ, ಪ್ರಸಕ್ತ ವರದಿಯ ಅವಧಿಯ ಕೊನೆಯಲ್ಲಿ, ಆದಾಯ ಮತ್ತು ವೆಚ್ಚಗಳು, ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ಅನುಷಂಗಿಕ ಹೊಣೆಗಾರಿಕೆಗಳ ಪ್ರಕಟಣೆ ಇವುಗಳ ಮೇಲೆ ಪರಿಣಾಮ ಉಂಟು ಮಾಡುವ ತೀರ್ಮಾನಗಳು, ಅಂದಾಜುಗಳು ಮತ್ತು ಊಹೆಗಳನ್ನು ಆಡಳಿತ ಮಂಡಳಿಯು ಮಾಡಬೇಕಾಗುತ್ತದೆ. ಅಂದಾಜುಗಳು ಹಾಗೂ ಅವುಗಳಿಗೆ ಕಾರಣವಾಗಿರುವ ಊಹೆಗಳನ್ನು ಪ್ರಚಲಿತ ಆಧಾರದ ಮೇಲೆ ಪರಿಷ್ಕರಿಸಲಾಗಿದೆ ಮತ್ತು ಲೆಕ್ಕ ನಿರ್ವಹಣಾ ಅಂದಾಜುಗಳಿಗೆ ಮಾಡಲಾಗುವ ಯಾವುದೇ ಪರಿಷ್ಕರಣೆಗಳನ್ನು ಮುಂಬರುವ ದಿನಗಳಲ್ಲಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಕಾಮಗಾರಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಖರ್ಚು ವೆಚ್ಚಗಳನ್ನು ಇಂಜಿನಿಯರುಗಳು ನೀಡುವ ಪ್ರಮಾಣ ಪತ್ರದ ಆಧಾರದ ಮೇಲೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂಬುದಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

1.2 ಆದಾಯ ಪರಿಗಣನೆ

ಆರ್ಥಿಕ ಸೌಲಭ್ಯಗಳು ಕಂಪನಿಗೆ ಬರುವ ಸಾಧ್ಯನೀಯ ಪ್ರಮಾಣದವರೆಗೆ ಆದಾಯವನ್ನು ಪರಿಗಣಿಸಲಾಗಿದೆ ಮತ್ತು ಪಾವತಿಯನ್ನು ಯಾವಾಗ ಸ್ವೀಕರಿಸಲಾಗಿದೆ ಎಂಬುದರ ಗೊಡವೆಯಿಲ್ಲದೆ ಆದಾಯವನ್ನು ಸೂಕ್ತ ರೀತಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.



1.2.1. ಟಿಕೆಟ್‌ನಿಂದ ಬಂದ ಆದಾಯ

ಟಿಕೆಟ್‌ನಿಂದ ಬಂದ ಆದಾಯವನ್ನು ಟೋಕನ್‌ಗಳ ಬಳಕೆ ಆಧಾರದ ಮೇಲೆ ಗ್ಣಣನೆ ಮಾಡಿದೆ. ಸ್ಮಾರ್ಟ್ ಕಾರ್ಡ್‌ಗಳು ಮತ್ತು ನೇರ ಟಿಕೆಟ್‌ನಿಂದ ಬಂದ ಹಣದ ಸಂಬಂಧದಲ್ಲಿ ವಾಸ್ತವಿಕ ಬಳಕೆಯ ಹಣದ ಮೌಲ್ಯದ ಆಧಾರದ ಮೇಲೆ ಗುರುತಿಸಲಾಗಿದೆ.

1.2.2. ಟಿಕೆಟ್ ಆದಾಯ ಹೊರತುಪಡಿಸಿದ ಆದಾಯ

ಟಿಕೆಟ್ ಹೊರತುಪಡಿಸಿದ ಇತರೆ ಆದಾಯದಲ್ಲಿ ಕಾಂಬೋ ಕಾರ್ಡ್‌ಗಳ ನೀಡಿಕೆಗೆ ಅನುಮತಿ ನೀಡಿದ್ದಕ್ಕಾಗಿ ಬ್ಯಾಂಕ್‌ನಿಂದ ಬಂದ ರಾಜಧನ, ಜಾಹೀರಾತಿನಿಂದ ಬಂದ ಆಸ್ತಿ ಅಭಿವೃದ್ಧಿ, ಕಾರ್ಯಕ್ರಮಗಳಿಗೆ, ಪ್ರಾಯೋಜಕತ್ವಕ್ಕೆ ಸ್ಥಳ ಒದಗಿಸಿದ್ದರಿಂದ ಮತ್ತು ಇತರೆಯವು ಸೇರಿದ್ದು, ಇದನ್ನು ಸಮಯದ ಅನುಪಾತದ ಆಧಾರದ ಮೇಲೆ ಪರಿಗಣಿಸಿದೆ. 10 ವರ್ಷಗಳಿಗಿಂತ ಮೀರದ ಅವಧಿಯ ಗುತ್ತಿಗೆಗಳು/ ವ್ಯವಸ್ಥೆಗಳ ಸಂಬಂಧದಲ್ಲಿ ಮುಂಗಡ ಶುಲ್ಕ, ಮರುಪಾವತಿ ಮಾಡಲಾಗದ ಠೇವಣಿಗಳು ಇತ್ಯಾದಿಯಂತಹ ಒಂದು ಬಾರಿಯ ಸ್ವೀಕೃತಿಗಳನ್ನು ಅವುಗಳನ್ನು ಸ್ವೀಕರಿಸಿದ ವರ್ಷದಲ್ಲಿ ಆದಾಯವೆಂದು ಪರಿಗಣಿಸಲಾಗಿದೆ. ಇನ್ನಿತರೆ ಸಂದರ್ಭಗಳಲ್ಲಿ ಅದನ್ನು ಗುತ್ತಿಗೆ/ ವ್ಯವಸ್ಥೆಯ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಆದಾಯವಾಗಿ ಪರಿಗಣಿಸಿದೆ.

1.2.3. ಬಡ್ಡಿ ಆದಾಯ

ಬಡ್ಡಿಯ ಆದಾಯವನ್ನು ಪರಿಣಾಮಕಾರಿಯಾಗಿ ಅನ್ವಯವಾಗುವ ಬಡ್ಡಿ ವಿಧಾನದಲ್ಲಿ ಪರಿಗಣಿಸಿದೆ.

1.3. ಖರ್ಚು

ಲೆಕ್ಕ ನಿರ್ವಹಣೆ ವರ್ಷದಲ್ಲಿ ಉಂಟಾದ ಮತ್ತು ಹಣಕಾಸಿನ ಹೇಳಿಕೆಗಳ ದಿನಾಂಕದಂದು ಇದ್ದಂತೆ ಸೂಕ್ತವಾದ ಕಾರಣಗಳ ನಿಖರತೆಯೊಡನೆ ಮನದಟ್ಟಾಗುವ ಖರ್ಚುಗಳನ್ನು ಲೆಕ್ಕದಲ್ಲಿ ನಮೂದಿಸಲಾಗಿದೆ.

1.4. ಆಸ್ತಿ, ಸ್ಥಾವರ ಮತ್ತು ಉಪಕರಣ

1.4.1. ಆಸ್ತಿ, ಸ್ಥಾವರ ಮತ್ತು ಉಪಕರಣಗಳನ್ನು ಸಂಚಿತ ಸವಕಳಿ ಮತ್ತು ಯಾವುದೇ ಕ್ಷೀಣತೆಯ ನಷ್ಟವನ್ನು ಕಳೆದು ಐತಿಹಾಸಿಕ ಬೆಲೆಗಳಲ್ಲಿ ತೋರಿಸಲಾಗಿದೆ. ಈ ಬೆಲೆಯಲ್ಲಿ ಅವುಗಳ ಖರೀದಿ ಬೆಲೆ ಮತ್ತು ಆಸ್ತಿಯನ್ನು ಅದರ ಉದ್ದೇಶಿತ ಬಳಕೆಗೆ ಸಿದ್ಧವಾಗುವ ಸ್ಥಿತಿಗೆ ತರುವುದಕ್ಕೆ ತಗಲುವ ಯಾವುದೇ ವೆಚ್ಚ ಸೇರಿರುವುದು. ಸಾಲದ ಬಾಬ್ತಿನ ವೆಚ್ಚಗಳು (ಆದಾಯದ ನಿವ್ವಳ) ಮತ್ತು ಸ್ಥಿರಾಸ್ತಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಇತರೆ ನೇರವಾಗಿ ಅನ್ವಯಿಸಬಹುದಾದ ವೆಚ್ಚಗಳು, ಸದರಿ ಸ್ಥಿರಾಸ್ತಿಗಳು, ಅವುಗಳ ಉದ್ದೇಶಿತ ಬಳಕೆಗೆ ಸಿದ್ಧಪಡಿಸುವ ಅವಧಿವರೆಗೆ ಅವುಗಳು ಸಂಬಂಧಿಸಿದ ಪ್ರಮಾಣದವರೆಗೆ ಅನ್ವಯವಾಗುವುದು. ವಾಸ್ತವವಾಗಿ, ಸ್ಥಿರಾಸ್ತಿಗಳನ್ನು ಅವುಗಳ ಉದ್ದೇಶಿತ ಬಳಕೆಗೆ ಸಿದ್ಧಪಡಿಸಲು ಸಾಕಷ್ಟು ಸಮಯ ಬೇಕಾಗುವುದು. ಆಸ್ತಿ ಸ್ಥಾವರ ಮತ್ತು ಉಪಕರಣವನ್ನು ಅವುಗಳ ವಿಲೇವಾರಿ ಮಾಡಿದಾಗ ಅಥವಾ ಸಕ್ರಿಯ ಬಳಕೆಯಿಂದ ಸ್ಥಗಿತಗೊಂಡಾಗ ಹಣಕಾಸಿನ ಹೇಳಿಕೆಗಳಿಂದ ತೆಗೆದು ಹಾಕಲಾಗುವುದು.

1.4.2 ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ ಸ್ಥಾಪನೆಯಲ್ಲಿರುವ ಅಥವಾ ನಿರ್ಮಾಣವಾಗುತ್ತಿರುವ ಆಸ್ತಿಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಾಗಿ ತೋರಿಸಲಾಗಿದೆ.

1.4.3 ವಿವಿಧ ಉಪಯುಕ್ತತೆ ಬಾಳಿಕೆ ಅವಧಿ ಹೊಂದಿರುವ ಮಹತ್ವದ ಘಟಕಗಳನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಲಾಗಿದೆ ಹಾಗೂ ಸವಕಳಿ ಮಾಡಲಾಗಿದೆ.

1.4.4 ಆಸ್ತಿಗಳ ಬಂಡವಾಳೀಕರಣವನ್ನು, ಎಲ್ಲಾ ಆಸ್ತಿಗಳನ್ನು ಬಳಕೆಗೆ ಒಳಪಡಿಸಿರುವ ಮತ್ತು ಬಳಕೆಗೆ ಒಳಪಡಿಸಿರುವ ಅವಧಿವರೆಗೆ ಬಂಡವಾಳೀಕರಣ ನೀತಿಯ ಅನ್ವಯ ಬಂಡವಾಳೀಕರಣಗೊಳಿಸಿದೆ.

1.4.5. ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯಲ್ಲಿ ಸೃಷ್ಟಿಸಿರುವ ಆಸ್ತಿಗಳನ್ನು, ಅವುಗಳನ್ನು ಉದ್ದೇಶಿತ ಬಳಕೆಗೆ ಸಿದ್ಧಪಡಿಸಿದಾಗ ಅವುಗಳು ಕಂಪನಿಗೆ ದೊರೆತೆ ಬೆಲೆ ಜೊತೆಗೆ ರೂ.1/–ರ ಮೌಲ್ಯದಲ್ಲಿ ಬಂಡವಾಳೀಕರಿಸಿದೆ ಮತ್ತು ಮೆಟ್ರೋ ರೈಲು ಕಾರ್ಯಾಚರಣೆಗೆ ಸಂಬಂಧಿಸಿದ ಪಿಪಿಪಿ ಆಸ್ತಿಗಳ ಸಂಬಂಧದಲ್ಲಿ ಸಂಬಂಧಪಟ್ಟ ರೈಲು ವಿಭಾಗ/ಮಾರ್ಗವು ಪ್ರಯಾಣಿಕರ ಸಾರ್ವಜನಿಕ



ಸಾರಿಗೆಗೆ ತೆರೆದುಕೊಂಡಾಗ, ಅದಕ್ಕೆ ಸಂಬಂಧಿಸಿದ ಎಲ್ಲಾ ಶಾಸನಬದ್ಧ ಮತ್ತು ಆಡಳಿತಾತ್ಮಕ ನಿಯಮಾವಳಿಗಳನ್ನು ಪೂರ್ಣಗೊಳಿಸಿದ ನಂತರ ಬಂಡವಾಳೀಕರಿಸಲಾಗುತ್ತದೆ.

1.4.6. ಜಮೀನನ್ನು, ಅವುಗಳ ಸ್ವಾಧೀನ ಮತ್ತು/ಅಥವಾ ಭೌತಿಕ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಮೇಲೆ, ಎಲ್ಲಾ ಸ್ವಾಧೀನ ಕ್ರಮಾವಳಿಗಳು ಪೂರ್ಣವಾಗದೆ ಉಳಿದಿದ್ದು, ಯೋಜನೆಯ ಪ್ರಾಥಮಿಕ ಕಾರ್ಯ ಪ್ರಾರಂಭವಾಗುವ ಸಮಯದಲ್ಲಿ ಬಂಡವಾಳೀಕರಿಸಲಾಗುವುದು.

1.4.7. ಜಮೀನಿನ ಬೆಲೆಯಲ್ಲಿ ಅವುಗಳ ಸ್ವಾಧೀನ/ಪಡೆಯುವಿಕೆ ದಿನಾಂಕದವರೆಗೆ ಅದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಗುವ ಪರಿಹಾರ, ನೋಂದಣಿ ಮತ್ತು ಇತರೆ ಶಾಸನಬದ್ಧ ಖರ್ಚುಗಳು ಹಾಗೂ ಹಕ್ಕುಪತ್ರ ಮತ್ತು ಇತ್ಯರ್ಥ/ಪುನರ್ವಸತಿ ಮತ್ತು ಬಡ್ಡಿಗೆ ಸಂಬಂಧಿಸಿದಂತೆ ಪ್ರಾಸಂಗಿಕ ವೆಚ್ಚಗಳೂ ಸೇರಿರುತ್ತವೆ.

1.4.8. ಆಸ್ತಿಯನ್ನು ಉದ್ದೇಶಿತ ಬಳಕೆಗಾಗಿ ಕಾರ್ಯಾಚರಣೆ ಸ್ಥಿತಿಗೆ ತರುವುದಕ್ಕೆ ನೇರವಾಗಿ ಅನ್ವಯಿಸಬಹುದಾದ ರಸ್ತೆಯ ಅಗಲೀಕರಣ/ಬಲವರ್ಧನೆ, ಉಪಯುಕ್ತತೆಗಳ ಸ್ಥಳಾಂತರ ಇತ್ಯಾದಿ ಮೇಲಿನ ಖರ್ಚುಗಳನ್ನು ಆಸ್ತಿ, ಸ್ಥಾವರ ಮತ್ತು ಉಪಕರಣಕ್ಕೆ ಸಂಬಂಧಿಸಿದ ಭಾರತೀಯ ಲೆಕ್ಕನಿರ್ವಹಣೆ ಮಾನದಂಡ–16ರ ಅನ್ವಯ ಸಂಬಂಧಪಟ್ಟ ಆಸ್ತಿಗಳ ಬೆಲೆಗೆ ಸೇರಿಸಲಾಗಿದೆ.

1.5 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

ನಿರ್ಮಾಣ ಅವಧಿಯಲ್ಲಿ ಬಡ್ಡಿ ಸ್ವೀಕಾರಗಳು, ಟೆಂಡರ್ ದಸ್ತಾವೇಜುಗಳು ಇತ್ಯಾದಿ ಮಾರಾಟ ಸೇರಿದಂತೆ ಸಂಚಯನವಾದ/ಉತ್ಪತ್ತಿಯಾದ ಆದಾಯವನ್ನು ನಿರ್ಮಾಣದ ಅವಧಿಯಲ್ಲಿ ಆದ ಖರ್ಚಿಗೆ ಸರಿದೂಗಿಸಲಾಗಿದೆ. ಯೋಜನಾ ಅನುಷ್ಠಾನಕ್ಕೆ ನೇರವಾಗಿ ಸಂಬಂಧಿಸಿದ ಆಡಳಿತಾತ್ಮಕ ಮತ್ತು ಸಾಮಾನ್ಯ ಮೇಲ್ವೆಚ್ಚಗಳನ್ನು (ಇದ್ದಲ್ಲಿ ಆ ಆದಾಯದ ನಿವ್ವಳ) ಕಾರ್ಯಾರಂಭವಾದ ತಿಂಗಳ ಕೊನೆಯಲ್ಲಿ ಪ್ರಗತಿಯಲ್ಲಿರುವ ಒಟ್ಟು ಬಂಡವಾಳ ಕಾಮಗಾರಿಗೆ ಬಂಡವಾಳೀಕರಿಸಿದ ಆಸ್ತಿಗಳ ಅನುಪಾತದಲ್ಲಿ ಹಂಚಿಕೆ ಮಾಡಿ ಬಂಡವಾಳೀಕರಣಗೊಳಿಸಿದೆ.

1.6. ನಿರ್ಮಾಣದ ಅವಧಿಯಲ್ಲಿ ಬಡ್ಡಿಯ ಹಂಚಿಕೆ

(i) ಸಾಲದ ನಿಯಮಗಳ ಅನ್ವಯ ನಿರ್ದಿಷ್ಟಪಡಿಸಿದ ಘಟಕಗಳು/ಯೋಜನೆಗೆ ಹಣ ಒದಗಿಸಲು ಪಡೆದ ಸಾಲಗಳ ಮೇಲಿನ ಬಡ್ಡಿಯನ್ನು ಪ್ರತಿವರ್ಷ ಅಂತಹ ಘಟಕಗಳ (ಆಸ್ತಿಗಳು) ಸ್ವಾಧೀನ ವೆಚ್ಚದ ಭಾಗವಾಗಿ ಬಂಡವಾಳೀಕರಿಸಿದೆ ಮತ್ತು ಅದನ್ನು ಸಿಡಬ್ಲ್ಯೂಐಪಿ ಅಡಿಯಲ್ಲಿ ತೋರಿಸಿದೆ.

(ii) ಈ ವರ್ಷಾವಧಿಯಲ್ಲಿ ಕಾರ್ಯಾರಂಭಿಸಿದ ಅರ್ಹತಾ ಆಸ್ತಿಗಳ ಸಂಬಂಧದಲ್ಲಿನ ನಿರ್ಮಾಣ ಅವಧಿಯ ಬಡ್ಡಿಯನ್ನು (ಐಡಿಸಿ) ಕಾರ್ಯಾರಂಭ ಮಾಡಿದ ತಿಂಗಳ ಕೊನೆಯಲ್ಲಿದ್ದಂತೆ ಆ ಸ್ವತ್ತಿನ ಮೌಲ್ಯದ ಅನುಪಾತದಲ್ಲಿ ಅರ್ಹತಾ ಸಿಡಬ್ಲ್ಯೂಐಪಿಗೆ ಹಂಚಿಕೆ ಮಾಡಿದೆ.

1.7. ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಮೇಲಿನ ಸವಕಳಿ

ಡಿಎಂಆರ್‌ಸಿಯ ಆಸ್ತಿಗಳು ಮತ್ತು ಕಾರ್ಯಾಚರಣೆಯ ರೂಪದಲ್ಲೇ ಇರುವ ಕಾರಣದಿಂದ, ದೆಹಲಿ ಮೆಟ್ರೋ ರೈಲು ನಿಗಮ (ಡಿಎಂಆರ್‌ಸಿ) ನಿರ್ಧರಿಸುವಂತೆ ತಾಂತ್ರಿಕ ಮೌಲ್ಯಮಾಪನ, ಉಪಯುಕ್ತತೆ ಅವಧಿ ಆಧಾರದ ಮೇಲೆ ಕಂಪನಿ ಸವಕಳಿ ನಿರ್ಧರಣೆ ಅಳವಡಿಸಿಕೊಂಡಿರುವ ಈ ಕೆಳಕಂಡ ಆಸ್ತಿಗಳ ಹೊರತಾಗಿ, ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ–II‌ರ ಅನ್ವಯದ ಆಸ್ತಿಗಳಿಗೆ ನಿಯೋಜಿಸಿರುವ ಉಪಯುಕ್ತ ಅವಧಿಯ ಆಧಾರದ ಮೇಲೆ ನೇರ ಮಾರ್ಗದ ವಿಧಾನದಲ್ಲಿ ಸವಕಳಿಯನ್ನು ಲೆಕ್ಕಾಚಾರ ಮಾಡಿದೆ.

ವಿವರಗಳು	ಉಪಯುಕ್ತತೆ ಅವಧಿ
ರೋಲಿಂಗ್ ಸ್ಟಾಕ್	30 ವರ್ಷಗಳು
ಎಸ್ಕಲೇಟರ್‌ಗಳು ಮತ್ತು ಎಲಿವೇಟರ್‌ಗಳು	30 ವರ್ಷಗಳು
ಟ್ರ್ಯಾಕ್ ವರ್ಕ್ಸ್	30 ವರ್ಷಗಳು

1.8. ಅಮೂರ್ತ ಆಸ್ತಿಗಳು ಮತ್ತು ಋಣವಿಮೋಚನೆ

ಅಮೂರ್ತ ಆಸ್ತಿಗಳನ್ನು, ಯಾವುದೇ ಸಂಚಯನವಾದ ಋಣವಿಮೋಚನೆ ಮತ್ತು ಕ್ಷೀಣಿಕೆ ನಷ್ಟಗಳನ್ನು ಕಳೆದು ಪ್ರಾರಂಭಿಕವಾಗಿ ಮಾನ್ಯ ಮಾಡಿದೆ ಮತ್ತು ಬೆಲೆಯನ್ನು ನಮೂದಿಸಿದೆ. ಪರಿಮಿತ ಅವಧಿಯ ಉಪಯುಕ್ತತೆಯ ತಂತ್ರಾಂಶ ಪರವಾನಗಿಗಳು ಒಳಗೊಂಡ ಅಮೂರ್ತ ಆಸ್ತಿಗಳಿಗೆ ಸಂಬಂಧಿಸಿದ ಬೆಲೆಯನ್ನು ಐದು ವರ್ಷಗಳಿಗಿಂತ ಮೀರದ ಅವುಗಳ ಉಪಯುಕ್ತತೆ ಅವಧಿಯಲ್ಲಿ ಬಂಡವಾಳೀಕರಿಸಿದೆ ಮತ್ತು ಋಣಮುಕ್ತಗೊಳಿಸಿದೆ.

1.9. ವಿದೇಶಿ ಕರೆನ್ಸಿ ವ್ಯವಹಾರಗಳು

1.9.1 ವಿದೇಶಿ ಕರೆನ್ಸಿ ವ್ಯವಹಾರಗಳನ್ನು, ವ್ಯವಹಾರದ ದಿನಾಂಕದಂದು ಜಾರಿಯಲ್ಲಿರುವ ವಿನಿಮಯ ದರಗಳಲ್ಲಿ ಕಾರ್ಯನಿರ್ವಹಣೆ ಕರೆನ್ಸಿಯಲ್ಲಿ ದಾಖಲಿಸಲಾಗಿದೆ.

1.9.2. ವರ್ಷಾಂತ್ಯದಲ್ಲಿ, ವಿದೇಶಿ ಕರೆನ್ಸಿಗಳಲ್ಲಿ ನಮೂದಿತವಾಗಿರುವ ಮತ್ತು ವಿದೇಶಿ ವಿನಿಮಯ ಕರಾರುಗಳಿಗೆ ಒಳಪಡದ ಹಣಕಾಸು ಬಾಬ್ತುಗಳನ್ನು "ವರ್ಷಾಂತ್ಯದ ವಿನಿಮಯ ದರಗಳಿಗೆ" ಬದಲಾಯಿಸಲಾಗಿದೆ. ಫಾರ್ವರ್ಡ್ ವಿನಿಮಯ ಕರಾರುಗಳಿಗೆ ಒಳಪಡುವ ಬಾಬ್ತುಗಳನ್ನು ಅವುಗಳ ಸಂಬಂಧಪಟ್ಟ ಕರಾರುಗಳಂತೆ ನಿರ್ಧರಣೆ ಮಾಡಿದೆ. ಭಾರತೀಯ ಲೆಕ್ಕ ನಿರ್ವಹಣೆ ಮಾನದಂಡ 101ರಲ್ಲಿ ತಿಳಿಸಿರುವ ಸ್ವಯಂಪ್ರೇರಿತ ವಿನಾಯಿತಿ ಆದಾರದ ಮೇಲೆ ಭಾರತೀಯ ಲೆಕ್ಕನಿರ್ವಹಣೆ ಮಾನದಂಡ 21ರ ಅನ್ವಯ ಒದಗಿಸಿರುವುದು ಹೊರತುಪಡಿಸಿದ ವ್ಯಾಪ್ತಿಯ ಹೊರತಾಗಿ, ದೀರ್ಘಾವಧಿ ವಿದೇಶಿ ಕರೆನ್ಸಿ ಹಣಕಾಸಿನ ಬಾಬ್ತುಗಳು ಸೇರಿದಂತೆ, ಎಲ್ಲಾ ವಿದೇಶಿ ಕರೆನ್ಸಿ ಹಣಕಾಸಿನ ಬಾಬ್ತುಗಳ ಬದಲಾವಣೆ/ಇತ್ಯರ್ಥದಿಂದ ಉದ್ಭವವಾಗುವ ಯಾವುದೇ ವಿನಿಮಯ ವ್ಯತ್ಯಾಸವನ್ನು, ಅವುಗಳು ಉದ್ಭವವಾದ ಅವಧಿಯ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಆದಾಯ ಅಥವಾ ಖರ್ಚು ಎಂಬುದಾಗಿ ಗುರುತಿಸಲಾಗಿದೆ.

1.10. ಸರ್ಕಾರದಿಂದ / ಇತರರರಿಂದ ಬಂದ ಅನುದಾನ

1.10.1 ಕಂಪನಿಯ ಯೋಜನೆಯ ವೆಚ್ಚಗಳನ್ನು ಭರಿಸುವುದಕ್ಕಾಗಿ ಭಾರತ ಸರ್ಕಾರ (ಜಿಒಐ), ಕರ್ನಾಟಕ ಸರ್ಕಾರ (ಜಿಓಕೆ) ಮತ್ತು ಇತರೆ ಪ್ರಾಧಿಕಾರಿಗಳಿಂದ ಸ್ವೀಕರಿಸಿದ ಅನುದಾನ/ಸಹಾಯಧನಗಳು/ನೆರವು ಮತ್ತು ಎಂಆರ್‌ಟಿಎಸ್ ಸೆಸ್ ಅನ್ನು ಮುಂದೂಡಲಾದ ಆದಾಯವೆಂದು ತೋರಿಸಲಾಗಿದೆ.

1.10.2 ಸಂಬಂಧಪಟ್ಟ ಆಸ್ತಿಗಳ ಬಂಡವಾಳೀಕರಣದ ಸಂಬಂಧ, ನಿರ್ದಿಷ್ಟವಾದ ಸವಕಳಿ ಆಗಬಹುದಾದ ಆಸ್ತಿಗಳಿಗೆ ಸ್ವೀಕರಿಸಿದ ಅನುದಾನಗಳನ್ನು, ಆಸ್ತಿಯ ಉಪಯುಕ್ತ ಅವಧಿಯಲ್ಲಿ, ಆ ಆಸ್ತಿಗಳ ಬಗ್ಗೆ ಒದಗಿಸಿರುವ ಸವಕಳಿಯ ಅನುಪಾತದಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ತಿಳಿಸಲಾಗಿದೆ.

1.10.3 ಕರ್ನಾಟಕ ಸರ್ಕಾರದಿಂದ ಮಂಜೂರಾದ ಜಮೀನಿನಂತಹ ಪ್ರವರ್ಧಕರ ಕೊಡುಗೆಯ ಸ್ವರೂಪದ ಹಣಕಾಸೇತರ ಅನುದಾನಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ದಾಖಲಿಸಿದ್ದು, ಅದನ್ನು ಇತರೆ ಈಕ್ವಿಟಿ ಶೀರ್ಷಿಕೆಯ ಅಡಿಯಲ್ಲಿ ಈಕ್ವಿಟಿಯ ಭಾಗವಾಗಿ ಪರಿಗಣಿಸಲಾಗಿದೆ.

1.10.4 ಸರ್ಕಾರ ಹೊರತಾಗಿ ಇತರೆ ವ್ಯಕ್ತಿಗಳಿಂದ ಉಚಿತವಾಗಿ ಪಡೆದ ಹಣಕಾಸೇತರ ಅನುದಾನಗಳನ್ನು ಸಾಧಾರಣ ಮೌಲ್ಯದಲ್ಲಿ ಲೆಕ್ಕ ಹಾಕಲಾಗಿದೆ.

1.10.5 ನಗದು ನಷ್ಟಗಳ ಮರುಪಾವತಿ ಬಗ್ಗೆ ಕರ್ನಾಟಕ ಸರ್ಕಾರದಿಂದ ಪಡೆದ ಅನುದಾನಗಳನ್ನು ಸ್ವೀಕರಿಸಿದ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

1.11 ವ್ಯವಸ್ಥೆಗಳು ಮತ್ತು ಸಂಭವನೀಯ ಹೊಣೆಗಾರಿಕೆಗಳು

1.11.1. ಕಂಪನಿಯು ಹಿಂದಿನ ಘಟನೆಯ ಕಾರಣದಿಂದ ಪ್ರಸಕ್ತದಲ್ಲಿ ಬಾಧ್ಯತೆಯನ್ನು ಹೊಂದಿದ್ದರೆ ಅದಕ್ಕೆ ವ್ಯವಸ್ಥೆಯನ್ನು ಗುರುತಿಸಲಾಗಿದೆ. ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರಹರಿವು ಸಂಭವನೀಯವಾಗಬಹುದು. ಇಂತಹ ಸಂದರ್ಭದಲ್ಲಿ ತಾಂತ್ರಿಕ ಮೌಲ್ಯಮಾಪನ ಮತ್ತು ಹಿಂದಿನ ಅನುಭವದ ಆಧಾರದ ಮೇಲೆ ವಿಶ್ವಾಸನೀಯ ಅಂದಾಜನ್ನು ಮಾಡಬಹುದಾಗಿರುತ್ತದೆ. ಆದರೂ,



ಹಣದ ಸಮಯದ ಮೌಲ್ಯವು ಪ್ರಮುಖವಾಗಿರುವ ಸಂದರ್ಭದಲ್ಲಿ ಅಗತ್ಯವಾದೆಡೆಗಳಲ್ಲಿ ನಿರೀಕ್ಷಿತ ಮುಂದಿನ ನಗದು ಹರಿವನ್ನು ಡಿಸ್ಕೌಂಟ್ ಮಾಡಿ ವ್ಯವಸ್ಥೆಯನ್ನು ನಿರ್ಧರಣೆ ಮಾಡಿದೆ ಮತ್ತು ನಿರ್ವಹಣೆ ಮಾಡಿದೆ. ಸಮಯದ ಸ್ಥಿತ್ಯಂತರದ ಕಾರಣ ವ್ಯವಸ್ಥೆಯ ಹೆಚ್ಚಳದಲ್ಲಿ ಡಿಸ್ಕೌಂಟ್ ಮಾಡಿರುವುದನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಹಣಕಾಸಿನ ವೆಚ್ಚ ಎಂಬುದಾಗಿ ಗುರುತಿಸಿದೆ.

1.11.2. ಹಿಂದಿನ ಘಟನಾವಳಿಗಳಿಂದ ಯಾವುದೇ ಸಾಧ್ಯನೀಯ ಬಾಧ್ಯತೆ ಉಂಟಾದಲ್ಲಿ ಮತ್ತು ಈ ಬಾಧ್ಯತೆ ಇರುವಿಕೆಯು ಕಂಪನಿಯ ಸಂಪೂರ್ಣ ನಿಯಂತ್ರಣದಲ್ಲಿ ಒಳಪಡದ ಒಂದು ಅಥವಾ ಹೆಚ್ಚಿನ ಅನಿಶ್ಚಿತ ಮುಂದಿನ ಘಟನಾವಳಿಗಳು ಉಂಟಾದಾಗ ಅಥವಾ ಉಂಟಾಗದಿರುವ ಸಂದರ್ಭದಲ್ಲಿ ಮಾತ್ರ ಸ್ಥರೀಕರಿಸಲಾಗಬಹುದಾಗಿದ್ದು, ಅದನ್ನು ಸಂಭವನೀಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ. ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಯಾವುದೇ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಅಥವಾ ಬಾಧ್ಯತೆಯ ಮೊತ್ತದ ವಿಶ್ವಾಸನೀಯ ಅಂದಾಜನ್ನು ಮಾಡಬೇಕಾದಲ್ಲಿ ಆರ್ಥಿಕ ಅನುಕೂಲ ಒಳಗೊಂಡ ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯಿಲ್ಲದಿರುವ ಪ್ರಯುಕ್ತ ಗುರುತಿಸಲಾಗಿರದವುಗಳಾಗಿರುವುದರಿಂದ ಅದನ್ನು ಸಹ ಸಂಭವನೀಯ ಹೊಣೆಗಾರಿಕೆ ಅಂತಹ ಬಾಬ್ತುಗಳನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಪರಿಶೀಲಿಸಿದ್ದು, ಅದನ್ನು ಪ್ರಚಲಿತ ಆಡಳಿತ ವರ್ಗದ ಅಂದಾಜನ್ನು ಪಡೆಯಲು ಹೊಂದಾಣಿಕೆ ಮಾಡಿದೆ.

1.12. ನಗದು ಮತ್ತು ನಗದಿಗೆ ಸಮಾನಾದವುಗಳು

ನಗದು ಹರಿವಿನ ತಃಖ್ತೆಯಲ್ಲಿನ ನಗದು ಮತ್ತು ನಗದಿಗೆ ಸಮಾನವಾದವುಗಳಲ್ಲಿ ಬ್ಯಾಂಕಿನಲ್ಲಿರುವ ಮತ್ತು ಕೈಯಲ್ಲಿರುವ ನಗದು ಮತ್ತು ಮೂಲ ಪಕ್ವತೆ ಅವಧಿಯು ಮೂರು ತಿಂಗಳು ಅಥವಾ ಅದಕ್ಕೂ ಕಡಿಮೆ ಇರುವ ಅಲ್ಪಾವಧಿ ಹೂಡಿಕೆಗಳನ್ನು ಒಳಗೊಂಡಿರುವುದು. ನಗದು ಹರಿವಿನ ತಃಖ್ತೆಯನ್ನು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಭಾರತದ ಲೆಕ್ಕನಿರ್ವಹಣೆ ಮಾನದಂಡ–7ರ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಪರೋಕ್ಷ ವಿಧಾನದ ಅನ್ವಯ ಸಿದ್ಧಪಡಿಸಲಾಗಿದೆ.

1.13. ನೌಕರರ ಸವಲತ್ತುಗಳು

ಪ್ರತಿಪಾದಿತ ವಂತಿಕೆ ಯೋಜನೆಗಳು –

ಭವಿಷ್ಯನಿಧಿ ಮತ್ತು ಪಿಂಚಣಿ ನಿಧಿಗಳನ್ನು ಒಳಗೊಂಡ ಪ್ರತಿಪಾದಿತ ವಂತಿಕೆ ಯೋಜನೆಗಳಿಗೆ ಪಾವತಿ ಮಾಡಿದ/ಪಾವತಿ ಮಾಡಬೇಕಾಗಿರುವ ವಂತಿಗೆಯನ್ನು ಸಂಚಯನದ ಆಧಾರದ ಮೇಲೆ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ತೋರಿಸಲಾಗಿದೆ. ಇಂತಹ ನಿಧಿಗಳಿಗೆ ಪಾವತಿ ಮಾಡಬೇಕಾಗಿರುವ ವಂತಿಗೆಗಳ ಹೊರತಾಗಿ ಕಂಪನಿಯು ಯಾವುದೇ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ.

ಪ್ರತಿಪಾದಿತ ಸೌಲಭ್ಯ ಯೋಜನೆಗಳು

ಎ. ಗ್ರಾಚ್ಯುಟಿ: ನಿಯೋಜನೆಗೊಂಡಿರುವವರುಗಳು ಹೊರತಾಗಿ ಬಿಎಂಆರ್‌ಸಿಎಲ್‌ನ ಎಲ್ಲಾ ನೌಕರರುಗಳು ಬೆಂಗಳೂರು ಮೆಟ್ರೋ ರೈಲು ಗ್ರಾಚ್ಯುಟಿ ಟ್ರಸ್ಟ್ ನಿಯಮಗಳ ಅಡಿಯಲ್ಲಿ ಒಳಪಡುವರು. ಗ್ರಾಚ್ಯುಟಿ ಯೋಜನೆಗೆ ನೀಡುವ ವಂತಿಗೆಗಳನ್ನು ನೌಕರರ ವೆಚ್ಚವೆಂದು ಗುರುತಿಸಲಾಗಿದೆ ಮತ್ತು ಗುರುತಿಸಲ್ಪಟ್ಟ ನಿಧಿ ವ್ಯವಸ್ಥಾಪಕರಲ್ಲಿನ ಗ್ರಾಚ್ಯುಟಿ ನಿಧಿಗೆ ಹೂಡಿಕೆ ಮಾಡಿದೆ. ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ ಹೊಣೆಗಾರಿಕೆಯನ್ನು ಸ್ವತಂತ್ರ ವಿಮಾಗಣಕರು ತಿಳಿಸಿದ ವಿಮಾಗಣಕ ಮೌಲ್ಯದ ಆಧಾರದ ಮೇಲೆ ಒದಗಿಸಿದೆ.

ಬಿ. ರಜೆ : ಕಂಪನಿಯು ಖಾಯಂ ಮತ್ತು ಗುತ್ತಿಗೆ ನೌಕರರುಗಳಿಗೆ ಅವರ ಪೂರ್ಣಗೊಂಡ ಪ್ರತಿ ಸೇವಾ ವರ್ಷಕ್ಕೆ ಅನುಕ್ರಮವಾಗಿ 30 ದಿನಗಳ ಮತ್ತು 20 ದಿನಗಳ ಗಳಿಕೆ ರಜೆಗಳನ್ನು ಮತ್ತು ಅರ್ಧವೇತನ ರಜೆಗಳನ್ನು ನೀಡುವುದು.

ಸಿ. ರಜೆ ನಗದೀಕರಣ: ನಿಯೋಜನೆ ಮೇಲೆ ಬಂದಿರುವ ನೌಕರರಿಗೆ ಅವರ ನಿಯೋಜನೆಯ ನಿಯಮಗಳ ಅನ್ವಯ ಅವರ ಸಂಬಂಧಪಟ್ಟ ಮಾತೃ ಇಲಾಖೆಗೆ ರಜೆ ವೇತನ ಕೊಡುಗೆಯನ್ನು ಸಂದಾಯ ಮಾಡಲಾಗುವುದು. ಖಾಯಂ ಮತ್ತು ಗುತ್ತಿಗೆ ನೌಕರರುಗಳ ಸಂಬಂಧದಲ್ಲಿ ಗಳಿಕೆ ರಜೆಯನ್ನು ಕ್ಯಾಲೆಂಡರ್ ವರ್ಷ ಒಂದರಲ್ಲಿ 15 ದಿನಗಳ ಪ್ರಮಾಣದಲ್ಲಿ ನಗದೀಕರಣ ಮಾಡಿಕೊಳ್ಳಬಹುದು ಮತ್ತು/ಅಥವಾ ಅವರ ಗುತ್ತಿಗೆ ಸಮಾಪ್ತಿಯ ಸಮಯದಲ್ಲಿ ಅವರ ಖಾತೆಯಲ್ಲಿ ಇರುವ ಗಳಿಕೆ ರಜೆಗಳನ್ನು ಸ್ವತಂತ್ರ ವಿಮಾಗಣಕರು ತಿಳಿಸಿರುವ ವಿಮಾಗಣನ ಮೌಲ್ಯಮಾಪನದ ಆಧಾರದ ಮೇಲೆ ಗುತ್ತಿಗೆ ನಿಯಮಗಳ ಅನ್ವಯ, ನಗದೀಕರಣಕ್ಕೆ ಅರ್ಹವಾಗಿರುವುದಕ್ಕೆ ಒಳಪಟ್ಟು ನಗದೀಕರಿಸಲಾಗುವುದು.



ಡಿ. ವಯೋ ನಿವೃತ್ತಿ: ನೌಕರರ ವಯೋ ನಿವೃತ್ತಿಯು, ಸಾಮಾನ್ಯವಾಗಿ "ವಯೋನಿವೃತ್ತಿ ನಿಧಿ" ಎಂದು ಕರೆಯುವ ವಂತಿಗೆ ಯೋಜನೆಯ ಅಡಿಯಲ್ಲಿ ಬರುವುದು. ಇದರಲ್ಲಿ ವೇತನದಾರರಿಗೆ ಮೂಲವೇತನ+ತುಟ್ಟಿಭತ್ಯೆ ಶೇ.20ರಷ್ಟು ಅಥವಾ ಶೇಕಡ 70ರ ಕ್ರೋಡೀಕೃತ ವೇತನದ ಶೇಕಡ 20ರಷ್ಟನ್ನು ನಿಧಿಗೆ ಜಮಾ ಮಾಡಲಾಗುತ್ತಿದ್ದು, ಸದರಿ ಶೇಕಡ 20ರಷ್ಟು ಮೊತ್ತದಲ್ಲಿ ಉದ್ಯೋಗದಾತರ ವಂತಿಗೆ ಶೇಕಡ 12ರಷ್ಟು ಮತ್ತು ನೌಕರರ ವಂತಿಗೆ ಶೇಕಡ 8ರಷ್ಟು ಒಳಗೊಂಡಿರುತ್ತದೆ. ಸದರಿ ಯೋಜನೆಗೆ ನೀಡುವ ಸದರಿ ವಂತಿಗೆಯನ್ನು ನೌಕರರ ವೆಚ್ಚ ಎಂಬುದಾಗಿ ಗುರುತಿಸಲಾಗಿದೆ.

ಇ. ನಿಯೋಜನೆ ನೌಕರರು: ಸರ್ಕಾರದಿಂದ/ಇತರೆ ಸಂಸ್ಥೆಗಳಿಂದ ನಿಯೋಜನೆ ಮೇಲೆ ಕಂಪನಿಯ ಸೇವೆಯಲ್ಲಿರುವ ನೌಕರರುಗಳಿಗೆ ನಿವೃತ್ತಿ ಸೌಲಭ್ಯಗಳನ್ನು ಸಂಬಂಧಪಟ್ಟ ಮಾತೃ ಸಂಸ್ಥೆಯ ಸೇವಾ ನಿಯಮಗಳ ಅನುಸಾರ ನೀಡಲಾಗುವುದು ಮತ್ತು ನಿವೃತ್ತಿ ಸೌಲಭ್ಯ ವಂತಿಗೆ ಬಗ್ಗೆ ಸಂಚಯನವಾಗಿರುವ ಮೊತ್ತವನ್ನು, ನೌಕರರ ನಿಯೋಜನೆಯ ನಿಯಮಗಳು ಮತ್ತು ನಿಬಂಧನೆಗಳ ಆಧಾರದ ಮೇಲೆ ವರ್ಷಾಂತ್ಯದಲ್ಲಿ ಗುರುತಿಸಲಾಗುವುದು.

ಎಫ್. ಮರುಮಾಪನಗಳು ವಿಮಾಗಣನ ಲಾಭಗಳು/ನಷ್ಟಗಳು ಹಾಗೂ ಯೋಜನಾ ಆಸ್ತಿಗಳ ಮೇಲಿನ ಗಳಿಕೆಯನ್ನು ಒಳಗೊಂಡಿರುವುದು ಮತ್ತು ನಿವ್ವಳ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ/ಆಸ್ತಿಗಳ ಮೇಲಿನ ನಿವ್ವಳ ಬಡ್ಡಿಯಲ್ಲಿ ಒಳಗೊಂಡಿರುವ ಮೊತ್ತವನ್ನು ಇತರೆ ಸಮಗ್ರ ಆದಾಯ (ಒಸಿಐ), ಆದಾಯ ತೆರಿಗೆ ನಿವ್ವಳದಲ್ಲಿ ಗುರುತಿಸಲಾಗಿದೆ.

ಜಿ. ಪ್ರತಿಪಾದಿತ ಸೌಲಭ್ಯ ಯೋಜನೆಗೆ ಸಂಬಂಧಿಸಿದ ಇತರೆ ಖರ್ಚುಗಳನ್ನು ನೌಕರರ ವೆಚ್ಚ ಎಂಬುದಾಗಿ ಗುರುತಿಸಲಾಗಿದೆ.

1.14. ಸಾಲದ ವೆಚ್ಚ

